ವ್ಯಕ್ತಿತ್ವ ವಿಕಸನ ಅಧ್ಯಾತ್ಮ ಮಾಸಪತ್ರಿಕೆ

# ಮಲ್ಹಾರ

ಶ್ರೀ ವಿಕಾರಿ ಸಂವತ್ಸರ
ಪುಷ್ಯ-ಮಾಘ
ಜನವರಿ 2020
₹ 12.00



ವಿಶೇಷ ಲೇಖನ

ಸಿರಿ ಪುರಂದರ

RAMAIAH

# RAMAIAH OFFICERS IAS ACADEMY



**The only IAS Coaching Academy in the country, established and run by IAS / IPS / IRS Officers, is now open on the Ramaiah Campus.**

## HIGHLIGHTS

> Faculty consists of IAS/ IPS/IRS Officers.
> Compulsory weekly test.
> Personal mentoring for every student.
> Separate hostel facility for boys and girls.

**OIASA has the highest success rate in South India.**
**In 2018 UPSC results 102 students of OIASA selected.**

**Admissions Open for 2020-21 Batch**

**Classes for 2019-20 Batch with 200 Students Running Successfully**

Ramaiah Officers IAS Academy,
Behind Dwaraka Hall, Adjacent to the
Faculty of Dental Sciences Building, MS Ramaiah Nagar,
New BEL Road, Bengaluru - 560054

P 93192 83285
M 73974 42266
E ramaiahoia2018@gmail.com
W www.officersiasacademy.com

## ಒಳ ಪುಟಗಳಲ್ಲಿ...


**ಸಿರಿ ಪುರಂದರ**
● ಕೆ. ಭೀಮರಾವ್



6

**ಶ್ರೀ ಕುಲತ್ತಾರ್ ಆದ ಪಂಚಮರು**
● ಡಾ. ಬಾಬು ಕೃಷ್ಣಮೂರ್ತಿ



10

**ಆಕಾಶಜೋಪಾಖ್ಯಾನ**
● ನಂ. ನಾಗಲಕ್ಷ್ಮೀ




18

**ಯಾಜ್ಞವಲ್ಕ್ಯ**
● ಡಾ. ಎಸ್. ಹೇಮಲತಾ



20



ಜನವರಿ–೨೦೨೦
ಶ್ರೀ ವಿಕಾರಿ ಸಂವತ್ಸರ
ಪುಷ್ಯ–ಮಾಘ

ಸಂಪುಟ ೨೦ ● ಸಂಚಿಕೆ ೧



**ಗುಜರಾತಿನ ಮಹಾನ್ ಸಂತ ನರಸೀ ಮೆಹ್ತಾ**
● ಡಾ. ಅನಸೂಯಾದೇವಿ



28

**ಏಕಾಗ್ರತೆ ಸಾಧಿಸುವುದು ಹೇಗೆ?**
● ಸಿದ್ದವನಹಳ್ಳಿ ಕೃಷ್ಣಶರ್ಮಾ



32

**ಯೇಗ್ದಾಗೆಲ್ಲ ಐತೆ**
● ದಿ. ಬೆಳಗೆರೆ ಕೃಷ್ಣಶಾಸ್ತ್ರಿ



60



ಪ್ರಧಾನ ಸಂಪಾದಕರು ಮತ್ತು ಪ್ರಕಾಶಕರು
**ಡಾ. ಎಂ.ಆರ್. ಜಯರಾಮ್**

ನಿರ್ವಾಹಕ ಸಂಪಾದಕರು
**ಡಾ. ಬಾಬು ಕೃಷ್ಣಮೂರ್ತಿ**

ಸಂಪಾದಕೀಯ ವಿಳಾಸ:
ಶ್ರೀ ಯೋಗಿ ನಾರೇಯಣ ಅಧ್ಯಯನ ಕೇಂದ್ರ
ಎಂ.ಎಸ್.ರಾಮಯ್ಯ ಅನ್ವಯಿಕ ವಿಜ್ಞಾನಗಳ ವಿಶ್ವವಿದ್ಯಾಲಯ ಸಂಕೀರ್ಣ,
ಎಂ.ಎಸ್.ಆರ್.ಐ.ಟಿ. ಪೋಸ್ಟ್, ನ್ಯೂ ಬಿಇಎಲ್ ರಸ್ತೆ,
ಬೆಂಗಳೂರು–560 054. ☎: 080–40502965 /7204095848
E-mail: mallaramagazine@hotmail.com

ಮುದ್ರಕರು:
ಲಾವಣ್ಯ ಮುದ್ರಣ,
ವಿದ್ಯಾಪೀಠ,
ಬೆಂಗಳೂರು–560 050.

ವಿನ್ಯಾಸ: ಕಿಶೋರ್ ಕೆ.ಟಿ., ಮಂಡ್ಯ


# ನಿಮ್ಮೊಡನೆ...

**ಆತ್ಮೀಯ ಮಲ್ಲಾರ ಓದುಗರೇ ನಮಸ್ಕಾರ.**

*ಈ ಸಂಚಿಕೆಯಿಂದ 2019ನೇ ವರ್ಷಕ್ಕೆ ವಿದಾಯ ಹೇಳಿ 2020ನೇ ಕ್ರೈಸ್ತ ವರ್ಷಾರಂಭಕ್ಕೆ ಸ್ವಾಗತ ನೀಡುವುದಾಗಿದೆ. ಮಕರ ಸಂಕ್ರಾಂತಿಯ ಹಬ್ಬದಿಂದ ನಮ್ಮ ಹಬ್ಬ ಹರಿದಿನಗಳು ಆರಂಭ. ಸುಗ್ಗಿಯ ಕಾಲ. ಗೋವುಗಳಿಗೆ ಅಲಂಕಾರ ಮಾಡಿ ಕಿಚ್ಚು ಹಾಯಿಸುವ ಸಂಭ್ರಮ. ಮನೆ ಮನೆಗೆ ಎಳ್ಳು ಬೆಲ್ಲ ಹಂಚಿ ಶುಭ ಹಾರೈಸಿಕೊಳ್ಳುವ ಉತ್ಸಾಹ.*

*2020ರ ಮಲ್ಲಾರ ಮಾಸಪತ್ರಿಕೆಯ ಕ್ಯಾಲೆಂಡರ್ ಕೊಂಡಿದ್ದೀರಾ? ಇಲ್ಲದಿದ್ದರೆ ಪ್ರತಿಗಳು ಮುಗಿದು ಹೋಗುವ ಮೊದಲೇ ಕೊಂಡು ನಿಮ್ಮ ಮನೆಯ ಗೋಡೆಯ ಮೇಲೆ ಅದನ್ನಲ್ಲಂಕರಿಸಿ. ವರ್ಷದ ಎಲ್ಲ ವಿಶಿಷ್ಟ ದಿನಗಳನ್ನು ಚಿತ್ರ ಸಹಿತ ತೋರಿಸಿರುವುದರ ಜೊತೆಗೆ ವಿಶೇಷವಾಗಿ ಕೈವಾರ ಶ್ರೀ ಕ್ಷೇತ್ರದ ಎಲ್ಲ ಪ್ರಮುಖ ಕಾರ್ಯಕ್ರಮಗಳ ಪ್ರಕಟಣೆಯನ್ನೂ ಈ ಕ್ಯಾಲೆಂಡರ್‌ನಲ್ಲಿ ನೀವು ನೋಡಬಹುದು.*



*ನಮ್ಮ ಆದರಣೀಯ ಧರ್ಮಾಧಿಕಾರಿಗಳಾದ ಎಂ.ಆರ್. ಜಯರಾಮ್‌ರವರು ಹಮ್ಮಿಕೊಂಡಿರುವ 'ಧರ್ಮ ಚಿಂತನೆ' ಕಾರ್ಯಕ್ರಮ ಪ್ರತಿ ಮಾಸದ ಎರಡನೆಯ ಶನಿವಾರ ವಿವಿಧ ಸ್ಥಳಗಳಲ್ಲಿ ನಡೆಯುತ್ತಿರುವುದರ ವರದಿಗಳನ್ನು ನೀವು ಮಲ್ಲಾರದಲ್ಲಿ ಓದಿರುತ್ತೀರಿ. ಅದು ಜರುಗಿದ ಕಡೆಗಳಲ್ಲೆಲ್ಲ ಧರ್ಮಾಧಿಕಾರಿಯವರ ವಿಚಾರಭರಿತ, ಉದ್ಬೋಧಕ ಉಪನ್ಯಾಸಗಳು ಸಭಿಕರನ್ನು ಬೇರೊಂದು ಲೋಕಕ್ಕೆ ಕರೆದೊಯ್ಯುತ್ತಿರುವುದು ಪ್ರತಿಯೊಬ್ಬ ಸಭಿಕನ ಅನುಭವ. ಜನವರಿ 11ರಂದು ಧರ್ಮ ಚಿಂತನೆ ಕಾರ್ಯಕ್ರಮ ದೊಡ್ಡಬಳ್ಳಾಪುರದಲ್ಲಿ ನಿಯೋಜಿಸಲಾಗಿದೆ... ದೊಡ್ಡಬಳ್ಳಾಪುರ ಮತ್ತು ಸುತ್ತಮುತ್ತಲ ಊರುಗಳ ಚಿಂತನಶೀಲರೆಲ್ಲರೂ ಈ ಕಾರ್ಯಕ್ರಮದಲ್ಲಿ ಭಾಗವಹಿಸಲು ಕೋರಲಾಗಿದೆ.*

*ನಿಮ್ಮ ಪ್ರೀತಿಯ ಮಲ್ಲಾರ ಎಲ್ಲರ ಮೆಚ್ಚುಗೆಗೂ ಪಾತ್ರವಾಗುತ್ತಿದೆ ಎಂಬುದನ್ನು ಹೇಳಲು ಸಂತೋಷವಾಗುತ್ತಿದೆ. ಇಂತಹ ಸುಂದರ, ವಿಚಾರಭರಿತ ಸಚಿತ್ರ ಮಾಸಪತ್ರಿಕೆ ಹೆಚ್ಚು ಜನರನ್ನು ತಲಪಬೇಕೆಂಬ ಆಸೆ ನಿಮಗಿಲ್ಲವೇ? ಇದ್ದ ಪಕ್ಷದಲ್ಲಿ ಈ ತಿಂಗಳು ನಿಮ್ಮೊಬ್ಬರು ಬಂಧುಗಳನ್ನೊ, ಮಿತ್ರರನ್ನೋ 500 ರೂ.ಗಳನ್ನು RTGS ಅಥವಾ M.O. ಮೂಲಕ ಮಲ್ಲಾರದ ಕಛೇರಿಗೆ ಕಳುಹಿಸಿ ಮಲ್ಲಾರದ 5 ವರ್ಷದ ಚಂದಾದಾರರನ್ನಾಗಿ ಮಾಡಿ ಕೈವಾರ ತಾತಯ್ಯನವರ ಕೃಪಾಕಟಾಕ್ಷಕ್ಕೆ ಪಾತ್ರರಾಗಿ.*

**ನಿಮ್ಮ ವಿಶ್ವಾಸಿ**
**ನಿರ್ವಾಹಕ ಸಂಪಾದಕ**

# ಪ್ರತಿಸ್ಪಂದನ

● ಮಲ್ಲಾರ ಮಾಸಪತ್ರಿಕೆಯಲ್ಲಿ ಪ್ರಕಟಗೊಳ್ಳುತ್ತಿರುವ ಯುಗಪುರುಷರ ಕಥೆಗಳು, ಅನೇಕ ಸಂತರುಗಳ ಜೀವನ ಚರಿತ್ರೆ, ಅಪರೂಪದ ಋಷಿಮುನಿಗಳ ವಿಷಯಗಳು ಬಹಳಷ್ಟು ಚೆನ್ನಾಗಿ ಮೂಡಿಬರುತ್ತಿದೆ.

■ **ಶ್ರೀ ಚಂದ್ರಶೇಖರಯ್ಯ,** ಬೆಂಗಳೂರು–560 083.




● ಶ್ರೀ ಕ್ಷೇತ್ರ ಕೈವಾರದ ಧರ್ಮಾಧಿಕಾರಿ ಡಾ. ಎಂ.ಆರ್. ಜಯರಾಮ್ ಜಯಕುಮಾರಿ ದಂಪತಿ ಭಕ್ತರ ಜೊತೆಯಲ್ಲಿ ದೇವಸ್ಥಾನಗಳಿಗೆ ಯಾತ್ರೆಯನ್ನು ಮಾಡಿ ದೇವತಾರಾಧನೆಯಲ್ಲಿ ಭಾಗವಹಿಸಿ ಆ ಮೂಲಕ ಕೃತಾರ್ಥರಾಗುತ್ತಿರುವುದನ್ನು ಗಮನಿಸಿದರೆ ಅವರ ಸೇವಾ ಕೈಂಕರ್ಯದ ಶಕ್ತಿಯನ್ನು ಪರಾಂಬರಿಸಬಹುದಾಗಿದೆ. ಇದು ಕೈವಾರ ಕ್ಷೇತ್ರದ ವೈಶಿಷ್ಟ್ಯವೆನ್ನಬೇಕು.

■ **ಕೋಟೇಶ್ವರ ಸೂರ್ಯನಾರಾಯಣರಾವ್** ಸಾಹಿತಿಗಳು, ಬೆಂಗಳೂರು–560 004.

**ಕೋಟೇಶ್ವರ ಸೂರ್ಯನಾರಾಯಣರಾವ್ ಅವರ ಅಂತಿಮ ಪ್ರತಿಸ್ಪಂದನ ಪತ್ರ ಇದು. ಹಿರಿಯ ಸಾಹಿತಿ, ಉದ್ಯಮಿ, ಕಲಾಪೋಷಕರಾದ ಶ್ರೀಯುತರು ಡಿಸೆಂಬರ್ 11ರಂದು ನಡುರಾತ್ರಿ ದಕ್ಷಿಣ ಕನ್ನಡದ ಗುಂಡ್ಯ ಎಂಬಲ್ಲಿ ಕಾರು ಅಪಘಾತಕ್ಕೆ ಒಳಗಾಗಿ ನಿಧನರಾದರೆಂದು ತಿಳಿಸಲು ವಿಷಾಧಿಸುತ್ತೇವೆ. –ಸಂ.**



● ಡಿಸೆಂಬರ್ 2019ರ ಮಲ್ಲಾರ ಮಹತ್ವಪೂರಿತ ವಿಷಯಗಳಿಂದ ಒಂದಕ್ಕಿಂತ ಒಂದು ಮಹದಾನ್ನಂದಪಡಿಸಿದೆ. 'ಗಾಯನ ಗೀತಾ' ಚಿತ್ರಲೇಖನವನ್ನು ಎಷ್ಟು ಪ್ರಶಂಸಿದರೂ ಸಾಲದು.

■ **ಶ್ರೀ ಎ.ಕೆ. ಅನಂತಮೂರ್ತಿ,** ಬೆಂಗಳೂರು–560 050.

● ಡಾ. ಬಾಬು ಕೃಷ್ಣಮೂರ್ತಿಯವರು ಬರೆದಿರುವ 'ಸಂತ ಶ್ರೇಷ್ಠ ಬ್ರಹ್ಮಚೈತನ್ಯರು ಲೇಖನವೂ ತುಂಬ ಸ್ವಾರಸ್ಯಕರವಾಗಿದೆ. ಸದಾ ಕಾಲ ರಾಮ ನಾಮ ಜಪವನ್ನು ಮಾಡುತ್ತಾ ಮೈಮರೆತು ಧ್ಯಾನಸ್ಥರಾಗಿರುತ್ತಿದ್ದಂತಹ ಬ್ರಹ್ಮ ಚೈತನ್ಯರು ಮಹಾನ್ ಭಕ್ತರು. ಇಂತಹ ಲೇಖನಗಳು ಓದುಗರಲ್ಲಿ ಭಕ್ತಿಯನ್ನು ಹೆಚ್ಚುಸುತ್ತದೆ.

■ **ಶ್ರೀ ರಾಮಚಂದ್ರಪ್ಪ** ಆನೇಕಲ್–562 106.

● ಕನ್ನಡನಾಡಿನ ಹೆಸರಾಂತ ಹಿರಿಯ ಕಾದಂಬರಿಕಾರ, ಆಧ್ಯಾತ್ಮಿಕ ಚಿಂತಕ ಹಾಗೂ ಮಲ್ಲಾರ ಮಾಸಪತ್ರಿಕೆಯ ಸಂಪಾದಕರಾದ ಡಾ. ಬಾಬು ಕೃಷ್ಣಮೂರ್ತಿ ಅವರು ಶ್ರೀ ರಾಗಿಗುಡ್ಡ ಪ್ರಸನ್ನ ಆಂಜನೇಯಸ್ವಾಮಿ ದೇವಾಲಯದಲ್ಲಿ ನಡೆದ 'ಧರ್ಮ ಚಿಂತನೆ'ಯ ಭಾಷಣ ತುಂಬ ಚಿಂತನಶೀಲವಾಗಿತ್ತು. ಧರ್ಮದ ಬಗ್ಗೆ ಅವರು ನುಡಿದ ಪ್ರತಿಯೊಂದು ಮಾತು ಮೌಲ್ಯಯುತವಾಗಿತ್ತು.

■ **ಶ್ರೀ ಗೋಪಾಲ ಕೃಷ್ಣ,** ಶಿವಮೊಗ್ಗ–571 401.

● ಡಾ. ಅನಸೂಯಾದೇವಿಯವರ ಲೇಖನಿಯಾದ 'ಧೀಮಂತ ಸಂತ ಕಾನ್ಹೋಪಾತ್ರಾ' ಲೇಖನವನ್ನು ಓದಿ, ನನ್ನ ಕಣ್ಣಲ್ಲಿ ನೀರು ತುಂಬಿಕೊಂಡಿತ್ತು. ಸಮಾಜದ ಕೀಳರಿಮೆಗೆ ಪಾತ್ರಳಾಗಿ ತುಂಬ ಕಷ್ಟದ ಜೀವನವನ್ನು ನಡೆಸಿದ ಕಾನ್ಹೋಪಾತ್ರಾಳಿಗೆ ಪಂಢರಾಪುರ ವಿಟ್ಠಲನ ಸನ್ನಿದಾನದಲ್ಲಿ ಸಮಾಧಿಯಾಗುವ ಸೌಭಾಗ್ಯ ಒದಗಿಬಂದಿದ್ದು ಅವಳ ಭಕ್ತಿಗೆ ಪರಮಾತ್ಮ ನೀಡಿದ ಕೊಡುಗೆ. ಇಂತಹ ಶ್ರೇಷ್ಠ ಸಂತಳು ಭಾರತೀಯ ಸ್ತ್ರೀಯರಿಗೆ ಆದರ್ಶಪ್ರಾಯ.

■ **ಯಶೋದ,** ಮಂಡ್ಯ–571 405.

● ಡಿಸೆಂಬರ್ ಮಾಸದ 'ನಾರಾಯಣೀಯಮ್' ಲೇಖನವನ್ನು ಓದಿ, ನನಗೆ ನಿಜವಾಗಲೂ ವೈಕುಂಠದಲ್ಲಿ ಶ್ರೀಮನ್ನಾರಾಯಣನನ್ನು ದರ್ಶಿಸಿದಂತೆ ಭಾಸವಾಯಿತು. ಅಷ್ಟೊಂದು ಭಕ್ತಿ ಕಾವ್ಯ ಇದಾಗಿದೆ.

■ **ವಿದ್ವಾನ್ ರಾಮಮೂರ್ತಿ,** ಮೈಸೂರು–570 011.

● ಸಂತ ವಿನೋಬಾ ಭಾವೆಯವರ 'ಗೀತಾ ಪ್ರವಚನ'ವನ್ನು ಓದುತ್ತಿದ್ದರೆ, ನಮ್ಮಲ್ಲಿ ನಿಜವಾಗಿಯೂ ಏಕಾಗ್ರತೆಯನ್ನು ತರುವಂತಿದೆ. ನಮ್ಮ ಮನಸ್ಸನ್ನು ಶುದ್ಧಿಯನ್ನು ಗಳಿಸಬೇಕಾದರೆ ಏನನ್ನು ಮಾಡಬೇಕೆಂಬುದರ ಕುರಿತು ವಿಷಯಭರಿತ ಮಾತುಗಳು ಪ್ರತಿ ತಿಂಗಳೂ ಮಲ್ಲಾರದಲ್ಲಿ ಓದಿ ಸಂತೋಷಗೊಳ್ಳುತ್ತಿದ್ದೇನೆ.

■ **ಶ್ರೀ ನಾಗಭೂಷಣರಾವ್,** ಚಿಂತಾಮಣಿ–563 125.

● ನಾವು ಲೌಕಿಕ ಪ್ರಪಂಚದಲ್ಲಿದ್ದರೂ ತಾವರೆ ಎಲೆಯ ಮೇಲಿನ ನೀರಿನಂತೆ ತಾಗಿಸಿಕೊಳ್ಳದೆ ಮುಕ್ತತೆಯಿಂದ ಆನಂದದಲ್ಲಿರಬೇಕೆಂಬುದನ್ನು ತಿಳಿಸುತ್ತಾ ಓದುಗರನ್ನು ಲೌಕಿಕದಿಂದ ಅಲೌಕಿಕತೆಗೆ ಕರೆದೊಯ್ಯುತ್ತಿರುವ 'ಕಶ್ಯಪ ಸೂತ್ರಗಳು' ಲೇಖನ ಅಭಿನಂದನಾರ್ಹ.

■ **ಶ್ರೀಮತಿ ಸರಸ್ವತಮ್ಮ,** ಬಂಗಾರಪೇಟೆ–563 114.

● ಪ್ರತಿ ತಿಂಗಳೂ ಮಲ್ಲಾರದಲ್ಲಿ ಮುದ್ರಣಗೊಳ್ಳುತ್ತಿರುವ 'ತಿರುಮಲೆಯ ಚರಿತಾಮೃತ'ದ ಪುಸ್ತಕದಲ್ಲಿನ ವಿಷಯಗಳು ಓದುಗರಲ್ಲಿ ತಿರುಮಲೆಯ ಬಗ್ಗೆ ಭಕ್ತಿ, ಶ್ರದ್ಧೆಗಳನ್ನು ಹೆಚ್ಚಿಸುತ್ತಿದೆ.

■ **ಶ್ರೀ ನಾರಾಯಣಪ್ಪ,** ಚಿಕ್ಕಬಳ್ಳಾಪುರ–562 101.



# ಹೀಗೊಂದು ಅನಿಸಿಕೆ...

● ಡಾ। ಬಾಬು ಕೃಷ್ಣಮೂರ್ತಿ

ಇದೇ 2020ರ ಜನವರಿ 15ರಂದು ಬರಲಿರುವ ಮಕರ ಸಂಕ್ರಾಂತಿ ಕ್ರೈಸ್ತ ವರ್ಷಾರಂಭದಲ್ಲಿ ಬರುವ ಮೊಟ್ಟ ಮೊದಲ ಹಿಂದೂ ಹಬ್ಬ. ಸಹಜೀವಿಗಳೊಂದಿಗೆ, ಪ್ರಕೃತಿಯೊಂದಿಗೆ ಏಕಾತ್ಮತೆಯನ್ನು ಸಾರುವ ಈ ಹಬ್ಬ ಹಳ್ಳಿ ಹಳ್ಳಿಗಳಲ್ಲಿ ಸಂಭ್ರಮವನ್ನು ಉಂಟುಮಾಡುವಂತಹುದು.

ಅಂದು ಖಗೋಲ ಶಾಸ್ತ್ರದ ದೃಷ್ಟಿಯಿಂದ ಒಂದು ಮಹತ್ತರವಾದ ಬದಲಾವಣೆ ಉಂಟಾಗುವುದು. ಸೂರ್ಯ ಮಕರ ರಾಶಿಯನ್ನು ಪ್ರವೇಶಿಸುವ ಈ ದಿವಸ ಅಶುಭ ದಿನಗಳಿಗೆ ಮಂಗಳ ಹಾಡಿ ಶುಭ ಪರ್ವವನ್ನು ಸ್ವಾಗತಿಸುವ ಕಾರ್ಯ ನಡೆಯುತ್ತದೆ. ಅಂದಿನಿಂದ ಹಿಂದೂ ಪವಿತ್ರ ಹಬ್ಬ ಹುಣ್ಣಿಮೆಗಳ ಆರಂಭ. ಸೂರ್ಯನು ತನ್ನ ದಕ್ಷಿಣ ಮುಖ ಪ್ರಯಾಣಕ್ಕೆ ಅಂತ್ಯ ಹಾಡಿ ಉತ್ತರಾಯಣದ ಕಡೆಗೆ ಪ್ರಯಾಣ ಆರಂಭಿಸುವ ಮುಖ್ಯ ದಿನ. ಉತ್ತರಾಯಣ ಪುಣ್ಯ ಕಾಲವೆಂದರೆ ಭಗವಂತನ ಹಗಲು. ರಾತ್ರಿಯ ಕಾಲವನ್ನು ಪಾಪ ಮತ್ತು ಕೆಟ್ಟ ಕೆಲಸಗಳಿಗೆ ಸಾಂಕೇತಿಕವಾಗಿ ಸ್ವೀಕರಿಸಿದ್ದರೆ ಹಗಲನ್ನು ಸತ್ಯ, ಸದ್ಗುಣ ಹಾಗೂ ಧರ್ಮದ ಸಂಕೇತವಾಗಿ ಒಪ್ಪಿಕೊಳ್ಳಲಾಗಿದೆ. ಆದ್ದರಿಂದ ದೇವತೆಗಳಿಗೆ ಹಗಲಾಗಿರುವ ಮಕರ ಸಂಕ್ರಾಂತಿಯಿಂದ ಎಲ್ಲ ಶುಭ ಹಾಗೂ ಉತ್ತಮ ಕಾರ್ಯಗಳನ್ನೇ ಮಾಡಲಾಗುತ್ತದೆ. ಮಕರ ಸಂಕ್ರಾಂತಿಯ ದಿನದಿಂದ ಹಗಲಿನ ಕಾಲ ಹೆಚ್ಚುತ್ತಾ ಹೋಗಿ ರಾತ್ರಿ ಕಾಲ ಕಡಮೆಯಾಗುತ್ತದೆ.




ಹಿಂದುಗಳಿಗೆ ಸೂರ್ಯ ಭಗವಾನನು ಜ್ಞಾನ, ಆಧ್ಯಾತ್ಮಿಕ ಬೆಳಕು ಹಾಗೂ ಪ್ರಜ್ಞೆಗಳ ಸೂಚಕವಾಗಿದ್ದಾನೆ. ಅಜ್ಞಾನ, ಮೌಢ್ಯಗಳೆಂಬ ಕತ್ತಲಿನಿಂದ ಹೊರ ಬಂದು ಸಂತಸ ಸಂಭ್ರಮಗಳ ಅಂತರಂಗದ ಬೆಳಕು ವೃದ್ಧಿಂಗತವಾಗಬೇಕೆಂಬುದು ಮಕರ ಸಂಕ್ರಮಣದ ದಿವಸ ನಾವು ಚಿಂತಿಸಬೇಕಾದ ಸಂಗತಿ. ಸತತ ಭ್ರಮಣದಲ್ಲಿದ್ದು ಜಗತ್ತಿಗೆ ಬೆಳಕು ನೀಡುವ ಸೂರ್ಯ ಒಬ್ಬ ಕರ್ಮಯೋಗಿ.

ರಾಶಿ ಚಕ್ರದಲ್ಲಿ ಮಕರ ರಾಶಿ ಶನಿಯ ಸ್ವಗೃಹವಾಗಿದೆ. ಸಂಕ್ರಾಂತಿಯ ದಿವಸ ಸೂರ್ಯನು ಶನಿಯ ಮನೆಯನ್ನು ಪ್ರವೇಶಿಸುತ್ತಾನೆ. ಸೂರ್ಯನು ಶನಿಯ ತಂದೆ. ಹಿಂದೂ ಪುರಾಣಗಳ ಪ್ರಕಾರ ತಂದೆ ಮಕ್ಕಳ ಸಂಬಂಧಗಳು ಅಷ್ಟು ಸರಾಗವಾಗಿ ಸಾಗುವುದಿಲ್ಲ. ಆದರೆ ಮಕರ ಸಂಕ್ರಾಂತಿಯ ದಿವಸ ತಂದೆಯೇ ಮಗನನ್ನು ಸಂಧಿಸಲು ಹೋಗುತ್ತಾನೆ. ಸೂರ್ಯ ಮತ್ತು ಶನಿ ಬೃಹತ್ ಗ್ರಹಗಳಾಗಿದ್ದು ಅವರ ಶುಭ ದೃಷ್ಟಿ ಮಾನವರಿಗೆ ಮಹತ್ಸಾಧನೆಗಳನ್ನು ಮಾಡಲು ಅನುವು ಮಾಡಿಕೊಡುತ್ತದೆ.

ಮಹಾಭಾರತದ ಒಂದು ಪ್ರಮುಖ ಪಾತ್ರವಾದ ಭೀಷ್ಮನು ಇಚ್ಛಾಮರಣಿಯಾಗಿದ್ದ. ಸ್ವತಃ ಶರಶಯ್ಯೆಯ ಮೇಲೆ ಮಲಗಿದ್ದರೂ ಭೀಷ್ಮನು ದಕ್ಷಿಣಾಯನದಲ್ಲಿ ಪ್ರಾಣ ಬಿಡಲು ಇಚ್ಛಿಸದೆ ಉತ್ತರಾಯಣ ಪುಣ್ಯಕಾಲಕ್ಕಾಗಿ ಕಾದನೆಂಬುದು ಮಹಾಭಾರತದ ಒಂದು ಪ್ರಸಿದ್ಧ ಘಟನೆ. ಹಿಂದೂಗಳಲ್ಲಿ ಉತ್ತರಾಯಣದಲ್ಲಿ ಮರಣಿಸುವವರಿಗೆ ಮೋಕ್ಷ ಪ್ರಾಪ್ತಿಯಾಗುವುದೆಂಬ ನಂಬಿಕೆ ಉಂಟು.

ಮಕರ ಸಂಕ್ರಾಂತಿಯ ಸಂಬಂಧ ಇನ್ನೂ ಒಂದು ಐತಿಹ್ಯ ಉಂಟು. ಇದೇ ದಿವಸವೇ ಭಗೀರಥನು ಗಂಗೆಯನ್ನು ಭುವಿಗೆ ತಂದು ಸಗರ ಮಹಾರಾಜನ ಅರವತ್ತು ಸಾವಿರ ಮಕ್ಕಳಿಗೆ ಮೋಕ್ಷವನ್ನು ಕೊಡಿಸಿದನೆಂದು ಹೇಳಲಾಗಿದೆ.

ಯೋಗ ಸಾಧಕರಿಗೆ ಇದೊಂದು ಅತ್ಯಂತ ಪ್ರಶಸ್ತ ಕಾಲ. ಸಂಕ್ರಾಂತಿಯ ಇಡೀ ದಿವಸ ಚೈತನ್ಯದಿಂದ ತುಂಬಿರುತ್ತದೆ. ಈ ಹೆಚ್ಚಿನ ಚೈತನ್ಯಮಯ ವಾತಾವರಣದಲ್ಲಿ ಸಾಧಕನು ಅಪಾರ ಲಾಭವನ್ನು ಪಡೆಯಬಲ್ಲ. ಚೈತನ್ಯಮಯ ಪ್ರಕೃತಿಯ ಕಾರಣ ತೇಜೋತತ್ತ್ವ ಸಾಧಕರಲ್ಲಿ ವೃದ್ಧಿಸುತ್ತದೆಯಾದ್ದರಿಂದ ಸಾಧಕರಿಗೆ ಇದೊಂದು ಅತ್ಯಂತ ಸುಯೋಗ್ಯ ಕಾಲ.

ಇದು ಸುಗ್ಗಿಯ ಕಾಲವು ಹೌದು. ನಮ್ಮ ಗ್ರಾಮೀಣ ಪ್ರದೇಶಗಳಲ್ಲಿ ರೈತ ಜನರು ಸಂಭ್ರಮಿಸುವ ಕಾಲ. ಈ ಸಂದರ್ಭದಲ್ಲಿ ಗೋವುಗಳಿಗೆ ವಿಶೇಷ ಅಲಂಕಾರ ಮಾಡಿ ರಾತ್ರಿಯ ಹೊತ್ತು ಕಿಚ್ಚು ಹಾಯಿಸುವುದು ಒಂದು ಸಡಗರದ ಕಾರ್ಯಕ್ರಮ. ನಮ್ಮಲ್ಲಿ ಆ ದಿವಸ ಬಂಧು ಮಿತ್ರರಿಗೆ ಎಳ್ಳು ಬೆಲ್ಲವನ್ನೂ ಹಂಚಿ 'ಎಳ್ಳು ತಿಂದು ಒಳ್ಳೆ ಮಾತನಾಡು' ಎಂದು ಹಾರೈಸುವ ಪದ್ಧತಿಯೂ ಉಂಟು. ಎಳ್ಳು ಹೆಚ್ಚಿನ ಸತ್ತ್ವವುಳ್ಳ ವಸ್ತು. ಇಂಥ ಎಳ್ಳನ್ನು ಬೆಲ್ಲದೊಂದಿಗೆ ವಿತರಿಸುವುದರಿಂದ ಸಾತ್ವಿಕ ಮನಸ್ಸತ್ತ್ವಕ್ಕೆ ಹೆಚ್ಚಿನ ಇಂಬು ನೀಡಿದಂತಾಗುವುದು.

ಮಕರ ಸಂಕ್ರಮಣ ಕಾಲದಲ್ಲಿ ಪವಿತ್ರ ನದಿ ಸ್ನಾನಕ್ಕೆ ಹೆಚ್ಚಿನ ಪ್ರಾಶಸ್ತ್ಯ ಉಂಟು. ಗಂಗಾ, ಯಮುನಾ, ಕೃಷ್ಣೆ, ಕಾವೇರಿ, ಗೋದಾವರಿ ಮುಂತಾದ ನದಿಗಳಲ್ಲಿ ಪರ್ವ ಕಾಲದ ಸ್ನಾನಕ್ಕಾಗಿ ಆಯಾ ತೀರ್ಥಕ್ಷೇತ್ರಗಳಿಗೆ ಜನ ಧಾವಿಸುವುದುಂಟು. ಹಾಗೆ ಸ್ನಾನ ಮಾಡುವುದರಿಂದ ಪಾಪ ಕರ್ಮಗಳೆಲ್ಲವೂ ತೊಳೆದು ಹೋಗುವುದೆಂಬ ನಂಬಿಕೆ. ●



# ಸಿರಿ ಪುರಂದರ




ಲೌಕಿಕವಾಗಿ ಅವರು ಬಡವರು. ಆದರೆ ಪಾರಮಾರ್ಥಿಕವಾಗಿ ಸಿರಿವಂತರು. ಅಂತಹ ದಾಸರಲ್ಲಿ ಅಗ್ರಗಣ್ಯರು ನಮ್ಮ ಪುರಂದರದಾಸರು. ಜನವರಿ 24ರಂದು ಅವರ ಪುಣ್ಯದಿನ. ಅಂದು ಅವರ ಸ್ಮರಣೆಗಾಗಿ ಲೇಖನವನ್ನು ಬರೆದಿದ್ದಾರೆ

ಕೆ. ಭೀಮರಾವ್.


ವಿಷ್ಣುವಿನ ಸಹಸ್ರನಾಮಗಳಲ್ಲಿ 337ನೆಯ ಹೆಸರೇ 'ಪುರಂದರ'. ಪುರಂದರ ಎಂದರೆ ಮೂರು ನಗರವನ್ನು ಧ್ವಂಸ ಮಾಡಿದವನು ಎಂದರ್ಥ. ಆ ಮೂರು ನಗರಗಳೆಂದರೆ ಭೂಮಿ, ಆಕಾಶ ಮತ್ತು ಸ್ವರ್ಗದಲ್ಲಿರುವ ಕಬ್ಬಿಣ, ಬೆಳ್ಳಿ ಮತ್ತು ಬಂಗಾರ ನಿರ್ಮಿತ ಪುರಗಳು. ಇವುಗಳನ್ನು ರಾಕ್ಷಸರ ವಾಸ್ತುಶಿಲ್ಪಿ ಮಯಾಸುರನು ತಾರಕಾಸುರನ ಮೂರು ಪುತ್ರರಾದ ತಾರಕಾಕ್ಷ, ವಿದ್ಯುನ್ಮಾಲಿ ಮತ್ತು ಕಮಲಾಕ್ಷರಿಗಾಗಿ ನಿರ್ಮಿಸಿರುತ್ತಾನೆ. ಚಿರಂಜೀವಿಗಳಾಗಿ ಬಾಳಬೇಕೆಂಬ ಬಯಕೆಯಿಂದ ತಮ್ಮನ್ನು ದೇವತೆಗಳೂ ಸೇರಿ ಯಾರೂ ಸಾಯಿಸಬಾರದೆಂಬ ಸಂಕಲ್ಪದಿಂದ ಕಟ್ಟಿಸಿಕೊಂಡ ಕೋಟೆಗಳು ಈ ನಗರಿಗಳು. ಅವರ ಉಪಟಳ ಹೆಚ್ಚಾದಾಗ ದೇವೇಂದ್ರನ ಪ್ರಾರ್ಥನೆಯಂತೆ ಮಹಾದೇವನು, ಮೇರು ಪರ್ವತವನ್ನೇ ಬಿಲ್ಲಾಗಿಸಿ, ವಾಸುಕಿಯೆಂಬ ಸರ್ಪ ಹಗ್ಗವಾಗಿ, ಸ್ವಯಂ ವಿಷ್ಣುವೆ ಬಾಣವಾಗಿದ್ದ ಪಿನಾಕಿನಿಯಿಂದ ಏಕಕಾಲದಲ್ಲಿ ಈ ತ್ರಿಪುರಗಳನ್ನು ನಾಶಮಾಡಿ, ರಕ್ಕಸರನ್ನು ಸಂಹರಿಸುತ್ತಾನೆ. ವಿಷ್ಣುವಿನಿಂದ ತ್ರಿಪುರಗಳು ನಾಶವಾದುದರಿಂದ ಅವನು ತ್ರಿಪುರ ಸಂಹಾರಿ ಅರ್ಥಾತ್ ಪುರಂದರ–ಪುರ ಸಂಹಾರಿ ಎಂದು ಪ್ರಸಿದ್ಧಿ ಪಡೆಯುತ್ತಾನೆ.

ಈ ಹಿನ್ನೆಲೆಯನ್ನು ಹೇಳುವುದರ ಉದ್ದೇಶವಿಷ್ಟೆ. ವರದಪ್ಪ ನಾಯಕನ ಮಗ ನವಕೋಟಿ ನಾರಾಯಣ ಬಿರುದಾಂಕಿತ ಶ್ರೀನಿವಾಸ ನಾಯಕನು ಸ್ವ ಇಚ್ಛೆಯಿಂದ ಅಂದಿನ ವಿಜಯನಗರದ ರಾಜಗುರು ಶ್ರೀ ವ್ಯಾಸರಾಯರಲ್ಲಿ ಬಂದು ಶಿಷ್ಯತ್ವ ವಹಿಸಿದಾಗ ತಮ್ಮ ಶಿಷ್ಯನಿಗೆ ಅವರು ಕೊಟ್ಟ ದಾಸ ನಾಮ 'ಸಿರಿ ಪುರಂದರ'. ನಾಯಕನು ಬರೆದ ಕೀರ್ತನೆಗಳಿಗೆ 'ಪುರಂದರ ವಿಟ್ಠಲ' ಎಂಬ ಅಂಕಿತವೂ ಅವರು ಸೂಚಿಸಿದ್ದೆ. ಅಷ್ಟೇ ಅಲ್ಲ ಅವರ ಕೀರ್ತನ ಸಾಹಿತ್ಯವನ್ನು ಸರ್ವ ಉಪನಿಷತ್ತಿನ ಸಾರ ಎಂದು ಗುರುತಿಸಿ 'ಪುರಂದರೋಪನಿಷತ್' ಎಂಬ ಹೆಗ್ಗಳಿಕೆಯನ್ನು ನೀಡಿದವರು ಆ ಯತಿವರ್ಯರೇ.

ಶ್ರೀ ವ್ಯಾಸರಾಜರು ಶ್ರೀನಿವಾಸ ನಾಯಕನಿಗೆ ಆ ಅಂಕಿತ ನೀಡಲು ಕಾರಣ ನಾಯಕರು ಪಂಢರಾಪುರದ ಸಮೀಪದ ಪುರಂದರ ಘಡದಿಂದ ಬಂದವರೆಂದು ಹಾಗೂ ಅವರು ಪಾಂಡುರಂಗ ವಿಟ್ಠಲನ ಪರಮ ಭಕ್ತರೆಂದು ಎಂದು ವಿದ್ವಾಂಸರು ಅಭಿಪ್ರಾಯ ಪಡುತ್ತಾರೆ. ವಿಜಯದಾಸರಾದಿಯಾಗಿ ಸಮಸ್ತ ದಾಸ ಕುಲ ಶ್ರೇಷ್ಠರು ಪುರಂದರದಾಸರ ಜನ್ಮಸ್ಥಳ ಪುರಂದರ ಘಡವೆಂದೆ ಸೂಚಿಸಿರುತ್ತಾರೆ. ಆದರೆ ಇತ್ತೀಚಿನ ಸಂಶೋಧನೆಗಳಿಂದ ಅವರು ತೀರ್ಥಹಳ್ಳಿ ಸಮೀಪದ ಅರಗಹಳ್ಳಿಯ ನಾಯಕ ಮನೆತನಕ್ಕೆ ಸೇರಿದ ವೈಷ್ಣವ ಸಂಪ್ರದಾಯದವರೆಂದು ವ್ಯಕ್ತವಾಗಿದೆ.

ಪುರಂದರದಾಸರ ಜನ್ಮಸ್ಥಳದ ಬಗ್ಗೆ ಭಿನ್ನಾಭಿಪ್ರಾಯವಿರುವ ಹಾಗೆ ಅವರ ಕಾಲದ ವಿಷಯದಲ್ಲೂ ಏಕಾಭಿಪ್ರಾಯವಿಲ್ಲ. ಕುಮಾರವ್ಯಾಸನ ಭಾರತ ಕಥಾ ಮಂಜರಿಯನ್ನು ಅವರು ಕರ್ತೃವಿನೊಂದಿಗೆ ಚರ್ಚಿಸಿದರೆಂಬ ಅಭಿಪ್ರಾಯ ಒಂದೆಡೆಯಾದರೆ ಅವರು ಕೇವಲ ಆ ಪ್ರತಿಯ ಅವಲೋಕನ–ಕುಮಾರವ್ಯಾಸನ ಮರಣದ ಅನಂತರ–ಮಾಡಿದರೆಂಬ ವಚನವೂ ಇದೆ. ಕುಮಾರವ್ಯಾಸ ಹಾಗೂ ಪುರಂದರರ ಕಾಲ ಒಂದೇ ಎಂಬುದಾದರೆ ದಾಸರು ಕ್ರಿ.ಶ. 1400ಕ್ಕೆ ಮುಂಚಿನವರಾಗುತ್ತಾರೆ. ಆದರೆ ಬಹುಶ್ರುತ ಅಭಿಮತದಂತೆ ಅವರ ಕಾಲ ಕ್ರಿ.ಪೂ. 1484ರಿಂದ 1564. 80 ವರ್ಷದ ಜೀವಿತದ ಅವಧಿ ಅವರದು. ಪುರಂದರರು ಹುಟ್ಟಿದ ವಿಷಯದಲ್ಲಾಗಲಿ ಅಥವಾ ಕಾಲದ

ವಿಷಯದಲ್ಲಾಗಲಿ, ವಿದ್ವಾಂಸರಲ್ಲಿ ಭಿನ್ನಾಭಿಪ್ರಾಯವಿರಬಹುದೇ ಹೊರತು ಅವರ ದೈವಭಕ್ತಿಯಲ್ಲಾಗಲಿ, ಪಾಂಡಿತ್ಯದಲ್ಲಾಗಲಿ ಅಲ್ಲ. ಕರ್ನಾಟಕ ಸಂಗೀತ ಪಿತಾಮಹರು ಅವರೆಂಬುದನ್ನು ಯಾರೂ ಪ್ರಶ್ನಿಸುವುದಿಲ್ಲ. ಹೀಗಾಗಿ ಭಿನ್ನಾಭಿಪ್ರಾಯವಿರುವ ವಿಷಯಗಳಲ್ಲಿ ಚರ್ಚೆ ಅನಗತ್ಯ. ಒಟ್ಟಿನಲ್ಲಿ ಅವರು ಕನ್ನಡಿಗರೆಂಬುದು ನಮ್ಮೆಲ್ಲರಿಗೂ ಹೆಮ್ಮೆ ತರುವ ವಿಷಯ.

ಮುತ್ತು ರತ್ನಗಳ ವ್ಯಾಪಾರಿಯಾಗಿದ್ದ ಶ್ರೀನಿವಾಸ ನಾಯಕರು ಅಲೌಕಿಕ ಘಟನೆಯೊಂದರಿಂದ ಮನಃಪರಿವರ್ತನೆಗೊಂಡು ತಮ್ಮ ಸಮಸ್ತ ಸಂಪತ್ತನ್ನು 'ಕೃಷ್ಣಾರ್ಪಣ' ಎಂದು ತ್ಯಾಗ ಮಾಡಿ ಹರಿದಾಸರಾಗುತ್ತಾರೆ. ಈ ಅಲೌಕಿಕ ಘಟನೆಯ ವಿಷಯದಲ್ಲಿ ಅನೇಕ ದಂತಕಥೆಗಳಿದ್ದು ಅವು ಯಾವುದಕ್ಕೂ ನಿಖರ ಪ್ರಮಾಣವಿರುವುದಿಲ್ಲ. ಆದರೆ ದಾಸರ ಕೀರ್ತನೆಗಳು ಹಾಗೂ ಅವರ ಅನಂತರ ಆ ಪರಂಪರೆಯಲ್ಲಿ ಬಂದ ಇತರ ಹರಿದಾಸರುಗಳ ವಚನಗಳಿಂದ ಅವರ ಪತ್ನಿಯ ದೆಸೆಯಿಂದ ಅವರ ಜಿಪುಣತನ ಮಾಯವಾಗಿ, ಜೀವನದಲ್ಲಿ ವೈರಾಗ್ಯ ಮೂಡಿ, ದಾಸತ್ವಕ್ಕೆ ಮೊರೆ ಹೋದುದು ಕಂಡುಬರುತ್ತದೆ. ದಾಸತ್ವ ವಹಿಸಿದ ಮಾತ್ರಕ್ಕೆ ಅವರು ಗೃಹಸ್ಥ ಜೀವನ ಬಿಟ್ಟವರಲ್ಲ. ಆವೇಳೆಗಾಗಲೆ ದಾಸರಿಗೆ ನಾಲ್ವರು ಪುತ್ರರು ಒಬ್ಬ ಪುತ್ರಿಯೂ ಇದ್ದರು. ಪತ್ನಿ-ಪುತ್ರ-ಪುತ್ರಿಯರ ಸಮೇತ ಹರಿಭಜನೆ ಮಾಡುತ್ತಾ ಭಿಕ್ಷಾಟನೆಯಿಂದ ಭುಂಜಿಸುವ ಜೀವನದ ಆಯ್ಕೆ ಅವರದಾಯಿತು.

ದಾಸರು ನಾಲ್ಕು ಲಕ್ಷ ಎಪ್ಪತ್ತೈದು ದೇವರ ನಾಮಗಳನ್ನು ಬರೆದರೆಂಬ ಸಂಗತಿ ಯಾರಿಗೂ ಅಚ್ಚರಿ ತರುವಂತಹುದು. ಈ ಸಂಖ್ಯೆ ಉತ್ಪ್ರೇಕ್ಷೆ ಎಂಬ ಅನಿಸಿಕೆ ಬಹಳ ಜನರದು. ಅದಕ್ಕೆ ಮುಖ್ಯ ಕಾರಣ ಅವರ ಬರೆದ ದೇವರ ನಾಮಗಳಲ್ಲಿ ಉಪಲಬ್ಧವಿರುವುವು ಕೇವಲ ಕೆಲವು ಸಾವಿರ ಮಾತ್ರ. ಆದರೆ ಈ ಸಂಖ್ಯೆಯ ಬಗ್ಗೆ ಯಾರೂ ಅನುಮಾನಪಡುವ ಕಾರಣವಿಲ್ಲ. ಏಕೆಂದರೆ ಸ್ವತಃ ಪುರಂದರರೇ ಈ ಬಗ್ಗೆ ಸ್ಪಷ್ಟೀಕರಣ ನೀಡಿದ್ದಾರೆ.

**ವಾಸುದೇವನ ನಾಮಾವಳಿಯ ಕ್ಲಿಪ್ತಿಯನು**
**ವ್ಯಾಸರಾಯರ ದಯದಿಂದ ಬಣ್ಣಿಪೆನು**
**ಕೇದಾರ ರಾಮೇಶ್ವರ ಕೇರಳ ಭೂತಳದ**
**ಪಾದಾರ ವಿಂದ ಪ್ರತಿ ಕ್ಷೇತ್ರವು**
**ಅದರದಿ ಲಕ್ಷದಿಪ್ಪತ್ತೈದು ಸಾವಿರ ಕೃತಿಯ**
**ವೇದಶಾಸ್ತ್ರ ಪುರಾಣ ಸಮ್ಮತದಿಂದ**
**ಮಧ್ವರಾಯರ ಮಹಿಮೆ ಮಹ ಗುರು ಪರಂಪರೆ ಪ್ರ**
**ಸಿದ್ಧ ವ್ಯಾಸರಾಯರ ಪರಿಯಂತವು**
**ಶುದ್ಧ ತಂತ್ರ ಸಾರೋಕ್ತಿ ಸೇವಕ ಪೇಳಿದೆನು.**
**ಬ್ರಹ್ಮಲೋಕ ಕೈಲಾಸ ಭರದಿ ದಿಕ್ಪಾಲರ**
**ಪೇರ್ಮೆ ತೊಂಬತ್ತು ಸಾವಿರದಿ ಪೇಳಿದೆನು**
**ಸಮ್ಮತದಿ ಹಲವು ಕಥಾಸಾರ ತೊಂಬತ್ತು ಸಾವಿರ**
**ವೊಮ್ಮನದಿ ಪೇಳಿದೆನು ಕೇಳಿ ಜನರು**
**ಅವರವರ ಮೂರ್ತಿಧ್ಯಾನ ಅವರವರ ಕೀರ್ತಿಮಾನ**
**ವಿವರದಿಂದಲಿ ನಾ ನಿಮಗೆ ವಿಸ್ತರಿಸಿದೆನು**
**ಘನತೆ ಅಗಣಿತ ಗಂಡಕಿಯ ಶಿಲಾಮೂರ್ತಿ**
**ಅನಘ ಕಲ್ಯಾಣ ಕಥೆ ಅರವತ್ತು ಸಾವಿರ**
**ಆಹ್ನಿಕ ಗುಣವು ಜನ್ಮಾಷ್ಟಮಿ ಏಕಾದಶಿಯ**
**ನಿರ್ಣಯವನು ಶ್ರುತಿ ಸ್ಮೃತಿ ಸಹಿತದಿ**
**ವರ್ಣಿಸಿದೆ ಕ್ಷೀರಾಬ್ಧಿಶಯನ ಅಹೋಬಿಲ ನರ**
**ಸಿಂಹ ಮೂರ್ತಿಗಳ ಶ್ರೀನಾಮಗಳ**
**ಸುಳಾದಿ ಅರವತ್ತು ನಾಲ್ಕು ಸಾವಿರ ಬಹುತರ**
**ನಾಮಾ**
**ವಳಿಯು ಇಪ್ಪತ್ತೈದು ಸಾವಿರವಾಗಿವೆ**
**ತಿಳಿದು ಶ್ವೇತ ದೀಪ ಅನಂತಾಸನ ವೈಕುಂಠ**
**ಸೆಲೆ ಶೇಷ ಚರಿತ್ರೆಯನು ಪೇಳಿದೆನು**

**ಇಂತು ನಾಲ್ಕು ಲಕ್ಷ ಎಪ್ಪತ್ತೈದು ಸಾವಿರ ಕೃತಿಯು**
**ಕಂತು ಜನಕನ ನಾಮ ಮಹಿಮೆ**
**ಸಂತಸದಿ ಶ್ರುತಿ ಸ್ಮೃತಿ ಸಮ್ಮತದಿಂದ**
**ಪುರಂದರ ವಿಟ್ಠಲ ವ್ಯಾಸ ಮುನಿಗಳು ಪೇಳಿಸಿದರು**

ಮೇಲಿನ ದಾಸರ ಪದದಲ್ಲಿ ಬರೆದಿರುವ ಲೆಕ್ಕ ಹೀಗಿದೆ:

1. **ತೀರ್ಥಕ್ಷೇತ್ರಗಳು, ಅಲ್ಲಿಯ ದೇವರ ಮಹಿಮೆ, ಸ್ಥಳ ಪುರಾಣ ಕಥೆಗಳು** — 1, 25,000
2. **ಆಚಾರ್ಯ ಮಧ್ವರಾದಿಯಾಗಿ, ಗುರು ಪರಂಪರಾ ಸ್ತೋತ್ರಗಳು, ದೈವ ತಾರತಮ್ಯ ತಂತ್ರಸಾರ ವಿವರಣೆ** — 5,000
3. **ಬ್ರಹ್ಮಲೋಕ, ಕೈಲಾಸ, ದಿಕ್ಪಾಲಕರ ಹಿರಿಮೆ-ಅವರ ವಾಸಸ್ಥಳ ವರ್ಣನೆ** — 90,000
4. **ಪುರಾಣ ಸಂಬಂಧಿ ಪ್ರಸಂಗಗಳು** — 90,000
5. **ದೇವಮೂರ್ತಿ ಧ್ಯಾನ, ಕೀರ್ತಿ, ಗಂಡಕೀ ಮಹಿಮೆ ಮತ್ತಿತರ ಕಲ್ಯಾಣ ಕಥಾ ಕವನಗಳು** — 60,000
6. **ಆಹ್ನೀಕ ಪದ್ಧತಿ, ಏಕಾದಶಿ ಜಯಂತಿ ಆಚರಣೆ ಸಂಬಂಧಿಸಿದ ಪದಗಳು** — 16,000
7. **ಸುಳಾದಿಗಳು** — 64,000
8. **ದೇವರನಾಮಗಳು** — 25,000

**ಒಟ್ಟು** 4,75,000

ಇವುಗಳಲ್ಲಿ ಅನೇಕ ಪದಗಳು ನಾಲ್ಕಾರು ಸಾಲಿನವೋ ಅಥವಾ ಕೇವಲ ಎರಡು ಸಾಲಿನವೋ ಇರಬಹುದು. ಈ ಮೇಲಿನ ಪದವನ್ನು ಬೇಲೂರು ಕೇಶವದಾಸರು ತಮ್ಮ ಸಂಚಾರ ಕಾಲದಲ್ಲಿ ಹಿರಿಯರು ಕೈ ಬರಹದಲ್ಲಿ ಬರೆದಿಟ್ಟಿದ್ದ ಪುಸ್ತಕದಿಂದ ಸಂಗ್ರಹಿಸಿದ್ದು. ಅವರ 'ಶ್ರೀ ಕರ್ನಾಟಕ ಭಕ್ತ ವಿಜಯ'ದ ಮೊದಲ ಮುದ್ರಣ ಇಂದಿಗೆ ಸುಮಾರು 90 ವರ್ಷಗಳ ಹಿಂದೆ ಆಗಿದೆ. ಅಂದರೆ ಈ ವಹಿಯನ್ನು ಬರೆದಿಟ್ಟವರು ಅಂದಿನ ಹಿರಿಯರು. ಪರಂಪರಾಗತವಾಗಿ ತಾವು ಕೇಳಿದನ್ನು ಬರೆದಿಟ್ಟಿರಬೇಕು. ಹೇಗೆ ನೋಡಿದರೂ ಈ ಪದ ದಾಸರ ಬರೆದದ್ದೋ ಅಥವಾ ಅವರ ಪೀಳಿಗೆಯಲ್ಲಿ ಬಂದ ಮುಂದಿನ ದಾಸರ್ಯಾರಾದರೋ ಬರೆದಿರಬೇಕು. ಅವರು ಪುರಂದರದಾಸರು ಬರೆದ ಕೃತಿಗಳ ಸಂಖ್ಯೆ, ಸಾವಿರಾರು ಎಂದಷ್ಟೇ ಹೇಳದೆ, ನಾಲ್ಕು ಲಕ್ಷ ಎಪ್ಪತ್ತೈದು ಸಾವಿರ ಎಂದು ಹೇಳಿರುವುದರ ಉದ್ದೇಶವಾದರೂ ಏನು?

ಸ್ವತಃ ಪುರಂದರರು ನವಕೋಟಿಯನ್ನು ಧಿಕ್ಕರಿಸಿ ಬಂದ

ಧೀಮಂತ. ಅವರ ಕಾಂಚನ ನಿರ್ಮೋಹ ಎಷ್ಟಿತ್ತೆಂಬುದನ್ನು ಕೆಳಗಿನ ಪ್ರಸಂಗಗಳಿಂದ ನೋಡಬಹುದು:

ಶ್ರೀನಿವಾಸ ನಾಯಕ ತನ್ನ ಲೋಭಿತನದಿಂದ ಮುದುಕನ ವೇಷದಲ್ಲಿ ಬಂದಿದ್ದ ಪಾಂಡುರಂಗ ವಿಟ್ಠಲನನ್ನು ಬರಿಗೈಯಲ್ಲಿ ಕಳುಹಿಸಿದಾಗ, ಆ ಮುದುಕ ದಾಸರಿಲ್ಲದ ವೇಳೆಯಲ್ಲಿ ಅವರ ಮನೆಗೆ ಹೋಗಿ ದಾಸರ ಪತ್ನಿ ಸರಸ್ವತಿಯನ್ನು ಯಾಚಿಸಿ, ಆಕೆ ತನ್ನ ತವರಿನಿಂದ ಬಂದಿದ್ದು ತಾನು ಧರಿಸಿದ್ದ ಮೂಗುತಿಯನ್ನೆ ಅವನಿಗೆ ಭಿಕ್ಷೆ ನೀಡುತ್ತಾಳೆ. ಮುದುಕ ಮತ್ತೆ ನಾಯಕನ ಅಂಗಡಿಗೆ ಹೋಗಿ ಅದನ್ನು ಮಾರಲು ಯತ್ನಿಸಿದಾಗ ಅನುಮಾನಗೊಂಡ ನಾಯಕನು ಅದನ್ನು ಕಬ್ಬಿಣದ ಪೆಟ್ಟಿಗೆಯಲ್ಲಿ ಭದ್ರಪಡಿಸಿ ಮನೆಗೆ ಬಂದು ಪತ್ನಿಯನ್ನು ಪ್ರಶ್ನಿಸಿದಾಗ, ಉತ್ತರ ನೀಡಲು ಅಸಮರ್ಥಳಾದ ಆಕೆ ಆತ್ಮಹತ್ಯೆಗೆ ಪ್ರಯತ್ನಿಸಿದಾಗ ಸ್ವತಃ ಪಾಂಡುರಂಗನೇ ಬಂದು ವಿಷದ ಬಟ್ಟಲಿನಲ್ಲಿ ಆಕೆಯ ಮೂಗುತಿಯನ್ನು ದಯಪಾಲಿಸುತ್ತಾನೆ. ಅದನ್ನು ಆಕೆ ಪತಿಗೆ ತೋರಿಸಿ ನಡೆದ ವಿಷಯವನ್ನು ಹೇಳಿದಾಗ, ತನ್ನನ್ನು ಪರೀಕ್ಷಿಸಲು ಬಂದ ಮುದುಕ ಪಾಂಡುರಂಗನೆಂದರಿತು, ತನ್ನ ಸಮಸ್ತ ಆಸ್ತಿಯನ್ನು ತೃಣವಾಗೆಣಿಸಿ ಊರು ಬಿಟ್ಟು ಶ್ರೀ ವ್ಯಾಸರಾಜರನ್ನು ಕಾಣಲು ಪಂಪಾಕ್ಷೇತ್ರಕ್ಕೆ ತೆರಳುತ್ತಾನೆ. ಮಾರ್ಗಮಧ್ಯದಲ್ಲಿ ಬಾಯಾರಿಕೆಯಾದಾಗ ನಾಯಕನು ನೀರು ಕೇಳಲು, ಅವನ ಪತ್ನಿ ಸರಸ್ವತಿ ತನ್ನ ಚೀಲದಿಂದ ಬೆಳ್ಳಿಯ ಲೋಟವೊಂದರಲ್ಲಿ ನೀರು ತೆಗೆದುಕೊಡುತ್ತಾಳೆ. ಅಚಾನಕವಾಗಿ ಆದರೂ ಬೆಳ್ಳಿ ವ್ಯಾಮೋಹದಿಂದ ಖತಿಗೊಂಡ ನಾಯಕ ಅದನ್ನು ಆಕೆಯ ಕೈಯಿಂದ ಕಸಿದುಗೊಂಡು ಸಮೀಪದಲ್ಲಿದ್ದ ತೊರೆಯೊಂದರಲ್ಲಿ ಬಿಸುಡುತ್ತಾನೆ. ಇಂತಹ ವೈರಾಗ್ಯ ನಿಧಿ, ಜಗತ್ತನ್ನೇ ತ್ಯಜಿಸಿದ ಬೈರಾಗಿ ತನ್ನ ಪ್ರತಿಷ್ಠೆಗಾಗಿ ತಾನು ನಾಲ್ಕು ಲಕ್ಷಕ್ಕೂ ಮಿಕ್ಕಿ ಪದಗಳನ್ನು ರಚಿಸಿದನೆಂದು ಹುಸಿ ನುಡಿಯುತ್ತಾನೆಯೆ?

ಹೀಗಾಗಿ ಅವರು ಬರೆದ ಕೃತಿಗಳ ಸಂಖ್ಯೆಯ ವಿಷಯದಲ್ಲಿಯೂ ಒಮ್ಮತಕ್ಕೆ ಬರುವುದು ಸಾಧ್ಯವಾಗಿಲ್ಲ.

ಅವರ ಪೀಳಿಗೆಯಲ್ಲಿ ಮುಂದೆ ಬಂದ ವಿಜಯದಾಸರು ಅವರನ್ನು ನಾರದರ ಅಂಶವೆಂದೇ ಗುರುತಿಸುತ್ತಾರೆ. ಕರ್ನಾಟಕ ಸಂಗೀತಕ್ಕೆ ಸ್ಪಷ್ಟ ಬುನಾದಿ ಹಾಕಿದ ಪುರಂದರರನ್ನು ಹಾಗೆ ಗುರುತಿಸುವುದು ಸರಿಯಾಗಿಯೇ ಇದೆ. ವಿಜಯದಾಸರು ಒಂಬತ್ತು ಪದ್ಯಗಳಲ್ಲಿ ಪುರಂದರದಾಸರ ಚರಿತ್ರೆಯನ್ನು ಸಂಕ್ಷಿಪ್ತವಾಗಿ ನಿರೂಪಿಸಿದ್ದು, ಅದರಲ್ಲಿ ಅವರು ಪುರಂದರ ಎಂಬ ನಗರಿಯಲ್ಲಿ ಜನಿಸಿದ್ದರೆಂದೂ ವ್ಯಾಸರಾಜರ ಶಿಷ್ಯರಾಗಿ ದೇಶ ದೇಶಗಳಲ್ಲಿ ತಿರುಗಿ ಭಕ್ತಿ ಸಂದೇಶ ನೀಡಿದರೆಂದೂ ಅವರು ನಾರದರ ಪುನರವತಾರವೇ ಎಂದೂ ಪ್ರತಿಪಾದಿಸುತ್ತಾರೆ. ಶ್ರೀ ವಿಜಯದಾಸರು, ಪುರಂದರದಾಸರ ಕಾಲಕ್ಕಿಂತ ಇನ್ನೂರು ವರುಷ ಮುಂದಿನವರು. ಅಂದಿನ ದಿನಮಾನಗಳಲ್ಲಿ ಪ್ರಚಲಿತವಾಗಿದ್ದ ವಿಷಯವನ್ನೇ ಬರೆದಿರುವರು. ಅವರ ಕಾಲದಲ್ಲಿಯೇ ಪುರಂದರರ ವಿಷಯಗಳು ಅಸ್ಪಷ್ಟವಾಗಿರುವುದರಿಂದ ಇಂದು ದಾಸರ ಬಗ್ಗೆ ನಿರ್ದಿಷ್ಟ ನಿಲುವು ತಳೆಯುವುದು ಅಸಾಧ್ಯ. ಹೀಗಾಗಿ ಕರ್ನಾಟಕದ ಹರಿದಾಸ ಪರಂಪರೆಯ ವಿಷಯ ಬಂದಾಗ ನಾವು ಅವರ ದೇಶ, ಕಾಲ, ವಂಶ, ಕುಲ ಎಂಬುದರ ಬಗೆಗೆ ಹೆಚ್ಚು ಗಮನ ಕೊಡದೆ, ಲಭ್ಯವಿರುವ ಅವರ ಕೃತಿಗಳ ಸಂದೇಶವನ್ನು ಗುರುತಿಸಿ ಪ್ರಸ್ತುತ ಕಾಲಕ್ಕೆ ಅವೆಷ್ಟು ಸಮಂಜಸ ಎಂಬುದಷ್ಟನ್ನೇ ಗಮನಿಸಬೇಕಾಗಿದೆ. ಹಾಗೆ ನೋಡಿದಾಗ ಪುರಂದರರ ಕೀರ್ತನೆಗಳ ಸಂದೇಶ ಸಾರ್ವಕಾಲಿಕ. ಸಂಸ್ಕೃತವೇ ಹೆಚ್ಚು ಪ್ರಚಾರದಲ್ಲಿದ್ದು, ವ್ಯಾಸಕೂಟ ಅಥವಾ ದೇವನಾಗರಿ ಪಾಂಡಿತ್ಯವೇ ಪಾಂಡಿತ್ಯ, ಉಳಿದ ದೇಶಿ ಭಾಷೆಗಳಲ್ಲಿ ಬಂದ ಕೃತಿಗಳು ಅಗಣ್ಯ ಎಂದಿದ್ದ ಕಾಲದಲ್ಲಿ, ಜನಪದವನ್ನು ಮುಟ್ಟಲು ಅವರಿಗೆ ಅರ್ಥವಾಗುವ ಭಾಷೆಯಲ್ಲಿ ಧರ್ಮ ಸಂದೇಶ ನೀಡಿದವರಲ್ಲಿ ಅಗ್ರಗಣ್ಯ ಸ್ಥಾನ ಪುರಂದರದಾಸರದಾಗುತ್ತದೆ. ಅಚಲಾನಂದರಿಂದ ಆರಂಭವಾದ ಭಾಗವತ ಧರ್ಮ ಆಚಾರ್ಯ ಮಧ್ವರಿಂದ ದ್ವೈತ ಸಿದ್ಧಾಂತದ ರೂಪು ತಳೆದು, ಉತ್ತರೋತ್ತರ ನರಹರಿ ತೀರ್ಥ, ಶ್ರೀಪಾದರಾಜ, ವ್ಯಾಸರಾಜ, ವಾದಿರಾಜ–ಇವರುಗಳಿಂದ ಸ್ಪಷ್ಟ ಸಾಹಿತ್ಯ ವಿಭಾಗವಾಗಿ ಗುರುತಿಸಲ್ಪಟ್ಟಿತು. ಅವರು ಬಾಯಿಯಲ್ಲಿ ನುಡಿದ ಮಾತುಗಳು ಪದಗಳು, ದೇವರ ನಾಮಗಳು, ಕೀರ್ತನೆಗಳು, ಉಗಾಭೋಗಗಳು, ಸುಳಾದಿಗಳು, ಮುಂಡಿಗೆಗಳು–ಹೀಗೆ ಅನೇಕ ಉಪ ವಿಭಾಗಗಳಲ್ಲಿ ಬೆಡಗು ಪಡೆದು ಸೊಬಗಿನಿಂದ ಮೆರೆಯಿತು. ಕೇವಲ ಪಂಡಿತ ಮಾನ್ಯವಾಗಿದ್ದ ಉಪನಿಷತ್ತಿನ ಸಾರವನ್ನು, ಭಗವದ್ಗೀತೆಯ ಸಂದೇಶಗಳನ್ನು ದಾಸರು ಕನ್ನಡಿಗರಿಗೆ ಉಣಬಡಿಸಿದರು. ನಾರದರ ನವವಿಧ ಭಕ್ತಿಯ, ಅವರ ಭಕ್ತಿಸೂತ್ರಗಳ ವ್ಯಾಖ್ಯಾನವೇ ಪುರಂದರ ಕೃತಿಗಳ ಸಾರ ಎಂದರೆ ತಪ್ಪಾಗಲಾರದು. ಇಂದಿಗೂ ಪ್ರಸ್ತುತವೆನಿಸುವ ಅವರ ಒಂದು ಕೀರ್ತನೆ ಹೀಗಿದೆ.



**ತನುವ ನೀರೊಳಗದ್ದಿ ಫಲವೇನು? ತಮ್ಮ**
**ಮನದಲ್ಲಿ ದೃಢ ಭಕ್ತಿಯಿಲ್ಲದ ಮನುಜರು**
**ದುಷ್ಟರ ಸಂಗವ ಬಿಡುವುದೆ ಸ್ನಾನ**
**ಶಿಷ್ಟರ ಸಂಗದೊಳಿರುವುದೆ ಸ್ನಾನ**
**ದಾನ ಧರ್ಮಂಗಳ ಮಾಡುವುದೆ ಸ್ನಾನ**
**ಜ್ಞಾನ ತತ್ತ್ವಂಗಳ ತಿಳಿವುದೆ ಸ್ನಾನ**
**ಹೀನ ಪಾಪಂಗಳ ಬಿಡುವುದೆ ಸ್ನಾನ**
**ಧ್ಯಾನದಿ ಮಾಧವನ ನೋಳ್ಪುದೆ ಸ್ನಾನ.**

ಬಹಿರಂಗ ಆಚರಣೆ ಕೇವಲ ಅಂತರಂಗ ಶುದ್ಧಿಗೆ ಕಾರಣ ಎಂಬುದನ್ನು ಅದೆಷ್ಟು ದೃಢವಾಗಿ-ಸುಮಾರು ಆರುನೂರು ವರ್ಷಗಳ ಹಿಂದೆಯೇ ಹೇಳಿದ್ದಾರೆ ಪುರಂದರರು.

ಜಾತಿ-ಮತದ ವಿಷಯದಲ್ಲಿ ಭೇದಭಾವ ಮಾಡದ ಅವರು ಲಿಂಗಾಯತ-ಬ್ರಾಹ್ಮಣ ಸಮುದಾಯದ ಒಗ್ಗಟ್ಟಿಗಾಗಿ ಶ್ರಮಿಸಿದರು. ಅಂತ್ಯಜರ ಬಗ್ಗೆ ಉನ್ನತಿಗಾಗಿ ಶ್ರಮಿಸಿದರು. ಹುಟ್ಟಿನಿಂದ ಜಾತಿಯಲ್ಲ. ಆಚರಣೆಯಿಂದ ಜಾತಿ ಎಂಬುದನ್ನು ಬಹು ಮಾರ್ಮಿಕವಾಗಿ ದಾಸರು ಹೀಗೆ ಹೇಳುತ್ತಾರೆ:

ಆಸೆ ಮಾತನು ಕೊಟ್ಟು ಭಾಷೆ ತಪ್ಪುವವ ಹೊಲೆಯ
ಲೇಸು ಉಪಕಾರಗಳ ಮಾಡದವ ಹೊಲೆಯ
ಮೋಸದಲಿ ಜೀವನವ ಮುನಿದು ಕೆಡಿಸುವ ಹೊಲೆಯ
ಹುಸಿಯ ಬೊಗಳುವನೊಬ್ಬ ಹುಚ್ಚು ಹೊಲೆಯ.

ದಾಸರ ಪರಂಪರೆಯಲ್ಲಿ ದೇವರ ನಾಮಗಳನ್ನು ಬರೆಯುತ್ತಿರುವವರು, ಕೀರ್ತನೆಗಳನ್ನು ಮಾಡುತ್ತಿರುವವರು ಇಂದಿಗೂ ಇದ್ದಾರೆ. ತೆರೆಮರೆಯಲ್ಲಿರುವ ಅವರನ್ನು ಜನ ಗುರುತಿಸಬೇಕಷ್ಟೆ.

ಇಂದು ಧಾರ್ಮಿಕ ಸಾಹಿತ್ಯ ವಿಪುಲವಾಗಿ ಬೆಳೆದು ಬರುತ್ತಿದೆ. ಅದಕ್ಕಾಗಿ ಮೀಸಲಾದ ಅನೇಕ ಮಾಸಪತ್ರಿಕೆಗಳು, ನಿಯತಕಾಲಿಕಗಳೂ ಪ್ರಕಟವಾಗುತ್ತಿವೆ. ಡಿಜಿಟಲ್ ತಂತ್ರಜ್ಞಾನವಿರುವ ಈ ಕಾಲದಲ್ಲಿ ಅಂತಹ ಸಾಹಿತ್ಯವನ್ನು ಕಾಪಿಡುವ ಹೊಣೆ ಸಾರ್ವಜನಿಕರದಾಗಿದೆ. ಇಂದಿನ ಸಾಹಿತ್ಯವನ್ನು ನಾವು ಸಂರಕ್ಷಿಸದೆ ಹೋದರೆ ಮುಂದೊಂದು ದಿನ ಪುರಂದರದಾಸರ ದಂತಕಥೆಯಾಗುತ್ತವೆ ಇಂದಿನ ಧಾರ್ಮಿಕ ಸಾಹಿತ್ಯ ಕೃತಿಗಳು ಹಾಗೂ ಅವುಗಳ ಕರ್ತೃಗಳು.

ಪುಷ್ಯಮಾಸ ಕೃಷ್ಣ ಪಕ್ಷ ಅಮಾವಾಸ್ಯೆ-ಪುರಂದರದಾಸರು ಇಹಲೋಕವನ್ನು ತ್ಯಜಿಸಿ ಹರಿಪದ ಸೇರಿದ ದಿವಸ. ಅವರ ಪುಣ್ಯತಿಥಿಯನ್ನು ಆರಾಧಾನಾ ದಿನವನ್ನಾಗಿ ಎಲ್ಲೆಡೆಯೂ ಆಚರಿಸಲಾಗುತ್ತಿದೆ. ಸುಮಾರು 450 ವರ್ಷಗಳ ಹಿಂದೆ ಬಾಳಿ ಬದುಕಿದ ಅವರ ಹೆಸರನ್ನು ಇಂದೂ ನಾವು ನೆನೆಸುತ್ತಿರುವುದೆಂದರೆ ಅದಕ್ಕೆ ಕಾರಣ ಅವರ ಸಾಹಿತ್ಯದಲ್ಲಿರುವ ಮೌಲ್ಯ. ಸಾಹಿತ್ಯದ ದೃಷ್ಟಿಯಿಂದ ನೋಡಿದರೆ ಅವರ ಕೃತಿಗಳೇನೂ ಅಂತಹ ಉನ್ನತ ಮಟ್ಟದ ಭಾಷಾ ಪ್ರಬುದ್ಧತೆಯಲ್ಲಾಗಲೀ, ಅಥವಾ ವ್ಯಾಕರಣ ಪಾಂಡಿತ್ಯದಿಂದಾಗಲಿ ಸೊಬಗಿಸುವುದಿಲ್ಲ. ಅವರ ಕೀರ್ತನೆಗಳಲ್ಲಿ ವಿಪುಲವಾದ ಪದ ದೋಷಗಳು, ಅಥವಾ ವ್ಯತ್ಯಾಸಗಳು ಕಂಡುಬರುವುದರಲ್ಲಿ ಆಶ್ಚರ್ಯವಿಲ್ಲ. ಅದಕ್ಕೆ ಮುಖ್ಯ ಕಾರಣ ಆ ಹಸ್ತಪ್ರತಿಗಳು ಅನೇಕ ಕೈಲಿಪಿಗಳನ್ನು ದಾಟಿ ಬಂದವು. ಆದರೆ ಅವುಗಳ ಮೌಲ್ಯ ಚಿರಂತನ. ಪುರಂದರರ ಸಿರಿವಂತಿಕೆ ಅನನ್ಯ, ಅಪೂರ್ವ. ಹುಟ್ಟಿನಿಂದ ಅವರು ಆಗರ್ಭ ಸಿರಿವಂತರು. ಚಿನ್ನದ ಹರಿವಾಣದಲ್ಲಿ ಉಂಡವರು. ಬೆಳ್ಳಿಯ ಥಾಳಿಯಲ್ಲಿ ನೀರು ಕುಡಿದವರು. ಅಂತಹವರು ಆ ಸಿರಿವಂತಿಕೆಯನ್ನು ಬಿಟ್ಟು ಧರ್ಮ ಸಿರಿವಂತರಾದುದು. ಭಕ್ತಿಯಲ್ಲಿ, ಧರ್ಮದಲ್ಲಿ, ಗಾಯನದಲ್ಲಿ ಅವರಿಗೆ ಸರಿಸಾಟಿಯಾದ ಸಿರಿವಂತರು ಮತ್ಯಾರು? ಅಂತಹ ಸರ್ವ ಐಸಿರಿಯ ಸಿರಿ ಪುರಂದರರಿಗೆ ನಮ್ಮ ನಮನ

**ಮನ್ಮನೋಭೀಷ್ಟ ದಾತಾರಂ ಸರ್ವಾಭೀಷ್ಟ ಫಲಪ್ರದಂ**
**ಪುರಂದರ ಗುರುಂ ವಂದೇ ದಾಸಶ್ರೇಷ್ಠಂ ದಯಾನಿಧಿಂ**

**೪೨೨, 'ಚಂದ್ರಿಕ' ೫ನೇ ರಸ್ತೆ, ಹೆಚ್.ಬಿ.ಆರ್. ಲೇಔಟ್,**
**ಬೆಂಗಳೂರು-೫೬೦ ೦೪೩.**

**ಶ್ರೀ ಸಿದ್ಧೇಶ್ವರಸ್ವಾಮಿಗಳ ಪ್ರವಚನಗಳಿಂದ** **ಆಯ್ದ ಕಥೆಗಳು**

# ದೇವನ ದಿವ್ಯ ನಗೆ

ರಾಬಿಯಾ ಸೂಫಿಪಂಥದ ಶ್ರೇಷ್ಠಳು. ಮೈಮೇಲೆ ಮಾಸಿದ ಬಟ್ಟೆ. ಕಣ್ಣಲ್ಲಿ ದೈವೀಕಳೆ. ಸಾತ್ತ್ವಿಕಸೌಂದರ್ಯ. ಇಪ್ಪತ್ತೂರು ಇಪ್ಪತ್ತನಾಲ್ಕರ ವಯಸ್ಸು. ಒಂದು ದಿನ ಗುಡಿಸಲಿನಲ್ಲಿ ಭಗವನ್ನಾಮಸ್ಮರಣೆ ಮಾಡುತ್ತ ಮಗ್ನಳಾಗಿದ್ದಾಳೆ. ಹೊರಗೆ ಒಬ್ಬ ಭಕ್ತ ಬಂದು ಕೊಂಡಾಡಿದ. "ತಾಯಿ, ನೀನೆಂಥ ಧರ್ಮದೇವತೆ! ದೈವೀಭಕ್ತಿಸಂಪನ್ನೆ! ನಿನ್ನ ಸ್ಮರಿಸಿದರೆ ಸಾಕು ನಮ್ಮ ಜನ್ಮ ಪಾವನ!" ಎಂದು ರಾಬಿಯಾಳಿಗೆ ನಮಿಸಿ ನಡೆದ.

ಸ್ವಲ್ಪ ಸಮಯದ ಅನಂತರ ಇನ್ನೊಬ್ಬಾತ ಬಂದ. ಆತ ನಾಸ್ತಿಕ. ರಾಬಿಯಾಳನ್ನು ಮನಸ್ಸಿಗೆ ಬಂದಂತೆ ಬೈದ. ಅಷ್ಟರಲ್ಲಿ ಅಲ್ಲಿಯೇ ಇದ್ದ ರಾಬಿಯಾಳ ಗುರುಗಳು ಬಂದರು. ಅವರನ್ನು ನೋಡಿದ ನಾಸ್ತಿಕ ಓಡಿದ.

ಗುರುಗಳು ರಾಬಿಯಾಳಿಗೆ ಕೇಳಿದರು, "ರಾಬಿಯಾ, ಆತ ನಿನಗೆ ಎಷ್ಟೊಂದು ಬಯ್ದನಲ್ಲ. ಅದು ನಿನಗೆ ಕೇಳಿಸಲಿಲ್ಲವೆ?" "ಕ್ಷಮಿಸಿ, ಗುರುಗಳೇ ನನಗೆ ಕೇಳಿಸಲಿಲ್ಲ" ಎಂದಳು. "ಅದಕ್ಕೂ ಮೊದಲು ಮತ್ತೊಬ್ಬನು ನಿನ್ನನ್ನು ಹೃದಯಾರೆ ಹೊಗಳಿದವನಲ್ಲ, ಅದೂ ನಿನಗೆ ಕೇಳಿಸಲಿಲ್ಲವೆ?" ಎಂದರು ಗುರುಗಳು.

"ಇಲ್ಲ ಗುರುಗಳೇ ಅದೂ ನನಗೆ ಕೇಳಿಸಲಿಲ್ಲ. ಆಗ ನಾನಿಲ್ಲಿ ಇರಲಿಲ್ಲ. ಭಗವದಾನಂದದಲ್ಲಿ ಒಂದಾಗಿದ್ದೆ!" ಎಂದಳು ನಿಜಭಕ್ತೆ ರಾಬಿಯಾ. ಅವಳು ಅನುಸರಿಸಿದ ಧರ್ಮ ಅವಳಿಗೆ ಅವಿರಳಾನಂದ ನೀಡಿತ್ತು. ಅದು ನಿಜವಾದ ಧರ್ಮಸಾಧನೆ.

ಅವಳ ಗುರು ರಾಬಿಯಾಳನ್ನು ವರ್ಣಿಸುತ್ತಾನೆ. 'ರಾಬಿಯಾಳ ಜೀವನವೆಲ್ಲ ದೇವನ ದಿವ್ಯನಗೆಯಿಂದ ಕೂಡಿತ್ತು. ಮಧುರ ಮಂದಹಾಸ ಸೂಸಿತ್ತು.' ●



ಸಂಗ್ರಹ: ಡಾ॥ ಶ್ರದ್ಧಾನಂದಸ್ವಾಮಿ




# ಶ್ರೀ ಕುಲತ್ತಾರ್ ಆದ ಪಂಚಮರು

**(ಕಳೆದ ಸಂಚಿಕೆಯಿಂದ ಮುಂದುವರಿದಿದೆ)**

ಇವೆಲ್ಲ ಮುಗಿಯುವ ವೇಳೆಗೆ ಯಾದವಾದ್ರಿಯ ಗ್ರಾಮಸ್ಥರಿಗೆ ವಿಷ್ಣುವಿನ ಮೂರ್ತಿ ಕಾಣಿಸಿಕೊಂಡ ಸುದ್ದಿ ವಾಯುವೇಗದಲ್ಲಿ ತಲಪಿತು. ನಾದಸ್ವರ, ತಾಳ, ಮದ್ದಿಲೆ, ತಮಟೆ, ಕೊಂಬು, ಕಹಳೆಗಳ ಸಮೇತ ನೂರಾರು ಗ್ರಾಮಸ್ಥರು ಆ ಸ್ಥಳಕ್ಕೆ ಬಂದರು. ರಾಮಾನುಜರ ಶಿಷ್ಯರು ನೆಲದಲ್ಲಿ ಹುದುಗಿಹೋಗಿದ್ದ ಶ್ರೀಮನ್ನಾರಾಯಣ ಮೂರ್ತಿಯನ್ನು ಮಣ್ಣಿನಿಂದ ಬೇರ್ಪಡಿಸಿ, ಹಾಲಿನಿಂದ ಚೆನ್ನಾಗಿ ತೊಳೆದು ಮೇಲಕ್ಕೆ ಎತ್ತಿದರು. ದಿವ್ಯ ಸುಂದರ ನಾರಾಯಣನ ವಿಗ್ರಹ! ಅದನ್ನು ನೋಡಲು ಎರಡು ಕಣ್ಣು ಸಾಲದು ಎಂಬಂಥ ಚೆಲುವಿನ ಮೂರ್ತಿ!

ಶಿಷ್ಯರು ಮೂರ್ತಿಯನ್ನು ಹೊತ್ತುಕೊಂಡರು. ತ್ರಿದಂಡಿ ರಾಮಾನುಜರು ಮತ್ತು ಮಹಾರಾಜ ವಿಷ್ಣುವರ್ಧನ ಮುಂದೆ ಸಾಗುತ್ತಿದ್ದಂತೆ ಬಾಜಾಭಜಂತ್ರಿ ನಾದಸ್ವರ, ಕೊಂಬು ಕಹಳೆಗಳ ಶಬ್ದ ನಾಲ್ಕು ದಿಕ್ಕುಗಳಲ್ಲೂ ಹಬ್ಬುತ್ತಿರಲು ಅವರೆಲ್ಲರೂ ಗ್ರಾಮದ ಮಧ್ಯಭಾಗಕ್ಕೆ ಬಂದರು. ರಾಮಾನುಜರು ಸೂಚಿಸಿದ ಸ್ಥಳದಲ್ಲಿ ಸೌದೆ, ಹುಲ್ಲು, ತೆಂಗಿನಗರಿಗಳಿಂದ ತಯಾರಾದ ತಾತ್ಕಾಲಿಕ ದೇವಾಲಯದಲ್ಲಿ ಮೂರ್ತಿಯನ್ನು ಇರಿಸಲಾಯಿತು.

ಮೂರೇ ದಿವಸಗಳಲ್ಲಿ ಮಹಾರಾಜರ ಆಜ್ಞೆಯಂತೆ ಉತ್ತಮ ಕಲ್ಲಿನ ಗರ್ಭಗುಡಿ ಮತ್ತು ಸುತ್ತಲೂ ಪೌಳಿಗೌಡೆ ಎದ್ದು ನಿಂತವು. ರಾಮಾನುಜರು ವಿಗ್ರಹವನ್ನು ಪ್ರತಿಷ್ಠಾಪಿಸಿ ಆ ಮೂರ್ತಿ 'ತಿರುನಾರಾಯಣ ಮೂರ್ತಿ' ಎಂದು ಉದ್ಘೋಷಿಸಿದರು. ತಿರುನಾರಾಯಣ ಅಲ್ಲಿ ನೆಲೆಸಿದ್ದರಿಂದ ಯಾದವಾದ್ರಿಯ ತಿರುನಾರಾಯಣಪುರ ಎಂದಾಯಿತು.

ರಾಮಾನುಜರು ಮಹಾರಾಜನೊಂದಿಗೆ ಪ್ರಸ್ತಾವಿಸಿ ತಿರುನಾರಾಯಣ ಮೂರ್ತಿ ಹಾಗೂ ತಿರುಮಣ್ ದೊರೆತ ಕಡೆ ಒಂದು ಊರನ್ನು ನಿರ್ಮಿಸುವಂತೆ ಸಲಹೆ ಮಾಡಿದರು. ಕೆಲವೇ ದಿನಗಳಲ್ಲಿ ಅಲ್ಲೊಂದು ಜನವಸತಿ ಪ್ರದೇಶ ತಯಾರಾಯಿತು.

ರಾಜನ ಆದೇಶದಿಂದ, ಗ್ರಾಮಸ್ಥರೆಲ್ಲರ ಪರಿಶ್ರಮದಿಂದ ರಾಮಾನುಜರ ಮಾರ್ಗದರ್ಶನದಲ್ಲಿ ತಿರುನಾರಾಯಣಪುರದಲ್ಲೊಂದು ಭವ್ಯವಾದ ದೇವಸ್ಥಾನದ ನಿರ್ಮಾಣ ಆರಂಭಗೊಂಡಿತು.

ರಾಮಾನುಜರು ಒಂದು ಭವ್ಯ ವಿಷ್ಣು ದೇವಾಲಯ ನಿರ್ಮಾಣ ಮಾಡುವ ಉದ್ದೇಶವನ್ನು ಪ್ರಕಟಿಸಿದ್ದು ಕೇಳಿ ವಿಷ್ಣುವರ್ಧನನಿಗೆ ಉತ್ಸಾಹಾತಿರೇಕ ಉಂಟಾಯಿತು. ತನ್ನ ಬೊಕ್ಕಸದಿಂದ ಒಂದು ಲಕ್ಷ ವರಹಗಳನ್ನು ರಾಮಾನುಜರಿಗೆ ಆತ ಅರ್ಪಿಸಿದ. ಅದು ಶ್ರೀಮನ್ನಾರಾಯಣನ ಕೃಪೆ ಎಂದೇ ಸ್ವೀಕರಿಸಿದ ರಾಮಾನುಜರು ವಾಸ್ತುಶಾಸ್ತ್ರಜ್ಞರನ್ನೂ, ಸ್ಥಪತಿಗಳನ್ನು ಮತ್ತು ನಿರ್ಮಾಣಕಾರ್ಯದಲ್ಲಿ ಮೇಲ್ವಿಚಾರಣೆ ವಹಿಸಬೇಕಾದ ಜನರನ್ನು ಸೇರಿಸಿ ದೇವಸ್ಥಾನದ ಪರಿಕಲ್ಪನೆಯನ್ನು ಅವರ ಮುಂದಿರಿಸಿದರು. ಯಾವುದೇ ಕೆಲಸ ಕೈಗೊಂಡರೂ ಪ್ರತಿಯೊಂದು ಸಣ್ಣ ಪುಟ್ಟ ವಿವರವನ್ನು ಗಮನಿಸುವುದು ರಾಮಾನುಜರ ಸ್ವಭಾವದಲ್ಲಿ ಹಾಸುಹೊಕ್ಕಾಗಿದ್ದ ಸಂಗತಿ. ಇದು ದೇವಸ್ಥಾನ ನಿರ್ಮಾಣ ಕಾರ್ಯದ ಜೊತೆಗೆ ದೇವಸ್ಥಾನದ ಕಾರ್ಯನಿರ್ವಹಣೆಯನ್ನು ಕುರಿತು ಸಹ ಅವರದು ಚಿಕಿತ್ಸಿಕ ದೃಷ್ಟಿ. ಕೆಲಸದಲ್ಲಿ ಅಲ್ಪ ಸ್ವಲ್ಪ ವ್ಯತ್ಯಾಸವಾದರೂ ಕ್ಷಮಿಸುತ್ತಿರಲಿಲ್ಲ. ರಾಮಾನುಜರು ವಿಷ್ಣುವರ್ಧನ ನೀಡಿದ ಒಂದು ಲಕ್ಷ ವರಹದಲ್ಲಿ ಐವತ್ತು ಸಾವಿರ ವರಹಗಳನ್ನು ದೇವಾಲಯ ನಿರ್ಮಾಣ ಖರ್ಚುಗಳಿಗೆ ತೆಗೆದಿರಿಸಿದರು. ಮಹಾರಾಜನು ಆಚಾರ್ಯರಿಗೆ ಅವರ ಕೆಲಸದಲ್ಲಿ ಸಹಾಯಕನಾಗಲು ತನ್ನ ದಂಡನಾಯಕರಲ್ಲಿ ಒಬ್ಬ ಸಮರ್ಥನನ್ನು ಆರಿಸಿ ನೇಮಿಸಿದನು.



ಆಚಾರ್ಯರೇ ದೇವಸ್ಥಾನದ ಬೃಹತ್ ಹೊಸ ಕಟ್ಟಡ ನಿರ್ಮಾಣ ಕಾರ್ಯವನ್ನು ಆರಂಭಿಸಲು ಮುಹೂರ್ತವನ್ನೂ ನಿಶ್ಚಯಿಸಿದರು. 'ಬಹು ಧಾನ್ಯ ಸಂವತ್ಸರ, ಫಾಲ್ಗುಣ ಮಾಸ, ಹಸ್ತಾ ನಕ್ಷತ್ರ, ವೃಷಭ ಲಗ್ನ, ಶುಕ್ರವಾರ'ದಂದು ಪೂಜೆ ಮಾಡಿ

ಕೆಲಸವನ್ನು ಆರಂಭಿಸಿದರು. ಅದನ್ನು ನಿರ್ಮಿಸಲು ನಾಲ್ಕು ವರ್ಷ, ಎರಡು ತಿಂಗಳು, ಹನ್ನೊಂದು ದಿನಗಳು ಹಿಡಿದವು. ಅದು ಮುಕ್ತಾಯಗೊಂಡದ್ದು ಸ್ವಭಾನು ಸಂವತ್ಸರ ವೈಶಾಖ ಬಹುಳ ಪಂಚಮಿಯಂದು.

ದೇವಸ್ಥಾನದ ಬಳಿ ಒಂದು ಸುಂದರ ಕಲ್ಯಾಣಿ ನಿರ್ಮಾಣವಾಯಿತು. ಸುಖನಾಸಿ, ರಂಗಮಂಟಪ, ಚಕ್ರತ್ತಾಳ್ವಾರ್ ಸನ್ನಿಧಿ, ಯಾಗಶಾಲೆ, ಉಗ್ರಾಣ ಪಾಕಶಾಲೆ, ಕಲ್ಯಾಣಿಯ ಎದುರು ಸೀತಾರಣ್ಯಮ್ ಎಂಬ ರಾಮ ಸನ್ನಿಧಿ ಮುಂತಾದವು ಹಂತ ಹಂತವಾಗಿ ನಿರ್ಮಾಣಗೊಳ್ಳಲು ನಾಲ್ಕು ವರ್ಷ ಎರಡು ತಿಂಗಳು ಹನ್ನೊಂದು ದಿವಸಗಳು ಹಿಡಿದವು. ಅನಂತರ ದೊಡ್ಡ ಸಮಾರಂಭದೊಂದಿಗೆ ಮಹಾರಾಜ ವಿಷ್ಣುವರ್ಧನ ಮತ್ತು ರಾಮಾನುಜರ ಸಾನ್ನಿಧ್ಯದಲ್ಲಿ ದೇವಾಲಯ ಪ್ರತಿಷ್ಠಾಪನಾ ಮಹೋತ್ಸವ ನಡೆಯಿತು.

ಇದಾದ ಅನಂತರ ಗ್ರಾಮಸ್ಥರು ಜಾತಿ ಮತಗಳ ಭೇದವಿಲ್ಲದೆ ಗುರುಗಳ ದರ್ಶನಕ್ಕಾಗಿ ದೇವಾಲಯಕ್ಕೆ ಬರಲಾರಂಭಿಸಿದರು. ಈಗ ಗುರುಗಳ ಶ್ರೀಮಠವು ಅಲ್ಲಿಯೇ. ಎಲ್ಲಿ ಗುರುಗಳಿದ್ದರೆ ಅಲ್ಲಿಯೇ ಮಠವಲ್ಲವೇ?

ಹೀಗೆ ಬಂದವರಲ್ಲಿ ಅನೇಕ ವೃದ್ಧರೂ ಇದ್ದರು. ಅವರುಗಳು ರಾಮಾನುಜರೊಡನೆ ಮಾತನಾಡುತ್ತಾ,

"ಮಹಾಸ್ವಾಮಿಗಳೇ, ತಮ್ಮಿಂದ ಬಹುಕಾಲದಿಂದ ನಮ್ಮನ್ನು ಕಾಡುತ್ತಿದ್ದ ಪ್ರಶ್ನೆಯೊಂದಕ್ಕೆ ಉತ್ತರ ದೊರೆಯಿತು" ಅಂದರು.

"ಪ್ರಶ್ನೆಯೇ? ಅದೇನಪ್ಪಾ ಅಂಥ ಪ್ರಶ್ನೆ ನಿಮ್ಮದು?" ರಾಮಾನುಜರು ಪ್ರಶ್ನಿಸಿದರು.

"ನಮ್ಮ ಹಿರಿಯರು ಇಲ್ಲಿ ಒಂದು ಯಾದವಾದ್ರಿಪತಿಯ ದೇಗುಲವಿತ್ತೆಂದೂ ಅದರಲ್ಲಿ ಯಾದವಾದ್ರಿಪತಿ ತಿರುನಾರಾಯಣನ ವಿಗ್ರಹವಿತ್ತೆಂದು ಹೇಳುತ್ತಿದ್ದರು. ಒಮ್ಮೆ ದೇವತಾ ಮೂರ್ತಿಗಳನ್ನೂ ದೇವಸ್ಥಾನಗಳನ್ನು ಒಡೆಯುವ ತುರುಷ್ಕ ಮ್ಲೇಚ್ಛರ ದಾಳಿ ಈ ಊರಿನ ಮೇಲಾಯಿತೆಂದೂ ಹೇಳುತ್ತಿದ್ದರು. ಆಗ ಅವರ ದಾಳಿಯ ಮುನ್ಸೂಚನೆ ದೊರೆತು ಈ ಊರಿನ ಬ್ರಾಹ್ಮಣರು ಯಾದವಾದ್ರಿಪತಿಯ ಮೂರ್ತಿಯನ್ನು ರಾತ್ರೋ ರಾತ್ರಿ ಎತ್ತಿಕೊಂಡು ಹೋಗಿ ಎಲ್ಲಿಯೋ ಮಂಗಮಾಯ ಮಾಡಿದರೆಂದು ಹೇಳುತ್ತಿದ್ದರು. ಆ ಮೂರ್ತಿಯನ್ನು ಎಲ್ಲಿ ಅಡಗಿಸಿಟ್ಟಿದ್ದರೋ ಏನೋ. ಅದರ ಸುಳಿವು ನಮಗೆ ಸಿಗದೆ ಆ ಪ್ರಶ್ನೆ ನಮ್ಮನ್ನು ಸದಾಕಾಲ ಕಾಡುತ್ತಿತ್ತು."

ಇನ್ನೊಬ್ಬರು ಮುದುಕರು ಮಧ್ಯೆ ಪ್ರವೇಶಿಸಿ, "ಇದಕ್ಕೆ ಮಹಾಸ್ವಾಮಿಗಳು ಈಗ ಉತ್ತರ ಹುಡುಕಿ ಕೊಟ್ಟಿರಿ. ನಮ್ಮ ಯಾದವಾದ್ರಿಪತಿ ಮತ್ತೆ ನಮಗೆ ದಕ್ಕಿದ. ದುಷ್ಟ ವಿಗ್ರಹಭಂಜಕ ಮ್ಲೇಚ್ಛರಿಂದ ರಕ್ಷಿಸಲ್ಪಟ್ಟ ನಮ್ಮ ದೇವರು ನಿಮ್ಮ ತಪಃ ಪ್ರಭಾವದಿಂದ ಮತ್ತೆ ಇಲ್ಲಿ ಪ್ರತಿಷ್ಠಾಪನೆಗೊಂಡ."

"ಇದರಲ್ಲಿ ನನ್ನದೇನಿದೆ ಮಹನೀಯರೇ. ಯಾದವಾದ್ರಿಪತಿ ತಿರುನಾರಾಯಣನೇ ಸ್ವತಃ ನನಗೆ ನನ್ನ ಧ್ಯಾನದಲ್ಲಿ ತಾನಿರುವ ಸ್ಥಳವನ್ನು ಸೂಚಿಸಿದ. ಮಹಾರಾಜ ವಿಷ್ಣುವರ್ಧನರು ಸಹಕರಿಸಿದರು. ಇಲ್ಲಿ ಭವ್ಯವಾದ ತಿರುನಾರಾಯಣ ದೇವಾಲಯ ಸಿದ್ಧಗೊಂಡಿತು."

"ಎಲ್ಲ ಭಗವತ್ಕೃಪೆ!"

"ಹೌದು ಭಗವತ್ಕೃಪೆ. ಏನೋ ಎಲ್ಲ ಸುಸೂತ್ರವಾಗಿ ನಡೆದುಹೋಯಿತು. ನನ್ನದೇನಿದೆ ಅದರಲ್ಲಿ?....ಅದು ಸರಿ. ನಿಮ್ಮ ಹಿರಿಯರು ಇನ್ನೇನು ಹೇಳಿದರು?"

"ಮ್ಲೇಚ್ಛರು ಬಂದು ಇಡೀ ಊರನ್ನು ಕೊಳ್ಳೆ ಹೊಡೆದುಕೊಂಡುಹೋದರಂತೆ. ದೇವಸ್ಥಾನದಲ್ಲಿ ದೇವರನ್ನು ಅಲಂಕರಿಸಲು ಇದ್ದ ವಸ್ತುಗಳನ್ನೆಲ್ಲ ಗಂಟುಮೂಟೆ ಕಟ್ಟಿಕೊಂಡು ಹೋದರಂತೆ. ಹಾಗೆಯೇ ಯಾದವಾದ್ರಿಪತಿ ಚೆಲುವನಾರಾಯಣ ಉತ್ಸವ ಮೂರ್ತಿಯನ್ನು ತೆಗೆದುಕೊಂಡು ಹೋದರಂತೆ. ಚಂಡಮಾರುತದಂತೆ ಬಂದು ಹಳ್ಳಿಯನ್ನು ಧೂಳೀಪಟ ಮಾಡಿ ಹೋದರಂತೆ. ಅವರು ಎಲ್ಲೆಲ್ಲಿ ದೇವಸ್ಥಾನಗಳಿದ್ದವೋ ಅಲ್ಲೆಲ್ಲ ಹೋಗಿ ಮೂರ್ತಿಗಳನ್ನು ಒಡೆದು, ದೇವಸ್ಥಾನದ ಸಂಪತ್ತನ್ನೆಲ್ಲ ದೋಚಿಕೊಂಡು ಹೋದರಂತೆ. ಇಲ್ಲಿನ ವಾಸಿಗಳೆಲ್ಲರೂ ಊರು ತೊರೆದು ಬೇರೆ ಕಡೆಗೆ ವಲಸೆ ಹೋದರಂತೆ!"

"ಹೌದು. ದೇಶದಲ್ಲಿ ಬಹಳ ಕಡೆ ಹೀಗೆ ಆಗಿರುವುದುಂಟು. ನಾವು ಬೋಧಾಯನ ವೃತ್ತಿ ಸಂಗ್ರಹಿಸಲು ಕಾಶ್ಮೀರ ದೇಶಕ್ಕೆ ಹೋದಾಗ ಮತ್ತು ಅಲ್ಲಿಂದ ಶ್ರೀರಂಗಕ್ಕೆ ಹಿಂದಿರುಗಿ ಬರುವಾಗ ಹಲವು ಸ್ಥಳಗಳಲ್ಲಿ ದೇವಸ್ಥಾನಗಳನ್ನು ಒಡೆದು ಹಾಕಿರುವ, ದೇವತಾ ಮೂರ್ತಿಗಳನ್ನು ಭಗ್ನಗೊಳಿಸಿರುವ ದೃಶ್ಯಗಳನ್ನು ಕಂಡೆವು.

"ನಾವು ಆರ್ಯಾವರ್ತವನ್ನು ಹಾದುಬರುವಾಗ ಸ್ಥಳೀಯರನ್ನು ಆ ಕುರಿತು ವಿಚಾರಿಸಿದಾಗ ಯವನ ದುಷ್ಟರು ಶಸ್ತ್ರಪಾಣಿಗಳಾಗಿ ಗುಂಪು ಗುಂಪಾಗಿ ಅಶ್ವಾರೂಢರಾಗಿ ಬಂದು ದೇಗುಲಗಳನ್ನು ನೆಲಸಮಗೊಳಿಸಿ, ದೇವರ ವಿಗ್ರಹಗಳನ್ನು ಒಡೆದುಹಾಕಿ, ಹಳ್ಳಿಗಳನ್ನು, ದೇವಾಲಯಗಳನ್ನು ದೋಚಿ ಅದೇ ಕೆಲಸಗಳನ್ನು ಮುಂದುವರಿಸಲು ಮುಂದಿನ ಊರುಗಳಿಗೆ ಹೋಗುತ್ತಿದ್ದರೆಂದು ವೇದ್ಯವಾಯಿತು."

"ಅದೇಕೆ ಸ್ವಾಮಿ ಅವರು ದೇವಾಲಯಗಳನ್ನು ನಾಶಮಾಡುವುದು, ವಿಗ್ರಹಗಳನ್ನು ಒಡೆಯುವುದು. ದೇವರ ಮೂರ್ತಿಗಳು ಅವರಿಗೇನು ಹಾನಿ ಮಾಡಿದವು?" ಒಬ್ಬ ವೃದ್ಧ ಕೇಳಿದ.

ನೋವಿನಿಂದ ರಾಮಾನುಜರು ಮಾತು ಮುಂದುವರಿಸಿದರು,

"ನಿಜವೇ, ಆದರೆ ಅವರ ಮತ ಹಾಗೆ ಹೇಳುತ್ತದೆಯಂತೆ. ದೇವತಾ ವಿಗ್ರಹಗಳನ್ನು ಪೂಜಿಸುವವರನ್ನು ನಾಶಮಾಡಬೇಕಂತೆ. ಇಲ್ಲವೇ ಮೂರ್ತಿಪೂಜಕರು ಅವರ ಮತವನ್ನು ಸ್ವೀಕರಿಸಬೇಕಂತೆ. ಅವರಿಗೆ ನಾವು ಪೂಜಿಸುವ ಗೋವುಗಳನ್ನು ಕಂಡರೆ ಆಜನ್ಮ ದ್ವೇಷ. ಗೋವುಗಳನ್ನು ಹತ್ಯೆ ಮಾಡಿ ಅವುಗಳ ಮಾಂಸವನ್ನು ನಮ್ಮವರಿಗೆ ತಿನ್ನಿಸಿ ಜಾತಿ ಕೆಡಿಸುವ ಕೆಲಸ ಮಾಡುತ್ತಿದ್ದರಂತೆ. ಈ ಎಲ್ಲ ವಿವರಗಳನ್ನು ಕಾಶ್ಮೀರದಿಂದ ಹಿಂದಿರುಗುವಾಗ ನಮಗೆ ಹಾದಿಯಲ್ಲಿ ಭೇಟಿಯಾದ ಪುರಜನರು ತಿಳಿಸಿದರು."

"ಅವರನ್ನು ತಡೆಯುವವರು ಯಾರೂ ಇರಲಿಲ್ಲವೇ?"

"ಇಲ್ಲ. ಬಿರುಗಾಳಿಯಂತೆ ಬರುತ್ತಿದ್ದ ಈ ಯವನ ದುಷ್ಟರ

ತಂಡಗಳ ಎದುರು ನಿಲ್ಲುವ ಶಕ್ತಿವಂತರು ಯಾರೂ ಇರಲಿಲ್ಲ. ಹೀಗಾಗಿ ಯವನರ ಆಕ್ರಮಣಕ್ಕೆ ಎದುರಿಲ್ಲದಂತಾಯಿತು. ಹೆಚ್ಚೆಂದರೆ ಆಯಾ ಊರುಗಳ ದೇವಾಲಯದ ಅರ್ಚಕರೂ ಬ್ರಾಹ್ಮಣರೂ ಮತ್ತು ಗ್ರಾಮಸ್ಥರು ರಾತ್ರೋರಾತ್ರಿ ಅರ್ಚಾಮೂರ್ತಿಗಳನ್ನು ದೇವಾಲಯಗಳಿಂದ ಎತ್ತಿಕೊಂಡು ಹೋಗಿ ಎಲ್ಲಿಯೋ ನೆಲದಲ್ಲಿ ಹುದುಗಿಸಿಡುತ್ತಿದ್ದರು. ಯಾದವಾದ್ರಿಯ ಜನರೂ ಮಾಡಿರುವುದು ಅದೇ ಕೆಲಸವನ್ನು. ಅದರಿಂದಾಗಿಯೇ ನಮಗೀಗ ತಿರುನಾರಾಯಣ ಸ್ವಾಮಿಯ ಮೂಲ ವಿಗ್ರಹ ದೊರೆತಿರುವುದು."

"ಹೌದು ಮಹಾಸ್ವಾಮಿ. ಇಲ್ಲಿ ಯವನರ ದಾಳಿಯಾಗಿತ್ತೆಂದೂ ಆಗ ಮೂಲ ವಿಗ್ರಹವನ್ನು ಮಾಯಮಾಡಿ ಎಲ್ಲಿಯೋ ಸುರಕ್ಷಿತವಾಗಿ ನಮ್ಮ ಪೂರ್ವಿಕರು ಬಚ್ಚಿಟ್ಟರೆಂದು ನಮ್ಮ ತಂದೆ ತಾತಂದಿರು ಹೇಳುತ್ತಿದ್ದುದು ಸರಿ ಎಂಬುದು ಈಗ ನಿಜವಾಯಿತು. ಆ ಯವನ ರಾಕ್ಷಸರು ಈಗಲೂ ಇದ್ದಾರೆಯೇ?" ಗ್ರಾಮಸ್ಥನೊಬ್ಬನ ಪ್ರಶ್ನೆ.


"ಇದ್ದಾರೆ ತ್ರೇತಾಯುಗ, ದ್ವಾಪರ ಯುಗಗಳಲ್ಲಿ ನಾಸ್ತಿಕರಾದ ರಾಕ್ಷಸರು ಹೇಗೋ ಇವರೂ ಹಾಗೆಯೇ. ನಾಸ್ತಿಕ್ಯವನ್ನು ಹೋಗಲಾಡಿಸಿ ಆಸ್ತಿಕ್ಯವನ್ನು ಉಳಿಸಲೆಂದೇ ಅಲ್ಲವೇ ಶ್ರೀಮಹಾವಿಷ್ಣು ದಶಾವತಾರಗಳನ್ನು ತಾಳಿದ್ದು! ಭೂದೇವಿಯನ್ನು ಕಾಪಾಡಿದ್ದು! ವೇದಗಳನ್ನು ರಕ್ಷಿಸಿದ್ದು!" ರಾಮಾನುಜರು ಉತ್ತರಿಸಿದರು.

"ಈಗ ಇವರನ್ನು ಎದುರಿಸುವುದು ಹೇಗೆ? ನಮ್ಮ ದೇವರನ್ನು, ಆಸ್ತಿಕತೆಯನ್ನು ರಕ್ಷಿಸಿಕೊಳ್ಳುವುದು ಹೇಗೆ?"

"ನಮ್ಮ ಜನ ದೇವರಲ್ಲಿ ಶ್ರದ್ಧಾಭಕ್ತಿಗಳನ್ನು ಭದ್ರಗೊಳಿಸಿಕೊಳ್ಳಬೇಕು. ಸಂಪೂರ್ಣ ಪ್ರಪತ್ತಿಯಿಂದ ಶ್ರೀಮನ್ನಾರಾಯಣನನ್ನು ನಂಬಿ ಪೂಜಿಸಬೇಕು. ಪ್ರತಿ ಹಳ್ಳಿಯಲ್ಲು, ಪಟ್ಟಣದಲ್ಲು ಶ್ರೀಮನ್ನಾರಾಯಣನ ದೇಗುಲಗಳು ನಿರ್ಮಾಣಗೊಂಡು ಅಲ್ಲಿ ವ್ಯವಸ್ಥಿತವಾಗಿ ಪೂಜಾ ಕೈಂಕರ್ಯ ಕಟ್ಟುನಿಟ್ಟಾಗಿ ನಡೆಯಬೇಕು. ಆ ಕೆಲಸವನ್ನೇ ನಾನೀಗ ಮಾಡಿಕೊಂಡು ಬರುತ್ತಿರುವುದು. ಆಸ್ತಿಕ್ಯದ ಮಹಿಮೆ, ಶ್ರೀಹರಿಯ ಮೇಲಿನ ಭಕ್ತಿ ಎಷ್ಟು ಶ್ರೇಷ್ಠವೆಂಬುದು ವಿಷ್ಣುವರ್ಧನ ಮಹಾರಾಜರಿಗೆ ಈಗ ಚೆನ್ನಾಗಿ ಅರಿವಾಗಿದೆ. ಅವರೇ ತೊಂಡನೂರಿನ ನಂಬಿ ನಾರಾಯಣ ದೇವಸ್ಥಾನವನ್ನು ಅತ್ಯಂತ ಸುಂದರವಾಗಿ ನಿರ್ಮಿಸಿದ್ದಾರೆ. ನಮ್ಮ ಪ್ರಾರ್ಥನೆಗೆ ಅವರು ತೋರಿದ ಮನ್ನಣೆ ಅದು. ಅಂತೆಯೇ ಈ ಮೇಲುಕೋಟೆಯ ತಿರುನಾರಾಯಣನ ದೇವಸ್ಥಾನದ ನಿರ್ಮಾಣವನ್ನು ಆರಂಭಿಸಿದ್ದಾರೆ. ಕೆಲ ಸಮಯದಲ್ಲಿ ಇಲ್ಲಿನ ಕೆಲಸ ಪೂರ್ಣಗೊಂಡು ಭವ್ಯವಾದ ಯಾದವಾದ್ರಿಪತಿ ತಿರುನಾರಾಯಣನ ದೇವಸ್ಥಾನ ಎದ್ದು ನಿಲ್ಲುವುದು. ಅವರು ತಮ್ಮ ರಾಜ್ಯದಲ್ಲಿ ಇನ್ನೂ ಕೆಲವು ವಿಷ್ಣು ದೇವಾಲಯಗಳನ್ನು ನಿರ್ಮಿಸಲು ಪಣ ತೊಟ್ಟಿದ್ದಾರೆ. ಮಹಾರಾಜರಿಗೆ ಎಲ್ಲ ದೃಷ್ಟಿಯಿಂದಲೂ ವೇದೋಕ್ತ ಸನಾತನ ಧರ್ಮವೇ ಕಲಿಯುಗದಲ್ಲಿ ಸೂಕ್ತವೆಂದು ನಂಬಿಕೆ ಉಂಟಾಗಿದೆ."

ಅಂದು ಸಂಜೆ ಮೇಲುಕೋಟೆ-ಯಾದವಾದ್ರಿ ಅಥವಾ ಯಾದವಪುರಿಯ ಹಿರಿಯ ಗ್ರಾಮಸ್ಥರೊಂದಿಗೆ ಹೀಗೆ ಸಂಭಾಷಣೆ ನಡೆಸಿದ ಅನಂತರ ರಾಮಾನುಜರು ಎದ್ದು ಶುಚಿರ್ಭೂತವಾಗಿ ಪೂಜಾ ಕೈಂಕರ್ಯ ನಡೆಸಿ ಫಲಾಹಾರ ಸ್ವೀಕರಿಸಿ ಸ್ವಲ್ಪ ಹೊತ್ತು ಅಧ್ಯಯನ ನಡೆಸಿ ಅನಂತರ ವಿಶ್ರಾಂತಿಗೆ ಹೋದರು.

ರಾಮಾನುಜರಿಗೆ ಕರುನಾಡಿನಲ್ಲಿ ದೊರೆತ ಸ್ವಾಗತ, ಸಹಾಯ ಹಾಗೂ ಪ್ರೋತ್ಸಾಹ ಇತೋಪ್ಯತಿಶಯವಾದುದು. ಚೋಳ ರಾಜ್ಯದಿಂದ ಅವರು ಓಡಿ ಬರಬೇಕಾಗಿ ಬಂದಿತ್ತು. ಅವರು ಹೊಯ್ಸಳರ ಪ್ರದೇಶವನ್ನು



ಪ್ರವೇಶಿಸುತ್ತಿದ್ದಂತೆ ಅವರಿಗೆ ಕವಿದಿದ್ದ ಚೋಳ ಪೀಡೆ ಓಡಿಹೋಯಿತು. ಅಲ್ಲಿಂದ ಮುಂದೆ ಎಲ್ಲೆಡೆ ಅವರು ಜಯಭೇರಿ ಬಾರಿಸಿದ್ದೇ ಬಾರಿಸಿದ್ದು.

ಇನ್ನು ದೇವಾಲಯಗಳ ನಿರ್ಮಾಣಕ್ಕೆ ಸ್ವತಃ ವಿಷ್ಣುವರ್ಧನ ರಾಜನೇ ಬೆನ್ನೆಲುಬಾಗಿ ನಿಂತಾಗ ಆ ದೇವಾಲಯಗಳು ಭವ್ಯ ಕಟ್ಟಡಗಳಾಗಿದಿರಲು ಸಾಧ್ಯವೇ.

ಇದೆಲ್ಲದರ ನಡುವೆ ಇನ್ನೊಂದು ಮುಖ್ಯ ಸಂಗತಿ ರಾಮಾನುಜರ ಮನಸ್ಸಿನಿಂದ ಅಳಿಸಿ ಹೋಗಿರಲಿಲ್ಲ. ಸದಾ ಅದು ಹಸಿರಾಗಿಯೇ ಇತ್ತು. ಅದೆಂದರೆ ತಿರಸ್ಕೃತರೆನಿಸಿಕೊಂಡಿದ್ದ ಪಂಚಮರೇ ಮುಂತಾದ ಜನರು ಅವರಿಗೆ ಮಾಡಿದ ಸಹಾಯ. ಅಂಥ ತಿರಸ್ಕೃತರಲ್ಲಿ ಭಕ್ತಿ ಭಾವ ಮೂಡಿಸಿದ್ದ, ಪ್ರೀತಿ ತೋರಿಸಿದ್ದ ರಾಮಾನುಜರು ಅವರಿಗೆ ತಿರುನಾರಾಯಣನ ಪೂಜಾ ಕೈಂಕರ್ಯದಲ್ಲಿ ಒಂದು ವಿಶೇಷ ಸ್ಥಾನಮಾನ

ನೀಡಬೇಕೆಂದು ನಿರ್ಧರಿಸಿದರು. ಶ್ರೀರಾಮಚಂದ್ರನಿಗೆ ಲಂಕೆಗೆ ಸೇತುವೆ ಕಟ್ಟಲು ಸಹಾಯ ಮಾಡಿದ್ದು ಕಪಿ ಸೈನ್ಯವಲ್ಲವೇ? ಅವರ ಭಕ್ತಿಗೆ ಶ್ರೀರಾಮ ಮೆಚ್ಚಲಿಲ್ಲವೇ? ಆಂಜನೇಯನ ಹೃತ್ಕಮಲದಲ್ಲಿ ನೆಲೆಸಲಿಲ್ಲವೆ?

ತಿರುನಾರಾಯಣನ ವಿಗ್ರಹವನ್ನು ಮೇಲಕ್ಕೆ ತಂದವರು, ತರಲು ದಾರಿ ಮಾಡಿದವರೂ ಅವರೇ ಅಲ್ಲವೇ? ಅವರಿಲ್ಲದಿದ್ದರೆ ರಾಮಾನುಜರ ದೇವಾಲಯ ನಿರ್ಮಾಣದ ಕೆಲಸ ಸಾಧ್ಯವಗುತ್ತಿತ್ತೇ?

ದೇವಾಲಯದ ಉದ್ಘಾಟನೆಯಾದ ಮೇಲೆ ರಾಮಾನುಜರು ಅವರನ್ನೆಲ್ಲ ದೇವಸ್ಥಾನಕ್ಕೆ ಕರೆಸಿ ಎಲ್ಲರೂ ಶುಭ್ರ ಸ್ನಾತರಾಗಿ ಬರಬೇಕೆಂದು ತಿಳಿಸಿದರು. ಅವರು ಸ್ನಾನ ಮಾಡಿ, ಶುಭ್ರ ವಸ್ತ್ರಗಳನ್ನು ಧರಿಸಿ, ಹಣೆಯಲ್ಲಿ ತಿರುನಾಮ ಧರಿಸಿ ಬಂದಾಗ ಅವರನ್ನು ದೇವಸ್ಥಾನದ ಹೊರಗಡೆಯೇ ಭೇಟಿ ಮಾಡಿ "ಅಪ್ಪಾ, ನೀವೆಲ್ಲರೂ ಇರದಿದ್ದರೆ, ನನಗೆ ಸಹಾಯ ಮಾಡದಿದ್ದರೆ ನನಗೆ ಈ ತಿರುನಾರಾಯಣ ದೇಗುಲವನ್ನು ನಿರ್ಮಿಸಲು ಆಗುತ್ತಿರಲಿಲ್ಲ. ಅಷ್ಟು ಉಪಕಾರ ನಿಮ್ಮಿಂದಾಗಿದೆ. ನಿಮ್ಮ ಉಪಕಾರವನ್ನು ಮರೆತರೆ ಶ್ರೀಹರಿ ನನ್ನನ್ನು ಮನ್ನಿಸುವುದಿಲ್ಲ. ಇನ್ನು ಮುಂದೆ ನೀವು ಪಂಚಮರಲ್ಲ. 'ತಿರುಕ್ಕುಲತ್ತಾರ್', ತಿರುಕ್ಕುಲತ್ತಾರ್! ಅಂದರೆ ಶ್ರೀಹರಿಯ ವಕ್ಷಸ್ಥಳ ನಿವಾಸಿಯಾದ ಸಾಕ್ಷಾತ್ ಶ್ರೀಲಕ್ಷ್ಮಿಯ ಕುಲದವರು ಎಂದರ್ಥ. ಇನ್ನು ಮುಂದೆ ವರ್ಷದಲ್ಲಿ ಮೂರು ದಿವಸಗಳ ಕಾಲ ನೀವೇ ತಿರುನಾರಾಯಣನ ಸೇವೆ ಮಾಡಲು, ಅರ್ಚನೆ ಮಾಡಲು ಅವಕಾಶ ನಿರ್ಮಿಸಿ ಆದೇಶಿಸುತ್ತಿದ್ದೇನೆ. ಇದು ಎಲ್ಲ ಕಾಲ ನಡೆದುಕೊಂಡು ಹೋಗ ತಕ್ಕದ್ದು." ಹೀಗೆ ರಾಮಾನುಜರು ಹೇಳುತ್ತಿದ್ದಂತೆ ಅಲ್ಲಿ ನೆರೆದಿದ್ದ ತಥಾಕಥಿತ ತಿರಸ್ಕೃತ ಸಮಾಜದ ಮುಗ್ಧರ ಮುಖದಲ್ಲಿ ಸಂತೋಷ ಚಿಮ್ಮಿತು. ಅಲ್ಲಿ ಆನಂದದ ಹೊಳೆಯೇ ಹರಿಯಿತು. ರಾಮಾನುಜರು ತೆಗೆದುಕೊಂಡ ಈ ಹೆಜ್ಜೆಯಿಂದ ಒಂದು ಹೊಸ ಕ್ರಾಂತಿಯೇ ಉಂಟಾಯಿತು.

ಅವರಿಗೆ ಮೂಲವಿಗ್ರಹ ದೊರೆತಿದ್ದು ಅಪಾರ ಸಂತೃಪ್ತಿಯನ್ನು ತಂದುಕೊಟ್ಟಿತ್ತು, ನಿಜ. ಆದರೆ ಆ ಸಂಜೆಯ ಗ್ರಾಮಸ್ಥರೊಂದಿಗಿನ ಸಂಭಾಷಣೆಯ ಅನಂತರ ಅವರ ಮನಸ್ಸಿನಲ್ಲಿ ವಿಜಯ ವಿಗ್ರಹ ಅರ್ಥಾತ್ ಉತ್ಸವ ಮೂರ್ತಿಯನ್ನು ಕುರಿತೇ ಯೋಚನಾ ತರಂಗಗಳು ಹುಟ್ಟಿಕೊಂಡವು. ಅದೇ ಚಿಂತೆಯಲ್ಲಿರಲು ಅವರು ಯೋಗನಿದ್ರೆಗೆ ಹೋದರು. ಆ ನಿದ್ರೆಯಲ್ಲಿ ಅವರಿಗೆ ಚಿರಪರಿಚಿತರಾದ ಧ್ವನಿಯೊಂದು, ಅಲೆ ಅಲೆಯಾಗಿ ತೇಲಿ ಬಂತು. "...ರಾಮಾನುಜ ನನ್ನ ಮೂಲ ವಿಗ್ರಹವನ್ನು ಪ್ರತಿಷ್ಠಾಪಿಸಿದೆ. ಒಳ್ಳೆಯದಾಯಿತು.... ನನ್ನ ಉತ್ಸವ ಮೂರ್ತಿ ಇಲ್ಲದೆ ನಾನು ಹೇಗೆ ಗರ್ಭಗುಡಿಯಿಂದ ಹೊರಕ್ಕೆ ಹೋಗುವುದು? ಭಕ್ತರಿಗೆ ದರ್ಶನ ಕೊಡುವುದು? ನನ್ನ ಉತ್ಸವ ಮೂರ್ತಿಯನ್ನು ಇಲ್ಲಿಗೆ ತೆಗೆದುಕೊಂಡು ಬಾ. ಅದು ಈಗ ಆರ್ಯಾವರ್ತದಲ್ಲಿ ಒಬ್ಬ ಯವನ ರಾಜನ ಅರಮನೆಯಲ್ಲಿದೆ. ನನ್ನ ಉತ್ಸವ ಮೂರ್ತಿಯನ್ನು ಯಾದವಾದ್ರಿಯನ್ನು ನಾಶಗೊಳಿಸಿದ ಯವನರ ಗುಂಪು ಇಲ್ಲಿಂದ ತೆಗೆದುಕೊಂಡು ಹೋಗಿ ಯವನ ರಾಜನ ಸಂಗ್ರಹಾಲಯಕ್ಕೆ ಸೇರಿಸಿದೆ..."

ಉತ್ಸವ ಮೂರ್ತಿ ಎಲ್ಲಿ ಎಂಬ ರಾಮಾನುಜರ ಪ್ರಶ್ನೆಗೆ ಸ್ವತಃ ಶ್ರೀಮನ್ನಾರಾಯಣನೇ ಉತ್ತರಿಸಿದ್ದ!

ಈ ಕುರಿತು ರಾಮಾನುಜರು ವಿಷ್ಣುವರ್ಧನ ಮಹಾರಾಜನ ಬಳಿ ಚರ್ಚಿಸಿದರು. "ಹೌದು. ಯವನರ ದಾಳಿ ಎಲ್ಲ ಪ್ರದೇಶಗಳಲ್ಲಿ ನಡೆದಿದೆ. ದೇವಾಲಯಗಳು ನಾಶಗೊಂಡಿವೆ. ಆದರೆ ಆರ್ಯಾವರ್ತದಲ್ಲಿ ಅಂಥ ಪ್ರಬಲ ಯವನ ರಾಜರು ಯಾರೂ ಇದ್ದಂತಿಲ್ಲ. ಈಗ್ಗೆ ಸುಮಾರು ನೂರು ವರ್ಷಗಳ ಹಿಂದೆ ಗಾಂಧಾರ, ಪಾರಸಿಕ ದೇಶಗಳ ಕಡೆಯಿಂದ ಬರಲಾರಂಭಿಸಿದ ಯವನರು ಗುಂಪು ಗುಂಪಾಗಿ ದಾಳಿ, ದರೋಡೆ, ನಡೆಸಿದ್ದುಂಟು. ಅವರ ಪೈಕಿ ಯಾರಾದರೊಬ್ಬ ಇಲ್ಲಿಯ ದುರ್ಬಲ ರಾಜರ ರಾಜ್ಯವನ್ನು ಗೆದ್ದು ತನ್ನ ರಾಜ್ಯ ಸ್ಥಾಪಿಸಿರಬಹುದು."

"ಇರಬಹುದು ಮಹಾರಾಜ. ಆದರೆ ಹೇಗೋ ನಮ್ಮ ಚೆಲುವನಾರಾಯಣ ರಾಮಪ್ರಿಯ ಉತ್ಸವ ಮೂರ್ತಿ ಅಲ್ಲಿಗೆ ಹೋಗಿ ಸೇರಿಕೊಂಡು ಬಿಟ್ಟಿದೆ. ನನ್ನ ರಾಮಪ್ರಿಯನನ್ನು ಆ ಸೆರೆಯಿಂದ ಬಿಡಿಸಿಕೊಂಡು ಬರಬೇಕು. ರಾಮಪ್ರಿಯ ಇಲ್ಲಿಗೆ ಬರುವವರೆಗೆ ನನಗೆ ಸಮಾಧಾನವಿರುವುದಿಲ್ಲ. ನಾನು ಅಲ್ಲಿಗೆ ಹೋಗಬೇಕು..."

"ಈ ವಯಸ್ಸಿನಲ್ಲಿ ಅಷ್ಟು ದೂರದ ಪ್ರಯಾಣ.."? ಅವರಿಗಾಗ ವಯಸ್ಸು ಸುಮಾರು ಎಂಬತ್ತೆರಡು.


"ಪರವಾಗಿಲ್ಲ ಮಹಾರಾಜ. ಸ್ವತಃ ಶ್ರೀಮನ್ನಾರಾಯಣನೇ ಬೆನ್ನಿಗಿರುವಾಗ ನನಗೆಂಥ ಭಯ? ದಯವಿಟ್ಟು ನನ್ನ ಪ್ರಯಾಣಕ್ಕೆ ಸಹಕರಿಸಿ."

ಮನಸ್ಸಿಲ್ಲದ ಮನಸ್ಸಿನಿಂದ ವಿಷ್ಣುವರ್ಧನ ರಾಯ ರಾಮಾನುಜರ ಪ್ರಯಾಣಕ್ಕೆ ಬೇಕಾದ ಅಶ್ವಾರೂಢ ಸೈನಿಕರು, ಗೂಢಚಾರರು ಮತ್ತು ಅವರ ಶಿಷ್ಯರನ್ನು ಹೊತ್ತೊಯ್ಯಲು ಕುದುರೆಗಳು ಮುಂತಾದ ಸಕಲ ಸಹಾಯಗಳನ್ನು ಒದಗಿಸಿದ. ಒಂದು ಶುಭ ಮುಹೂರ್ತದಲ್ಲಿ ರಾಮಾನುಜರ ಪ್ರಯಾಣ ಆರಂಭಗೊಂಡಿತು.

ಚಾಣಾಕ್ಷಮತಿಗಳಾದ ಗುಪ್ತಚರರು ರಾಮಾನುಜರ ತಂಡ ದಾರಿಯಲ್ಲಿನ ಊರುಗಳನ್ನು ಪ್ರವೇಶಿಸುವ ಮೊದಲೇ ಆಯಾ ಊರುಗಳು ಮಾಹಿತಿಗಳನ್ನು ಸಂಗ್ರಹಿಸಿ ರಾಮಾನುಜರು ಸೇರಬೇಕಾಗಿದ್ದ ಯವನ ರಾಜನ ತಾಣವನ್ನು ಹುಡುಕುತ್ತಿದ್ದರು. ವಯಸ್ಸಾಗಿದ್ದ ರಾಮಾನುಜರಿಗೆ ಹೆಚ್ಚಿನ ತೊಂದರೆಯಾಗಕೂಡದೆಂದು ಎರಡು ಸುಸಜ್ಜಿತ ಪಲ್ಲಕ್ಕಿಗಳನ್ನೂ ಅದನ್ನು ಹೊರಲು ಎರಡು ಬೋಯಿಗಳ ತಂಡವನ್ನು ಕೊಟ್ಟಿದ್ದ. ಜೊತೆಗೆ ಪರಿಚಾರಕರೂ ಇದ್ದರು. ರಾಮಾನುಜರ ಶಿಷ್ಯರಿಗೂ ಕುದುರೆಗಳನ್ನು ಒದಗಿಸಿದ್ದ.


ಈ ತಂಡ ವಿಷ್ಣು ದೇವಾಲಯಗಳಿದ್ದ ಸ್ಥಳಗಳಲ್ಲಿ ರಾತ್ರಿ ತಂಗಿ ವಿಶ್ರಾಂತಿ ಪಡೆದು, ಅಲ್ಲಿಯೇ ಸ್ನಾನ, ಆಹ್ನಿಕ, ದೇವತಾರ್ಚನೆ ಮುಂತಾದ ನೈಮಿತ್ತಿಕ ಕಾರ್ಯಗಳನ್ನು ಮುಗಿಸಿ ಪ್ರಯಾಣ ಮುಂದುವರಿಸುತ್ತಿದ್ದರು. ರಾಮಾನುಜರಿಗೆ ಉತ್ಸವ ಮೂರ್ತಿ ರಾಮಪ್ರಿಯನನ್ನು ಮೇಲುಕೋಟೆಗೆ ತರುವ ಉತ್ಸಾಹದಲ್ಲಿ

27ನೇ ಪುಟಕ್ಕೆ



ಶ್ರೀ ವಿಷ್ಣು ಸಹಸ್ರನಾಮ ಮಹಾತ್ಮೆ

ಈವರೆಗೆ 'ದಾಸವಾಣಿ' ಎಂಬ ಅಂಕಣದಲ್ಲಿ ಪುರಂದರದಾಸರ ಕೀರ್ತನೆಗಳಿಗೆ ವ್ಯಾಖ್ಯಾನ ನೀಡಿರುವ ಯತಿರಾಜ್ ವೀರಾಂಬುಧಿಯವರು ಈ ಸಂಚಿಕೆಯಿಂದ ಶ್ರೀ ವಿಷ್ಣು ಸಹಸ್ರನಾಮದ ಕೆಲವು ಪದಗಳನ್ನು ಆಯ್ದುಕೊಂಡು ಅವನ್ನು ಅರ್ಥೈಸುತ್ತಾ ವಿಷ್ಣು ಸಹಸ್ರನಾಮವನ್ನು ಕುರಿತು ವ್ಯಾಖ್ಯಾನ ಮಾಡುತ್ತಾರೆ. ಸ್ವತಃ ಕಾದಂಬರಿಕಾರರಾಗಿರುವ ಯತಿರಾಜ ವೀರಾಂಬುಧಿಯವರು ಅಧ್ಯಾತ್ಮಜೀವಿಗಳೂ ಆಗಿದ್ದಾರೆ.



# ದಕ್ಷಃ

ದಕ್ಷ ಎಂದರೆ ಸಮರ್ಥ. ಭಗವಂತ ಸರ್ವಸಮರ್ಥ. ಅವನು ಇಡೀ ವಿಶ್ವದ ಪ್ರತಿಯೊಂದು ವಸ್ತುವಿನ ಭೂತ-ಭವಿಷ್ಯತ್ ಹಾಗೂ ವರ್ತಮಾನವನ್ನು ಸಂಪೂರ್ಣ ತಿಳಿದಿದ್ದಾನೆ. ಭಗವಂತ ಸರ್ವವನ್ನೂ ಕಾಣಬಲ್ಲ ಶಕ್ತಿ. ನಮ್ಮಲ್ಲಿರುವ ಕಿಂಚಿತ್ ದಕ್ಷತೆ ಭಗವಂತನ ಪ್ರಸಾದ. ಎಲ್ಲ ದಕ್ಷರಿಗೂ ದಕ್ಷತೆಯನ್ನು ಕೊಡುವ ಪೂರ್ಣದಕ್ಷ ಭಗವಂತನೊಬ್ಬನೇ. ಆತನ ದಕ್ಷತೆಯನ್ನು ವರ್ಣಿಸುವುದು ಅಸಾಧ್ಯ. ಆತನೊಬ್ಬ ವೈಶಿಷ್ಟ್ಯಪೂರ್ಣ ವಿನ್ಯಾಸಕಾರ.

ಯಾರು ಪ್ರಪಂಚದ ರೂಪದಲ್ಲಿ ವೃದ್ಧಿ ಆಗುವರೋ ಅವರು ದಕ್ಷಃ.

ಜಾಣ ಅವನು. ಈ ಬ್ರಹ್ಮಾಂಡವಾಗಿ ಅವತರಿಸಿದವನು. ಅಥವಾ ಅವನು ಎಲ್ಲ ಕ್ರಿಯೆಗಳನ್ನೂ ಚಾತುರ್ಯದಿಂದ ನಡೆಸುತ್ತಾನೆ.

ಅವನು ಬಹಳ ಚತುರ. ಅವನು ಇಡೀ ಬ್ರಹ್ಮಾಂಡದ ಸೃಷ್ಟಿ, ಸ್ಥಿತಿ ಮತ್ತು ಲಯಗಳನ್ನು ಬಹಳವೇ ಸುಲಭವಾಗಿ, ಸಮರ್ಥವಾಗಿ, ಕಾರ್ಯತತ್ಪರನಾಗಿ ಮತ್ತು ಚುರುಕುತನದಿಂದ ಅರ್ಥಮಾಡಿಕೊಳ್ಳುವವನು.

ಅಂದರೆ ಚತುರ, ಸಮರ್ಥ ಮತ್ತು ಶಕ್ತಿವಂತ ಭಗವಂತ.

ಈ ಸಾಮರ್ಥ್ಯ, ಚಾತುರ್ಯವನ್ನು ನಾವು ಸೃಷ್ಟಿ, ಲಯ ಮತ್ತು ಸ್ಥಿತಿಗಳಿಗೆ ಮಾತ್ರ ಹೇಳಬಲ್ಲೆವು. ಗುಣವಾಚಕಗಳಾದ ಸರಾಗವಾಗಿ, ಕಾರ್ಯಪಟುತ್ವ, ಕಾರ್ಯಶ್ರದ್ಧೆ, ಚುರುಕುತನ ಇವುಗಳು ಸಮಯವನ್ನು ನಿಯಂತ್ರಿಸಿ, ಫಲಿತಾಂಶವನ್ನು ನೀಡುವುದಕ್ಕೆ ಹೇಳಲ್ಪಡುತ್ತವೆ. ಫಲಿತಾಂಶಗಳೆಂದರೆ ಅವು ಆ ಸನ್ನಿವೇಶಕ್ಕೆ ಅಗತ್ಯವಾದಂತಹ ಫಲಿತಾಂಶಗಳೆಂಬುದನ್ನು ನಾವು ಗಮನಿಸಬೇಕು.

ಅದಕ್ಕಿಂತ ಮುಖ್ಯ ಎಂದರೆ ದಕ್ಷ ಎನ್ನುವ ಈ ನಾಮವು ಒಂದೇ ವ್ಯಕ್ತಿಯಲ್ಲಿ ಈ ಎಲ್ಲ ಗುಣಗಳೂ ಒಂದೇ ಸಮಯದಲ್ಲಿ ಅಸ್ತಿತ್ವದಲ್ಲಿರಬೇಕೆಂದು ಬೇಡುತ್ತದೆ.

ಸೃಷ್ಟಿ, ಸ್ಥಿತಿ ಮತ್ತು ಲಯಗಳು ಭಗವಂತನಿಂದ ನಡೆಯುವುದು ಅತ್ಯಂತ ಪರಿಪೂರ್ಣತೆಯೊಂದಿಗೆ, ಕರಾರುವಾಕ್ಕಾಗಿ ಮತ್ತು ಶೀಘ್ರತೆಯೊಂದಿಗೆ. ಇದು ಬಹಳ ಮುಖ್ಯ. ಏಕೆಂದರೆ ಅವು ಚೆನ್ನಾಗಿ ಕೂಡ ನಡೆಯುತ್ತವೆ. ಕೆಲಸ ಮಾಡುವುದು ಮುಖ್ಯ. ಅದನ್ನು ಸಮಯಕ್ಕೆ ಸರಿಯಾಗಿ ಮಾಡುವುದು ಇನ್ನೂ ಮುಖ್ಯ. ಆದರೆ ಅದನ್ನು ಸಮಯಕ್ಕೆ ಸರಿಯಾಗಿ ಚೆನ್ನಾಗಿ, ಸಂಪೂರ್ಣವಾಗಿ, ಪರಿಪೂರ್ಣವಾಗಿ ಮಾಡುವುದರಿಂದ ನೆರವೇರಿಕೆಗೆ ಒಂದು ಘನತೆಯು ಉಂಟಾಗುತ್ತದೆ.



ಸೃಷ್ಟಿ, ಸ್ಥಿತಿ, ಲಯಗಳ ದಕ್ಷ ಕೆಲಸವನ್ನು ಭಗವಂತನಿಗೆ ಬಿಟ್ಟುಬಿಡೋಣ.

ನಾವು ಹೇಗೆ ದಕ್ಷರಾಗಿ ಬಾಳಬಹುದೆಂದು ಆಲೋಚಿಸೋಣ. ಶತಾಯುಷಿ ಡಾ. ಸರ್. ಎಂ. ವಿಶ್ವೇಶ್ವರಯ್ಯನವರನ್ನು ದಕ್ಷ ಆಡಳಿತಾಧಿಕಾರಿ ಎಂದು ಕರೆಯುತ್ತಾರೆ. ಅವರ ದಕ್ಷತೆಗೆ ಅನೇಕ ಉದಾಹರಣೆಗಳನ್ನು ಡಾ. ಡಿ. ವಿ. ಗುಂಡಪ್ಪನವರ ಜ್ಞಾಪಕ ಚಿತ್ರಶಾಲೆಯ ಪುಸ್ತಕದಲ್ಲಿ ಕಾಣಬಹುದು.

ದಕ್ಷತೆಗೆ ಹೆಸರಾದ ರಾಜರ ಹೆಸರುಗಳನ್ನು ನಮ್ಮ ಕಣ್ಮುಂದೆ

ಚರಿತ್ರೆಯು ಇಟ್ಟಿದೆ. ಶ್ರೀಕೃಷ್ಣದೇವರಾಯ ದಕ್ಷರೆಂದು ಹೆಸರು ಪಡೆದಿದ್ದರು.

ಮಹಾಮಂತ್ರಿ ತಿಮ್ಮರಸುವನ್ನು ಮಹಾದಕ್ಷನೆಂದು ಚರಿತ್ರೆಯು ಗುರುತಿಸಿದೆ. ಸಜ್ಜನರೊಂದಿಗೆ ಸನ್ನಡತೆ, ದುಷ್ಟಜನರ ಶಿಕ್ಷೆ ಮತ್ತು ನಾಶಕ್ಕೆ ಕುಟಿಲತೆಯನ್ನು ತಿಮ್ಮರಸು ಯಶಸ್ವಿಯಾಗಿ ಬಳಸಿದ್ದನೆಂದು ಚರಿತ್ರಕಾರರು ದಾಖಲಿಸಿದ್ದಾರೆ.

ಶ್ರೀರಾಮನು ದಕ್ಷ ರಾಜನೆಂದು ಹೆಸರು ಪಡೆದಿದ್ದ. ಅವನ ದೇಶದಲ್ಲಿ ದುಃಖ, ಕಷ್ಟಗಳು ಯಾರಿಗೆ ಬಂದರೂ ಅದನ್ನು ಅತಿ ಶೀಘ್ರದಲ್ಲಿ ಪರಿಹರಿಸುತ್ತಿದ್ದನೆಂದು ಹೇಳುತ್ತದೆ ರಾಮಾಯಣ.

ರಾವಣನ ಪರಸ್ತ್ರೀ ವ್ಯಾಮೋಹವೊಂದನ್ನು ಬಿಟ್ಟರೆ ಅವನು ರಾಜ್ಯಭಾರ ನಡೆಸುವುದರಲ್ಲಿ ದಕ್ಷನೆನ್ನುತ್ತಾರೆ.

ನಮ್ಮ ಹೊಸ ಪೀಳಿಗೆಗಳಲ್ಲಿ ಬಹಳ ಜನ ದಕ್ಷರಿದ್ದಾರೆ. ಆದರೆ ಇಲ್ಲಿ ನಾವು ಗಮನಿಸಬೇಕಾಗಿರುವುದು ಜಾಣ್ಮೆ, ವೇಗ ಮತ್ತು ಚಾಕಚಕ್ಯ ಮೂರನ್ನೂ. ಏಕೆಂದರೆ ಒಂದನ್ನು ಬಿಟ್ಟು ಇನ್ನೊಂದನ್ನು ಮಾಡಿದರೆ ದಕ್ಷತೆಯು ಪರಿಪೂರ್ಣವಾಗದು.

ಏಕೆಂದರೆ ಕೆಲವಕ್ಕೆ ವೇಗ ಬೇಕು. ಮತ್ತೆ ಕೆಲವಕ್ಕೆ ಚಾಕಚಕ್ಯ ಬೇಕು. ಇನ್ನು ಹಲವಕ್ಕೆ ಜಾಣ್ಮೆ ಬೇಕು. ಬೆಣ್ಣೆಯಲ್ಲಿ ಕೂದಲು ತೆಗೆದಂತೆ, ಮುಳ್ಳಿನ ಬೇಲಿಯ ಮೇಲೆ ಬಿದ್ದ ಬಟ್ಟೆಯನ್ನು ಆದಷ್ಟೂ ಚಿಕ್ಕ ರಂಧ್ರದೊಂದಿಗೆ ಎಳೆದುಕೊಳ್ಳುವಂತೆ ಎನ್ನುತ್ತಾರೆ.

ಭಗವಂತನು ಸೃಷ್ಟಿ, ಸ್ಥಿತಿ ಮತ್ತು ಲಯಗಳಲ್ಲಿ ಮಾತ್ರವಲ್ಲ, ಯಾರಾದರೂ ಭಕ್ತ ಸಹಾಯ ಬೇಡಿದರೆ ತತ್‌ಕ್ಷಣವೇ ಅಲ್ಲಿ ಅವನು ಪ್ರತ್ಯಕ್ಷನಾಗುತ್ತಾನೆ.

ಉದಾಹರಣೆಗಳು ಹೇರಳವಾಗಿವೆ. ವಾಲಿಯಿಂದ ತೊಂದರೆಗೊಳಗಾಗಿದ್ದ ಸುಗ್ರೀವನ ಸಖ್ಯ ಬೆಳೆಸಿ ಅವನಿಗೆ ಸುಖ ನೀಡಿದ ರಾಮ; ರಾವಣನಿಂದ ಪರಿತ್ಯಕ್ತನಾಗಿ, ಅವನಿಂದ ಅವಮಾನಕ್ಕೊಳಗಾಗಿ ಶರಣಾಗತಿ ಮಾಡಿದ ವಿಭೀಷಣನಿಗೆ ಅಭಯಹಸ್ತ ನೀಡಿದ ರಾಮ; ತಂದೆ ಹಿರಣ್ಯಕಶಿಪುವಿನ ಅಟಾಟೋಪಕ್ಕೆ ಸಿಲುಕಿ ಬೆಂಕಿ, ಸಮುದ್ರ, ಆನೆಯ ತುಳಿತ, ವಿಷಪ್ರಾಶನಗಳಿಗೆ ಒಳಗಾಗಿದ್ದ ಮಗು ಪ್ರಹ್ಲಾದನಿಗೆ ನರಸಿಂಹನಾಗಿ ಬಂದು ಕಾಪಾಡಿ, ಹಿರಣ್ಯಕಶಿಪುವನ್ನು ಉಗುರಿನಿಂದ ಬಗೆದು ಕೊಂದ; ಕುಂತಿಯ ಮಕ್ಕಳಾದ ಪಾಂಡವರು ಕಷ್ಟದಲ್ಲಿದ್ದಾಗಲೆಲ್ಲ ಬಂದು ಕಾಪಾಡಿದವನು ಕೃಷ್ಣ; ಮೊಸಳೆಯ ಬಾಯಿಗೆ ಸಿಕ್ಕಿಕೊಂಡ ಕಾಲನ್ನು ಎಳೆದುಕೊಳ್ಳಲಾಗದೇ 'ಆದಿಮೂಲ' ಎಂದು ಚೀರಿದ ಗಜೇಂದ್ರನನ್ನು ಕಾಪಾಡಿದ ನಾರಾಯಣ; ತನ್ನಿಂದ ಆಯುಧವನ್ನು ಹಿಡಿಸುವೆನೆಂದು ಶಪಥ ಮಾಡಿದ್ದ ಭೀಷ್ಮನ ಪ್ರತಿಜ್ಞೆಯನ್ನು ಪೂರೈಯಿಸಲು, ತಾನು ಆಯುಧ ಹಿಡಿಯುವುದಿಲ್ಲವೆಂದು ಹೇಳಿದ್ದರೂ ರಥಚಕ್ರವನ್ನೇ ಹಿಡಿದ 'ರಥಾಂಗಪಾಣಿ' ಕೃಷ್ಣ; ತಂದೆಯ ಮಡಿಲಲ್ಲಿ ಕುಳಿತುಕೊಳ್ಳುವ ಆಸೆಯಿಂದ ಕಾಡಿಗೆ ನಡೆದ ಧ್ರುವ, ಮಹರ್ಷಿ ನಾರದರ ಮಾತಿನಂತೆ 'ಓಂ ನಮೋ ಭಗವತೇ ವಾಸುದೇವಾಯ' ಎಂದು ಜಪಿಸಿ, ವಾಸುದೇವನನ್ನು ಕರೆಯಿಸಿಕೊಂಡು, ಕೊನೆಗೆ ಆಗಸದಲ್ಲಿ ಶಾಶ್ವತ ನಕ್ಷತ್ರವಾದ; ದುರ್ವಾಸರ ಶಾಪಕ್ಕೆ ಪಾಂಡವರು ತುತ್ತಾಗಲಿ ಎಂದು ಷಡ್ಯಂತ್ರ ಮಾಡಿದ ದುರ್ಯೋಧನನನ್ನು ಬಗ್ಗು ಬಡಿಯಲು, ದ್ರೌಪದಿ ಕರೆದೊಡನೆ ಬಂದು ಅಕ್ಷಯಪಾತ್ರೆಯಲ್ಲಿದ್ದ ಅನ್ನದ ಅಗುಳನ್ನು ತಿಂದು, ದುರ್ವಾಸರು ಆತಿಥ್ಯ ಸ್ವೀಕರಿಸದೇ ಓಡಿಹೋಗುವಂತೆ ಮಾಡಿದ ಕೃಷ್ಣ; ತನ್ನ ಮಾನವನ್ನು ಕಾಪಾಡಿಕೊಳ್ಳಲು ಹೆಣಗಾಡುತ್ತಿದ್ದ ಪಾಂಚಾಲಿಗೆ ವಸ್ತ್ರಪ್ರದಾನ ಮಾಡಿದ ಗೋಪಾಲ; ಮಳೆಯಿಂದ ತನ್ನವರನ್ನು ರಕ್ಷಿಸಲು ಗೋವರ್ಧನ ಗಿರಿಯನ್ನು ಎತ್ತಿದ ಗೋವಿಂದ; ತನ್ನೊಂದಿಗೆ ಪಗಡೆಯಾಡುತ್ತಿದ್ದ ಹಾಥೀರಾಂನನ್ನು ಕಾಪಾಡಲು ಆನೆಯ ರೂಪದಲ್ಲಿ ಬಂದು ಅವನು ತಿನ್ನಬೇಕಿದ್ದ ಕಬ್ಬುಗಳನ್ನು ತಿಂದು ಅವನನ್ನು ರಕ್ಷಿಸಿದ, ಅವನ ಭಕ್ತಿಯನ್ನು ಪ್ರಪಂಚಕ್ಕೆ ತೋರಿಸಿದ ಶ್ರೀನಿವಾಸ... ಇನ್ನೂ ಅನೇಕಾನೇಕ ಭಕ್ತರ ಕಥೆಗಳಿವೆ.

ನಮ್ಮಲ್ಲಿ ಕೂಡ ಅನೇಕ ಹಿರಿಯರು ಬಡವರ ಏಳ್ಗೆಗೆ, ಅಗತ್ಯವಿರುವವರ ಸಹಾಯಕ್ಕೆ ಮುಂದೆ ಬಂದಿರುವ ಉದಾಹರಣೆಗಳಿವೆ.

ಕೆಲವೇ ಕೆಲವು ರಾಜಕಾರಣಿಗಳನ್ನು ನಾವು ಇಂದಿಗೂ ದಕ್ಷರೆಂದು ನೆನೆಯುತ್ತೇವೆ. ಏಕೆಂದರೆ ಅಂತಹವರು **ನ ಭವಿಷ್ಯತಿ** ಆಗಿಬಿಟ್ಟಿದ್ದಾರೆ!

ವಿಕ್ರಮಾದಿತ್ಯನನ್ನು ದಕ್ಷತೆಗೆ ಹೆಸರಾದ ರಾಜನೆನ್ನುತ್ತಾರೆ. ಅವನ ಆಳ್ವಿಕೆಯಲ್ಲಿ ಪ್ರಜೆಗಳು ನೆಮ್ಮದಿಯಾಗಿದ್ದರೆಂಬ ಪ್ರತೀತಿ ಇದೆ.

ಇನ್ನೂ ಅನೇಕ ರಾಜರು ಅತ್ಯಂತ ದಕ್ಷರೆಂದೆನ್ನಿಸಿಕೊಂಡಿದ್ದಾರೆ.

ರಾಜಸ್ಥಾನದ ಮಹಾರಾಣಾ ಪ್ರತಾಪ್, ಚಂದ್ರಗುಪ್ತ ಮೌರ್ಯ, ಸಮುದ್ರಗುಪ್ತ, ಪಂಜಾಬಿನ ರಣಜಿತ್ ಸಿಂಗ್, ಪೃಥ್ವಿರಾಜ್ ಚೌಹಾನ್, ಕನಿಷ್ಕ, ಛತ್ರಪತಿ ಶಿವಾಜಿ, ಬುದ್ಧಧರ್ಮವನ್ನು ಸಾರಿದ ಅಶೋಕ ಮತ್ತು ಚಂದ್ರಗುಪ್ತ 1 – ಇವರುಗಳನ್ನು ಚರಿತ್ರೆಯು ಮಹಾ ದಕ್ಷ ರಾಜರುಗಳೆಂದು ಗುರುತಿಸಿದೆ.

ಇವರೆಲ್ಲರೂ ಅವರ ಪ್ರಜೆಗಳಿಗಾಗಿ ಅನೇಕ ಸತ್ಕಾರ್ಯಗಳನ್ನು ಕೈಗೊಂಡರು. ಅವರಲ್ಲಿ ಸಹಿಷ್ಣುತೆ ಇತ್ತು. ಜನಪ್ರೀತಿ ಇತ್ತು. ಪ್ರಜೆಗಳು ಚೆನ್ನಾಗಿರಲೆಂಬ ಆಶಯ ಅವರಲ್ಲಿತ್ತು. ಭಗವಂತನ ದಕ್ಷಃ ನಾಮದಂತೆ ಇವರು ಜನಪ್ರೀತಿಯನ್ನು ಗಳಿಸಿ, ಅವರ ಹೆಸರನ್ನುಳಿಸಿಕೊಂಡರು.

ಭಗವಂತನು ಧರ್ಮವನ್ನು ಸದಾ ರಕ್ಷಿಸುವ, ಅದಕ್ಕೆ ಚ್ಯುತಿ ಬಾರದಂತೆ ಕಾಪಾಡುವವನು (ಅಚ್ಯುತ). ಅವನ ಭಕ್ತರ ಉದ್ಧಾರಕ್ಕಾಗಿ ಅವರು ಕರೆದ ಕ್ಷಣವೇ ಓಡುವವನು. ಅವನೊಬ್ಬನೇ ಅಲ್ಲ, ಅವನ ಕೈಕೆಳಗಿನ ದೇವತೆಗಳೆಲ್ಲರೂ ಅವನ ಆಜ್ಞೆಯನ್ನು ಶಿರಸಾ ವಹಿಸಿ, ಭಕ್ತರಿಗೆ ಅಭಯ ನೀಡುತ್ತಾರೆ.

ದಕ್ಷ ಎಂದರೆ ಬೇಗನೆ ಬೆಳೆಯುವವನು ಅಥವಾ ಬೇಗನೆ ಕೆಲಸ ಮಾಡುವವನು. ಗಜೇಂದ್ರ ಕೇವಲ ಒಂದು ಪ್ರಾಣಿ. ಅದನ್ನು ಕಾಪಾಡಲು ಬಹಳ ಬೇಗ ಬಂದನೆನ್ನುತ್ತಾರೆ. ಸದಾ ಗರುಡನ ಮೇಲೆ ವೇಗವಾಗಿ ಬರುತ್ತಿದ್ದವನು ಗರುಡನ ವೇಗವು ಈ ಸಮಯದಲ್ಲಿ ಸಾಲದಾಯಿತೆಂದು ಅವನನ್ನೇ ಹೊತ್ತುಕೊಂಡು ಗಜೇಂದ್ರನಿದ್ದ ಕೊಳದ ಬಳಿ ಬಂದನೆನ್ನುತ್ತಾರೆ ದಾರ್ಶನಿಕರು. ಏಕೆಂದರೆ ಗಜೇಂದ್ರನದು ತುರ್ತು ಸ್ಥಿತಿಯಾಗಿತ್ತು.

ಭಗವತ್ಪಾದ ಶಂಕರಾಚಾರ್ಯರು ದಕ್ಷ ಎಂದರೆ ಅಗಾಧತೆ ಉಳ್ಳವನು, ಶಕ್ತಿವಂತ ಮತ್ತು ಬೇಗನೆ ಕೆಲಸ ಮಾಡಿ ಮುಗಿಸುವವನು ಎಂದಿದ್ದಾರೆ.

ಈ ಜಗತ್ತಿಗೆ ವೈಶಿಷ್ಟ್ಯವನ್ನು ಕೊಟ್ಟು, ನಿರ್ಮಿಸಿ ಸಲಹುವ ಕಾರ್ಯಸಮರ್ಥ ಭಗವಂತ ದಕ್ಷಃ.

**ನಂ. ೮೯, 'ಚಿರಸ್ಮಿತ' ಬಸಪ್ಪ ಬಡಾವಣೆ, ಪಟ್ಟಣಗೆರೆ, ವೇರ್‌ಹೌಸ್ ಹಿಂದೆ, ರಾಜರಾಜೇಶ್ವರಿನಗರ, ಬೆಂಗಳೂರು-೫೬೦ ೦೯೮.**

# ಅಮರನಾರೇಯಣ ಶತಕ

■ ನಿರೂಪಣೆ: ನಾರೇಯಣ ದಾಸ



## ತಾತಯ್ಯನವರ ದಾರಿದೀಪ

ಭಕ್ತನಾದವನಿಗೆ ತನ್ನ ಸಾಧನಾ ಪಥದಲ್ಲಿ ಅನೇಕ ಬಗೆಯ ಅನುಮಾನಗಳು ಹುಟ್ಟಿಕೊಳ್ಳುವುದು ಸಹಜ. ತನ್ನ ದಾರಿ ಸರಿಯಾಗಿದೆಯೋ ಇಲ್ಲವೋ, ತಾನು ಅನುಸರಿಸುತ್ತಿರುವ ಭಜನ ಮಾರ್ಗ ಫಲಕಾರಿಯೇ ಅಲ್ಲವೋ, ತನ್ನ ಭಜನೆ ಭಗವಂತನನ್ನು ತಲಪುತ್ತಿದೆಯೋ ಇಲ್ಲವೋ ಮುಂತಾಗಿ ನೂರಾರು ಸಂಶಯಗಳು ಅವನನ್ನು ಮುತ್ತಿಕೊಳ್ಳುವುದರಲ್ಲಿ ಅಚ್ಚರಿಯಿಲ್ಲ. ಅದು ಮಾನವ ಸಹಜ. ಮನಸ್ಸು ಪರಿಪಕ್ವಗೊಳ್ಳುವವರೆಗೆ ಮನೋ ಚಾಂಚಲ್ಯ ತಪ್ಪದು. ಆದರೆ ತಾತಯ್ಯನವರು ಹೇಳುತ್ತಾರೆ ಮನಸ್ಸಿನ ಚಾಂಚಲ್ಯಗಳೆಲ್ಲ ಸವೆದು ಸವೆದು ಸತ್ತು ಹೋದವು. ದೇಹದಲ್ಲಿನ ಸಮಸ್ತ ಇಂದ್ರಿಯಗಳ ಚೇಷ್ಟೆಗಳು ಶಾಂತವಾದವು.



## ಪದ್ಯ-೧೦೦

**ಅನ್ನಪಾನಮು ನಿದ್ರ – ಅತಿ ಸೂಕ್ಷ್ಮೃಮ್ಮೈ ನಿಲಚೆ**
**ಆಚಾರಕ್ರಿಯಲನ್ನಿ – ಅಣಗಿಪೋಯ ।**
**ವೇಡುಕದುಃಖಮುಲ್ – ಯೆಕ್ಕಡ ದಾಗೆನೋ**
**ಮರುಮಾಯಲನ್ನಿ ಮಟ ಮಾಯಮಾಯ ।**
**ಸಂಶಯ ಚಲನಮುಲ್ – ಸಮಶಿ ಸಮಶಿ ಚಚ್ಚೆ**
**ಸರ್ವೇಂದ್ರಿಯಂಬುಲು – ಚಲ್ಲನಾಯ ।**
**ಯೇ ಮಾಟಲಾಡಿನಾ – ನೀ ಮಾಟ ಮರುವನು**
**ತೆಲಿಯದಾಂತರ್ಯಾಮಿ – ಕಾವವಯ್ಯ ॥**
**ಎಂದು ಪೊಯ್ಯದವಿಘ ನಿನ್ನು – ವೆಳ್ಳನಿಯನು ।**
**ಪಟ್ಟಿವುನ್ನಾನು ನೀ ಭಜನ – ಪಟ್ಟುಗಾನು ।**
**ಅಮರನಾರೇಯಣಾಚ್ಯುತ – ಹರಿ ಮುಕುಂದ ।**
**ಕಲುಷಸಂಹಾರ ಕೈವರಪುರವಿಹಾರಾ ॥100॥**

ಶ್ರೀಮದ್ ಭಾಗವತದಲ್ಲಿ ನವ ವಿಧ ಭಕ್ತಿಗಳನ್ನು ಹೆಸರಿಸಲಾಗಿದೆ. ಅವೇ ಮುಂದಿನ ಭಕ್ತಿ ಪರಂಪರೆಗೆ ಸೂತ್ರ ರೂಪದಲ್ಲಿ ತಳಹದಿಯಾಯಿತು. ಆ ಶ್ಲೋಕ ಹೀಗಿದೆ:

**ಶ್ರವಣಮ್ ಕೀರ್ತನಮ್ ವಿಷ್ಣೋಃ ಸ್ಮರಣಮ್ ಪಾದಸೇವನಮ್ ।**
**ಅರ್ಚನಮ್ ವಂದನಮ್ ದಾಸ್ಯಮ್ ಸಖ್ಯಮ್ ಆತ್ಮನಿವೇದನಮ್ ॥**

ನಾರದ ಮಹರ್ಷಿಗಳು ತಮ್ಮ ಭಕ್ತಿಸೂತ್ರಗಳಲ್ಲಿಯೂ ಈ ನವ ವಿಧ ಭಕ್ತಿಗಳನ್ನು ವಿವರಿಸಿದ್ದಾರೆ.

ಭಗವಂತನ ಹೆಸರುಗಳನ್ನು ಮತ್ತು ಅವುಗಳ ಮಹತ್ತ್ವವನ್ನು ಕೇಳುವುದೇ ಶ್ರವಣ ಭಕ್ತಿ.

ಕೀರ್ತನಮ್: ಭಗವಂತನ ವೈಭವವನ್ನು ಹಾಡುವುದು, ಕೀರ್ತಿಸುವುದು, ಭಜಿಸುವುದು.

ಸ್ಮರಣಮ್: ಭಗವಂತನ ನಾಮಸ್ಮರಣೆ.

ಪಾದಸೇವನಮ್: ಭಗವಂತನ ಪಾದಗಳ ಸೇವೆ ಮಾಡುವುದು. ಪಾದಪೂಜೆ ಮಾಡುವುದು.

ಅರ್ಚನಮ್: ಹೊರಗಿನ ಪೂಜಾ ಕೈಂಕರ್ಯಗಳ ಜೊತೆಗೆ ಮಾನಸಿಕವಾಗಿ ಭಗವಂತನನ್ನು ಪೂಜಿಸುವುದು.

ವಂದನಮ್: ಭಗವಂತ ತೋರಿರುವ ಕೃಪಾಕಟಾಕ್ಷಕ್ಕೆ ಅವನಿಗೆ ಸಾಷ್ಟಾಂಗವೆರಗಿ ಕಾಯಾ ವಾಚಾ ಮನಸಾ ನಮಸ್ಕರಿಸುವುದು.

ದಾಸ್ಯಮ್: ಭಗವಂತನನ್ನು ತಂದೆ, ತಾಯಿ, ಸ್ವಾಮಿ ಎಂದು ಎಲ್ಲ ವಿಧಗಳಲ್ಲು ಭಾವಿಸಿಕೊಂಡು ಸೇವಕನಂತೆ ಸೇವೆ ಮಾಡುವುದು.

ಸಖ್ಯಮ್: ಈ ಭಕ್ತಿ ವಿಧದಲ್ಲಿ ಭಗವಂತನನ್ನು ಸ್ನೇಹಿತನಂತೆ ನಿಷ್ಕಪಟವಾಗಿ ಭಾವಿಸಿ ಅವನೊಂದಿಗೆ ಎಲ್ಲ ಸುಖ, ದುಃಖಗಳನ್ನು ಹಂಚಿಕೊಂಡು ಆತ್ಮೀಯನಾಗಿರುವುದು.

ಆತ್ಮ ನಿವೇದನಮ್: ಕಾಯಾ ವಾಚಾ ಮನಸಾ ಭಗವಂತನಿಗೆ

ತನ್ನನ್ನು ಅರ್ಪಿಸಿಕೊಂಡು ಜೀವಿಸುವುದು.

ಇವುಗಳನ್ನು ರಾಮಾಯಣ, ಮಹಾಭಾರತ, ಭಾಗವತದ ಉದಾಹರಣೆಗಳಿಂದ ಪುಷ್ಟೀಕರಿಸಬಹುದು.

ಕೈವಾರ ತಾತಯ್ಯನವರು ಅಮರನಾರೇಯಣ ಶತಕದ ನೂರನೆಯ ಪದ್ಯದಲ್ಲಿ ನವ ವಿಧ ಭಕ್ತಿಗಳಲ್ಲಿನ 'ಕೀರ್ತನಮ್' ಎಂಬ ವಿಧವನ್ನು ಆಯ್ಕೆ ಮಾಡಿಕೊಂಡು ತಾವು ಅದರಲ್ಲಿ ಎಷ್ಟು ತಲ್ಲೀನರೆಂಬುದನ್ನು ಶ್ರುತಪಡಿಸಿದ್ದಾರೆ.

ಇಲ್ಲಿ ಕೈವಾರ ತಾತಯ್ಯನವರು ತಮ್ಮ ಭಕ್ತಿ ಭಾವವನ್ನು ಬಹು ಪ್ರಬಲವಾಗಿ ಪ್ರತಿಪಾದಿಸಿದ್ದಾರೆ. ಅವರು ಪ್ರಸ್ತಾವಿಸುವ ಭಕ್ತಿ ಕೀರ್ತನ ಪ್ರಧಾನವಾದುದು. 'ಪಟ್ಟಿವುನ್ನಾನು ನೀ ಭಜನ– ಪಟ್ಟುಗಾನು' ಎಂಬ ಕೊನೆಯ ಸಾಲಿನ ಮೇಲೆ ಇಡೀ ಪದ್ಯದ ಅರ್ಥ ನಿಂತಿದೆ.

ಭಜನ ಎಂಬುದು ಕೀರ್ತನ ಭಕ್ತಿ ವಿಧದ ವಿಭಾಗಕ್ಕೆ ಸೇರಿರುವಂಥದು. ಭಜನೆ ಎಂಬುದು ಪರಮಾತ್ಮನನ್ನು ಸೇವಿಸಲು ಇರುವ ಒಂದು ಪ್ರಬಲ ಮಾರ್ಗ. ಭಜನೆಯ ಕಾರ್ಯವನ್ನು ದೃಢವಾಗಿ ನಂಬಿ ಸಾಧಿಸಿದರೆ ಯೋಗ ಸಿದ್ಧಿಯ ಸಮಯ ಬರುತ್ತದೆ. ತಾತಯ್ಯನವರು ಈ ಪದ್ಯದಲ್ಲಿ ತಮ್ಮ ಭಕ್ತಿ ಪರವಶತೆಯನ್ನು, ಆ ನಿಟ್ಟಿನಲ್ಲಿ ದೃಢ ಸಂಕಲ್ಪವನ್ನು, ಅಹರ್ನಿಶಿ ದೇವರ ಸ್ಮರಣೆಯಲ್ಲಿ ತೊಡಗಿರುವುದನ್ನು, ಇಂದ್ರಿಯ ನಿಗ್ರಹವನ್ನು ವ್ಯಕ್ತಪಡಿಸುತ್ತಾರೆ. ಅನ್ನಾಹಾರ ಪಾನೀಯಗಳ ಸೇವನೆಯಲ್ಲಿ ನಿರಾಸಕ್ತಿ ಹಾಗೂ ಲೋಕಾಚಾರಗಳಲ್ಲಿ ನಿರ್ಲಿಪ್ತಿ ಉಂಟಾಗಿರುವುದರಲ್ಲಿ ಆಳವಾಗಿ ಇಳಿದಿದ್ದರೆಂಬುದು ವೇದ್ಯವಾಗುತ್ತದೆ.

**ಅನ್ನಪಾನಮು ನಿದ್ರ – ಅತಿ ಸೂಕ್ಷ್ಮಮ್ಮೈ ನಿಲಚೆ**
**ಆಚಾರಕ್ರಿಯಲನ್ನಿ – ಅಣಗಿಪೋಯ ।**
**ವೇಡುಕದುಃಖಮುಲ್ – ಯೆಕ್ಕಡ ದಾಗೆನೋ**
**ಮರುಮಾಯಲನ್ನಿ ಮಟ ಮಾಯಮಾಯ ।**

'ಅನ್ನ ಸೇವನೆ, ಪಾನೀಯ ಸ್ವೀಕಾರ ಮುಂತಾದ ಜೀವಾಧಾರವಾದ ಕ್ರಿಯೆಗಳು ಅತ್ಯಂತ ಕನಿಷ್ಠ ಹಂತಕ್ಕೆ ಹೋಗಿ ಮುಟ್ಟಿತು. ದೇಹ ಪೋಷಣೆಗೆ ಬೇಕಾದಷ್ಟು ಮಾತ್ರ ಸೇವನೆಯಾಗುತ್ತಿದೆ. ತಮ್ಮ ದೈನಂದಿನ ಜೀವನಕ್ಕೆ ಅಗತ್ಯವಾಗಿದ್ದ ಕುಲಾಚಾರ, ವಂಶಾಚಾರ, ಮತಾಚಾರ ಸಂಬಂಧ ಎಲ್ಲ ಕ್ರಿಯೆಗಳು ಅಣಗಿ ಹೋಗಿವೆ. ಲೋಕಾಚಾರದ ಕರ್ಮಗಳೆಲ್ಲ ಬಿಟ್ಟು ಹೋಗಿವೆ. ಬಯಕೆಗಳು, ದುಃಖಗಳು ಎಲ್ಲಿ ಹೋದವೋ ತಿಳಿಯುತ್ತಿಲ್ಲ. ಸುಖ ಸಂಪತ್ತುಗಳು ನೀಡುವ ಸಂತೋಷವಾಗಲೀ ಕಷ್ಟ ದಾರಿದ್ರ್ಯಗಳ ದುಃಖವಾಗಲಿ ಎಲ್ಲಿ ಬಚ್ಚಿಟ್ಟುಕೊಂಡವೋ ನಾನರಿಯೆ. ಮನಸ್ಸನ್ನು ಕಲಷಿತಗೊಳಿಸುವ ಮಾಯಾ ಮೋಹಗಳು, ಕಾಮನೆಗಳು ಮಾಯವಾಗಿಬಿಟ್ಟವೆ. ಇದು ತಾತಯ್ಯನವರು ಅಮರನಾರೇಯಣಸ್ವಾಮಿಯಲ್ಲಿ ಆತ್ಮೀಯವಾಗಿ ಮಾಡಿಕೊಂಡಿರುವ ಆತ್ಮ ನಿವೇದನೆ.

**ಸಂಶಯ ಚಲನಮುಲ್ – ಸಮಸಿ ಸಮಸಿ ಚಚ್ಚೆ**
**ಸರ್ವೇಂದ್ರಿಯಂಬುಲು – ಚಲ್ಲನಾಯ ।**
**ಯೇ ಮಾಟಲಾಡಿನಾ – ನೀ ಮಾಟ ಮರುವನು**
**ತೆಲಿಯದಾಂತರ್ಯಾಮಿ – ಕಾವವಯ್ಯ ॥**

ಭಕ್ತನಾದವನಿಗೆ ತನ್ನ ಸಾಧನಾ ಪಥದಲ್ಲಿ ಅನೇಕ ಬಗೆಯ ಅನುಮಾನಗಳು ಹುಟ್ಟಿಕೊಳ್ಳುವುದು ಸಹಜ. ತನ್ನ ದಾರಿ ಸರಿಯಾಗಿದೆಯೋ ಇಲ್ಲವೋ, ತಾನು ಅನುಸರಿಸುತ್ತಿರುವ ಭಜನ ಮಾರ್ಗ ಫಲಕಾರಿಯೇ ಅಲ್ಲವೋ, ತನ್ನ ಭಜನೆ ಭಗವಂತನನ್ನು ತಲಪುತ್ತಿದೆಯೋ ಇಲ್ಲವೋ ಮುಂತಾಗಿ ನೂರಾರು ಸಂಶಯಗಳು ಅವನನ್ನು ಮುತ್ತಿಕೊಳ್ಳುವುದರಲ್ಲಿ ಅಚ್ಚರಿಯಿಲ್ಲ. ಅದು ಮಾನವ ಸಹಜ. ಮನಸ್ಸು ಪರಿಪಕ್ವಗೊಳ್ಳುವವರೆಗೆ ಮನೋ ಚಾಂಚಲ್ಯ ತಪ್ಪದು. ಆದರೆ ತಾತಯ್ಯನವರು ಹೇಳುತ್ತಾರೆ ಮನಸ್ಸಿನ ಚಾಂಚಲ್ಯಗಳೆಲ್ಲ ಸವೆದು ಸವೆದು ಸತ್ತು ಹೋದವು. ದೇಹದಲ್ಲಿನ ಸಮಸ್ತ ಇಂದ್ರಿಯಗಳ ಚೇಷ್ಟೆಗಳು ಶಾಂತವಾದವು. ಯಾವ ಸಂಗತಿಯನ್ನು ಕುರಿತು ಮಾತನಾಡುತ್ತಿದ್ದರೂ ನಿನ್ನನ್ನು ನಾನು ಮರೆಯುವುದಿಲ್ಲ. ನೀನು ಅಲ್ಲೆಲ್ಲ ಇರುತ್ತೀಯೆ. ಅಂತರ್ಯಾಮಿಯಾದ ಅಮರನಾರೇಯಣಸ್ವಾಮಿ ಇದು ನಿನಗೆ ತಿಳಿಯದೇ? ತಿಳಿದಿರುವ ನೀನು ತ್ವರಿತವಾಗಿ ಬಂದು ನನ್ನನ್ನು ಕಾಪಿಡವಯ್ಯ.

**ಎಂದು ಪೊಯ್ಯದವಿಘ ನಿನ್ನು – ವೆಳ್ಳನಿಯನು ।**
**ಪಟ್ಟಿವುನ್ನಾನು ನೀ ಭಜನ – ಪಟ್ಟುಗಾನು ।**

ಇಲ್ಲಿ ತಾತಯ್ಯನವರು ಪರಮಾತ್ಮನನ್ನು ಭಕ್ತಿಯ ಪಾಶದಿಂದ ಬಂಧಿಸಿ ಪ್ರಶ್ನಿಸುವುದನ್ನು ಕಾಣುತ್ತೇವೆ. ಪರಮಾತ್ಮನೊಂದಿಗೆ ಅವರಿಗೆ ಸಖ್ಯ ಭಕ್ತಿ ಇದೆಯೇನೋ ಎಂಬಂತೆ ಈ ಮಾತುಗಳು ಗೋಚರಿಸುತ್ತವೆ.

ತಮ್ಮ ಭಜನ ಭಕ್ತಿಯನ್ನು ವ್ಯಕ್ತಪಡಿಸಿ ನಿನ್ನ ಭಜನೆಯನ್ನು ಪಟ್ಟು ಹಿಡಿದು ಮಾಡುತ್ತಿರುವೆ. ಅದರಲ್ಲಿ ಸ್ವಲ್ಪವೂ ಸಡಿಲತೆ ಬಂದಿಲ್ಲ. ಅದು ನಿನಗೆ ತಿಳಿಯದ್ದೇನಲ್ಲ. ಹೀಗನ್ನುತ್ತಾ ಸ್ವಾತಂತ್ರ್ಯ ವಹಿಸಿಕೊಂಡು 'ಎಲ್ಲಿಗೆ ಹೋಗುವೆವಯ್ಯಾ ಅಮರನಾರೇಯಣ? ನಾನು ನಿನ್ನನ್ನು ಹೋಗಗೊಡುವೆನೇನು? ಗಟ್ಟಿಯಾಗಿ ಪಟ್ಟು ಹಿಡಿದು ಭಜನೆ ಮಾಡುತ್ತಿರುವ ನನ್ನನ್ನು ಹೇಗೆ ಬಿಟ್ಟು ಹೋಗುತ್ತೀಯೆ' ಎಂದು ಮುಗ್ಧ ಭಕ್ತಿಯನ್ನು ತಾತಯ್ಯನವರು ಇಲ್ಲಿ ತೋರುತ್ತಾರೆ.

**(ಮುಂದುವರಿಯುವುದು)**

---


**ಬ್ಯಾಂಕ್ ಮೂಲಕ ಚಂದಾ ಹಣ ಸಲ್ಲಿಸಲು ಇಚ್ಛಿಸುವವರು ಈ ಎಸ್‌ಬಿ ಅಕೌಂಟ್‌ಗೆ ಕಳುಹಿಸಬಹುದು**

For Subscription - Bank Transfer / RTGS

**Sri Yogi Nareyana Study Centre**

**SB A/c No. 141201011016824**

MSRIT Branch,

**VIJAYA BANK,** Bangalore 560 054

**IFSC Code: VIJB0001412**

**MICR Code: 560029070**


After Transfer please inform to below mentioned Mobile No. 94480 85975

ಯೋಗ ವಾಸಿಷ್ಠ ಒಂದು ಮಹಾನ್ ಅಧ್ಯಾತ್ಮ ಗ್ರಂಥ. ಬೃಹತ್ತಾದುದು ಕೂಡ. ವಸಿಷ್ಠರು ಹಾಗೂ ಶ್ರೀರಾಮನ ನಡುವಿನ ಸಂಭಾಷಣೆಯ ರೂಪದಲ್ಲಿರುವ ಈ ಗ್ರಂಥ ಅಧ್ಯಾತ್ಮ ವಿದ್ಯೆಯ ಪಠ್ಯಪುಸ್ತಕದಂತಿದೆ. ಬಹು ಪ್ರಾಚೀನವಾದ ಈ ಗ್ರಂಥದ ವೈಶಿಷ್ಟ್ಯವಿರುವುದೇ ಗಹನವಾದ ವಿಚಾರವನ್ನು ತಿಳಿಸಲು ಉಪಕಥೆಗಳನ್ನು ಬಳಸಿಕೊಂಡಿರುವುದು. ವಿದುಷಿ ನಂ. ನಾಗಲಕ್ಷ್ಮಿಯವರು ಸರಳ ಭಾಷೆಯಲ್ಲಿ ಅದರಲ್ಲಿನ ಕಥೆಗಳನ್ನು 'ಮಲ್ಲಾರ' ಓದುಗರಿಗಾಗಿ ಪ್ರತಿ ಸಂಚಿಕೆಯಲ್ಲೂ ಪ್ರಸ್ತುತಪಡಿಸುತ್ತಾರೆ.



ಬ್ರಹ್ಮನು ಆಕಾಶವನ್ನೇ ದೇಹವಾಗಿ ಉಳ್ಳವನು. ಅವನು ಮನೋಮಾತ್ರ ಸ್ವರೂಪನು. ಸಂಕಲ್ಪದಿಂದಲೇ ಏನು ಬೇಕಾದರೂ ಆಗುವಂತಹವನು. ಸಂಕಲ್ಪದಿಂದ ಕಲ್ಪಿತನಾದ ಪುರುಷನು ಆಕಾಶದಂತೆ ನಿರಾಕಾರನಾಗಿದ್ದರೂ ಸಂಕಲ್ಪ ಮಾತ್ರದಿಂದ ಇದ್ದೇ ಇರುತ್ತಾನೆ. ಹಾಗಾಗಿ ಪೃಥ್ವಿಯ ಅಂಶಗಳ ಸಂಪರ್ಕವಿಲ್ಲದಿದ್ದರೂ ಸ್ವಯಂಭುವೂ ಭಾಸನಾಗುವವನು. ಚಿತ್ರಗಾರನೊಬ್ಬನ ಮನಸ್ಸಿನಲ್ಲಿ ನಿರ್ದೇಹವಾಗಿ ಮೂಡಿದ ಚಿತ್ರವು ಪ್ರಕಟವಾಗುವಂತೆ, ಚಿದಾಕಾಶದ ನಿರ್ಮಲವಾದ ಮನವೇ ಬ್ರಹ್ಮನಾಗಿ ಗೋಚರನಾಗುವುದು.

ಚಿದ್ವ್ಯೋಮ ಕೇವಲ ಮನಂ ತಮನಾದಿಮಧ್ಯಂ  
ಬ್ರಹ್ಮೇತಿ ಭಾತಿ ನಿಜಚಿತ್ತ್ವವಶಾತ್ ಸ್ವಯಂಭೂಃ ।  
ಆಕಾರವಾನಿವ ಪುಮಾನಿವ ವಸ್ತು ತಸ್ತು  
ವಂಧ್ಯಾ ತನೂಜ ಇವ ತಸ್ಯ ತು ನಾಸ್ತಿ ದೇಹಃ ॥



# ಆಕಾಶಜೋಪಾಖ್ಯಾನ

ಆಕಾಶಜನೆಂಬ ಒಬ್ಬ ಬ್ರಾಹ್ಮಣನಿದ್ದನು. ಆತನು ಪರಮ ಧಾರ್ಮಿಕನಾಗಿದ್ದು ಸದಾಕಾಲ ಧ್ಯಾನದಲ್ಲಿಯೇ ಇರುತ್ತಿದ್ದನು. ಯಾವಾಗಲೂ' ಪರಹಿತವನ್ನೇ ಬಯಸುತ್ತಿದ್ದು ಅಹಿಂಸಾ ಧರ್ಮವನ್ನು ಆಚರಿಸುತ್ತಿದ್ದನು. ಹೀಗೆ ಅವನು ತನ್ನ ಜೀವನಶೈಲಿಯಲ್ಲಿ ಪಾಪಕಾರ್ಯಗಳಿರಲಿ, ಅಂತಹ ಚಿಂತನೆಯನ್ನೂ ಮಾಡದೇ ಮನಸ್ಸಿನಲ್ಲಿ ಸದಾಕಾಲ ಒಳ್ಳೆಯ ವಿಚಾರಗಳನ್ನೇ ಮಾಡುತ್ತಿದ್ದು ಶಾಂತಚಿತ್ತನಾಗಿಯೇ ಇರುತ್ತಿದ್ದನು. ಹೀಗೆ ಬಹುಕಾಲ ಆಕಾಶಜನು ಜೀವಿಸಿರಬೇಕಾದರೆ ಮೃತ್ಯುವು ಅವನನ್ನು ಕುರಿತು ಚಿಂತಿಸಿತು, "ನಾನು ಎಲ್ಲ ಜೀವಿಗಳನ್ನೂ ಒಂದು ಕಡೆಯಿಂದ ತಿಂದುಕೊಂಡು ಬರುವೆನು, ನಾನು ಎಂದಿಗೂ ನಾಶವಾಗುವವನಲ್ಲ. ಆದರೂ ಈ ಆಕಾಶಜನೆಂಬ ಬ್ರಾಹ್ಮಣನನ್ನು ಏಕೆ ತಿನ್ನಲಾಗುತ್ತಿಲ್ಲ? ಇವನನ್ನು ಯಾವ ರೀತಿಯಲ್ಲಿಯೂ ಘಾಸಿಗೊಳಿಸಲಾರೆನಲ್ಲ? ಬಂಡೆಯ ಮೇಲೆ ಕತ್ತಿಯಿಂದ ಹೊಡೆದಾಗ ಏನೂ ಆಗದಿರುವಂತೆ, ಇವನನ್ನು ನಾನು ಏನೂ ಮಾಡಲಾರೆನಲ್ಲ?"

ಹೀಗೆ ಚಿಂತಿಸುತ್ತಾ ಮೃತ್ಯುವು ಅವನನ್ನು ಕೊಲ್ಲಬೇಕೆಂದು ಬಳಿಗೆ ಬಂದಿತು. ಅವನ ಮನೆಯನ್ನು ಪ್ರವೇಶಿಸಿದಾಗ ಮೃತ್ಯುವನ್ನು ಪ್ರಳಯಾಗ್ನಿಗೆ ಸಮನಾದ ಅಗ್ನಿಯು ಸುಡಲಾರಂಭಿಸಿತು. ಆದರೂ ಬಹು ಪ್ರಯತ್ನಪಟ್ಟು ಅಗ್ನಿಜ್ವಾಲೆಯನ್ನು ಭೇದಿಸಿಕೊಂಡು ಒಳಗೆ ನುಗ್ಗಿ ಆ ಬ್ರಾಹ್ಮಣನನ್ನು ಕಂಡು ಅವನನ್ನು ಹಿಡಿದುಕೊಳ್ಳಲು ಕೈ ನೀಡಿತು. ಎದುರಿಗೇ ಕಾಣುತ್ತಿದ್ದರೂ ತಾನೆಷ್ಟು ಶಕ್ತಿಶಾಲಿಯಾಗಿದ್ದರೂ ಅವನನ್ನು ಹಿಡಿಯಲು ಸಾಧ್ಯವಾಗಲೇ ಇಲ್ಲ. ಆಗ ಅದು ತನ್ನ ಸಂಶಯವನ್ನು ಪರಿಹರಿಸಬಲ್ಲ ಯಮರಾಜನ ಬಳಿಗೆ ಹೋಗಿ, "ಎಲೈ ಸ್ವಾಮಿಯೇ, ನಾನು ಆಕಾಶಜನನ್ನು ತಿನ್ನಲು ಸಾಧ್ಯವಾಗುತ್ತಿಲ್ಲ. ಅಷ್ಟೇ ಅಲ್ಲ ಅವನನ್ನು ಹಿಡಿಯಲೂ ಆಗುತ್ತಿಲ್ಲ. ಅದೇನು ಕಾರಣ?" ಎಂದು ಕೇಳಿತು. ಆಗ ಯಮನು ಹೇಳಿದನು, "ಮೃತ್ಯುದೇವತೆಯೆ, ನೀನೊಬ್ಬನೇ ಯಾರನ್ನೂ ಸಾಯಿಸಲಾರೆ. ಯಾರು ಸಾಯಬೇಕೋ ಅವನನ್ನು ಕೊಲ್ಲುವುದು ಅವನವನ ಕರ್ಮಗಳೇ ಹೊರತು ಇನ್ನು ಯಾವುದೂ ಅಲ್ಲ. ಆದರಿಂದ, ನೀನು ಕೊಲ್ಲಬೇಕೆಂದಿರುವ ಆ ಬ್ರಾಹ್ಮಣನ ಕರ್ಮಗಳನ್ನು ಪ್ರಯತ್ನಪಟ್ಟು ಹುಡುಕು. ಅವು ನಿನಗೆ ಪತ್ತೆಯಾದರೆ, ನಿನಗೆ ಸಹಾಯ ಮಾಡುವಂತಾದರೆ ಆಗ ನೀನು ಅವನನ್ನು ತಿನ್ನುವೆ."

ಮೃತ್ಯುವು ಆಕಾಶಜನು ಮಾಡಿರಬಹುದಾದ ಕರ್ಮಗಳನ್ನು ಹುಡುಕುತ್ತ ಹೊರಟಿತು. ದೇಶಗಳನ್ನು, ದಿಗಂತಗಳನ್ನು,

ಸರೋವರಗಳನ್ನು, ನದಿಗಳನ್ನು, ಅರಣ್ಯ ಪ್ರದೇಶಗಳನ್ನು ಬೆಟ್ಟ, ಪರ್ವತಗಳನ್ನು, ಸಮುದ್ರ ತೀರಗಳನ್ನು, ಅಷ್ಟೇ ಅಲ್ಲ, ದ್ವೀಪ ದ್ವೀಪಾಂತರಗಳನ್ನು, ನಗರ, ಪಟ್ಟಣ, ಗ್ರಾಮ, ರಾಷ್ಟ್ರಗಳನ್ನು, ದುರ್ಗಮ ಸ್ಥಳಗಳನ್ನು, ಭೂಮಂಡಲವೆಲ್ಲವನ್ನು ತಿರುಗಿದರೂ ಎಲ್ಲಿಯೂ ಆ ಆಕಾಶಜನ ಕರ್ಮಗಳನ್ನು ಕಾಣಲಾಗಲೇ ಇಲ್ಲ. ಆಗ ಮತ್ತೆ ಯಮನ ಬಳಿಗೆ ಬಂದು ಆತನು ಎಲ್ಲವನ್ನೂ ಬಲ್ಲ ಧರ್ಮದೇವತೆಯಾದುದರಿಂದ ತನ್ನ ಸಂಶಯವನ್ನು ಪರಿಹರಿಸಬಲ್ಲವನು ಅವನೊಬ್ಬನೇ ಎಂಬ ದೃಢ ವಿಶ್ವಾಸದಿಂದ ಕೇಳಿತು, "ಎಲೈ ಪ್ರಭುವೇ, ಆಕಾಶಜನ ಕರ್ಮಗಳು ಎಲ್ಲಿವೆಯೆಂಬುದನ್ನು ದಯವಿಟ್ಟು ತಿಳಿಸು." ಆಗ ಧರ್ಮರಾಜನಾದ ಯಮದೇವನು ಚೆನ್ನಾಗಿ ಯೋಚನೆ ಮಾಡಿ ಹೇಳಿದನು, "ಈ ಆಕಾಶಜನು ಪರಿಶುದ್ಧವಾದ ಆಕಾಶದಿಂದಲೇ ಹುಟ್ಟಿದವನು. ಅದರಿಂದ ಅವನೂ ಆಕಾಶದಂತೆಯೇ ನಿರ್ಮಲವಾಗಿರುವವನು. ಅವನು ಹುಟ್ಟುವುದಕ್ಕೆ ಕಾರಣವಾಗುವ ಕರ್ಮಗಳು ಯಾವುವೂ ಇಲ್ಲ. ಬಂಜೆಯ ಮಗನಿಗೆ, ಹುಟ್ಟದೇ ಇರುವ ಮಗುವಿಗೆ ಹೇಗೆ ಯಾವ ಆಕಾರವೂ ಇರುವುದಿಲ್ಲವೋ ಹಾಗೆ ಈ ಆಕಾಶಜನಿಗೆ ಪ್ರಾಚೀನ ಕರ್ಮವು ಯಾವುದೂ ಇಲ್ಲ. ಆಕಾಶದಲ್ಲಿ ಹೇಗೆ ದೊಡ್ಡ ಮರವು ಇರಲಾರದೋ ಹಾಗೆಯೇ ಇವನಿಗೆ ಪೂರ್ವದ ಕರ್ಮವಿಲ್ಲ. ಕರ್ಮವೇ ಇಲ್ಲದಿರುವುದರಿಂದ ಇವನೂ ಆಕಾಶವೇ ಆಗಿದ್ದಾನೆ. ಪೂರ್ವಕರ್ಮಗಳೇ ಇಲ್ಲವಾಗಿರುವುದರಿಂದ ಇವನ ಚಿತ್ತವು ಈಗಲೂ ಚಂಚಲವಾಗುವುದೇ ಇಲ್ಲ. ಕೆಟ್ಟ ಆಲೋಚನೆಗಳನ್ನೇ ಮಾಡುವುದಿಲ್ಲ. ಹಾಗಾಗಿ ನೀನು ತಿನ್ನಲು ಸಹಾಯ ಮಾಡುವ ಕರ್ಮ ಸಂಚಯವಾಗಲೇ ಇಲ್ಲ. ಇವನೂ ಆಕಾಶಕೋಶಾತ್ಮನಾಗಿ, ನಿರ್ಮಲವಾದ ಆಕಾಶರೂಪನೇ ಆಗಿ ಪರಬ್ರಹ್ಮನಲ್ಲಿಯೇ ಸದಾ ಲೀನವಾಗಿರುತ್ತಾನೆ. ಇವನ ಜನನಕ್ಕೆ ಕರ್ಮ ಕಾರಣವೆಂಬುದೇನೂ ಇಲ್ಲ. ಹಿಂದಿನ ಕರ್ಮವೂ ಇಲ್ಲ, ಇಂದು ಕೂಡ ಸದಾ ಧರ್ಮಪರವಾಗಿಯೇ ಚಿಂತಿಸುತ್ತಿದ್ದು, ಕರ್ಮಗಳ ಕಡೆಗೆ ಬಾಗುತ್ತಲೂ ಇಲ್ಲ. ಆದ್ದರಿಂದ, ಇವನು ಕೇವಲ ವಿಜ್ಞಾನಾಕಾಶಮಾತ್ರವಾಗಿದ್ದಾನೆ. ಇವನಿಗೆ 'ಕರ್ಮ' ಎಂಬುದರ ಪರಿಚಯವೇ ಇಲ್ಲ.


ಇನ್ನು ಇವನನ್ನು ಕೊಲ್ಲಲು ನೀನು ಬಯಸುತ್ತಿದ್ದೀಯಲ್ಲ, ಅಂದರೆ ಇವನಿಗೆ ಪ್ರಾಣ ಅಥವಾ ಜೀವ ಇರುವುದನ್ನು ಕಿತ್ತುಕೊಂಡು ಹೋಗಲು ನೀನು ಬಯಸುತ್ತಿದ್ದೀಯೆ. ಇವನಲ್ಲಿ ಪ್ರಾಣ ವ್ಯಾಪಾರಾದಿಗಳು ನಡೆಯುವಂತೆ ನಮಗೆ ಕಾಣುತ್ತಿದೆಯಲ್ಲ, ಎಂದರೆ ನಮ್ಮ ಕಣ್ಣಿಗೆ ಮಾತ್ರ ಹಾಗೆ ಕಾಣುತ್ತಿರುವುದಲ್ಲದೆ, ಇವನಿಗೆ ಆ 'ಕರ್ಮ' ಎಂಬ ಭಾವನೆಯಾಗಲೀ, ಬುದ್ಧಿಯಾಗಲೀ ಇಲ್ಲ. ಜ್ಞಾನ ಸ್ವರೂಪಿಯಾದ ಪುತ್ಥಳಿಯೊಂದು ಜ್ಞಾನಸ್ತಂಭದಲ್ಲಿಯೇ ಇದ್ದುಕೊಂಡು ತನಗೊಂದು ಪ್ರತ್ಯೇಕವಾದ ವ್ಯಕ್ತಿತ್ವವಿದೆಯೆಂದುಕೊಂಡಂತೆ. ಕೆತ್ತದೇ ಇರುವ ಬೊಂಬೆಯು ಕಂಬದಲ್ಲಿಯೇ ಇರುವಂತೆ ಇವನು ವಾಸ್ತವವಾಗಿ ಆಕಾಶವೇ ಆಗಿಹೋಗಿದ್ದಾನೆ.

ಅಂದರೆ, ನೀರಿನಲ್ಲಿ ದ್ರವತ್ವವೂ ಆಕಾಶದಲ್ಲಿ ಚಾಂಚಲ್ಯವೂ ವಾಯುವಿನಲ್ಲಿ ಅಲೆಯುವಿಕೆಯೂ ಇರುವಂತೆ ಇವನೂ ಪರಬ್ರಹ್ಮದಲ್ಲಿ ಸೇರಿಕೊಂಡಿದ್ದಾನೆ. ಇವನಿಗೆ ಈ ಜನ್ಮದ ಕರ್ಮಗಳೂ ಇಲ್ಲ; ಪೂರ್ವಜನ್ಮದ ಸಂಚಿತಗಳೂ ಇಲ್ಲ. ಅದರಿಂದ ಇವನು ಸಂಸಾರದಲ್ಲಿ ಮುಳುಗಿಲ್ಲ. ಈತನು ಸ್ವಯಂಭೂ. ಇವನು ಹಿಂದೆ ಕರ್ಮ ಮಾಡಲಿಲ್ಲ. ಈಗ ಮಾಡುವುದಿಲ್ಲ. ಇಂತಹವನನ್ನು ನೀನು ಹೇಗೆ ಆಕ್ರಮಿಸುತ್ತೀಯೆ? ಪೃಥ್ವೀ ಮುಂತಾದ ಭೂತಗಳಿಂದ ಸೇರಿದ ಈ ದೇಹವೇ ನಾನು ಎಂದು ಯಾರು ಭಾವಿಸುತ್ತಾರೆಯೋ ಅವನು ಪಾರ್ಥಿವ ರೂಪ (ಅಂದರೆ ನಶ್ವರವಾದ)ವನ್ನು ಹೊಂದಿರುತ್ತಾನೆ. ಆ ಭಾವನೆಗೆ ಮರಣವೆಂದು ಹೆಸರು. ಅಂತಹವನನ್ನು ಮಾತ್ರ ನೀನು ಹಿಡಿಯಬಹುದು.

ಆದರೆ, ಈ ಬ್ರಾಹ್ಮಣನು ಪೃಥ್ವೀ ಮೊದಲಾದವುಗಳ ಭೌತ ಪ್ರಪಂಚಕ್ಕೆ ಸಂಬಂಧಿಸಿದ ವಿಚಾರಗಳನ್ನು ಕುರಿತು ಚಿಂತನೆಯನ್ನೇ ಮಾಡದವನಾದ್ದರಿಂದ ಈ ಬ್ರಾಹ್ಮಣನಿಗೆ ರೂಪವೂ ಇಲ್ಲ. ಹಗ್ಗವು ಎಷ್ಟೇ ಗಟ್ಟಿಯಾಗಿದ್ದರೂ ಆಕಾಶವನ್ನು ಹಿಡಿದು ಕಟ್ಟಲಾಗುತ್ತದೆಯೆ? ಹಾಗೆಯೇ ಇವನೂ ಹಿಡಿತಕ್ಕೆ ಸಿಕ್ಕುವುದಿಲ್ಲ." ಮೃತ್ಯುವು ಮತ್ತೆ ಕೇಳಿತು, "ಹಾಗಾದರೆ, ಶೂನ್ಯದಿಂದ ಹುಟ್ಟುವುದು ಹೇಗೆ? ಪೃಥ್ವೀ ಮುಂತಾದವು ಇರುವುದು ಹೇಗೆ? ಅಥವಾ ಅವು ಇಲ್ಲದಿರುವುದಾದರೂ ಹೇಗೆ?" ಯಮನು ಹೇಳಿದನು, "ಈ ಆಕಾಶಜನು ಯಾವಾಗಲೂ ಹುಟ್ಟಿದವನೇ ಅಲ್ಲ. ಅವನು ಯಾವಾಗಲೂ ಇಲ್ಲದೆಯೂ ಇಲ್ಲ. ಇವನ ಇರುವಿಕೆ ಯಾವಾಗಲೂ ಇರುತ್ತದೆ. ಮತ್ತು ಮಹಾ ಪ್ರಳಯವು ಜಗತ್ತನ್ನೆಲ್ಲ ಆವರಿಸಿದಾಗಲೂ, ಇವನು ಮಾತ್ರ ಒಬ್ಬನೇ ಇರುತ್ತಾನೆ. ಈತ ಅಜರನೂ ಅನಂತನೂ ಬ್ರಹ್ಮನೂ ಆಗಿದ್ದಾನೆ. ಇವನು ಸೃಷ್ಟಿಯ ಮೊಟ್ಟಮೊದಲಲ್ಲಿ ಆಕಾಶದ ನಡುವೆ, ನಿರ್ವಿಕಲ್ಪನಾಗಿ, ಚಿದಾಕಾಶರೂಪನಾಗಿ ಮೂಡಿದವನು ಈಗಲೂ ಇದ್ದಾನೆ. ಇವನಿಗೆ ದೇಹವೇ ಇಲ್ಲ. ಅಂದ ಮೇಲೆ ದೇಹ ಕಾರಣದಿಂದ ಹುಟ್ಟುವ ಕರ್ಮಗಳೂ ಇಲ್ಲ. ವಾಸನೆಗಳಿಲ್ಲ. ಅಂದರೆ ಪ್ರಾಪಂಚಿಕವಾದ, ಭೌತ ಜಗತ್ತಿಗೆ ಸಂಬಂಧಿಸಿದ ಯಾವ ಆಮಿಷಗಳೂ ಇವನನ್ನು ಬಾಧಿಸುವುದಿಲ್ಲ. ಇಂತಹ ಇವನು ಶುದ್ಧರೂಪನು, ಸರ್ವತ್ರವೂ ವ್ಯಾಪಿಸಿರುವವನು, ವ್ಯೋಮರೂಪದಲ್ಲಿರುವವನು, ಚಿದಾಕಾಶದಲ್ಲಿ ಯಾವ ಯಾವ ಭಾವವು ತೋರುವುದೋ ಅದೆಲ್ಲವೂ ಇವನೇ ಆಗಿರುತ್ತಾನೆ. ಇಂತಹವನಲ್ಲಿ ಪೃಥ್ವಿಗೆ ಸಂಬಂಧಿಸಿದ ಅಂಶಗಳು ಹೇಗೆ ಬರಲು ಸಾಧ್ಯ? ಅಂತಹ ಪರಿಣಾಮಗಳನ್ನು ಹೇಗೆ ಕಾಣಲಾಗುತ್ತದೆ? ಅದರಿಂದ ಇವನನ್ನು ಹಿಡಿಯುವುದಕ್ಕೆ ನೀನು ಪ್ರಯತ್ನಪಡಬೇಡ." ಈ ಮಾತುಗಳನ್ನು ಕೇಳಿದ ಮೇಲೆ ಮೃತ್ಯುವು ಆಕಾಶಜನೆಂಬ ಬ್ರಾಹ್ಮಣನು ಮತ್ತಾರೂ ಅಲ್ಲ, ಆತನು ಸ್ವಯಂಭುವೂ ಅಜನೂ ಏಕಾತ್ಮನೂ ಆದ ಪಿತಾಮಹನೇ ಆಗಿದ್ದಾನೆ. ಅವನನ್ನು ತಾನು ಹೇಗೆ ಕೊಲ್ಲಲು ಸಾಧ್ಯವೆಂಬ ಸತ್ಯವನ್ನು ಅರಿತವನಾಗಿ ತನ್ನ ಮನೆಗೆ ಹಿಂತಿರುಗಿದನು.

**(ಮುಂದುವರಿಯುವುದು)**

**ನಂ. ೨೫೧, ೧೨ನೇ 'ಬಿ' ಕ್ರಾಸ್, ೧ನೇ 'ಬಿ' ಮುಖ್ಯರಸ್ತೆ, ಮಹಾಲಕ್ಷ್ಮಿಪುರಂ, ಬೆಂಗಳೂರು–೫೬೦ ೦೮೬.**



## ಪ್ರಾಚೀನ ಭಾರತದ ಮಹರ್ಷಿಗಳು–೧೪

# ಯಾಜ್ಞವಲ್ಕ್ಯ

ಉಪನಿಷತ್ತಿನ ಸಂಪ್ರದಾಯಪ್ರವರ್ತಕರಲ್ಲಿ ಯಾಜ್ಞವಲ್ಕ್ಯರ ಹೆಸರು ಅತಿ ಪ್ರಸಿದ್ಧವಾದುದು. ಇವರ ತಂದೆ ಸುಪ್ರಸಿದ್ಧ ವೈದಿಕರೂ ಕರ್ಮಕಾಂಡನಿರತರೂ ಆದ ದೇವರಾತರು. ಇವರ ತಾಯಿಯ ಹೆಸರು ಹಲವು ಬಗೆಗಳಲ್ಲಿ ಉಕ್ತವಾಗಿದೆ: ಮಹರ್ಷಿ ವೈಶಂಪಾಯನರ ಸೋದರಿಯಾದ ಸುನಂದೆಯು ಇವರ ತಾಯಿಯೆಂದು ಒಂದು ಕಡೆ ಹೇಳಿದರೆ, ದೇವ್ರುಡುರವರು ಆಕೆಯನ್ನು ಆಲಂಬನೀದೇವಿಯೆಂದು ಕರೆದಿದ್ದಾರೆ. ತಂದೆಯ ಹೆಸರು ಬ್ರಹ್ಮರಾತರೆಂದೂ ಕೆಲವರು ಹೇಳುತ್ತಾರೆ.



ಬಾಲಕ ಯಾಜ್ಞವಲ್ಕ್ಯರು ಅಪ್ರತಿಮ ಮೇಧಾಶಕ್ತಿಯುಳ್ಳವರಾಗಿದ್ದರು. ತಂದೆಯಿಂದಲೇ ವೇದವಿದ್ಯೆಯನ್ನು ಕಲಿತಿದ್ದ ಇವರಿಗೆ ಬಾಷ್ಕಲಮಹರ್ಷಿಗಳಿಂದ ಋಗ್ವೇದಪಾಠವೂ ಜೈಮಿನಿಗಳಿಂದ ಸಾಮವೇದವೂ ಆರುಣಿಯವರಿಂದ ಅಥರ್ವಣ ಪಾಠವೂ ಆಗಿತ್ತೆಂದು ಹೇಳುತ್ತಾರೆ. ಯಜುರ್ವೇದದ ಅಧ್ಯಯನಕ್ಕಾಗಿ ಅವರು ಮಹರ್ಷಿ ವೈಶಂಪಾಯನರ ಆಶ್ರಮದಲ್ಲಿದ್ದರು.



ಡಾ. ಎಸ್. ಹೇಮಲತಾ.

ಒಂದು ಸಲ ಮೇರುಪರ್ವತದ ತಪ್ಪಲಿನಲ್ಲಿ ಎಲ್ಲ ಗುರುಕುಲಗಳ ಕುಲಪತಿಗಳ ಸಭೆಯೊಂದು ಆಯೋಜಿತವಾಗಿತ್ತು. ಈ ಸಭೆಗೆ ಬಾರದವರಿಗೆ ಬ್ರಹ್ಮಹತ್ಯಾದೋಷ ಉಂಟಾಗುವುದೆಂದು ತೀರ್ಮಾನಿಸಲಾಗಿತ್ತು. ಸಭೆಯ ದಿನದಂದು ವೈಶಂಪಾಯನರ ತಂದೆಯ ವಾರ್ಷಿಕಶ್ರಾದ್ಧವಿದ್ದಕಾರಣ ಅವರಿಗೆ ಸಭೆಯಲ್ಲಿ ಪಾಲ್ಗೊಳ್ಳಲು ಸಾಧ್ಯವಾಗಲಿಲ್ಲ. ಇದರಿಂದಾಗಿ ಉಂಟಾದ ಬ್ರಹ್ಮಹತ್ಯಾದೋಷದ ಪರಿಹಾರಾರ್ಥವಾಗಿ ಅವರು ಕಠಿಣವಾದ ಕರ್ಮಗಳನ್ನು ಆಚರಿಸಬೇಕಾಯಿತು. ವೃದ್ಧರಾಗಿದ್ದ ಅವರು ತಾವೇ ಎಲ್ಲವನ್ನೂ ಮಾಡಲು ಸಾಧ್ಯವಾಗದೆಂದು ಭಾವಿಸಿ, ಶಿಷ್ಯರನ್ನೆಲ್ಲ ಕರೆದು, "ನೀವೆಲ್ಲ ಸಪ್ತದಿನ ಪರ್ಯಂತ ಸತತವಾಗಿ ಕರ್ಮಗಳನ್ನು ಮಾಡಿ, ನನ್ನನ್ನು ಬ್ರಹ್ಮಹತ್ಯಾದೋಷದಿಂದ ಮುಕ್ತರಾಗಿಸಿ" ಎಂದು ಆಜ್ಞೆ ಮಾಡಿದರು. ಶಿಷ್ಯರಲ್ಲಿ ಒಬ್ಬರಾಗಿದ್ದ ಯಾಜ್ಞವಲ್ಕ್ಯರು, "ಇವರೆಲ್ಲರ ಬದಲಾಗಿ ನಾನೊಬ್ಬನೇ ತಪಸ್ಸು ಮಾಡಿ ನಿಮ್ಮನ್ನು ದೋಷಮುಕ್ತರನ್ನಾಗಿ ಮಾಡಬಲ್ಲೆ" ಎಂದು ಆತ್ಮವಿಶ್ವಾಸದಿಂದ ಹೇಳಿದರು. ಆದರೆ ಗುರುಗಳಿಗೆ ಇದು ಅಹಂಕಾರದ ಪರಮಾವಧಿಯೆನಿಸಿತು. ಕೂಡಲೇ ಕಠಿಣವಾಗಿ, "ನಿನಗೆ ಬೋಧಿಸಿದ ಎಲ್ಲ ವಿದ್ಯೆಗಳನ್ನೂ ಹಿಂತಿರುಗಿಸಿ ಇಲ್ಲಿಂದ ಹೊರಟುಹೋಗು" ಎಂದು ಆಜ್ಞಾಪಿಸಿದರು. ಯಾಜ್ಞವಲ್ಕ್ಯರು ಅಂತೆಯೇ ಅವರು ಕಲಿಸಿದ ಕೃಷ್ಣಯಜುರ್ವೇದವನ್ನು ಅಲ್ಲಿಯೇ ಬಿಟ್ಟು, ತಂದೆಯ ಆಶ್ರಮಕ್ಕೆ ಹಿಂದಿರುಗಿ ಬಂದರು.

ತಂದೆಯವರದು ಕರ್ಮಪ್ರಧಾನವಾದ ಯಜುರ್ವೇದವೇ ಆಗಿತ್ತು. ಅದರ ಅಧ್ಯಯನವಿಲ್ಲದೆ ಕರ್ಮಗಳಲ್ಲಿ ಭಾಗವಹಿಸುವಂತಿಲ್ಲ. ಅಲ್ಲದೆ ಅದುವರೆಗೆ ಇದ್ದ ಕೃಷ್ಣಯಜುರ್ವೇದವು ಮಂತ್ರ–ಬ್ರಾಹ್ಮಣಗಳ ಮಿಶ್ರಣವಾಗಿದ್ದು, ಹೆಚ್ಚು ಸ್ಫುಟವಾಗಿರಲಿಲ್ಲ. ಈಗ ಯಾಜ್ಞವಲ್ಕ್ಯರು ತಮ್ಮದೇ ಆದ ವೇದಶಾಖೆಯನ್ನು ಆರಂಭಿಸಬೇಕೆಂದು ತೀರ್ಮಾನಿಸಿದರು. ಅದಕ್ಕಾಗಿ ಸೂರ್ಯನನ್ನು ಕುರಿತು ದೀರ್ಘ ತಪಸ್ಸನ್ನು ಮಾಡಿದರು. ಆಗ ಸೂರ್ಯನು ಕುದುರೆಯ ರೂಪದಲ್ಲಿ ಕಾಣಿಸಿಕೊಂಡು ಯಾಜ್ಞವಲ್ಕ್ಯರಿಗೆ ಈ ವೇದಭಾಗವನ್ನು ಅನುಗ್ರಹಿಸಿದನು. ಇದೇ ಮುಂದೆ 'ಶುಕ್ಲಯಜುರ್ವೇದ'ವೆಂದೂ 'ವಾಜಸನೇಯೀಸಂಹಿತೆ' ಎಂದೂ ಪ್ರಸಿದ್ಧವಾಯಿತು. ಇದನ್ನು ಯಾಜ್ಞವಲ್ಕ್ಯರು ತಮ್ಮ ಶಿಷ್ಯರಿಗೆ ಬೋಧಿಸಿದರು. ಇದರಲ್ಲಿ ಹದಿನೈದು ವಿಭಾಗಗಳಿದ್ದುವೆಂದು ಹೇಳುತ್ತಾರೆ. ಈಗ ಲಭ್ಯವಿರುವುದು ಕಾಣ್ವ ಮತ್ತು ಮಾಧ್ಯಂದಿನವೆಂಬ ಎರಡು ಶಾಖೆಗಳು ಮಾತ್ರ. ಇದರ ಒಂದು ಭಾಗವೇ 'ಈಶಾವಾಸ್ಯ' ಎಂಬ ಪ್ರಧಾನವಾದ ಉಪನಿಷತ್ತು. ಕಾಣ್ವಶಾಖೆಗೆ ಅನೇಕರು ಟೀಕೆಗಳನ್ನು ರಚಿಸಿದ್ದಾರೆ. ಇವರಲ್ಲಿ ಸಾಯಣ, ಆನಂದಬೋಧ, ಅನಂತಾಚಾರ್ಯ ಮುಂತಾದವರು ಪ್ರಮುಖರು. ಮಾಧ್ಯಂದಿನ ಶಾಖೆಗೆ ಶೌನಕ, ಹರಿಸ್ವಾಮಿ ಮತ್ತು ಮಹೀಧರರ ವ್ಯಾಖ್ಯಾನಗಳಿವೆ. ಶುಕ್ಲಯಜುರ್ವೇದಕ್ಕೆ ಇರುವುದು ಒಂದೇ ಬ್ರಾಹ್ಮಣ. ಇದು ನೂರು ಅಧ್ಯಾಯಗಳನ್ನೊಳಗೊಂಡು 'ಶತಪಥ ಬ್ರಾಹ್ಮಣ'ವೆಂದು ಪ್ರಸಿದ್ಧವಾಗಿದೆ. ಇದರ ಕೊನೆಯ ಭಾಗವೇ ಪ್ರಖ್ಯಾತ ಬೃಹದಾರಣ್ಯಕ ಉಪನಿಷತ್ತು. ಇಂತಹ ಅತ್ಯಪೂರ್ವ ಕೊಡುಗೆಯನ್ನು ವೈದಿಕ ಸಾಮ್ರಾಜ್ಯಕ್ಕೆ ನೀಡಿದವರು, ಯಾಜ್ಞವಲ್ಕ್ಯರು.



ಯಾಜ್ಞವಲ್ಕ್ಯರೊಡನೆ ಬ್ರಹ್ಮನಿಷ್ಠೆ ಮೈತ್ರೇಯಿ ಮತ್ತು ಗಾರ್ಗಿ

ಮಿಥಿಲಾನಗರ ಯಾಜ್ಞವಲ್ಕ್ಯರ ವಾಸಸ್ಥಾನವಾಗಿತ್ತು. ಆಗ ಮಿಥಿಲೆಯು ವಿದೇಹರಾಜ್ಯದ ರಾಜಧಾನಿ. ಅದರ ಅರಸ ಬ್ರಹ್ಮಜ್ಞಾನಿಯೆನಿಸಿದ ಜನಕ. ಆತನಲ್ಲಿ ದೊಡ್ಡ ದೊಡ್ಡ ಪಂಡಿತರು, ಋಷಿಗಳೂ ಕೂಡ ಉಪದೇಶ ಪಡೆದು ಹೋಗುತ್ತಿದ್ದರು. ಅವನ ಆಸ್ಥಾನದಲ್ಲಿ ಅನೇಕ ಪಂಡಿತರು, ಜ್ಞಾನಿಗಳು ಇರುತ್ತಿದ್ದರು. ರಾಜನು ಅನೇಕ ಯಾಗಯಜ್ಞಗಳನ್ನು ಮಾಡಿದ್ದನು. ಇಂತಹ ಒಂದು ಯಜ್ಞಕ್ಕೆ ದೇಶದ ಎಲ್ಲ ಕಡೆಗಳಿಂದ ಪಂಡಿತರು ಆಗಮಿಸಿದ್ದರು. ಆಗ ಜನಕನಿಗೆ ಈ ಎಲ್ಲ ಜ್ಞಾನಿಗಳಲ್ಲಿ ಅತ್ಯಂತ ಶ್ರೇಷ್ಠ ಬ್ರಹ್ಮನಿಷ್ಠನನ್ನು ಆರಿಸಿ, ಅವನಿಂದ ಬ್ರಹ್ಮಜ್ಞಾನೋಪದೇಶ ಪಡೆದುಕೊಳ್ಳುವ ಇಚ್ಛೆಯಾಯಿತು. ಯಜ್ಞದ ಅಂತ್ಯದಲ್ಲಿ ಅತ್ಯಂತ ಶ್ರೇಷ್ಠ ಬ್ರಹ್ಮಜ್ಞಾನಿಗೆ ಚಿನ್ನಾಭರಣಗಳಿಂದ ಅಲಂಕರಿಸಿದ ಒಂದು ಸಾವಿರ ಗೋವುಗಳನ್ನು ದಾನ ಮಾಡುವುದಾಗಿ ಘೋಷಿಸಿದ. ನೆರೆದಿದ್ದ ಯಾರಿಗೂ ಅದನ್ನು ಸ್ವೀಕರಿಸಲು ಧೈರ್ಯಸಾಲದಿದ್ದಾಗ, ಯಾಜ್ಞವಲ್ಕ್ಯರು ತಮ್ಮ ಶಿಷ್ಯರನ್ನು ಕರೆದು ಗೋವುಗಳನ್ನು ಹೊಡೆದುಕೊಂಡು ಹೋಗುವಂತೆ ಹೇಳಿದರು. ಉಳಿದ ಮಹಾಪಂಡಿತರು ಕೂಡಲೇ ಇವರೊಡನೆ ವಾದಕ್ಕೆ ಇಳಿದರು. ಈ ವಾದವು ಬೃಹದಾರಣ್ಯಕ ಉಪನಿಷತ್ತಿನ 'ಮುನಿಕಾಂಡ' ಎಂಬ ಮೂರನೆಯ ಅಧ್ಯಾಯದಲ್ಲಿ ವಿಸ್ತಾರವಾಗಿ ನಿರೂಪಿತವಾಗಿದೆ. ಎಲ್ಲ ಪಂಡಿತರೂ ವಾದದಲ್ಲಿ ಸೋತನಂತರ, ಜನಕನು ಇವರ ಜ್ಞಾನವನ್ನು ಮೆಚ್ಚಿ, ತನ್ನ ಸರ್ವಸ್ವವನ್ನೂ ಅವರಿಗೆ ಅರ್ಪಿಸುತ್ತಾನೆ; ಯಾಜ್ಞವಲ್ಕ್ಯರನ್ನು ತನ್ನ ಗುರುಗಳಾಗಿ ಸ್ವೀಕರಿಸಿ, ಅವರಿಂದ ಬ್ರಹ್ಮಜ್ಞಾನವನ್ನು ಪಡೆಯುತ್ತಾನೆ.

ಬ್ರಹ್ಮಜ್ಞಾನವು ಪುರುಷರಿಗೇ ಮೀಸಲಲ್ಲ, ಮಹಿಳೆಯರಿಗೂ ಅಷ್ಟೇ ಅವಕಾಶಗಳಿವೆಯೆಂದು ತೋರಿಸಿಕೊಟ್ಟ ಕೀರ್ತಿಯೂ ಯಾಜ್ಞವಲ್ಕ್ಯರಿಗೆ ಸೇರಬೇಕು. ಜನಕನ ಸಭೆಯಲ್ಲಿ ಅವರೊಡನೆ ಗಾರ್ಗಿವಾಚಕ್ನವಿಯೆಂಬ ಬ್ರಹ್ಮವಾದಿನಿಯು ವಾದ ಮಾಡುತ್ತಾಳೆ. ಅವಳ ವಿದ್ವತ್ತು ಮತ್ತು ಅನುಭವ ಯಾರಿಗೂ ಕಡಮೆಯಿರಲಿಲ್ಲ. ಅಂತಹ ಬ್ರಹ್ಮವಾದಿನಿಯರಿಗೆ ಸಾಕಷ್ಟು ಗೌರವವೂ ಇತ್ತು.

ಯಾಜ್ಞವಲ್ಕ್ಯರ ಪತ್ನಿಯಾದ ಮೈತ್ರೇಯಿ ಮತ್ತೊಬ್ಬಳು ಬ್ರಹ್ಮನಿಷ್ಠಳು. ಯಾಜ್ಞವಲ್ಕ್ಯರು ತಮ್ಮ ಐಶ್ವರ್ಯವನ್ನೆಲ್ಲ ಇಬ್ಬರು ಪತ್ನಿಯರಾದ ಮೈತ್ರೇಯಿ ಮತ್ತು ಕಾತ್ಯಾಯನಿಗೆ ಹಂಚಿಕೊಟ್ಟು ಸಂನ್ಯಾಸ ಸ್ವೀಕರಿಸಲು ತೀರ್ಮಾನಿಸಿದಾಗ, "ಈ ಐಶ್ವರ್ಯವು ಸುಖವನ್ನು ಕೊಡಬಲ್ಲದೇ?" ಎಂದು ಮೈತ್ರೇಯಿ ಪ್ರಶ್ನಿಸುತ್ತಾಳೆ. ಅವಳ ಜ್ಞಾನಪಿಪಾಸೆಯನ್ನೂ ವೈರಾಗ್ಯವನ್ನೂ ಅರ್ಥಮಾಡಿಕೊಂಡ ಯಾಜ್ಞವಲ್ಕ್ಯರು ಅವಳಿಗೆ ಆತ್ಮಜ್ಞಾನವನ್ನು ಉಪದೇಶಿಸುತ್ತಾರೆ. ಇದೇ ಬೃಹದಾರಣ್ಯಕ ಉಪನಿಷತ್ತಿನಲ್ಲಿ ಪ್ರಸಿದ್ಧವಾದ, 'ಮೈತ್ರೇಯೀಬ್ರಾಹ್ಮಣ'ವೆಂಬ ಆತ್ಮವಿದ್ಯಾಭಾಗವು. ಹೀಗೆ ಮೈತ್ರೇಯಿಯ ನೆಪದಿಂದ ಲೋಕಕ್ಕೆ ಆತ್ಮಜ್ಞಾನವನ್ನು ನೀಡಿ, ತಾವು ವಿದ್ವತ್ಸಂನ್ಯಾಸವನ್ನು ಸ್ವೀಕರಿಸಿ ಮುಕ್ತರಾದ ಮಹಾನುಭಾವರು, ಯಾಜ್ಞವಲ್ಕ್ಯರು.

ಯಾಜ್ಞವಲ್ಕ್ಯರು ಯೋಗಶಾಸ್ತ್ರಜ್ಞರೂ ಆಗಿದ್ದರು. ಇವರು ಬರೆದ 'ಯೋಗ ಯಾಜ್ಞವಲ್ಕ್ಯ' ಪ್ರಸಿದ್ಧ ಗ್ರಂಥ. ಇದರಲ್ಲಿ ಪುರುಷರಿಗೆ ಮತ್ತು ಸ್ತ್ರೀಯರಿಗೆ ಸಮಾನವಾಗಿ ಯೋಗಾಭ್ಯಾಸದ ಅವಕಾಶವನ್ನು ಕಲ್ಪಿಸಿರುವುದು ಒಂದು ವಿಶೇಷ. ಯಾಜ್ಞವಲ್ಕ್ಯರ ಕರ್ಮಕಾಂಡಜ್ಞಾನಕ್ಕೆ ಸಾಕ್ಷಿಯಾಗಿರುವುದು ಅವರ ಮತ್ತೊಂದು ಪ್ರಸಿದ್ಧ ಗ್ರಂಥ 'ಯಾಜ್ಞವಲ್ಕ್ಯ ಸ್ಮೃತಿ'. ಇದರಲ್ಲಿ 'ಆಚಾರ', 'ವ್ಯವಹಾರ' ಮತ್ತು 'ಪ್ರಾಯಶ್ಚಿತ್ತ'ವೆಂಬ ಮೂರು ಕಾಂಡಗಳಿವೆ. ಮನುಸ್ಮೃತಿಯಂತೆಯೇ ಇದರಲ್ಲಿ ಷೋಡಶಕರ್ಮಗಳು, ನಾಲ್ಕು ಆಶ್ರಮಗಳು, ಅಷ್ಟವಿಧ ವಿವಾಹಗಳು, ಆಸ್ತಿವಿಭಾಗ, ರಾಜಧರ್ಮ ಮುಂತಾದ ಎಲ್ಲ ವ್ಯಾವಹಾರಿಕ ವಿಷಯಗಳೂ ನಿಯಮಬದ್ಧವಾಗಿ ನಿರೂಪಿತವಾಗಿವೆ. ಒಂದು ಸಾವಿರದ ಹತ್ತು ಪದ್ಯಗಳಲ್ಲಿ, ಅನುಷ್ಟುಪ್ ಛಂದಸ್ಸಿನಲ್ಲಿ, ಸರಳವಾಗಿ ಈ ವಿಷಯಗಳು ಅಡಕವಾಗಿವೆ.

ಈ ಗ್ರಂಥಕ್ಕೆ ಅಪರಾರ್ಕ, ಮಿಶ್ರಮಿಶ್ರ, ಶೂಲಪಾಣಿ, ವಿಜ್ಞಾನೇಶ್ವರ ಮತ್ತು ವಿಶ್ವರೂಪರು ಬರೆದ ಐದು ವ್ಯಾಖ್ಯಾನಗಳಿವೆ. ಇವುಗಳಲ್ಲಿ ವಿಜ್ಞಾನೇಶ್ವರನು ಬರೆದಿರುವ 'ಮಿತಾಕ್ಷರಾ' ಬಹಳ ಪ್ರಸಿದ್ಧವಾದುದು. ಇದರಲ್ಲಿ ಪುರಾತನವಾದ ಎಂಬತ್ತು ಸ್ಮೃತಿಗಳ ಉಲ್ಲೇಖವಿದೆ. ಈ ವ್ಯಾಖ್ಯಾನಕ್ಕೆ ವಿಶ್ವೇಶ್ವರಭಟ್ಟನ 'ಸುಬೋಧಿನೀ' ಮತ್ತು ನಂದಪಂಡಿತನ 'ಪ್ರಮಿತಾಕ್ಷರಾ' ಎಂಬ ಉಪವ್ಯಾಖ್ಯಾನಗಳಿವೆ. ಹೀಗೆ ಯಾಜ್ಞವಲ್ಕ್ಯರ ಕೃತಿಯು ಆಳವಾದ ಚಿಂತನೆಯ ಕ್ರಮಬದ್ಧ ನಿರೂಪಣೆಯಾಗಿದ್ದು, ಇಂದಿನ ಹಿಂದೂ ಕಾಯಿದೆಗೆ ಪ್ರಮಾಣಗ್ರಂಥವಾಗಿದೆ.

ಯಾಜ್ಞವಲ್ಕ್ಯರು ವೇದದ ಕರ್ಮಕಾಂಡ ಮತ್ತು ಜ್ಞಾನಕಾಂಡ ಗಳೆರಡಕ್ಕೂ ಅಪಾರ ಕೊಡುಗೆ ನೀಡಿರುವ ಧೀಮಂತರು.

ನಂ. ೧೧, ಎ.ಜಿ. ಲೇಔಟ್, ನ್ಯೂ ಬಿಇಎಲ್ ರಸ್ತೆ,
ಬೆಂಗಳೂರು–೫೬೦ ೦೫೪.



ಗುರುವಾಯೂರು ಕೃಷ್ಣನ ಮಹಾಭಕ್ತರಾದ ಮಹಾಕವಿ ಮೇಪ್ಪತ್ತೂರು ನಾರಾಯಣ ಭಟ್ಟತ್ತಿರಿಯವರ ಮಹಾನ್ ಭಕ್ತಿಕಾವ್ಯ 'ನಾರಾಯಣೀಯಮ್' ಈ ಸಂಚಿಕೆಯಿಂದ ಆರಂಭಿಸಿದ್ದೇವೆ. ಸ್ವತಃ ಸನಾತನ ಧರ್ಮದ ಶ್ರದ್ಧಾವಂತ ಅನುಯಾಯಿಗಳಾದ ಶ್ರೀ ಬಿಂಡಿಗನವಿಲೆ ನಾರಾಯಣಸ್ವಾಮಿ ಇದರ ಅನುವಾದಕರು.



# ನಾರಾಯಣೀಯಮ್

## ಸರ್ಗ: 8
## ಸೃಷ್ಟಿಯ ಮುಂಜಾವು

**ಏವಂ ತಾವತ್ಪ್ರಾಕೃತ ಪ್ರಕ್ಷಯಾಂತೇ ಬ್ರಾಹ್ಮೇಕಲ್ಪೇ ಹ್ಯಾದಿಮೇ ಲಬ್ಧಜನ್ಮಾ ।**
**ಬ್ರಹ್ಮಾ ಭೂಯಸ್ತ್ವತ್ತ ಏವಾಪ್ಯ ವೇದಾನ್ ಸೃಷ್ಟಿ-ಚಕ್ರೇ ಪೂರ್ವಕಲ್ಪೋಪ ಮಾನಾಂ ॥ 1 ॥**

ಮಹಾಪ್ರಳಯದ ಅಂತ್ಯದಲ್ಲಿ ಬ್ರಾಹ್ಮಕಲ್ಪವೆಂಬ ಮೊದಲನೆಯ ಕಲ್ಪದಲ್ಲಿ ಈ ರೀತಿಯಾಗಿ ಜನ್ಮವನ್ನು ಪಡೆದ ಬ್ರಹ್ಮನು ಮತ್ತೆ ನಿನ್ನಿಂದಲೇ ವೇದಗಳನ್ನು ಪಡೆದು ಹಿಂದಿನ ಕಲ್ಪಗಳ ರೀತಿಯಲ್ಲಿಯೇ ಸೃಷ್ಟಿಚಕ್ರವನ್ನು ಪ್ರಾರಂಭಿಸಿದನು. (1)

**ಸೋಽಯಂ ಚತುರ್ಯುಗ ಸಹಸ್ರ ಮಿತಾನ್ಯಹಾನಿ**
**ತಾವನ್ಮಿತಾಶ್ಚರಜ ನೀರ್ಬಹುಶೋ ನಿನಾಯ ।**
**ನಿದ್ರಾತ್ಮಸೌ ತ್ವಯಿ ನಿಲೀಯ ಸಮಂ ಸ್ವಸೃಷ್ಟೈ**
**ರ್ನೈಮಿತ್ತಿಕ ಪ್ರಲಯ-ಮಾಹುರತೋಽಸ್ಯ ರಾತ್ರಿಂ ॥ 2 ॥**

ಆ ಬ್ರಹ್ಮನು ಒಂದು ಸಾವಿರ ಚತುರ್ಯುಗಗಳಷ್ಟು ಕಾಲದ ಒಂದು ದಿನ ಹಾಗೂ ಅಷ್ಟೇ ಅವಧಿಯ ರಾತ್ರಿಯ ಬಹಳ ದಿನ-ರಾತ್ರಿಗಳನ್ನು ಕಳೆದು ಅನಂತರ ತನ್ನ ಸೃಷ್ಟಿಯೊಂದಿಗೇ ನಿನ್ನಲ್ಲಿ ಲೀನವಾಗಿ ಮಲಗುತ್ತಾನೆ. ಆದುದರಿಂದ ಅವನ ರಾತ್ರಿಯನ್ನು ನೈಮಿತ್ತಿಕ ಪ್ರಳಯವೆಂದು ಕರೆಯುತ್ತಾರೆ. (2)

**ಅಸ್ಮಾ ದೃಶಾಂ ಪುನರಹರ್ಮುಖಕೃತ್ಯತುಲ್ಯಾಂ ಸೃಷ್ಟಿಂ ಕರೋತ್ಯನು ದಿನಂ ಸ ಭವತ್ಪ್ರಸಾದಾತ್ ।**
**ಪ್ರಾಗ್ ಬ್ರಾಹ್ಮ ಕಲ್ಪಜನುಷಾಂ ಚ ಪರಾಯುಷಾಂ ತು ಸುಪ್ತ ಪ್ರಬೋಧನ ಸಮಾಸ್ತಿಽ ತದಾಪಿ ಸೃಷ್ಟಿಃ ॥ 3 ॥**

ನಾವು ಹೇಗೆ ಪ್ರತಿದಿನವೂ ಎದ್ದು ದಿನದ ಕೆಲಸಗಳಲ್ಲಿ ತೊಡಗುತ್ತೇವೋ ಅದರಂತೆಯೇ ಬ್ರಹ್ಮನೂ ಕೂಡ ಪ್ರತಿದಿನವೂ ಸೃಷ್ಟಿ ಕಾರ್ಯದಲ್ಲಿ ತೊಡಗುತ್ತಾನೆ. ಹಿಂದಿನ ಬ್ರಾಹ್ಮಕಲ್ಪದಲ್ಲಿ ಹುಟ್ಟಿದ ಮಾರ್ಕಂಡೇಯ ಮುಂತಾದ ಚಿರಂಜೀವಿಗಳಿಗೆ ಈ ಸೃಷ್ಟಿಯು ಕೇವಲ ನಿದ್ರೆಯಿಂದ ಎದ್ದಂತೆ. (3)

**ಪಂಚಾಶದಬ್ದ ಮಧುನಾ ಸ್ವವಯೋರ್ಧರೂಪಮೇಕಂ ಪರಾರ್ಧಮತಿ-ವೃತ್ಯ ಹಿ ವರ್ತತೇಽಸೌ ।**
**ತತ್ರಾಂತ್ಯರಾತ್ರಿ ಜನಿತಾನ್ ಕಥಯಾಮಿ ಭೂಮನ್ ಪಶ್ಚಾದ್ದಿನಾವತರಣೇ ಚ ಭವದ್ವಿಲಾಸಂ ॥ 4 ॥**



ಕನ್ನಡಾನುವಾದ:
ಬಿಂಡಿಗನವಿಲೆ ನಾರಾಯಣಸ್ವಾಮಿ

ಹೇ ಭೂಮನ್! ಈಗ ಆ ಬ್ರಹ್ಮ ತನ್ನ ಆಯಸ್ಸಿನ ಅರ್ಧಭಾಗವಾದ ಒಂದು ಪರಾರ್ಧವಾದ ಐವತ್ತು ವರ್ಷಗಳನ್ನು ಕಳೆದಿದ್ದಾನೆ. ಪದ್ಮಕಲ್ಪದ ಹಿಂದಿನ ರಾತ್ರಿ ಹಾಗೂ ಮರುದಿನದ ಪ್ರಾರಂಭದಲ್ಲಿ ನಡೆದ ನಿನ್ನ ಲೀಲಾ ವಿಲಾಸವನ್ನು ನಾನು ವರ್ಣಿಸುತ್ತೇನೆ. (4)

**ದಿನಾವಸಾನೇಽಥ ಸರೋಜಯೋನಿಃ ಸುಷುಪ್ತಿ ಕಾಮಸ್ತ್ವಯಿ ಸನ್ನಿಲಿಲ್ಯೇ ।**
**ಜಗಂತಿ ಚ ತ್ವಜ್ಜಠರಂ ಸಮೀಯುಸ್ತದೇದಮೇಕಾರ್ಣವಮಾಸ ವಿಶ್ವಂ ॥ 5 ॥**

ತದನಂತರ ಕಮಲಜನಾದ ಬ್ರಹ್ಮನು ದಿನದ ಅಂತ್ಯದಲ್ಲಿ ನಿದ್ದೆ ಮಾಡಬಯಸಿ ನಿನ್ನಲ್ಲಿ ಲೀನವಾದನು. ಸಮಸ್ತ ಜಗತ್ತುಗಳೂ ಸಹ ಆಗ ನಿನ್ನ ಜಠರವನ್ನು ಪ್ರವೇಶಿಸಿ, ಈ ವಿಶ್ವವೇ ಒಂದು ಮಹಾಸಾಗರವಾಯಿತು. (5)

**ತವೈವ ವೇಷೇ ಫಣಿರಾಜಿ ಶೇಷೇ ಜಲೈಕಶೇಷೇ ಭುವನೇ ಸ್ಮಶೇಷೇ ।**
**ಆನಂದ ಸಾಂದ್ರಾನುಭವ ಸ್ವರೂಪಃ ಸ್ವಯೋಗನಿದ್ರಾ-ಪರಿಮುದ್ರಿತಾತ್ಮಾ ॥ 6 ॥**

ಜಗವೆಲ್ಲವೂ ಜಲಮಯವಾಗಲು ನೀನು ಮತ್ತೊಂದು

ರೂಪದಲ್ಲಿ  ನಾಗರಾಜನಾದ ಶೇಷನ ಮೇಲೆ ಆನಂದವೇ ಘನಿಭೂತವಾಗಿ ರೂಪವನ್ನು ಪಡೆದವನಂತೆ ಯೋಗನಿದ್ರೆಯಲ್ಲಿ ಒರಗಿದೆ. (6)

ಕಾಲಾಖ್ಯಶಕ್ತಿಂ ಪ್ರಲಯಾವಸಾನೇ ಪ್ರಬೋಧಯೇತ್ಯಾದಿಶತಾ ಕಿಲಾದೌ ।

ತ್ವಯಾಂ ಪ್ರಸುಪ್ತಂ ಪರಿಸುಪ್ತ ಶಕ್ತಿ ವ್ರಜೇನ ತತ್ರಾಖಿಲ-ಜೀವಧಾಮ್ನಾ ॥ 7 ॥

ಪ್ರಳಯದ ಪ್ರಾರಂಭದಲ್ಲಿ ಮೂಲ ಪ್ರಕೃತಿ, ಮಹತ್ ಮುಂತಾದ ಶಕ್ತಿಗಳೆಲ್ಲವೂ ಯಾರಲ್ಲಿ ಅಡಗಿದ್ದುವೋ, ಯಾರು ಸಕಲ ಜೀವಗಳ ಆಶ್ರಯನೋ, ಅಂತಹ ನೀನು 'ಪ್ರಳಯದ ಅನಂತರ ನನ್ನನ್ನು ಎಬ್ಬಿಸು' ಎಂದು ಕಾಲವೆಂಬ ನಿನ್ನ ಶಕ್ತಿಗೆ ಆದೇಶಿಸಿ, ನಿದ್ದೆಯಲ್ಲಿ ಮುಳುಗಿದೆ ಎಂಬುದಾಗಿ ಹೇಳುತ್ತಾರೆ.



**ಚತುರ್ಯುಗಾಣಾಂ ಚ ಸಹಸ್ರಮೇವಂ ತ್ವಯಿ ಪ್ರಸುಪ್ತೇ ಪುನರದ್ವಿತೀಯೇ ।**
**ಕಾಲಾಖ್ಯಶಕ್ತಿಃ ಪ್ರಥಮ ಪ್ರಬುದ್ಧಾ ಪ್ರಾಬೋಧಯತ್ ತ್ವಾಂ ಕಿಲ ವಿಶ್ವನಾಥ ॥ 8 ॥**

ಹೇ ವಿಶ್ವದೊಡೆಯ! ನೀನು ಅದ್ವಿತೀಯನಾಗಿ ಒಂದು ಸಾವಿರ ಚತುರ್ಯುಗಗಳ ಕಾಲ ಈ ರೀತಿ ಯೋಗ ನಿದ್ರೆಯಲ್ಲಿರಲು ಮತ್ತೆ ಕಾಲವೆಂಬ ಶಕ್ತಿಯು ಮೊದಲೇ ಎಚ್ಚರಗೊಂಡು ಅನಂತರ ನಿನ್ನನ್ನು ಎಚ್ಚರಗೊಳಿಸಿತು ಎಂಬುದಾಗಿ ವರ್ಣಿಸುತ್ತಾರೆ. (8)

**ವಿಬುಧ್ಯ ಚ ತ್ವಂ ಜಲಗರ್ಭಶಾಯಿನ್ ವಿಲೋಕ್ಯ ಲೋಕಾನಖಿಲಾನ್ ಪ್ರಲೀನಾನ್ ।**
**ತೇಷ್ವೇವ ಸೂಕ್ಷ್ಮಾತ್ಮತಯಾ ನಿಜಾಂತಃ ಸ್ಥಿತೇಷು ವಿಶ್ವೇಷು ದದಾಥ ದೃಷ್ಟಿಂ ॥ 9 ॥**

ಹೇ ನೀರಿನ ಮೇಲೊರಗಿದ ಪ್ರಭುವೇ! ನೀನು ಎಚ್ಚರಗೊಂಡು ಸಕಲ ಲೋಕಗಳೂ ನಿನ್ನಲ್ಲಿ ಲೀನವಾಗಿರುವುದನ್ನು ಕಂಡು, ಸೂಕ್ಷ್ಮರೂಪದಲ್ಲಿ ನಿನ್ನೊಳಗೆ ಅಡಗಿದ್ದ ಆ ಎಲ್ಲ ಲೋಕಗಳ ಕಡೆ ದೃಷ್ಟಿ ಹಾಯಿಸಿದೆ. (9)

**ತತಸ್ತದೀಯಾದಯಿ ನಾಭಿರಂಧ್ರಾದುದಂಚಿತಂ ಕಿಂಚನ ದಿವ್ಯ ಪದ್ಮಂ ।**
**ನಿಲೀನ-ನಿಶ್ಯೇಷ-ಪದಾರ್ಥಮಾಲಾ-ಸಂಕ್ಷೇಪರೂಪಂ ಮುಕುಲಾಯ ಮಾನಂ ॥ 10 ॥**

ಹೇ ಪ್ರಭು! ತದನಂತರ ನಿನ್ನ ನಾಭಿರಂಧ್ರದಿಂದ ಲೀನವಾಗಿದ್ದ ಎಲ್ಲ ಪದಾರ್ಥಗಳ ಸೂಕ್ಷ್ಮರೂಪಗಳು ಮೊಗ್ಗಿನ ರೂಪದಲ್ಲಿ ಅವರ್ಣನೀಯವಾದ ದಿವ್ಯ ಪದ್ಮವಾಗಿ ಹೊರಹೊಮ್ಮಿತು. (10)

**ತದೇತದಂಭೋರುಹ-ಕುಡ್ಮಲಂ ತೇ ಕಲೇಬರಾತ್ ತೋಯಪಥೇ ಪ್ರರೂಢಂ ।**
**ಬಹಿರ್ನಿರೀತಂ ಪರಿತಃ ಸ್ಫುರದ್ಭಿಃ ಸ್ವಧಾಮಭಿರ್ಧ್ವಾಂತ ಮಲಂ ನ್ಯಕೃಂತತ್ ॥ 11 ॥**

ಆ ಕಮಲದ ಮೊಗ್ಗು ನಿನ್ನ ಶರೀರದಿಂದ ಕಾರಣಜಲದಲ್ಲಿ ಮೊಳಕೆಯೊಡೆದು ನೀರಿನಿಂದ ಹೊರಬರಲು ಅದರಿಂದ ದಿವ್ಯ ಪ್ರಭೆಯು ಸುತ್ತಲೂ ಬೆಳಗುತ್ತಿರಲು ಕತ್ತಲೆಯು ಸಂಪೂರ್ಣವಾಗಿ ಕಳೆಯಿತು. (11)

**ಸಂಫುಲ್ಲ ಪತ್ರೇ ನಿತರಾಂ ವಿಚಿತ್ರೇ ತಸ್ಮಿನ್ ಭವದ್ವೀರ್ಯಧೃತೇ ಸರೋಜೇ**
**ಸ ಪದ್ಮ ಜನ್ಮಾ ವಿಧಿರಾವಿರಾಸೀತ್ ಸ್ವಯಂಪ್ರಬುದ್ಧಾಖಿಲ ವೇದರಾಶಿಃ ॥ 12 ॥**

ಸಂಪೂರ್ಣವಾಗಿ ಅರಳಿದ ದಳಗಳಿಂದ ಕೂಡಿದ, ಅತ್ಯಂತ ಮನಮೋಹಕವಾದ, ನಿನ್ನ ಶಕ್ತಿಯಿಂದ ಕೂಡಿದ, ಆ ಕಮಲದಲ್ಲಿ ಸಮಸ್ತ ವೇದರಾಶಿಗಳನ್ನು ತಿಳಿದವನಾದ ಕಮಲಜನಾದ ಬ್ರಹ್ಮನು ಮೇಲೆದ್ದನು. (12)

**ಅಸ್ಮಿನ್ ಪರಾತ್ಮನ್ ನನು ಪಾದ್ಮಕಲ್ಪೇ ತ್ವಮಿತ್ಥ ಮುತ್ಥಾಪಿತ ಪದ್ಮಯೋನಿಃ ।**
**ಅನಂತ ಭೂಮಾ ಮಮ ರೋಗರಾಶಿಂ ನಿರುಂಧಿ ವಾತಾಲಯವಾಸ ವಿಷ್ಣೋ ॥ 13 ॥**

ಹೇ ಪರಮಾತ್ಮ! ಗುರುವಾಯೂರಪ್ಪ! ವಿಷ್ಣುವೇ! ಈ ಪಾದ್ಮಕಲ್ಪದಲ್ಲಿ ಈ ರೀತಿಯಾಗಿ ಪದ್ಮಜನಾದ ಬ್ರಹ್ಮನನ್ನು ಎಬ್ಬಿಸಿದ ಅನಂತ ಭೂಮನೇ! ನೀನು ನನ್ನ ರೋಗಗಳನ್ನು ನಾಶಮಾಡು. (13)

**(ಮುಂದುವರಿಯುವುದು)**


**# ೧೦೭, "ಕೇಶವ ಕೃಪ" ೧೭ನೇ ಕ್ರಾಸ್, ೧ನೇ ಬ್ಲಾಕ್, ರಾಜಾಜಿನಗರ, ಬೆಂಗಳೂರು-೫೬೦ ೦೧೦**



ಭಕ್ತಿ ಸಂಗೀತ ಸಾರ್ವಭೌಮ ಶ್ರೀ ತ್ಯಾಗರಾಜರ ಆರಾಧನೆ ಜನವರಿ 15ರಂದು. ವಾಗ್ಗೇಯಕಾರರಾದ ಶ್ರೀ ತ್ಯಾಗರಾಜರ ಜೀವನ ಹಾಗೂ ಸಂಗೀತ ಶಾಸ್ತ್ರಕ್ಕೆ ಅವರು ನೀಡಿರುವ ಕೊಡುಗೆಯ ಕುರಿತು ವಿಷಯಭರಿತ ಮಾಹಿತಿ ನೀಡಿದ್ದಾರೆ

ಶ್ರೀ ವಾನರಾಶಿ ಬಾಲಕೃಷ್ಣ ಭಾಗವತರ್.

ಪರಮಾತ್ಮನು ಕರ್ತೃವಾಗಿ ಭಾಗವತ, ಭಾರತ, ರಾಮಾಯಣ, ಗೀತೆ, ಶ್ರುತಿ, ಶಾಸ್ತ್ರ, ಪುರಾಣ ಹಾಗೂ ಸಂಗೀತ ಶಾಸ್ತ್ರಗಳನ್ನು ನಿರ್ಮಿಸಲು ಕಾರಣಕರ್ತನಾದನು. ಎಲ್ಲವೂ ಅವನ ಸಂಕಲ್ಪವೇ. ಆದುದರಿಂದ ಅಲ್ಲಲ್ಲಿ ವರಕವಿಗಳನ್ನು ಸೃಷ್ಟಿಸಿ, ಧರ್ಮವು ರಕ್ಷಿಸಲ್ಪಡುವಂತೆ ನೋಡಿಕೊಳ್ಳುತ್ತಾನೆ. ಅದರಂತೆಯೇ ವಾಲ್ಮೀಕಿ, ವ್ಯಾಸ, ಕಾಳಿದಾಸ, ಕಬೀರ್‌ದಾಸ್, ರಾಮದಾಸ, ಸೂರದಾಸ, ತುಳಸೀದಾಸ, ಪುರಂದರದಾಸ, ಕನಕದಾಸ, ಪೋತನಾಮಾತ್ಯ, ತುಕಾರಾಂ, ಭಕ್ತ ಕುಂಬಾರ, ಮೀರಾಬಾಯಿ, ಮಹದೇವಿಯಕ್ಕ, ಅಲ್ಲಮಪ್ರಭು, ಬಸವಣ್ಣ, ನಿಜಗುಣಶಿವಯೋಗಿ, ತ್ಯಾಗರಾಜ, ವೇಮನಯೋಗಿ ಹಾಗೂ ನಾರೇಯಣ ಯೋಗಿ ಮುಂತಾದ ಸದ್ಗುರುಗಳನ್ನು ತಮ್ಮ ಅಂಶದಲ್ಲಿ ಸೃಷ್ಟಿಸಿ ಧರ್ಮ ರಕ್ಷಣೆಯನ್ನು ಮಾಡುತ್ತಿರುತ್ತಾನೆ.

# ನಾದಬ್ರಹ್ಮ ಶ್ರೀ ತ್ಯಾಗರಾಜರು



ಕೈವಾರ ನಾರೇಯಣ ಯೋಗಿಗಳ ಸಮಕಾಲೀನರಾದ ತ್ಯಾಗರಾಜರು ಈಗಿನ ತಂಜಾವೂರು ಜಿಲ್ಲೆಯ ತಿರುವಯ್ಯೂರಿನಲ್ಲಿ ಈಶ್ವರನಾದ ತ್ಯಾಗರಾಜಸ್ವಾಮಿಯ ದಿವ್ಯ ಕೃಪೆಯಿಂದ ಮುಳುಕನಾಡು ಬ್ರಾಹ್ಮಣ ವಂಶಸ್ಥರಾದ ರಾಮಬ್ರಹ್ಮಂ ಹಾಗೂ ಸೀತಮ್ಮ ದಂಪತಿಯಲ್ಲಿ 1767ರಲ್ಲಿ ಜನಿಸಿದರೆಂದು ಪ್ರತೀತಿ. ಇವರ ಅಂಕಿತನಾಮ "ತ್ಯಾಗರಾಜ". ಇದೇ ತಿರುವಯ್ಯೂರಿನಲ್ಲಿ ಇವರ ಸಮಕಾಲೀನರು ಸ್ನೇಹಿತರೂ ಪ್ರಸಿದ್ಧ ವಾಗ್ಗೇಯಕಾರರೂ ಆದ ಶ್ಯಾಮಾಶಾಸ್ತ್ರಿ ಹಾಗೂ ಮುತ್ತುಸ್ವಾಮಿ ದೀಕ್ಷಿತರ್‌ರವರೂ ಜನಿಸಿ ವಿಖ್ಯಾತರಾಗಿದ್ದಾರೆ. ಕರ್ನಾಟಕ ಶಾಸ್ತ್ರೀಯ ಸಂಗೀತದ ಪಿತಾಮಹರಾದ ಶ್ರೀ ಪುರಂದರದಾಸರು ಕರ್ನಾಟಕ ಶಾಸ್ತ್ರೀಯ ಸಂಗೀತಕ್ಕೆ ಪ್ರಾಥಮಿಕ ಹಂತದ ಶಿಕ್ಷಣಕ್ಕೆ, ಸ್ವರಗಳು, ಜಂಟಿಸ್ವರಗಳು, ಅಲಂಕಾರಗಳು, ಪಿಳ್ಳಾರಿಗೀತೆಗಳು, ಸ್ವರಜತಿಗಳು ಮುಂತಾದ ಭದ್ರಬುನಾದಿಯನ್ನು ಹಾಕಿದ್ದಾರೆ. ಅನಂತರ ಶಿಕ್ಷಣಕ್ಕೆ ವರ್ಣಗಳು, ಕೀರ್ತನೆಗಳು, ವಿಳಂಬ ಕಾಲದ ವರ್ಣಗಳು ಹಾಗೂ ಕೀರ್ತನೆಗಳು, ಅನೇಕ ತಾಳಗಳು, ಜಾವಳಿ, ಮುಂತಾದ ಪ್ರೌಢಶಿಕ್ಷಣ ಮುಖ್ಯವಾಗಿದೆ. ಈ ಭದ್ರಬುನಾದಿಯ ಮೇಲೆ ಶ್ರೀ ತ್ಯಾಗರಾಜರು ಪ್ರಸಿದ್ಧ ರಾಗಳಲ್ಲಿ ಅನೇಕ ವಿಧವಾದ ಅಂದವಾದ ಸಂಚಾರಗಳಿಂದ ಅನೇಕ ಕೃತಿಗಳನ್ನು, ರಚಿಸಿ ವಿಚಿತ್ರವಾದ ದೊಡ್ಡ ಭವಂತುಗಳನ್ನು ನಿರ್ಮಿಸಿದ್ದಾರೆ. ಅವರು ರಚಿಸಿರುವ ಪಂಚರತ್ನಕೃತಿಗಳು ಸಂಗೀತ ಪ್ರಪಂಚದಲ್ಲಿ ಮೇರುಗಲ್ಲುಗಳಾಗಿ ಮೆರೆದಿವೆ. ಮುತ್ತುಸ್ವಾಮಿ ದೀಕ್ಷಿತರ್‌ರ ರಚನೆಗಳನ್ನು **ನಾರಿಕೇಳ ಪಾಕಕ್ಕೂ**, ಶ್ಯಾಮಾಶಾಸ್ತ್ರಿಗಳ ರಚನೆಗಳನ್ನು **ಕದಳೀ ಪಾಕಕ್ಕೂ**, ತ್ಯಾಗರಾಜರ ರಚನೆಗಳನ್ನು **ದ್ರಾಕ್ಷಾ ಪಾಕಕ್ಕೂ** ವಿದ್ವಾಂಸರು ಹೋಲಿಸುತ್ತಾರೆ.

ಶ್ರೀ ತ್ಯಾಗರಾಜರು ಸಂಗೀತಾಭ್ಯಾಸಕ್ಕಾಗಿ ತಂಜಾವೂರಿನ ಆಸ್ಥಾನ ವಿದ್ವಾಂಸರಾದ ಶೊಂಠಿ ವೆಂಕಟರಮಣಯ್ಯರವರ ಹತ್ತಿರ ಶಿಕ್ಷಣ ಪ್ರಾರಂಭಿಸಿದರು. ಅದಕ್ಕಾಗಿ ತಿರುವಯ್ಯೂರಿನಿಂದ ತಂಜಾವೂರಿನ ಸಮೀಪದಲ್ಲಿರುವ ತಿರುವಯ್ಯಾರಿನಲ್ಲಿ ಇವರ ತಂದೆ ತಾಯಿ ನೆಲೆಗೊಂಡರು. ಬಾಲ್ಯದಿಂದಲೂ ಸಂಗೀತ ಮತ್ತು ಭಕ್ತಿಯಲ್ಲಿ ಮನಸ್ಸನ್ನು ರೂಢಿಸಿಕೊಂಡಿದ್ದರು.

## ಶ್ರೀತ್ಯಾಗರಾಜರಿಗಾದ ಗುರುಕೃಪೆ

ಪುರಂದರದಾಸರು "ಗುರುವಿನ ಗುಲಾಮನಾಗುವ ತನಕ ದೊರೆಯದಣ್ಣ ಮುಕುತಿ" ಎಂದು ತಿಳಿಸಿದರೆ, ತ್ಯಾಗರಾಜರು "ಗುರುಲೇಕ ಎಟುವಂಟಿ ಗುಣಿಕಿ ತೆಲಿಯಗಬೋದು" ಎಂದು ಗುರುವಿನ ಮಹತ್ತ್ವವನ್ನು ಸಾರಿದ್ದಾರೆ. ತಮ್ಮ ತಾತ (ತಾಯಿಯ ತಂದೆ), ಶ್ರೀ ಕಾಳಹಸ್ತಯ್ಯರವರು ಸುಪ್ರಸಿದ್ಧ ವೀಣಾ ವಾದಕರಾಗಿದ್ದರು. ಅವರಲ್ಲಿದ್ದ ಎಲ್ಲ ಸಂಗೀತಶಾಸ್ತ್ರಗಳನ್ನು ಬಾಲಕ ತ್ಯಾಗರಾಜರು ಅಭ್ಯಸಿಸಿದರು. ಏಕಸಂಧಿಗ್ರಾಹಿಯಾದ ತ್ಯಾಗರಾಜರಿಗೆ ಸಂಗೀತ ಶಾಸ್ತ್ರಾಭ್ಯಾಸದ ಆಸಕ್ತಿ ಹೆಚ್ಚಾಗಿತ್ತು. ಅದರಿಂದಾಗಿ ಗುರುವಿನ ಅನುಗ್ರಹಕ್ಕೆ ಸದಾ ಚಿಂತನೆ ಮಾಡುತ್ತಿದ್ದರು. ಅದರ ಫಲವಾಗಿಯೋ ಪೂರ್ವಜನ್ಮದ ಪುಣ್ಯದಿಂದಲೋ ಪಂಚನದೀಶ್ವರ ಸ್ವಾಮಿಯ ಆಲಯದಲ್ಲಿ ಧ್ಯಾನದಲ್ಲಿ ನಿರತರಾಗಿದ್ದ ಸಮಯದಲ್ಲಿ ತ್ಯಾಗರಾಜರಲ್ಲಿಗೆ ನಾರದ ಮಹರ್ಷಿಗಳು ಗುರುಗಳಾಗಿ ಯತಿವೇಷವನ್ನು ಧರಿಸಿ ಬಂದು "ಸ್ವರಾರ್ಣವಮು" ಎಂಬ ಪವಿತ್ರ ಗ್ರಂಥವನ್ನು ನೀಡಿ ಅವರ

ತಲೆಯ ಮೇಲೆ ಕೈಯಿಟ್ಟು ಆಶೀರ್ವದಿಸಿ ಅಂತರ್ಧಾನವಾದರು.

ಅದರಿಂದಾಗಿ ನಾರದರನ್ನು ಗುರುಗಳನ್ನಾಗಿ ಸ್ವೀಕರಿಸಿ ಅವರ ಸ್ಮರಣಾರ್ಥ ಅನೇಕ ಕೃತಿಗಳನ್ನು ರಚಿಸಿದ್ದಾರೆ. ಭೈರವಿ ರಾಗದಲ್ಲಿ "ರಾಜಿಲ್ಲು ವೀಣಗಲ್ಗು ಗುರುರಾಯ" ಕೀರ್ತನೆಯನ್ನು, ಕನ್ನಡರಾಗದಲ್ಲಿ "ಶ್ರೀನಾರದ ನಾದಸರಸೀರುಹ ಭೃಂಗ ಶುಭಾಂಗ ಶ್ರೀತ್ಯಾಗರಾಜನುತ ಶ್ರೀಕರ ಮಾಂಪಾಲಯ"ಎಂಬ ಕೀರ್ತನೆಯನ್ನು, ವಿಜಯಶ್ರೀರಾಗದಲ್ಲಿ "ವರನಾರದ ನಾರಾಯಣ ಸ್ಮರಣಾನಂದಾನು ಭವಮುಗಲ" ಎಂಬ ಕೀರ್ತನೆಯನ್ನು ರಚಿಸಿ ಗುರುಗಳಿಗೆ ಸಮರ್ಪಣೆ ಮಾಡಿದ್ದಾರೆ.

## ಪೋತನಾಮಾತ್ಯರ ಪ್ರೇರಣೆ–ರಾಜಾಶ್ರಯ ನಿರಾಕರಣೆ

ತ್ಯಾಗರಾಜರು ಬಮ್ಮೆರ ಪೋತನರ ಭಾಗವತವನ್ನು ನಿತ್ಯ ಪಾರಾಯಣ ಮಾಡುತ್ತಿದ್ದರು. ಅವರು ಪಾರಾಯಣ ಮಾಡುತ್ತಿದ್ದ ಭಾಗವತದ ಪ್ರತಿಯು ಇಂದಿಗೂ ಮಧುರೈಯಲ್ಲಿನ ಸೌರಾಷ್ಟ್ರ ಸಭೆಯಲ್ಲಿದೆ ಎಂದು ಪ್ರತೀತಿ. ತ್ಯಾಗಯ್ಯ ಚಿಕ್ಕಂದಿನಿಂದಲೂ ಪೋತನರ ಭಕ್ತಿ ಮಾರ್ಗದಲ್ಲಿ ಮನಸೋತಿದ್ದರು. ಅವರಿಬ್ಬರ ಜೀವಿತಾಶ ಒಂದೇ ಆಗಿತ್ತು. ಇಬ್ಬರೂ ಶ್ರೀರಾಮಭಕ್ತರೇ. ಉದರಪೋಷಣೆಗಾಗಿ ಕೃತಿಗಳನ್ನು ರಾಜನಿಗೆ ಮಾರಿಕೊಂಡವರಲ್ಲ. ದಾರಿದ್ರ್ಯವಾದರೂ ಸಂತೋಷದಿಂದ ರಾಮಾನುಗ್ರಹವೇ ಕೋಟ್ಯನುಕೋಟಿ ಎಂದು ಜೀವನ ಸಾಗಿಸಿದ ಧನ್ಯಜೀವಿಗಳು.

"ಬಾಲರಸಾಲ ಸಾಲ ನವಪಲ್ಲವ ಕೋಮಲ ಕಾವ್ಯ ಕನ್ಯಕನ್, ಖೂಳುಲ ಕಿಚ್ಚಿ ಅಪ್ಪಡಪು ಕೂಡು ಭುಜಂಚುಟಕಂಟೇ ಸತ್ಕವುಲ್ ಹಾಲಿಕುಲ್ಯೆನೇಮಿ, ಗುಹಾಂತರಸೀಮಲ ಕಂದಮೂಲ ಗೌದ್ದಾಳಿಕುಲ್ಯೆನನೇಮಿ, ನಿಜದಾರ ಸುತೋದರ ಪೋಷಣಾರ್ಥಮ್ಮೈ" ಎಂದು ಹೇಳಿ "ಆಕಟಕು ಗೊನಿಪೋಯಿ ಅಲ್ಲ ಕರ್ನಾಟ ಕಿರಾಟ ಕೀಚಕುಲ ಕಮ್ಮ ತ್ರಿಶುದ್ಧಿಗ ನಮ್ಮು ಭಾರತಿ" ಎಂದು ರಚಿಸಿದ್ದಾರೆ.

ತಂಜಾವೂರಿನ ಮರಾಠ ರಾಜವಂಶಸ್ಥರಾದ ಶರಭೋಜ ಮಹಾರಾಜರು ಸಂಗೀತಪ್ರಿಯರಾಗಿದ್ದರು. ಪ್ರತಿದಿನವೂ ಸಂಧ್ಯಾ ಸಮಯದಲ್ಲಿ ವಿದ್ವಾಂಸರಿಂದ ಸಂಗೀತವನ್ನು ಆಲಿಸುವುದನ್ನು ಜೀವನದಲ್ಲಿ ರೂಢಿಮಾಡಿಕೊಂಡಿದ್ದರು. ಅವರ ಅಂದಿನ ಆಸ್ಥಾನದಲ್ಲಿ ಸುಪ್ರಸಿದ್ಧರಾದ ವಿದ್ವಾಂಸರಿದ್ದರು. ಅವರೆಲ್ಲರೂ ವಾಗ್ಗೇಯಕಾರರೂ ಆಗಿದ್ದರು. ತ್ಯಾಗರಾಜರ ಪ್ರೌಢಿಮೆಯನ್ನರಿತ ಶರಭೋಜರು ತಮ್ಮ ಆಸ್ಥಾನದಲ್ಲಿ ಇವರಿಗೂ ಸ್ಥಾನ ಕಲ್ಪಿಸಲು ಯೋಚಿಸಿ, ಭಟರ ಮೂಲಕ ಅನೇಕ ಆಭರಣಗಳನ್ನೂ ನಿಧಿಯನ್ನೂ ರೇಷ್ಮೆಯ ವಸ್ತ್ರಗಳನ್ನೂ ತ್ಯಾಗರಾಜರ ಮನೆಗೆ ತಲುಪಿಸಿ ಅವರನ್ನು ಆಹ್ವಾನಿಸಿ ಕರೆತರುವಂತೆ ತಿಳಿಸಿದರು.

ತ್ಯಾಗರಾಜರು ಮನೆಗೆ ಬಂದು ರಾಮನ ಮೂರ್ತಿಯ ಮುಂದಿಟ್ಟಿದ್ದ ಈ ಐಶ್ವರ್ಯವನ್ನು ಕಂಡು ಧ್ಯಾನಾಸಕ್ತರಾಗಿ ಕುಳಿತುಕೊಳ್ಳಲು, ಅವರಿಗೆ ಪೋತನಾಮಾತ್ಯರ ಜೀವಿತದ ಈ ಘಟನೆ ನೆನಪಿಗೆ ಬಂತು. ತಮ್ಮ ಸಂಬಂಧಿಯಾದ ಶ್ರೀನಾಥಕವಿಯು ಪೋತನರ ಬಳಿಗೆ ಬಂದು, ತಾವು ರಚಿಸಿರುವ ಭಾಗವತವನ್ನು ರಾಜರಿಗೆ ಸಮರ್ಪಿಸಿದರೆ ರಾಜಾಶ್ರಯ ದೊರಕುತ್ತದೆ ಎಂದು ಪೋತನರಿಗೆ ತಿಳಿಸಿದರು. ಆಗ ಮೇಲ್ಕಂಡ ಭಾಗವತದ ಪದ್ಯದಂತೆ, ಈ ಭಾಗವತವನ್ನು ಪರಮಾತ್ಮನಾದ ಶ್ರೀರಾಮರಿಗಲ್ಲದೆ ನರರಾದ ರಾಜರಿಗೆ ಅರ್ಪಿಸುವುದಿಲ್ಲವೆಂದು ತಿಳಿಸಿದಂತೆ ತ್ಯಾಗರಾಜರು ಶರಭೋಜ ಮಹಾರಾಜ ಕಳುಹಿಸಿದ್ದ ಧನಕನಕ ರಾಶಿಯನ್ನು ಕಂಡು ಈ ರೀತಿಯಾಗಿ ಮನಸ್ಸನ್ನು ಪ್ರಶ್ನಿಸಿಕೊಂಡರು, " ನಿಧಿ ಚಾಲಾ ಸುಖಮಾ? ರಾಮುನಿ ಸನ್ನಿಧಿ ಸೇವ ಸುಖಮಾ? ನಿಜಮು ಬಲ್ಕು ಮನಸಾ?" ಎಂಬ ಕಲ್ಯಾಣಿರಾಗದ ಕೀರ್ತನೆಯನ್ನಾಲಾಪಿಸಿ, ಮಮತೆ ಬಂಧನಗಳಿಂದ ಕೂಡಿದ ನರಸ್ತುತಿಗಿಂತಲೂ ಸುಮತಿ ತ್ಯಾಗರಾಜರ ಕೀರ್ತನೆಯೇ ಸುಖ ಎಂದು ನಿರ್ಣಯಿಸಿ ನಿಧಿಯನ್ನು ವಾಪಸ್ಸು ಕಳುಹಿಸಿ, ರಾಜಾಶ್ರಯವನ್ನು ತಿರಸ್ಕರಿಸಿದ ದೈವ ಚಿಂತಕರು ಶ್ರೀ ತ್ಯಾಗರಾಜರು.

## ಗೃಹಸ್ಥ ಜೀವನ

ಶ್ರೀ ತ್ಯಾಗರಾಜರ ಅತ್ಯಂತ ಪ್ರೀತಿಯ ಮಡದಿ ಮರಣಹೊಂದಿದ ಅನಂತರ ಕಮಲಾಂಬೆಯ ಕೈಹಿಡಿದು ಸೀತಾಲಕ್ಷ್ಮೀ ಎಂಬ ಹೆಣ್ಣುಮಗುವೊಂದನ್ನು ಪಡೆದು ಉಂಛ ವೃತ್ತಿಯಿಂದ ಜೀವನ ನಿರ್ವಹಿಸುತ್ತಿದ್ದ ಈ ಮಹಾನ್ ಭಕ್ತರಿಗೆ ಸ್ವಂತ ಅಣ್ಣನಿಂದ ಕಿರುಕುಳ, ದಿನನಿತ್ಯ ವ್ಯಾಜ್ಯ ವ್ಯವಹಾರ. ಒಮ್ಮೆ ಜಪೇಶಯ್ಯ ಎಂಬ ಇವರ ಅಣ್ಣ, ಇವರು ದಿನನಿತ್ಯ ಪೂಜಿಸುತ್ತಿದ್ದ ರಾಮಲಕ್ಷ್ಮಣ ಸೀತಾ ಸಮೇತ ಆಂಜನೇಯ ವಿಗ್ರಹಗಳನ್ನು ಅಪಹರಿಸಿದನು. ಎಂದಿನಂತೆ ಪೂಜಾಮಂದಿರಕ್ಕೆ ಹೊರಟ ತ್ಯಾಗರಾಜರಿಗೆ ಈ ಪೂಜಾವಿಗ್ರಹಗಳು ಇಲ್ಲದ್ದನ್ನು ಕಂಡು ದಿಗ್ಭ್ರಾಂತರಾಗಿ ಮನೋವಿಕಲ್ಪನೆಗೊಂಡು ಮನೆಬಿಟ್ಟು ದೇಶ ಸಂಚಾರವನ್ನು ಕೈಗೊಂಡರು. ಎಲ್ಲ ಕಾಲವೂ ಆ ವಿಗ್ರಹಗಳನ್ನು ಮನಸ್ಸಿನಲ್ಲಿ ಧ್ಯಾನಿಸುತ್ತಾ ತಿರುಗಾಡಿದರು. ಬೇಹಾಗ್ ರಾಗದಲ್ಲಿನ, "ನೇನೆಂದು ವೆದುಕುದುರಾ" ಕೀರ್ತನೆಯೂ "ರಾಮನನ್ನು ಬ್ರೋವರಾ" "ರಾಮ ನೀ ಸಮಾನಮೆವರು" "ಚಲಮೇಲರಾ ಸಾಕೇತ ರಾಮ" "ಮರುಗೇಲರಾ ಓ ರಾಘವಾ" "ಏ ಪಾಪಮು ಚೇಸಿತಿರಾ ನೀಕೇಪಾಟ್ಯೆನ ದಯರಾದ" ಎಂಬ ಅಠಾಣರಾಗದ ತ್ರಿಪುಟತಾಳದ ಕೀರ್ತನೆಯನ್ನೂ ಇನ್ನೂ ಅನೇಕ ಕೀರ್ತನೆಗಳನ್ನೂ ಈ ಸಮಯದಲ್ಲಿ ರಚಿಸಿದರು. ಕಾಲಕ್ರಮೇಣ ತಿರುಪತಿ ವೇಂಕಟೇಶ್ವರಸ್ವಾಮಿಯನ್ನು ದರ್ಶಿಸಿ ಅಲ್ಲಿ "ತೆರೆತಿಯ್ಯಗರಾದಾ ನಾಲೋನಿ ತಿರುಪತಿ ವೇಂಕಟರಮಣ, ಮತ್ಸರಮನು ತೆರೆತಿಯ್ಯಗರಾದಾ" ಎಂಬ ಕೀರ್ತನೆಯನ್ನು ಹಾಡಿ ಆ ರಾತ್ರಿ ತಿರುಮಲದಲ್ಲಿ ಮಲಗಿರುವ ಸಮಯದಲ್ಲಿ ಸ್ವಪ್ನದಲ್ಲಿ ರಾಮಲಕ್ಷ್ಮಣಸೀತಾಸಮೇತ ಆಂಜನೇಯ ವಿಗ್ರಹಗಳು ತಿರುವಯ್ಯಾರಿನ ಸಮೀಪ ಕಾವೇರಿ ತೀರದಲ್ಲಿ ಕಾಣಿಸಿಕೊಂಡವು. ಆ ತತ್‌ಕ್ಷಣ ಪ್ರಯಾಣ ಮಾಡಿ ಸ್ವಗ್ರಾಮಕ್ಕೆ ಬಂದು ಮಣ್ಣಿನಲ್ಲಿ ಅವಿತಿದ್ದ ವಿಗ್ರಹಗಳನ್ನು ಕಂಡು ಆನಂದ ಪರವಶರಾಗಿ "ಕನುಗೊಂಟಿನಿ ಶ್ರೀರಾಮುಲ" ಎಂಬ ಬಿಲಹರಿರಾಗದ ಕೀರ್ತನೆಯನ್ನು ಹಾಡಿ "ರಾ ರಾ ಮಾ ಇಂಟಿದಾಕ" ಎಂಬ ಅಸಾವೇರಿ ರಾಗದ ಕೀರ್ತನೆ ಹಾಡುತ್ತಾ ವಿಗ್ರಹಗಳನ್ನು ಮನೆಗೆ ಕೊಂಡ್ಯೊಯ್ದ ಮಹಾನ್ ಭಕ್ತಾಗ್ರೇಸರು ಶ್ರೀ ತ್ಯಾಗರಾಜರು.

## ಕೈವಾರ ತಾತಯ್ಯನವರು ಸಮಕಾಲೀನರು

ಸದ್ಗುರು ಯೋಗಿನಾರೇಯಣ ತಾತಯ್ಯನವರು ಶ್ರೀ ತ್ಯಾಗರಾಜರ ಸಮಕಾಲೀನರು. "ರಾಮುನಿ ಭಜನ ಸೇಯವೇ ಮನಸಾ, ಪಾರಮು ಲೇನಿ ಅಪಾರ ಪಾಪಮುಲನು ಪರಿಹರಿಂಚು ಪರಮಾತ್ಮುಂಡೀತಡು" ಎಂದು ಕೈವಾರದ ಯೋಗಿಗಳು ತಿಳಿಸಿದರೆ, ತ್ಯಾಗರಾಜರು "ಭಜನ ಸೇಯವೇ ಮನಸಾ ಪರಮ ಪ್ರೀತಿತೋ" ಎಂದು ತಿಳಿಸಿ, "ನಾದ, ಪ್ರಣವಸಪ್ತಸ್ವರ, ವೇದ, ಚತುಷ್ಷಷ್ಠಿ ಕಳೆಗಳಿಂದ ಭೇದ ಉಂಟಾಗುತ್ತದೆ. ಮೋದಕವಾದ ಈ ಶರೀರವನ್ನೆತ್ತಿ ಮುಕ್ತಿ ಮಾರ್ಗವನ್ನು ಗ್ರಹಿಸದೇ ವಾದ–ಭೇದವೇಕೆ? ಶ್ರೀಮದಾದಿ ತ್ಯಾಗರಾಜನುತನ ಭಜನೆ ಮಾಡು" ಎಂದಿದ್ದಾರೆ. ಇದರರ್ಥವೇನೆಂದರೆ ಸಂಗೀತ ವಿದ್ವಾಂಸರು, ಸಂಗೀತ ಕಛೇರಿಯನ್ನು ಮಾಡುತ್ತಾ ಸ್ವರ ಪ್ರಸ್ತಾವನೆ ಮಾಡಿ,

ಪಿಟೀಲು ವಾದಕರಿಗೆ ಅವಕಾಶ ನೀಡಿ, 'ನಾ ಹೆಚ್ಚು, ತಾ ಹೆಚ್ಚು' ಎಂಬ ಅಹಂಕಾರದಿಂದ, ಪಾಂಡಿತ್ಯ ಪ್ರದರ್ಶಿಸಿ, ಭೇದ ಕಲ್ಪಿಸಿ ಅಧಃಪತನಕ್ಕೆ ಈಡಾಗುವುದು ಬೇಡ, ಇದಾವುದನ್ನೂ ಪ್ರದರ್ಶಿಸದೆ ರಾಮನ ಭಜನೆ ಮಾಡು ಎಂದು ತಿಳಿಸುತ್ತಾರೆ. ಅವರು ಭಜನೆಯನ್ನು ಮಾಡುವ ರೀತಿಯನ್ನು ಯಮನ್ ಕಲ್ಯಾಣಿ ರಾಗದಲ್ಲಿ "ಹರಿದಾಸಲು ವೆಡಲೆ, ಮುಚ್ಚಟಗನಿ ಆನಂದಮಾಯೇ ದಯಾಳೋ" ಎಂದು ವಿವರಿಸುತ್ತಾ, "ಹರಿಗೋವಿಂದ, ನರಹರಿ, ರಾಮಾ, ಕೃಷ್ಣಾ" ಎಂದು ಎಡೆಬಿಡದೆ ಭಗವಂತನ ನಾಮವನ್ನು ಭಕ್ತಿಯಿಂದ ಮಾಡುತ್ತಾ, ಜ್ಞಾನದಿಂದಲೂ ರಾಮಧ್ಯಾನದಿಂದಲೂ ಒಳ್ಳೆಯ ಗಾನದಿಂದಲೂ ನಾಮ ಸಂಕೀರ್ತನೆಯನ್ನು ಧ್ಯಾನ ಮಾಡುತ್ತಾ, ಗ್ರಾಮ ಗ್ರಾಮಗಳಲ್ಲಿ ತಾಳ ಮೇಳಗಳೊಂದಿಗೆ ಹರಿದಾಸರ ಸಮೂಹ ಬರುವುದನ್ನು ಕಂಡು ಆನಂದವಾಯಿತು ಎಂದು ತಿಳಿಸುತ್ತಾರೆ.

## ತೆಲುಗಿನಲ್ಲಿ ರಚಿಸಲು ಕಾರಣ

**ಶ್ರೀ ತ್ಯಾಗರಾಜಸ್ವಾಮಿಗಳು ತೆಲುಗಿನಲ್ಲಿ ಕೀರ್ತನೆಗಳನ್ನು ರಚಿಸಲು ಕಾರಣವೇನು ಎಂಬ ಜಿಜ್ಞಾಸೆಯು ಹಲವಾರು ವಿದ್ವಾಂಸರುಗಳಲ್ಲಿ ಇನ್ನೂ ನಿಗೂಢವಾಗಿದೆ. ಚಿಂತನೆಗೆ ಕಾರಣವಾಗಿದೆ. ಅಂದಿನ ವಾಗ್ಗೇಯಕಾರರೆಲ್ಲರೂ ತೆಲುಗು ಭಾಷೆಯಲ್ಲಿಯೇ ಸಾಹಿತ್ಯದ ರಚನೆಯನ್ನು ಮಾಡಿರುತ್ತಾರೆ. ಶ್ರೀಕೃಷ್ಣದೇವರಾಯರು ತಮ್ಮ ಆಮುಕ್ತಮೌಲ್ಯದ ಗ್ರಂಥದಲ್ಲಿ "ದೇಶ ಭಾಷಲಂದು ತೆಲುಗು ಲೆಸ್ಸ" ಎಂದು ತಿಳಿಸಿದ್ದಾರೆ. ಅವರ ಸಾಮ್ರಾಜ್ಯವು ಸೌರಾಷ್ಟ್ರದಿಂದ ಮಧುರೆಯವರೆಗೂ ವಿಸ್ತರಿಸಿತ್ತು. ಅವರ ಆಸ್ಥಾನದಲ್ಲಿದ್ದ ಅಷ್ಟದಿಗ್ಗಜ ಕವಿಗಳಲ್ಲಿ ಏಳು ಕವಿಗಳು ತೆಲುಗಿನ ಮಹಾಪ್ರಕಾಂಡ ಕವಿಗಳಾಗಿದ್ದರು.**

**ಈ ಪ್ರಭಾವದಿಂದಲೇ ಸ್ವಾತಿ ತಿರುನಾಳ್, ಪಚ್ಚಿಮಿರಿಯಂ ಆದಿ ಅಪ್ಪಯ್ಯ, ಪೋತನಾಮಾತ್ಯರು, ಶ್ರೀರಾಮದಾಸು, ಅನ್ನಮಯ್ಯ, ಮುತ್ತುಸ್ವಾಮಿ ದೀಕ್ಷಿತರ್, ಶ್ಯಾಮಾಶಾಸ್ತ್ರೀ, ಮೈಸೂರು ವಾಸುದೇವಾಚಾರ್ಯರು ಮುಂತಾದ ಎಲ್ಲ ವಾಗ್ಗೇಯಕಾರರು ತೆಲುಗು ಭಾಷೆಯಲ್ಲಿಯೇ ತಮ್ಮ ಸಾಹಿತ್ಯವನ್ನು ರಚಿಸಿದ್ದಾರೆ. ದಕ್ಷಿಣ ಭಾರತದಲ್ಲಿ ತೆಲುಗು ಭಾಷೆಯೇ ಪ್ರಧಾನ ಭಾಷೆಯಾಗಿತ್ತು. ಈ ಕಾರಣದಿಂದಲೇ ತ್ಯಾಗರಾಜಸ್ವಾಮಿಗಳು ತಮ್ಮ ಕೀರ್ತನೆಗಳನ್ನು ತೆಲುಗು ಭಾಷೆಯಲ್ಲಿ ರಚಿಸಿದ್ದಾರೆ.**



## ಶಿಷ್ಯಪರಂಪರೆ ಮತ್ತು ತೀರ್ಥಸ್ಥಳಗಳು

ಲೌಕಿಕವಾಗಿ ಶರಭೋಜರ ಆಸ್ಥಾನ ವಿದ್ವಾಂಸರಾದ ಸುಂಟಿ ವೆಂಕಟರಮಣಯ್ಯನವರ ಹತ್ತಿರ ಸಂಗೀತ ಶಿಕ್ಷಣ ಪಡೆದರೂ ನಾರದ ಮಹರ್ಷಿಗಳನ್ನು ಸದ್ಗುರುಗಳನ್ನಾಗಿ ತ್ಯಾಗರಾಜರು ಸ್ವೀಕರಿಸಿದ್ದಾರೆ. ತ್ಯಾಗರಾಜರಿಗೂ ಅನೇಕ ಮಂದಿ ಶಿಷ್ಯರಿರುವುದು ವಾಸ್ತವವಾಗಿದೆ. ವಾಲಾಜಿಪೇಟೆ ವೆಂಕಟರಮಣ ಭಾಗವತರ್ ತುಂಬ ಆತ್ಮೀಯರಾಗಿದ್ದರು. ಅವರು ತಮ್ಮ ಮಗಳಾದ ಸೀತಾಲಕ್ಷ್ಮಿಯ ಮದುವೆಯ ಜವಾಬ್ದಾರಿಯನ್ನು ಹೊತ್ತಿದ್ದರು. ಪದ್ಮಶಾಲಿ ನೇಯ್ಗೆ ವಂಶಸ್ಥರಾದ ಇವರು ಮದುವೆಯಲ್ಲಿ ರೇಷ್ಮೆ ವಸ್ತ್ರಗಳನ್ನು ನೀಡಿ ಗುರುಗಳಿಗೆ ಸಮರ್ಪಿಸಿದವರು. ಇವರಲ್ಲದೇ ಮಾನಂಬುಚಾವಡಿ ವೆಂಕಟಸುಬ್ಬಾಯ್ಯರ್, ಲಾಲ್ಗುಡಿ ವೀಣಾಪ್ಪಯ್ಯರ್, ಉಮಾಯಾಲಪುರಂ ಕೃಷ್ಣಭಾಗವತರ್, ಸುಂದರಭಾಗವತರ್ ಹಾಗೂ ಪಿಳ್ಳೈರವರು ಶಿಷ್ಯರಲ್ಲಿ ಪ್ರಮುಖರಾಗಿದ್ದರು. ಶ್ರೀ ತ್ಯಾಗರಾಜಸ್ವಾಮಿಗಳ ಕೀರ್ತನೆಗಳಿಂದ ಪ್ರಭಾವಿತರಾದ ಮಹಾನ್‌ಭಕ್ತೆ ಬೆಂಗಳೂರು ನಾಗರತ್ನಮ್ಮ (ಸ್ವಂತ ಸ್ಥಳ ಚಿಂತಾಮಣಿ ತಾಲ್ಲೂಕಿನ ಊಲವಾಡಿ) ತ್ಯಾಗರಾಜರ ಸಮಾಧಿ ಸ್ಥಳವನ್ನು ತಿರುವಯ್ಯಾರಿನಲ್ಲಿ ಗುರುತಿಸಿ, ಅಲ್ಲಿ ಅವರ ಸಮಾಧಿಯನ್ನು ನಿರ್ಮಿಸಿ, ಭವ್ಯಮಂಟಪವನ್ನು ಕಟ್ಟಿ, ಸಂಗೀತ ಸಭಾದ ಟ್ರಸ್ಟ್‌ನ್ನು ಸ್ಥಾಪಿಸಿ, ಪ್ರತೀ ವರ್ಷ ತ್ಯಾಗರಾಜ ಸ್ವಾಮಿಗಳ ಆರಾಧನೆಯನ್ನು ಶ್ರದ್ಧಾಭಕ್ತಿಗಳಿಂದ ವಿಜೃಂಭಣೆಯಿಂದ ನಡೆಯುವಂತೆ ಪ್ರಾರಂಭಿಸಿದರು.

ತಿರುಪತ್ತೂರು, ಕೋವೂರು, ನಾಗಲಾಪುರಾ, ತಿರುಪತಿ, ಪುತ್ತೂರು, ಕಂಚಿ, ವಾಲಾಜಿಪೇಟ, ಶ್ರೀರಂಗಂ, ನಾಗಪುರಮು, ಲಾಲ್ ಗುಡಿ, ಪೋಲಿಂಗಪುರಮು, ಮುಂತಾದ ದಿವ್ಯಕ್ಷೇತ್ರಗಳನ್ನು ಸಂದರ್ಶಿಸಿ ಅಲ್ಲಿ ಸಂಕೀರ್ತನೆ ಮಾಡಿ ಕೀರ್ತನೆಗಳನ್ನು ರಚಿಸಿದ್ದಾರೆ. ಇವರು ಪ್ರಹ್ಲಾದ **ಭಕ್ತಿವಿಜಯಮು** ಹಾಗೂ **ನೌಕಾಚರಿತ್ರಾ** ಎಂಬ ಗೇಯನಾಟಕಗಳನ್ನು ರಚಿಸಿದ್ದಾರೆ. ಆ ಗ್ರಂಥ ರಚನೆಗಳಲ್ಲಿಯೂ ಅನೇಕ ದಿವ್ಯ ನಾಮ ಕೀರ್ತನೆಗಳು ಅಡಕವಾಗಿವೆ.

## ಜೀವನ್ಮುಕ್ತ ತ್ಯಾಗರಾಜರು

ಅಲೌಕಿಕ ಜ್ಞಾನದಿಂದ ಭಗವಂತನ ಕೀರ್ತನೆಗಳನ್ನು ರಚಿಸಿದ ತ್ಯಾಗರಾಜಸ್ವಾಮಿಗಳು ಜೀವನ್ಮುಕ್ತರಾಗುವುದಕ್ಕೆ 5 ದಿನಗಳ ಮೊದಲು ಸಂನ್ಯಾಸವನ್ನು ಸ್ವೀಕರಿಸಿದರು. ಈ ಕಾರಣದಿಂದಲೇ ಇವರನ್ನು ಸಮಾಧಿ ಮಾಡಲಾಯಿತು. 1847 ಜನವರಿ 6ರಂದು ಪರಮಾತ್ಮನಲ್ಲಿ ಐಕ್ಯವಾದರು. ಶ್ರೀ ತ್ಯಾಗರಾಜಸ್ವಾಮಿಗಳ ಆರಾಧನಾ ಮಹೋತ್ಸವದ ಅಂಗವಾಗಿ 5 ದಿನಗಳ ಕಾಲ ಸಮಾಧಿ ಸ್ಥಳವಾದ ತಿರುವಯ್ಯಾರಿನಲ್ಲಿ ಸಂಗೀತದ ಸಮಾರಾಧನೆ ನಡೆಯುತ್ತದೆ. ದೇಶ ವಿದೇಶ ವಿಖ್ಯಾತ ಕಲಾವಿದರು ಬಂದು ತ್ಯಾಗರಾಜಸ್ವಾಮಿಗಳ ಕೀರ್ತನೆಗಳನ್ನು ಹಾಡುವುದರ ಮೂಲಕ ಸಮರ್ಪಿಸಿ ಧನ್ಯತೆಯ ಭಾವವನ್ನು ಹೊಂದುತ್ತಾರೆ. ತ್ಯಾಗರಾಜ ಸ್ವಾಮಿಗಳ ಪಂಚರತ್ನ ಕೃತಿಗಳನ್ನು ಸಂಗೀತಗಾರರು ಆರಾಧನೆಯಂದು ಸಾಮೂಹಿಕವಾಗಿ ಹಾಡುತ್ತಾರೆ. ಇದೊಂದು ಅವಿಸ್ಮರಣೀಯ ಕ್ಷಣ. ಈ ಬಾರಿ 173ನೇ ಆರಾಧನೆಯು ಪುಷ್ಯ ಬಹುಳ ಪಂಚಮಿಯಂದು (ಜನವರಿ 15) ನಡೆಯುತ್ತದೆ.

ತ್ಯಾಗರಾಜ ಸ್ವಾಮಿಗಳಿಗೆ ಸಂಗೀತವು ಒಂದು ಕಲೆಯಾಗಿರಲಿಲ್ಲ, ಅದಕ್ಕಿಂತಲೂ ಮಿಗಿಲಾಗಿ ಪಾರಮಾರ್ಥಿಕತೆಯ ಸಾಧನವಾಗಿತ್ತು. ಕಲೆಯನ್ನು ಹಣ ಸಂಪಾದಿಸುವ ಅಸ್ತ್ರವನ್ನಾಗಿ ಬಳಸಿಕೊಳ್ಳದೆ, ಕಲೆಯನ್ನು ಮುಂದಿನ ಪೀಳಿಗೆಗೆ ಕೊಟ್ಟು, ಉಳಿಸಿ ಬೆಳೆಸಿದ ಸಂತ ಶ್ರೀ ತ್ಯಾಗರಾಜಸ್ವಾಮಿಗಳನ್ನು ಸ್ಮರಿಸೋಣ, ಧನ್ಯರಾಗೋಣ. ●

13ನೇ ಪುಟದಿಂದ

ಆಲಸ್ಯ, ದಣಿವು ಮುಂತಾದವುಗಳಾವುವೂ ಅಡ್ಡಿ ಬರಲಿಲ್ಲ.

ಕೊನೆಗೂ ವಿಷ್ಣುವರ್ಧನರ ಗುಪ್ತಚರರು ರಾಮಾನುಜರಿಗೆ ಬೇಕಿದ್ದ ಯವನ ರಾಜನ ರಾಜ್ಯವನ್ನು ತಲಪಿದರು. ಆ ಯವನ ರಾಜನ ತಾತ ರಾಮಾನುಜರ ಜನನಕ್ಕೆ ಸುಮಾರು ಒಂದು ಶತಮಾನದ ಮೊದಲು ಆರ್ಯಾವರ್ತದ ಸಂಪತ್ತನ್ನು ದೋಚಿಕೊಂಡು ಹೋಗಲು ಬಂದಿದ್ದ ತುರುಷ್ಕ ದಾಳಿಕೋರ ನಾಯಕ. ಗಜನಿ ಮಹಮ್ಮದ ಎಂಬ ದಾಳಿಕೋರನ ಜೊತೆಯಲ್ಲಿ ಬಂದಿದ್ದ ಒಬ್ಬ ದುಷ್ಟ. ಮಹಮ್ಮದ್ ಹದಿನೇಳು ಬಾರಿ ಲೂಟಿ ಮಾಡಿ, ಸೌರಾಷ್ಟ್ರದ ಸೋಮನಾಥ ದೇವಾಲಯವನ್ನು ಒಳಗಿದ್ದ ಜ್ಯೋತಿರ್ಲಿಂಗವನ್ನು ಒಡೆದು ಅಪಾರ ಸಂಪತ್ತನ್ನು ಹೊತ್ತುಕೊಂಡು ಹೋಗಿದ್ದ. ಆಗ ಅವನ ಜೊತೆ ಬಂದಿದ್ದ ಈ ಯವನ ರಾಜನ ತಾತ ಆರ್ಯಾವರ್ತದ ಮಥುರೆಯ ಸನಿಹದ ಒಬ್ಬ ದುರ್ಬಲ ಸಣ್ಣ ದೊರೆಯನ್ನು ಸೋಲಿಸಿ ಅವನ ರಾಜ್ಯವನ್ನು ವಶಪಡಿಸಿಕೊಂಡು ಅಲ್ಲಿಯೇ ನೆಲೆಸಿಬಿಟ್ಟ.

ಹೀಗೆ ಆರ್ಯಾವರ್ತದಲ್ಲಿ ನೆಲೆಸಿದ ತುರುಷ್ಕರು ದೇವಸ್ಥಾನಗಳನ್ನು ಒಡೆಯುವುದು, ಮೂರ್ತಿಗಳನ್ನು ಭಂಜಿಸಿ ಪುಡಿ ಮಾಡುವುದು, ಶಾಂತಿಪ್ರಿಯರಾದ ಸನಾತನ ಧರ್ಮೀಯರನ್ನು ಹೆದರಿಸಿ ತಮ್ಮ ತುರುಷ್ಕ ಮತಕ್ಕೆ ಸೇರಿಸಿ ಜಾತಿಭ್ರಷ್ಟರನ್ನಾಗಿ ಮಾಡುವುದೇ ಮುಂತಾದ ಕಾರ್ಯಗಳಿಂದ ವಿಜೃಂಭಿಸುತ್ತಿದ್ದರು. ಹಾಗೆಯೇ ಇಲ್ಲಿನ ಸುಂದರ ಕನ್ಯೆಯರನ್ನೂ ಸ್ತ್ರೀಯರನ್ನೂ ವಿವಾಹವಾಗಿ ತುರುಷ್ಕರನ್ನಾಗಿ ಪರಿವರ್ತಿಸುವುದು ಅವರ ಹವ್ಯಾಸವಾಗಿತ್ತು.

ಈಗ ರಾಮಾನುಜರು ಹುಡುಕಿದ್ದ ಯವನ ರಾಜನೂ ಒಂದ ರಾಜ್ಯದ ದೊರೆಯಾಗಿದ್ದು ಅವನೂ ಕೆಲವರು ರಾಜಪುತ್ರ ಹೆಣ್ಣುಮಕ್ಕಳನ್ನು ವಿವಾಹವಾಗಿ ತನ್ನ ಅಂತಃಪುರಕ್ಕೆ ಸೇರಿಸಿಕೊಂಡಿದ್ದ. ಇಂಥವರಿಗೆ ಮಕ್ಕಳೂ ಹುಟ್ಟಿದ್ದವು.

ಈ ಯವನ ರಾಜ ಸೈನ್ಯವನ್ನೂ ಹೊಂದಿದ್ದ. ತನಗೆ ಹಣದ ಆವಶ್ಯಕತೆ ಬಿದ್ದಾಗಲೆಲ್ಲ ಅವರನ್ನು ದರೋಡೆ ಮಾಡಿಕೊಂಡು ಬರಲು ಕಳಿಸುತ್ತಿದ್ದ. ಅವರು ಬಿರುಗಾಳಿಯಂತೆ ಬಂದು ಕೈಗೆ ಸಿಕ್ಕ ಸಂಪತ್ತೆಲ್ಲವನ್ನು ದೋಚಿ ಸಂಗ್ರಹಿಸಿ ಹಿಂದಿರುಗಿ ಯವನ ರಾಜನಿಗೆ ಒಪ್ಪಿಸುತ್ತಿದ್ದರು. ಹೀಗೆ ಯಾದವಾದ್ರಿಯ ತಿರುನಾರಾಯಣ ದೇವಾಲಯವನ್ನು ದೋಚಿಕೊಂಡು ಹೋಗಿದ್ದರು. ಅವರು ದೋಚಿದ ವಸ್ತುಗಳಲ್ಲಿ ಸುಂದರವಾದ ರಾಮಪ್ರಿಯ ಉತ್ಸವಮೂರ್ತಿಯೂ ಒಂದು.

ಈ ಯವನ ದೊರೆಗೆ ಅನೇಕ ಮಕ್ಕಳ ಪೈಕಿ ಒಬ್ಬ ಸುರಸುಂದರಿಯಾದ ಮಗಳಿದ್ದಳು. ಕಿಶೋರ ವಯಸ್ಸಿನ ಅವಳ ಹೆಸರು ಬೀಬಿ ಲಾಚಿಮಾರ್. ಅವಳನ್ನು ಬೀಬಿ ನಾಚ್ಚಿಯಾರ್ ಎಂದು ಕರೆಯುತ್ತಿದ್ದರು. ಯಾದವಾದ್ರಿಯಿಂದ ತನ್ನ ತಂದೆಯ ದರೋಡೆಕೋರ ಸೈನಿಕರು ತಂದಿದ್ದ ವಸ್ತುಗಳನ್ನು ಕುತೂಹಲದಿಂದ ನೋಡುತ್ತಿದ್ದ ನಾಚ್ಚಿಯಾರ್‌ಳ ಕಣ್ಣಗಳ ದೃಷ್ಟಿ ಆ ವಸ್ತುಗಳ ಮಧ್ಯೆ ಇದ್ದ ಒಂದು ಸುಂದರ ಮೂರ್ತಿಯ ಮೇಲೆ ಬಿತ್ತು. ಪ್ರಥಮ ನೋಟದಲ್ಲಿಯೇ ಪ್ರೇಮಾಂಕುರವಾಯಿತು ಎಂಬಂತೆ ಆ ಮೂರ್ತಿಯಲ್ಲಿ ಅಗಾಧ ಪ್ರೇಮ ಮೂಡಿತು. ಸರಕ್ಕನೆ ಅದನ್ನೆತ್ತಿಕೊಂಡು ಎದೆಗೆ ಅಪ್ಪಿಕೊಂಡಳು. ಆ ಮೂರ್ತಿಯೇ ಮೇಲುಕೋಟೆಯ ಉತ್ಸವ ಮೂರ್ತಿ ರಾಮಪ್ರಿಯನದು. ಆ ಮೂರ್ತಿಯೊಡನೆ ಆಟವಾಡುತ್ತಿದ್ದಳು. ಅರಮನೆಯಲ್ಲಿ ಅವಳದೇ ಒಂದು ಕೋಣೆ ಇತ್ತು. ಆ ಮೂರ್ತಿಯನ್ನು ತನ್ನೊಂದಿಗೆ ಹಗಲೂ ರಾತ್ರಿ ತನ್ನ ಕೋಣೆಯಲ್ಲಿಯೇ ಇರಿಸಿಕೊಂಡಿದ್ದಳು. ಆದರೆ ತಾನು ಆಟವಾಡುತ್ತಿರುವುದು ಒಂದು ಬೊಂಬೆಯ ಜೊತೆಯಲ್ಲಿ ಎಂಬುದು ಮಾತ್ರ ಅವಳ ತಿಳುವಳಿಕೆ.

ಆ ತುರುಷ್ಕ ರಾಜನ ಅಂತಃಪುರದಲ್ಲಿ ಅವನಿಗೆ ಎಷ್ಟೋ ಮಂದಿ ರಾಣಿಯರು. ಅವರಲ್ಲಿ ಬಹುಪಾಲು ಮಂದಿ ಹಾರಿಸಿಕೊಂಡು ಬಂದ ರಜಪೂತ ಹೆಣ್ಣುಮಕ್ಕಳೇ. ಅವರ ಪೈಕಿ ಒಬ್ಬಳು ಅತ್ಯಂತ ಸುಂದರಿ. ಅವಳ ಮನೆತನ ವಿಷ್ಣುಭಕ್ತರದು. ಅವಳು ತುರುಷ್ಕ ಮತಕ್ಕೆ ಸೇರಿಹೋಗಿದ್ದರೂ ಅವಳ ಅಂತರಾಳದಲ್ಲಿ ವಿಷ್ಣು ಭಕ್ತಿ ತುಂಬಿಕೊಂಡಿತ್ತು. ಅವಳ ಮಗಳೇ ಬೀಬಿ ನಾಚ್ಚಿಯಾರ್. ಮಗಳ ಕೈಯಲ್ಲಿ ವಿಷ್ಣುವಿನ ಮೂರ್ತಿ ನೋಡಿದಾಗ ರಾಣಿಯ ಮನಸ್ಸಿನಲ್ಲಿ ತನ್ನ ಪೂರ್ವಜೀವನ ನೆನಪಿಗೆ ಬಂದು ಕಣ್ತುಂಬಿ ಬಂತು. ಏಕೆ ತಾಯಿ ಅಳುತ್ತಿದ್ದಾಳೆಂದು ನಾಚ್ಚಿಯಾರ್ ಕೇಳಿದಾಗ ಅವಳು ಆ ಮೂರ್ತಿಯನ್ನು ಕುರಿತು ಹೇಳಿದಳು. ಅದು ವಿಷ್ಣು ದೇವರೆಂದು ಹೇಳಿ ಕೃಷ್ಣಾವತಾರದಲ್ಲಿ ವಿಷ್ಣು ಕೃಷ್ಣನಾಗಿ, ರಾಧೆಯನ್ನು ಪ್ರೇಮಿಸಿದ ಕಥೆ ಹೇಳಿದಳು. ಅಂದಿನಿಂದ ತಾನೇ ರಾಧೆ ಎಂದು ಆ ಮೂರ್ತಿಯೇ ಕೃಷ್ಣನೆಂದೂ ಭಾವಿಸಿ ಪ್ರೀತಿಸಲಾರಂಭಿಸಿದಳು ನಾಚ್ಚಿಯಾರ್.

ಯವನ ರಾಜನ ಆಸ್ಥಾನದಲ್ಲಿಯೇ ಇದ್ದ ಕುಬೇರ ಎಂಬ ತುರುಷ್ಕ ಯುವಕ ನಾಚ್ಚಿಯಾರ್‌ಳ ಸೌಂದರ್ಯಕ್ಕೆ ಮರುಳಾಗಿ ಅವಳನ್ನು ಮೋಹಿಸಲಾರಂಭಿಸಿದ. ಅದು ತಿಳಿದಿದ್ದರೂ ಅವಳ ಮನಸ್ಸು ರಾಮಪ್ರಿಯನಲ್ಲಿಯೇ ಲೀನವಾಗಿತ್ತೆ ಹೊರತು ಕುಬೇರನತ್ತ ತಿರುಗಲಿಲ್ಲ. ಕುಬೇರ ಮಾತ್ರ ನಾಚ್ಚಿಯಾರ್‌ಳ ಪ್ರೇಮದಲ್ಲಿ ಸಿಲುಕಿ ಹುಚ್ಚನಂತಾಗಿದ್ದ.

ಈ ಹಿನ್ನೆಲೆಯಲ್ಲಿ ಯವನ ರಾಜನ ಬಳಿಗೆ ರಾಮಾನುಜರ ಪ್ರವೇಶವಾಯಿತು. ಯವನ ರಾಜ ವಿಗ್ರಹಾರಾಧಕರ ಬದ್ಧ ದ್ವೇಷಿ. ಭರತ ವರ್ಷದ ಜನರು ಅನುಸರಿಸುತ್ತಿದ್ದ ಮತದ ದ್ವೇಷಿ. ಆದರೆ ರಾಮಾನುಜರಂಥ ಕಾಷಾಯಧಾರಿ ಸಂನ್ಯಾಸಿ ತೇಜಸ್ವಿ ವ್ಯಕ್ತಿತ್ವವನ್ನು ಕಂಡು ನಿಬ್ಬೆರಗಾಗಿ ಅವನೂ ಸಹ ಅವರ ಆಕರ್ಷಣೆಗೆ ಒಳಗಾದ. ಅವರನ್ನು ಸ್ವಾಗತಿಸಿದ. ರಾಮಾನುಜರು ಅವನಿಗೆ ತಮ್ಮ ಪರಿಚಯವನ್ನು ನೀಡಿ ಅವನ ಸೈನಿಕರು ತಮ್ಮ ದೇವಸ್ಥಾನದ ಒಂದು ಮೂರ್ತಿಯನ್ನು ಎತ್ತಿಕೊಂಡು ಬಂದಿರುವರೆಂದು ಆ ಮೂರ್ತಿ ತಮಗೆ ಆವಶ್ಯಕ ಬೇಕಿದೆ ಎಂದೂ ಪ್ರಾರ್ಥಿಸಿದರು. ರಾಜನು ಎಷ್ಟೇ ಮತದ್ವೇಷಿಯಾಗಿದ್ದರೂ ರಾಮಾನುಜರ ವಿನಯಪೂರ್ವಕ ಮಾತುಕತೆಗಳಿಂದ ಸೋತು ಹೋದ. ಅವರು ಹುಡುಕಿಕೊಂಡು ಬಂದಿದ್ದ ಮೂರ್ತಿಯ ಬಗ್ಗೆ ಅವರಿಗೆ ಇದ್ದ ಕಳಕಳಿ, ಆತ್ಮೀಯತೆ ಮತ್ತು ಭಕ್ತಿಭಾವಗಳನ್ನು ಕಂಡು ಅವನು ಅವರಿಗೆ ತನ್ನ ಸಂಗ್ರಹಾಲಯದಲ್ಲಿದ್ದ ವಸ್ತುಗಳ ಪೈಕಿ ಅವರಿಗೆ ಬೇಕಾದ ಮೂರ್ತಿಯನ್ನು ಹುಡುಕಿ ತೆಗೆದುಕೊಂಡು ಹೋಗಬಹುದೆಂದು ಅನುಮತಿಸಿದ.

ರಾಜನ ಅಧಿಕಾರಿಯೊಬ್ಬ ರಾಮಾನುಜರನ್ನು ರಾಜನ ಕಡೆಯವರು ದೋಚಿಕೊಂಡು ಬಂದಿದ್ದ ವಸ್ತುಗಳ ಸಂಗ್ರಹಾಲಯಕ್ಕೆ ಕರೆದೊಯ್ದ. ಸಾಮಾನ್ಯವಾಗಿ ಅಲ್ಲಿದ್ದ ದೇವತಾ ವಿಗ್ರಹಗಳನ್ನು ಗಾಂಧಾರದಲ್ಲಿ ಇದ್ದ ತನ್ನ ಯವನ ದೊರೆಯ ಬಳಿಗೆ ಕಳಿಸುವುದು ರೂಢಿ. ಬಹುಶಃ ರಾಮಾನುಜರು ಆಗ ಯವನ ರಾಜನ ಬಳಿಗೆ ರಾಮಪ್ರಿಯ ಮೂರ್ತಿಯನ್ನು ಹುಡುಕಿಕೊಂಡು ಹೋಗಿರದಿದ್ದರೆ ರಾಮಪ್ರಿಯ ಉತ್ಸವಮೂರ್ತಿಯೂ ಆ ದೇಶಕ್ಕೆ ಸಾಗಿಸಲ್ಪಟ್ಟು ಅಲ್ಲಿನ ಯಾವುದೋ ಕಟ್ಟಡದ ಸೋಪಾನವಾಗಿ ಬಿಡುತ್ತಿತ್ತೇನೋ!

ವಸ್ತು ಸಂಗ್ರಹಾಲಯದಲ್ಲಿ ರಾಮಪ್ರಿಯಮೂರ್ತಿ ಕಣ್ಣಿಗೆ ಬೀಳದೆ ನಿರಾಶರಾಗಿದ್ದ ರಾಮಾನುಜರು ಶ್ರೀಮನ್ನಾರಾಯಣನೊಂದಿಗೆ ಮಾನಸಿಕ ಅನುಸಂಧಾನ ನಡೆಸಿದಾಗ ಭಗವಂತನು ತನ್ನ ಮೂರ್ತಿ ಅಲ್ಲಿಯೇ ಇರುವುದಾಗಿಯೂ ನಿರಾಶರಾಗದೆ ಹುಡುಕಾಟ ಮುಂದುವರಿಸಬೇಕೆಂದು ತಿಳಿಸಿದಂತಾಯಿತು. ಅದು ರಾಜಕುಮಾರಿ ನಾಚ್ಚಿಯಾರ್‌ಳ ಅಂತಃಪುರದಲ್ಲಿದೆ ಎಂದೂ ಸುಳಿವು ದೊರೆತಿತ್ತು.



43ನೇ ಪುಟಕ್ಕೆ



# ಗುಜರಾತಿನ ಮಹಾನ್ ಸಂತ ನರಸೀ ಮೆಹ್ತಾ

ಭಾರತದ ಮಹಾನ್ ಮಹಾ ಸಂತರಲ್ಲಿ ಗುಜರಾತಿನ ನರಸೀ ಮೆಹ್ತಾ ಒಬ್ಬಾತರು. ಆಧ್ಯಾತ್ಮಿಕ ಪ್ರಪಂಚಕ್ಕೆ ಈತನ ಕೊಡುಗೆ ಅಪಾರವಾಗಿದೆ. ಈತನ ಅನಂತರ ಬಂದ ಅನೇಕ ಸಂತರು ಈತನಿಂದ, ಈತನ ಸಾಹಿತ್ಯ ಕೊಡುಗೆಗಳಿಂದ ತುಂಬ ಪ್ರಭಾವಿತರಾಗಿ ತಮ್ಮ ಭಕ್ತಿ ಭಾವುಕತೆಯ ವ್ಯಕ್ತಿತ್ವವನ್ನು ರೂಪಿಸಿಕೊಂಡಿದ್ದಾರೆ. ಅಂದಿನ ಕಾಲದ ಅನೇಕರಿಗೆ ಈತನ ಆಧ್ಯಾತ್ಮಿಕ ದೃಷ್ಟಿಕೋನದ ರಚನೆಗಳು ಅವರ್ಣನೀಯ ಅನುಭವವನ್ನು ಕೊಟ್ಟಿದೆ ಎನ್ನುವುದೂ ಸತ್ಯ.

ಸಂತ ನರಸೀ ಮೆಹೆತಾರನ್ನು 'ನರ್‌ಸೀ ಮೆಹ್ತಾ', 'ನರಸೀ ಭಗತ್' ಎಂದು ಕರೆಯುವ ವಾಡಿಕೆ ಇದೆ. ಹದಿನೈದನೆಯ ಶತಮಾನದ ಈ ಭಕ್ತ ಕವಿ ವೈಷ್ಣವ ಸಂತನೆಂದೇ ಗುರುತಿಸಲ್ಪಟ್ಟಿದ್ದಾನೆ. ಗುಜರಾತೀ ಸಾಹಿತ್ಯದಲ್ಲಿ ಈತ "ಆದಿಕವಿ" ಎಂದು ಕೂಡ ಹಿರಿಮೆ ಗಳಿಸಿದಾತ. ನಮ್ಮ ಕನ್ನಡ ಸಾಹಿತ್ಯ ಪ್ರಪಂಚಕ್ಕೆ "ಪಂಪ" ಎಂಬಾತನೇ ಆದಿಕವಿ ಎನ್ನಿಸಿಕೊಂಡಿರುವಂತೆ ಗುಜರಾತ್ ಭಾಷೆಗೆ ಈತನೇ ಆದಿಕವಿ.



■ಡಾ. ಅನಸೂಯಾದೇವಿ
ನಿವೃತ್ತ ಪ್ರಾಧ್ಯಾಪಕಿ, ಚಿಂತಕಿ, ಕಾದಂಬರಿಗಾರ್ತಿ.

ಗುಜರಾತ್ ರಾಜ್ಯದ ಜುನಾಗಢದ 'ತಲಜಾ' ಎಂಬ ಗ್ರಾಮದಲ್ಲಿ 1414ರ ನರಸೀ ಮೆಹ್ತಾ ಜನಿಸಿದವನೆಂದು ವಿದ್ವಾಂಸರ ಅಭಿಪ್ರಾಯವಿದೆ. ತಂದೆಯ ಹೆಸರು ಕೃಷ್ಣ ದಾಮೋದರ ಹಾಗೂ ತಾಯಿಯ ಹೆಸರು ಲಕ್ಷ್ಮೀಗೌರಿ. "ವಂಶೀಧರ" ಎಂಬ ನರಸೀ ಮೆಹ್ತಾನ ಹಿರಿಯ ಸೋದರ. ನರಸೀಗೆ ಐದು ವರ್ಷವಾಗಿದ್ದಾಗಲೇ ತಾಯಿ ತಂದೆಯ ವಿಯೋಗವಾಯಿತು. ಅಜ್ಜಿ "ಜಯಾಕುವಾರಿ" ಮತ್ತು ಅಣ್ಣ ವಂಶೀಧರ ಈ ಮಗುವನ್ನು ಮುಂದೆ ಸಾಕಿ ಸಲಹಿದರು.

ಆ ಸಮಯದಲ್ಲಿ ಭಾರತವನ್ನು ಮೊಘಲ್ ದೊರೆ ಹುಮಾಯೂನ್ ಆಳುತ್ತಿದ್ದ. ಈ ದೊರೆಯ ಸೈನಿಕ ದಳದ 'ರಾವಾ ಮಾಂಡಲೀಕ'ನೆಂಬಾತನೇ ಜುನಾಗಢ್ ಪ್ರದೇಶವನ್ನು ನೋಡಿಕೊಳ್ಳಲು ನೇಮಿಸಲ್ಪಟ್ಟಿದ್ದನು. ಈ ರಾವಾ ಮಾಂಡಲೀಕನ ಕೈಗೆಳಗೆ ಕೆಲಸ ಮಾಡುತ್ತಿದ್ದಾತ ವಂಶೀಧರ. ಈತನ ಪತ್ನಿ ತುಂಬ ಸ್ವಾರ್ಥಿ ಹಾಗೂ ಕ್ರೂರಿಯಾಗಿದ್ದಳು. ಹೀಗಾಗಿ ನರಸೀ ಮೆಹ್ತಾ ಬಾಲ್ಯದಲ್ಲಿ ಅತ್ತಿಗೆಯ ಅನಾದರ, ಹಿಂಸೆಗೆ ಒಳಗಾಗಿಯೇ ಬೆಳೆಯಬೇಕಾಯಿತು. ಪತ್ನಿಯನ್ನು ಎದುರಿಸುವ ವ್ಯಕ್ತಿತ್ವ ವಂಶೀಧರನಿಗಿರಲಿಲ್ಲ. ಕಷ್ಟಕರವಾದ ಬಾಲ್ಯ ಹೀಗೆ ಕಳೆದು ಹದಿ ಹರೆಯಕ್ಕೆ ಪದಾರ್ಪಣವಾಗುತ್ತಿದ್ದಂತೆಯೇ ಮನೆಗೆಲಸಕ್ಕೆ ಬೇಕು ಎಂಬ ದೃಷ್ಟಿಕೋನದಿಂದ ಈ ರಾಕ್ಷಸೀ ಸ್ವಭಾವದ ಅತ್ತಿಗೆ ಹಠ ಹಿಡಿದು ನರಸೀಗೆ ಮದುವೆ ಮಾಡಿಬಿಟ್ಟಳು. 1429ರಲ್ಲಿ ನರಸೀಗೆ ವಿವಾಹವಾಯಿತೆಂದು ವಿದ್ವಾಂಸರ ಸಂಶೋಧನೆ ಹೇಳುತ್ತದೆ. ಈ ದಂಪತಿಯನ್ನು ವಿಪರೀತ ಅನಾದರ, ಅಗೌರವದಿಂದ ನಡೆಸಿಕೊಂಡು ಪದೇ ಪದೇ ಕುಟುಕುತ್ತ ಹಿಂಸೆ ನೀಡಿದವಳು ವಂಶೀಧರನ ಹೆಂಡತಿ. ನರಸೀ ಬಾಲ್ಯದಿಂದ ಮೈಗೂಡಿಸಿಕೊಂಡು ಬಂದಿದ್ದ ವಿಷ್ಣು ಭಕ್ತಿಯನ್ನು ಪದೇ ಪದೇ ಹಂಗಿಸುತ್ತ "ನಮ್ಮದು ನಾಗರ ವಂಶ, ಶಿವನೇ ನಮ್ಮ ದೇವರಾಗಿರುವಾಗ ಮೂರ್ಖನಾಗಿ ಹರಿಭಕ್ತಿ ತೋರುತ್ತಿದ್ದೀಯ" ಎಂದು ಹಂಗಿಸಿ ಭಂಗಿಸುತ್ತಿದ್ದ ಅವಳ ಕಾಟ, ಅವಳಿಂದಾಗುತ್ತಿದ್ದ ಅವಮಾನ ತಡೆಯಲಾಗದೇ ಕಡೆಗೊಮ್ಮೆ ನರಸೀ ಮತ್ತು ಅವನ ಹೆಂಡತಿ ಮನೆ ಬಿಟ್ಟು ಹೋದರೆನ್ನಲಾಗಿದೆ.

ಕಾಡಿನಲ್ಲಿ ಎಲ್ಲೋ ಒಂದೆಡೆ ಕುಟೀರ ಕಟ್ಟಿಕೊಂಡು ದಂಪತಿಯು ವಾಸಿಸಿದರು. ಕಡು ಬಡತನದಲ್ಲಿ ಗೆಡ್ಡೆ ಗೆಣಸು ತಿಂದು

ಜೀವಿಸಿದರು. ನರಸೀಯ ಪತ್ನಿ 'ಮಾಣಿಕಗೌರಿ'ಗೆ ಪತಿಯಲ್ಲಿ ಅಪಾರ ಪ್ರೇಮ, ಪತಿಗನುಕೂಲೆಯಾದ ಪತಿಯಾಗಿದ್ದವಳು ಆಕೆ. ಈ ದಂಪತಿಗೆ ಎರಡು ಮಕ್ಕಳಾದವು.

ಮಗಳಿಗೆ ಕುವಾರಿಬಾಯಿ ಹಾಗೂ ಮಗನಿಗೆ ಶ್ಯಾಮದಾಸ ಎಂದು ಹೆಸರಿಡಲಾಯಿತು. ನರಸೀ ಸದಾ ವಿಷ್ಣು ಭಕ್ತಿ ಪರವಾದ ಹಾಡುಗಳನ್ನು ರಚಿಸುತ್ತ, ಹಾಡುತ್ತ ಮೈಮರೆತು ಭಕ್ತಿ ಪರವಶನಾಗಿರುತ್ತಿದ್ದವನು. ನರಸೀ ಮೆಹ್ತಾನ ಮೇಲೆ ಅವನ ಪೂರ್ವದ ಸಂತರಾದ ಕಬೀರದಾಸ, ಭಕ್ತಿ ಮೀರಾಳ ಪ್ರಭಾವ ದಟ್ಟವಾಗಿತ್ತು. ಮಗ ಶ್ಯಾಮದಾಸ ಬಾಲಕನಾಗಿರುವಾಗಲೇ ತಂದೆ ಹಾಡುತ್ತಿದ್ದ ದೇವರ ಕೀರ್ತನೆಗಳಿಗೆ ಡೋಲು ನುಡಿಸುತ್ತಿದ್ದ. ಈ ಭಕ್ತಿಪೂರಕವಾಗಿದ್ದ ಕುಟುಂಬ ಅತ್ಯಂತ ಬಡತನದಲ್ಲಿದ್ದರೂ ನರಸೀಯ ಮಕ್ಕಳಿಬ್ಬರೂ ಪ್ರಾಪ್ತವಯಸ್ಕರಾದ ಮೇಲೆ ಶ್ರೀಕೃಷ್ಣನು ನಾನಾ ಬಗೆಯಲ್ಲಿ ನೆರವು ನೀಡಿ ವಿವಾಹ ಮಾಡಿಸಿದನೆನ್ನಲಾಗಿದೆ. ಭಗವಂತನು ತನ್ನ ಭಕ್ತರನ್ನು ಆತುಕೊಳ್ಳುವ ಈ ಪರಿಯ ಬಗ್ಗೆ, ನರಸೀ ಮೆಹ್ತಾನಿಗೆ ಅತ್ಯಂತ ಶ್ರೀಮಂತ ಕುಟುಂಬದವರೇ ಬೀಗರಾಗಿ ಒದಗಿಬಂದ ಬಗ್ಗೆ, ಮಕ್ಕಳಿಬ್ಬರಿಗೂ ವೈಭವದ ವಿವಾಹವಾದುದರ ಬಗ್ಗೆ ನಾನಾ ಬಗೆಯ ದಂತಕಥೆಗಳು ಗುಜರಾತಿನಲ್ಲಿ ಪ್ರಚಲಿತವಿದೆ. ಶ್ರೀಕೃಷ್ಣನ ಮೇಲಿನ ಅಪಾರ ನಂಬಿಕೆ, ಭಕ್ತಿಗಳೇ ನರಸೀ ಮೆಹ್ತಾನ ಕುಟುಂಬವನ್ನು ಕಾಪಾಡಿದವು ಎಂದು ಈ ಕಥೆಗಳು ಸಾರುತ್ತವೆ.

### ನರಸೀ ಮೆಹ್ತಾರ ಜೀವನ ಚರಿತ್ರೆ

**ಡಾ. ದರ್ಶನಾ ದೋಲ್‌ಕಿಯಾ" ಎಂಬಾಕೆ ಈಗ, ಪ್ರಸ್ತುತ ಕಛ್ ಯೂನಿವರ್ಸಿಟಿಯ ಗುಜರಾತ್ ಭಾಷಾ ವಿಭಾಗದ ಮುಖ್ಯಸ್ಥೆಯಾಗಿದ್ದಾರೆ. (Head of the department) ಇವರು "ನರಸೀ ಚರಿತ್ರ ವಿಮರ್ಶಾ" ಎಂಬ ಕೃತಿಯನ್ನು 2015ರಲ್ಲಿ ಪ್ರಕಟಿಸಿದ್ದಾರೆ.**

**ಮೂರು ವಿಭಾಗ ಮಾಡಿಕೊಂಡು ತಮ್ಮ ಈ ಸಂಶೋಧನಾ ಕೃತಿಯಲ್ಲಿ ಸಂತ ನರಸೀ ಮೆಹ್ತಾರ ಜೀವನ ಚರಿತ್ರೆಯನ್ನು ಸಮಗ್ರವಾಗಿ ಈಕೆ ರಚಿಸಿದ್ದಾರೆ.**

**ಸಂತ ನರಸೀ ಮೆಹ್ತಾರ ಸಾಹಿತ್ಯದ ಮೂಲಕ (ಹೆಚ್ಚಾಗಿ ಅವರ ಕವಿತೆಗಳಲ್ಲೇ ಸ್ವಂತ ಬದುಕಿನ ಕಷ್ಟ ನಷ್ಟ ದುಃಖ ನೋವುಗಳೂ ಅಭಿವ್ಯಕ್ತವಾಗಿವೆ); ಸಂತ ಕೃಷ್ಣದಾಸರು ಮತ್ತು ಕವಿ ಪ್ರೇಮಾನಂದರ ರಚನೆಗಳಲ್ಲಿ ದೊರೆಯುವ ನರಸೀ ಮೆಹ್ತಾರ ಜೀವನ ಚಿತ್ರಗಳ ಮೂಲಕ; ಅನಂತರ ಬಂದ ಅನೇಕ ಸಂತರ ಕವಿತೆಗಳ ಮೂಲಕ ದೊರೆಯುವ ಮೆಹ್ತಾರ ಚಿತ್ರಗಳ ಮೂಲಕ–ಹೀಗೆ ಮೂರು ವಿಭಾಗ ಮಾಡಿಕೊಂಡು ಅನೇಕ ಸಂಶೋಧನೆ ಮಾಡಿಕೊಂಡು ಈಕೆ ನರಸೀ ಮೆಹ್ತಾ ಸಂತರ ಸಮಗ್ರ ಬದುಕು, ಸಾಹಿತ್ಯಗಳ ಬೃಹತ್ ಕೃತಿ ರಚಿಸಿದ್ದಾರೆ.**

ಧಾರ್ಮಿಕ ಮನೋಭಾವದ ಸಂತ ನರಸೀ ಯಾರಿಗೂ ತೊಂದರೆ ನೀಡದ, ಯಾರನ್ನೂ ತುಸುವಾದರೂ ನೋಯಿಸದ ಸಾತ್ವಿಕತೆಯ ಪರಮಾವಧಿಯಲ್ಲಿ ಬಾಳಿ ಬದುಕಿದವನು. ಆತ ಭಕ್ತಿ ಸಾಹಿತ್ಯ ರಚನೆ, ಹಾಡುವುದು ಇಷ್ಟರಲ್ಲೇ ತೊಡಗಿದ್ದವನು, ಯಾವ ಶಿಷ್ಯ ವೃಂದವನ್ನೂ ಕಟ್ಟಿಕೊಳ್ಳದೆ, ಮುಂದೆ ತನ್ನ ಹೆಸರುಳಿಸಲು ಹಿಂಬಾಲಕರನ್ನು ತಯಾರು ಮಾಡದೇ, ಸಾಮಾಜಿಕವಾದ ಯಾವ ಆಯಾಮಗಳಲ್ಲೂ ತೊಡಗಿಕೊಳ್ಳದೇ, ಪ್ರವಚನ, ಉಪದೇಶಗಳನ್ನು ನೀಡಹೋಗದೇ ತನ್ನಷ್ಟಕ್ಕೆ ತಾನು ಬಾಳಿ ಬದುಕಿದಾತ. ಆದರೆ ಈ ಮಹಾನ್ ಸಂತನ ಸಾಹಿತ್ಯ ಮಾತ್ರ ಗುಜರಾತ್ ಭಾಷಾ ಜನಾಂಗದಲ್ಲಿ ಅತಿ ಜನಪ್ರಿಯವಾಗಿ ಉಳಿದು, ಬೆಳೆದು, ಇಂದಿಗೂ ರಾಜಿಸುತ್ತಿದೆ.

### ಸಂತ ನರಸೀ ಮೆಹ್ತಾರ ಸಾಹಿತ್ಯ

ಗುಜರಾತಿನ **ಆದಿಕವಿ** ಎನ್ನಿಸಿರುವ ನರಸೀ ಮೆಹ್ತಾರ ಸಾಹಿತ್ಯವನ್ನು ಇಂದಿಗೂ ಆಸಕ್ತಿಯಿಂದ ಅಧ್ಯಯನ ಮಾಡುವವರಿದ್ದಾರೆ. ಈ ಭಕ್ತ ಕವಿಯ ರಚನೆಗಳು ಮೂರು ಪ್ರಮುಖ ವಿಧಾನಗಳಿಂದ ಅರಿಯುವುದಕ್ಕೆ ನೆರವಾಗುತ್ತವೆ. "ಪದಗಳು (ಪದ್ಯಗಳು); "ಆಖ್ಯಾನಗಳು" ಮತ್ತು "ಪ್ರಭಾತೀಯಗಳು" ಎಂಬ ಮೂರು ವಿಧ. "ಕೇಶವ್‌ರಾಮ್ ಕಾಶೀರಾಮ್ ಶಾಸ್ತ್ರಿ" ಎಂಬ ಅಂದಿನ ವಿದ್ವಾಂಸರು ಮೆಹ್ತಾನ ರಚನೆಗಳನ್ನೆಲ್ಲ ಹಸ್ತಲಿಪಿಯಲ್ಲಿ ದಾಖಲಿಸಿಟ್ಟವರು ಎಂದು ತಿಳಿದುಬಂದಿದೆ. ಈತ "ಗುಜರಾತ್ ವಿದ್ಯಾಸಭಾ"ದಲ್ಲಿ ಪ್ರಮುಖ ಪಂಡಿತರಾಗಿದ್ದು (1612ರ ಆಸುಪಾಸು) ಮೆಹ್ತಾನ ರಚನೆಗಳನ್ನು ಸಂಗ್ರಹಿಸಿ ದಾಖಲಿಸಿಟ್ಟಿದ್ದಾರೆನ್ನಲಾಗಿದೆ. ಅದುವರೆಗು ಆ ಕಾಲದ ಜನರ ಬಾಯಿಂದ ಬಾಯಿಗೆ, ಕಿವಿಯಿಂದ ಕಿವಿಗೆ (ನಮ್ಮ ವೇದ ಸಾಹಿತ್ಯ ಉಳಿದು ಬಂದ ಪರಿಯಲ್ಲಿ) ಹರಿದಾಡುತ್ತಿದ್ದ ರಚನೆಗಳೆಲ್ಲದರ ಸಂಗ್ರಹ, ದಾಖಲೆ ನಡೆಸಿದ ಪುಣ್ಯ ಈತನದು.



**ನರಸೀ ಮೆಹ್ತಾನ ವಂಶ ಪರಂಪರೆ ಶಿವನ ಭಕ್ತರಾಗಿದ್ದು ಈ ವಂಶವನ್ನು 'ನಾಗರ ವಂಶ' (ಕುಲ) ಎಂದೇ ಕರೆಯುತ್ತಿದ್ದರೆನ್ನಲಾಗಿದೆ. ಆದರೆ ತನ್ನ ಪೂರ್ವಕಾಲದಲ್ಲಿ ಆಗಿ ಹೋದ ವೈಷ್ಣವ ಭಕ್ತರ ಸಾಹಿತ್ಯ ರಚನೆಗಳನ್ನೆಲ್ಲ ನರಸೀ ಚೆನ್ನಾಗಿ ತಿಳಿದು ಅಭ್ಯಾಸ ಮಾಡಿದ್ದರಿಂದ ಆತನ ಮೇಲೆ ವಿಷ್ಣು ಭಕ್ತಿ (ಹರಿ ಭಕ್ತಿ ಅಥವಾ ಕೃಷ್ಣ ಭಕ್ತಿ)ಯೇ ಆತನಲ್ಲಿ ಪ್ರಧಾನವಾಗಿ ಬೆಳೆದು ಬಂದಿತು.**

ಕಾಡಿಗೆ ಹೋಗಿ ವಾಸವಿದ್ದಾಗ ಆತ ಏಳು ದಿನ ಉಪವಾಸವಿದ್ದು ಕೃಷ್ಣನನ್ನು ಧ್ಯಾನ ಮಾಡುತ್ತಿದ್ದಾಗ ಆತನಿಗೆ ಶ್ರೀಕೃಷ್ಣನ ವೃಂದಾವನ, ರಾಸಲೀಲಾ ನೃತ್ಯ ಎಲ್ಲದರ ದಿವ್ಯ ದರ್ಶನವಾಯಿತೆನ್ನಲಾಗಿದೆ.

ನರಸೀ ಮೆಹ್ತಾ ಅನೇಕ ಭಜನೆಗಳನ್ನು, ಆರತಿ ಹಾಡುಗಳನ್ನು ಕೃಷ್ಣನ ಪರವಾಗಿ ರಚಿಸಿದ್ದು ಅವು ಇಂದಿಗೂ ಗುಜರಾತಿನಲ್ಲಿ

ಭಕ್ತ ಜನರು ಹಾಡಿಕೊಳ್ಳುತ್ತಿದ್ದು ಜನಪ್ರಿಯವಾಗಿವೆ. ಈ ರಚನೆಗಳ ಮುದ್ರಿತ ಪುಸ್ತಕಗಳನ್ನು ಆ ಜನರು ಈಗಲೂ ಪರಸ್ಪರ ಹಂಚಿಕೊಳ್ಳುತ್ತಿದ್ದಾರೆ.

ಪುತ್ರ ವಿವಾಹ್>ಶಾಮದಾಸ್ ನೊ ವಿವಾಹ್; ಮಾಮೇರು>ಕುನ್ವರೀಬಾಯ್ ಗುನುಮಾಮೇರು; ಹುಂಡೀ ಹರ್ ಮಾಲಾ; ಝೂರೀನ ಪದ; ಇಂಥ ಕೆಲವು ನರಸೀಯ ರಚನೆಗಳಲ್ಲಿ ಅವರ ಸ್ವಂತ ಬದುಕಿನ ಅನೇಕ ಘಟನೆಗಳು, ಪ್ರಸಂಗಗಳು ನಿರೂಪಿತವಾಗಿವೆ. ಈ ಕೃತಿಗಳೆಲ್ಲವೂ ಮೆಹ್ತಾರು ಅಂತರ್‌ದರ್ಶನದಲ್ಲಿ ಕಂಡುಕೊಂಡ ಶ್ರೀಕೃಷ್ಣನ ಬಗ್ಗೆ, ಅವರು ಕಂಡುಕೊಂಡ ಅಧ್ಯಾತ್ಮದ ಮೇರುಪಥದ ಬಗ್ಗೆ ಅನೇಕ ರೀತಿಯ ಹೊಳಹುಗಳಿಂದ ಕೂಡಿದ್ದು ದಿವ್ಯಭಕ್ತಿಯ ಅನನ್ಯ ಕೃತಿಗಳೆನ್ನಿಸಿವೆ.

## ಸರಸೀ ಮೆಹ್ತಾರ ಜನಪ್ರಿಯ ರಚನೆ

**ವೈಷ್ಣವ ಜನತೋ ತೇನೇ ಕಹಿಯೆ**
**ಜೋ ಪೀಡ ಪರಾಯೀ ಜಾಣೇರೇ ॥**
**ಪರ ದುಃಖೇ ಉಪಕಾರ ಕರೇ ತೋಯೆ**
**ಮನ ಅಭಿಮಾನ ನ ಆಣೇ ರೇ ॥ 1 ॥**
**ಸಕಲ ಲೋಕಮಾಂ ಸಹುನೇ ವಂದೇ**
**ನಿಂದಾ ನ ಕರೇ ಕೇನೀರೋ ।**
**ವಾಛ ಕಾಛ ಮನ ನಿಶ್ಚಲ ರಾಖೇ**
**ಧನ ಧನ ಜನನೀ ತೇನೀರೇ ॥ ॥ 2 ॥**
**ಸಮದೃಷ್ಟಿನೇ ತೃಷ್ಣಾ ತ್ಯಾಗೀ**
**ಪರಸ್ತ್ರೀ ಜೇನೇ ಮಾತರೇ ।**
**ಜಿಹ್ವಾ ಥಕೀ ಅಸತ್ಯ ನ ಬೋಲೇ**
**ಪರಧನ ನವಝಾಲೇ ಹಾಥ ರೇ ॥ 3 ॥**
**ಮೋಹ ಮಾಯಾ ವ್ಯಾಪೇ ನಹಿಂ ಜೇನೇ**
**ಧೃಢ ವೈರಾಗ್ಯ ಜೇನಾ ತನಮಾಂರೇ ।**
**ರಾಮನಾಮ ಶುಂ ತಾಳೀ ಲಾಗೀ**
**ಸಕಲ ತೀರಥ ತೇನಾ ಮನಮಾಂಕೀ ॥ 4 ॥**
**ವಣ ಲೋಭೀನೇ ಕಪಟ ರಹಿತ ಛೇ**
**ಕಾಮ ಕ್ರೋಧ ನಿವಾರ್ಯಾರೇ ।**
**ಮ್ಭಣೇ ನರಸೈಯೋ ತೇನುಂ ದರಸನ ಕರತಾಂ**
**ಕುಲ ಏಕೋತೇರ ತಾಯೋಂರೇ ॥ 5 ॥**

'ಸುಧಾಮ ಚರಿತ್', ದಾನ ಲೀಲಾ, ಚತುರೀ, ಇಂಥ ಅನೇಕ ಆಖ್ಯಾನಗಳನ್ನು ನರಸೀ ಮೆಹ್ತಾ ರಚಿಸಿದ್ದಾರೆ. ಭಾಗವತ ಪುರಾಣದಲ್ಲಿ ನಿರೂಪಿತವಾಗಿರುವ ಅನೇಕ ಪ್ರಸಂಗಗಳನ್ನು ತಳಹದಿಯನ್ನಾಗಿರಿಸಿಕೊಂಡು ಅನೇಕ ಕೃತಿಗಳ ರಚನೆ ಮಾಡಿದ್ದಾರೆ. ಗುಜರಾತ್ ಭಾಷೆಯಲ್ಲಿ ದೊರೆಯುವ ಮೊತ್ತಮೊದಲ ಆಖ್ಯಾನ ಕವ್ಯಗಳಿವು ಎನ್ನಲಾಗಿದೆ. ಎಂತಲೇ ಮೆಹ್ತಾ "ಆದಿಕವಿ" ಎನ್ನಿಸಿಕೊಂಡರು.

ಸಂಸ್ಕೃತ ಭಾಷೆಯಲ್ಲಿನ ಜಯದೇವ ಕವಿಯ "ಗೀತ ಗೋವಿಂದ" ಕಾವ್ಯವನ್ನು ಹೋಲುವ ಐವತ್ತೆರಡು ರಚನೆಗಳನ್ನು ಗುಜರಾತೀ ಭಾಷೆಗೆ ನೀಡಿರುವ ನರಸೀ ಮೆಹ್ತಾ ಶ್ರೇಷ್ಠರಾದ ಆದಿಕವಿ. ರಾಧಾಕೃಷ್ಣರ ವಿರಹ, ಪ್ರೇಮಗೀತೆಗಳ ಸುಂದರ ಸಂಕಲನವಿದು. ಮಥುರೆಗೆ ಹಾಲು, ಮೊಸರು ಮಾರುವ ನೆಪದಲ್ಲಿ ಹೋಗಿ ಶ್ರೀಕೃಷ್ಣನನ್ನು ಕಾಣಲು ಬಯಸುವ ಗೋಪಬಾಲೆಯರ ಭಕ್ತಿ, ಪ್ರೀತಿಗಳ ಹಂಬಲದ ಉತ್ಕೃಷ್ಟ ರಚನೆಯೇ ಮೆಹ್ತಾರ



"ದಾನಲೀಲಾ" ಕೃತಿ. ಕೃಷ್ಣ, ಸುಧಾಮರ ಸ್ನೇಹ ಭಕ್ತಿಯ ಜನಪ್ರಿಯ ಕಥೆಯೇ ಇವರ "ಸುಧಾಮ ಚರಿತ್" ಕೃತಿಯಾಗಿದೆ.

"ಗೋವಿಂದ ನಮನ" ಎಂಬ ಇವರ ರಚನೆ ಆಂಗ್ಲಭಾಷೆಗೆ "Departure of Govind" ಎಂಬ ಕೃತಿಯಾಗಿ ಅನುವಾದಗೊಂಡಿದೆ. ಗೋಕುಲದಿಂದ ಶ್ರೀಕೃಷ್ಣನನ್ನು ಅಕ್ರೂರನು ಕರೆದೊಯ್ಯಲು ಬಂದಾಗಿನ ಸನ್ನಿವೇಶ, ಘಟನೆಗಳು ಈ ರಚನೆಯಲ್ಲಿ ಹೃದಯಂಗಮವಾಗಿವೆ.

"ಸುರತ ಸಂಗ್ರಾಮ" ಎಂಬ ಈ ಭಕ್ತ ಕವಿಯ ರಚನೆಯು ರಾಧಾ ಮತ್ತು ಅವಳ ಗೆಳತಿಯರ ನಡುವೆ ನಡೆಯುವ ವಾಕ್ಸಂಗ್ರಾಮ, ಮುನಿಸುಗಳ ಚಿತ್ರಣದಿಂದ ಕೂಡಿದ್ದು ಕೃಷ್ಣನ ಮೇಲಿನ ಪ್ರೇಮಕ್ಕಾಗಿ, ಕೃಷ್ಣ ಪ್ರೇಮವನ್ನು ಪಡೆಯಲು ರಾಧೆಯೊಂದಿಗೆ ಇತರ ಗೆಳತಿಯರು ನಡೆಸುವ ಪ್ರೇಮಯುದ್ಧದ ಕೃತಿ ಎನ್ನಿಸಿಕೊಂಡಿದೆ.

ಶ್ರೀಕೃಷ್ಣನ ಜನನ, ಬಾಲ್ಯದ ತುಂಟತನಗಳ ಅನೇಕ ಚಿತ್ರಣಗಳು ರಚನೆಯಲ್ಲಿ ಅಸಂಖ್ಯವಾಗಿವೆ. "ಶೃಂಗಾರ್ ಪದ್" ಎಂಬ ನರಸೀ ಮೆಹ್ತಾರ ಕೃತಿಯಲ್ಲಿ ನೂರು ಹಾಡುಗಳು ಇದ್ದು, ಇವೆಲ್ಲವೂ ರಾಧಾಕೃಷ್ಣರ ರಾಸಲೀಲೆಗಳ ಚಿತ್ರಣ ನೀಡುವ ಪ್ರೇಮ ಕಾವ್ಯವಾಗಿದೆ. ಈ ಕೃತಿಯಲ್ಲಿ ಶೃಂಗಾರರಸದ ಅದ್ಭುತ ಚಿತ್ರಣ ದೊರೆಯುತ್ತದೆ.

"ವೈಷ್ಣವ ಜನತೋ ತೇನೆ ಕಹಿಯು ಜೇ । ಪೀಡ್ ಪರಾಯೀ

"ಜಾಣೇರೇ" ಎಂಬ ಅತ್ಯಂತ ಜನಪ್ರಿಯವಾಗಿ ಇಂದಿಗೂ ಚಾಲನೆಯಲ್ಲಿರುವ ಹಾಡನ್ನು ರಚಿಸಿದವರೇ ಸಂತ "ನರಸೀ ಮೆಹ್ತಾ." ಇಡೀ ಭಾರತದಾದ್ಯಂತ ಜನರು ಇಷ್ಟ ಪಟ್ಟು ಹಾಡುವ, ಕೇಳುತ್ತ ಸುಖಿಸುವ ಈ ಉತ್ಕೃಷ್ಟ ರಚನೆಯನ್ನು ದೇಶದ ಸಮಸ್ತ ಜನತೆಗಾಗಿ ನೀಡಿರುವ ಮಹಾನ್ ದಾರ್ಶನಿಕ ಕವಿ, ಗುಜರಾತ್ ಭಾಷೆಯ ಆದಿಕವಿ, ಭಕ್ತ ಕವಿ, ಧಾರ್ಮಿಕ ಬ್ರಾಹ್ಮಣ ಸಂತ "ನರಸೀ ಮೆಹ್ತಾ"ರನ್ನು ಪಡೆದಿರುವ ಈ ನಾಡು ಧನ್ಯ! ಮಹಾತ್ಮ ಗಾಂಧೀಜಿಯವರ ಜೀವನದಲ್ಲಿ ಅತ್ಯಂತ ಪ್ರಭಾವ ಬೀರಿದ ಹಾಡಿದು! ಲತಾಮಂಗೇಶ್ಕರ್‌ರವರಿಂದ ಮೊದಲ್ಗೊಂಡು ಅನೇಕ ಗಾಯಕ ಗಾಯಕಿಯರು ಮನದುಂಬಿ ಹಾಡಿ ಈ ಕೃತಿಯನ್ನು ಮತ್ತಷ್ಟು, ಇನ್ನಷ್ಟು ಜನಪ್ರಿಯಗೊಳಿಸಿದ್ದಾರೆ. ಗಾಂಧೀಜಿಯವರು ತನ್ನ ಸಬರ್‌ಮತಿ ಆಶ್ರಮದಲ್ಲಿ, ಮತ್ತಿತರ ಎಡೆಗಳಲ್ಲಿ ಈ ಹಾಡನ್ನೇ ಹಾಡಿಸುತ್ತ, ಆನಂದ, ಭಕ್ತಿಪರವಶರಾಗಿ ಮೈಮರೆಯುತ್ತಿದ್ದರು.

ನರಸೀ ಮೆಹ್ತಾರ ದೇಹಾಂತ್ಯವಾದುದರ ಬಗ್ಗೆ ವಿವರಗಳೇನೂ ತಿಳಿದು ಬಂದಿಲ್ಲ. ಅವರು 1481ರಲ್ಲಿ ಮಂಗ್ರೋಲ್ ಎಂಬ ಗ್ರಾಮದಲ್ಲಿ ನಿಧನರಾದರೆಂದು ಸಂಶೋಧಕರು ಸೂಚಿಸಿದ್ದಾರೆ.

ಸಂತರಿಗೆ ಅಳಿವೆಲ್ಲಿಯದು? ತಮ್ಮ ಬದುಕನ್ನು ಮಾದರಿಯಾಗಿರಿಸಿ ಮಾರ್ಗದರ್ಶನವಾದವರು ಅವರು. ತಮ್ಮ ರಚನೆಗಳ ಮೂಲಕ ಸದಾ ಕಾಲದಲ್ಲಿಯೂ ಜನತೆಯ ಮನದಲ್ಲಿ ಉಳಿದವರು ಅವರು. ಸಂತರು ಭಾರತದ ಅಧ್ಯಾತ್ಮವನ್ನು ಅನಂತವಾಗಿರಿಸಿದ ಮಹಾತ್ಮರು.

ನರಸೀ ಅವರ "ವೈಷ್ಣವ ಜನತೋ" ಹಾಡನ್ನು ಇಂಗ್ಲಿಷ್ ಹಾಗೂ ಕನ್ನಡ ಅನುವಾದದಲ್ಲಿ ಇಲ್ಲಿ ಕೊಡಲಾಗಿದೆ.

## ವೈಷ್ಣವ ಜನತೋ ತೇನೆ ಕಹಿಯೆ ಜೊ....

ನಮ್ಮ ಕಾಲದ ಸಂತರಾಗಿ ಬಾಳಿ ನಮ್ಮೊಡನಿದ್ದು ಆಧ್ಯಾತ್ಮಿಕತೆಯನ್ನು ತಮ್ಮ ಹರಿಕಥಾ ಪ್ರವಚನ, ರಚನೆಗಳು, ಹಾಡಿನ ಮೂಲಕ ಹರಡಿ ಬೆಳಕು ತೋರಿ ಇನ್ನಿಲ್ಲವಾದ ಸಂತ ಭದ್ರಗಿರಿ ಕೇಶವದಾಸರು ನರಸೀ ಮೆಹ್ತಾರ "ವೈಷ್ಣವ ಜನತೋ" ಹಾಡನ್ನು ಕನ್ನಡದಲ್ಲಿಯೂ ಇಂಗ್ಲಿಷಿನಲ್ಲಿಯೂ ಸೊಗಸಾಗಿ ಅನುವಾದ ಮಾಡಿದ್ದಾರೆ. ಭಕ್ತ ಜನರಲ್ಲಿ ಈ ಹಾಡುಗಳನ್ನು ಹೇಳಿಕೊಟ್ಟು ಅವರು ಹಾಡಿಸುತ್ತಲೂ ಇದ್ದರು.



## ಕನ್ನಡಾನುವಾದ

ವೈಷ್ಣವ ನೆನ್ನಿರೋ ಅಂಥವರ
ಪರರ ಪೀಡೆಯನು ಅರಿವವರ ।
ಪರರ ದುಃಖದಿ ಉಪಕಾರ ಗೈವವರ
ಮನದೊಳು ಅಭಿಮಾನ ಧರಿಸದಿರುವವರ ॥ 1 ॥

* * *

ಸಕಲ ಲೋಗರನೆಲ್ಲ ವಂದಿಸುತಿಹರ
ನಿಂದೆಯನೆಂದೂ ಗೈಯದಿರುವರ ।
ಕಾಯಾ ವಾಚಾ ಮನ ಶುದ್ಧ ಉಳ್ಳವರ
ಧನ್ಯ ಧನ್ಯ ಜನನೀ ಅಂಥವರ ॥ 2 ॥

* * *

ಸಮದೃಷ್ಟಿಯಿಂ ತೃಷ್ಣೆಯ ತ್ಯಜಿಸಿದವರ
ಪರಸ್ತ್ರೀಯನು ತಾಯಂತೆ ಕಾಂಬವರ ।
ಜಿಹ್ವೆಯಿಂ ಅಸತ್ಯ ಎಂದೂ ನುಡಿಯದವರ
ಪರ ಧನವೆಂದಿಗೂ ಸ್ಪರ್ಶಿಸದವರ ॥ 3 ॥

* * *

ಮೋಹ ಮಾಯೆ ವ್ಯಾಪಿಸದಂಥವರ
ಧೃಡ ವೈರಾಗ್ಯದ ಮನದಲಿ ಧರಿಸಿದರ ।
ರಾಮನಾಮದೊಳೆ ಮನ ಬೆರೆತವರ
ಸಕಲ ತೀರ್ಥವ ದೇಹದೊಳುಳ್ಳವರ ॥ 4 ॥

* * *

ಲೋಭರಹಿತರ ಕಪಟರಹಿತರ
ಕಾಮ ಕ್ರೋಧವ ನಿವಾರಿಸಿದವರ ।
ನರಸೀ ಭಕ್ತ ಎಂಬನು ಅಂಥವರ
ದರುಶನ ಗೈದವರ ಕುಲ ಉದ್ಧಾರ ॥ 5 ॥

**ಅನುವಾದ: ಸಂತ ಭದ್ರಗಿರಿ ಕೇಶವದಾಸರು**

To him I call a Perfect man
Who feels for other's Pain
Even though he helps all men
He has no thought of I and Mine |1|
*

Seeing God in all, he salutes;
He never as uses or insults
He is chaste in thought, word and deed
The mother who bare him is blessed, indeed |2|
*


He has devoloped equality of vision
And sees his mother in every woman
He never utters a lie for any thing
He never Events the wealth of any being |3|
*

Attachment and delusion do not touch him
Dispassion is deep-rooted in him,
His mind is wedded to the holy name of Ram,
All sacred waters have found in him their home |4|
*

He is free of greed and deception
Lust and anger are transformed in Him
Narsi Bhagath says that one who has his darshan,
is relieved of karma and attains liberation |5|

**Translated by-Bhadragiri Keshavadas**

ಶ್ರೀಕೃಷ್ಣಕೃಪಾ, ಸೆಡಾರ್ ಬ್ಲಾಕ್-೨, ಹರವಿಜಯ ಅಪಾರ್ಟ್‌ಮೆಂಟ್ಸ್, ರವಿಗುಡ್ಡ,
ಇಟ್ಟಮಡು, ಬನಶಂಕರಿ ೩ನೇ ಹಂತ, ಬೆಂಗಳೂರು-೫೬೦ ೦೦೫



# ಗೀತಾ ಪ್ರವಚನ

■ ಸಂತ ವಿನೋಬಾ ಬಾವೆ.
■ ಕನ್ನಡ ಅನುವಾದ: ಸಿದ್ದವನಹಳ್ಳಿ ಕೃಷ್ಣಶರ್ಮಾ

(ಕಳೆದ ಸಂಚಿಕೆಯಿಂದ ಮುಂದುವರಿದಿದೆ)

23. ಹೃದಯದಲ್ಲಿನ ಈ ಸಾಗರವನ್ನು ಕಾಣಲು ಕಲಿಯಿರಿ. ಹೊರಗಿನ ನಿರಭ್ರ ನಿರ್ಮಲ ನೀಲ ಆಕಾಶವನ್ನು ಕಂಡು ಚಿತ್ತವನ್ನು ನಿರಭ್ರಗೊಳಿಸಿ, ನಿರ್ಮಲಗೊಳಿಸಿ, ವಾಸ್ತವವಾಗಿ ಚಿತ್ತದ ಏಕಾಗ್ರತೆ ಒಂದು ಆಟ, ತೀರ ಸುಲಭ. ಚಿತ್ತದ ವ್ಯಗ್ರತೆಯೇ ಅಸ್ವಾಭಾವಿಕ. ಅನೈಸರ್ಗಿಕ. ನೆಟ್ಟದೃಷ್ಟಿಯಿಂದ ಚಿಕ್ಕಮಕ್ಕಳ ಕಣ್ಣನ್ನು ನೋಡಿ. ಚಿಕ್ಕ ಮಗು ಯಾವಾಗಲೂ ನೆಟ್ಟದೃಷ್ಟಿಯಿಂದಲೇ ನೋಡುತ್ತದೆ. ನೀವು ಎಂಟು ಹತ್ತು ಸಲ ರೆಪ್ಪೆ ಹೊಡೆಯುತ್ತೀರಿ. ಮಗುವಿನ ಮನಸ್ಸು ತಟ್ಟನೆ ಏಕಾಗ್ರವಾಗುತ್ತದೆ. ನಾಲ್ಕೈದು ತಿಂಗಳು ತುಂಬಿದ ಮಗುವಿಗೆ ಹೊರಗಿನ ಹಸಿರು ಸೃಷ್ಟಿಯನ್ನು ತೋರಿಸಿ. ಅದು ಒಂದೇ ಸಮನೆ ನೋಡುತ್ತಲೇ ಇರುತ್ತದೆ. ಹೊರಗಿನ ಹಸಿರು ಬಣ್ಣವನ್ನು ನೋಡಿ ಮಗುವಿನ ಮಲವು ಹಸಿರಾಗುತ್ತದೆ ಎಂದು ಹೆಂಗಸರು ತಿಳಿದಿದ್ದಾರೆ. ಎಲ್ಲ ಇಂದ್ರಿಯಗಳನ್ನೂ ಕಣ್ಣಿಗೆ ಸೇರಿಸಿ ನೋಡಿದ ಹಾಗೆ. ಚಿಕ್ಕ ಮಗುವಿನ ಮನಸ್ಸಿನ ಮೇಲೆ ಇಂದ್ರಿಯಗಳನ್ನೂ ಕಣ್ಣಿಗೆ ಸೇರಿಸಿ ನೋಡಿದ ಹಾಗೆ. ಚಿಕ್ಕ ಮಗುವಿನ ಮನಸ್ಸಿನ ಮೇಲೆ ಯಾವ ವಿಷಯದ್ದೇ ಆಗಲಿ ಬಹಳ ಪರಿಣಾಮ ಆಗುತ್ತದೆ. ಮೊದಲಿನ ಎರಡು ಮೂರು ವರ್ಷಗಳಲ್ಲಿ ದೊರೆಯುವ ಶಿಕ್ಷಣವೇ ನಿಜವಾದ ಶಿಕ್ಷಣವೆಂದು



## ಏಕಾಗ್ರತೆ ಸಾಧಿಸುವುದು ಹೇಗೆ?

ಶಿಕ್ಷಣ ಶಾಸ್ತ್ರಜ್ಞರ ಹೇಳಿಕೆ. ವಿದ್ಯಾಪೀಠ, ಶಾಲೆ, ಸಂಘ ಸಂಸ್ಥೆಗಳೆಷ್ಟು ಇದ್ದರೂ ಸರಿಯೆ. ಮೊದಲಿಗೆ ದೊರೆತಂಥ ಶಿಕ್ಷಣ ಅನಂತರ ದೊರೆಯಲಾರದು. ಶಿಕ್ಷಣಕ್ಕೂ ನನಗೂ ಸಂಬಂಧವಿದೆ. ಈ ಬಾಹ್ಯ ಶಿಕ್ಷಣದ ಪರಿಣಾಮ ಶೂನ್ಯ ಎಂದು ದಿನದಿನವೂ ನನಗೆ ನಿಶ್ಚಯವಾಗುತ್ತಿದೆ. ಮೊದಲಿನ ಸಂಸ್ಕಾರ ವಜ್ರಲೇಪನವಿದ್ದಂತೆ. ಮುಂದಿನ ಶಿಕ್ಷಣ, ಹೊರಗಿನ ಬಣ್ಣ, ಮೇಲಿನ ಹೊಳಪು. ಸಾಬೂನು ಹಚ್ಚಿ ತೊಳೆದರೆ ಮೇಲಿನ ಕಲೆ ಮಾಯವಾಗುತ್ತದೆ. ಚರ್ಮದ ಕಪ್ಪು ಬಣ್ಣ ಮಾಯವಾದೀತೇ? ಹೀಗೆ ಮೂಲ ಸಂಸ್ಕಾರ ಅಳಿಯುವುದು ಬಹಳ ಕಠಿಣ.

ಈ ಮೊದಲಿನ ಸಂಸ್ಕಾರ ಬಲವತ್ತರವೇಕೆ? ಮುಂದಿನವು ದುರ್ಬಲವೇಕೆ? ಕಾರಣವಿಷ್ಟೆ: ಬಾಲ್ಯದಲ್ಲಿ ಚಿತ್ತದ ಏಕಾಗ್ರತೆ ನೈಸರ್ಗಿಕ. ಏಕಾಗ್ರತೆಯಿರುವುದರಿಂದ ಆಗ ತಲೆದೋರಿದ ಸಂಸ್ಕಾರ ಅಳಿಸಿ ಹೋಗುವುದಿಲ್ಲ. ಇಂಥ ಮಹಿಮೆ ಏಕಾಗ್ರತೆಯದು! ಅದನ್ನು ಸಾಧಿಸಿದವನಿಗೆ ಯಾವುದು ಅಸಾಧ್ಯ?

24. ಇಂದು ನಮ್ಮ ಬಾಳೆಲ್ಲವೂ ಕೃತ್ರಿಮವಾಗಿದೆ. ಬಾಲವೃತ್ತಿ ಸತ್ತುಹೋಗಿದೆ. ಬದುಕಿನಲ್ಲಿ ನಿಜವಾದ ಸ್ವಾರಸ್ಯ ಇಲ್ಲ. ಬಾಳು ಶುಷ್ಕವಾಗಿದೆ. ವಕ್ರವಕ್ರವಾಗಿ ಹೇಗೋ ಏನೋ ಬದುಕುತ್ತಿದ್ದೇವೆ. ಮಾನವನ ಪೂರ್ವಜ ಮಂಗ ಎಂಬ ಸಿದ್ಧಾಂತವನ್ನು ಡಾರ್ವಿನ್ ಮಾಡದಿದ್ದರೆ–ನಮ್ಮ ಕೃತಿಯಿಂದ ನಾವು ಅದನ್ನು ಮಾಡುತ್ತಿದ್ದೇವೆ.

ಚಿಕ್ಕ ಮಕ್ಕಳಲ್ಲಿ ನಂಬಿಕೆಯಿರುತ್ತದೆ. ತಾಯಿ ಹೇಳಿದುದೇ ಪ್ರಮಾಣ. ಈಸೋಪನ ನೀತಿಯ ಕತೆ ಅವರಿಗೆ ಅಸತ್ಯವೆನಿಸದು. ಕಾಗೆ ಹೇಳಿತು, ಗುಬ್ಬಚ್ಚಿ ಮಾತಾಡಿತು–ಇವು ನಿಜವೆಂದೇ ಅವರಿಗನಿಸುತ್ತದೆ. ಈ ಮಂಗಲ ವೃತ್ತಿಯಿಂದ ಮಕ್ಕಳಿಗೆ ಬಲು ಬೇಗ ಏಕಾಗ್ರತೆ ಬಂದುಬಿಡುತ್ತದೆ.

### 31. ಅಭ್ಯಾಸ–ವೈರಾಗ್ಯ, ಶ್ರದ್ಧೆ

25. ಸಾರಾಂಶ–ಧ್ಯಾನಯೋಗಕ್ಕೆ ಚಿತ್ತದ ಏಕಾಗ್ರತೆ, ಬಾಳಿನ ಪರಿಮಿತತನ ಸಾಮ್ಯದೃಷ್ಟಿ ಇವು ಮೂರು ಅಗತ್ಯ. ಇನ್ನೂ ಎರಡು ಸಾಧನೆಗಳುಂಟು. ವೈರಾಗ್ಯ–ಅಭ್ಯಾಸ. ಒಂದು ವಿಧ್ವಂಸಕ ಕೆಲಸ. ಅದಕ್ಕೆ ವೈರಾಗ್ಯ ಎನ್ನುವುದು, ಬಿತ್ತುವುದು ವಿಧಾಯಕ ಕೆಲಸ. ಮನಸ್ಸಿನಲ್ಲಿ ಸದ್ವಿಚಾರಗಳನ್ನು ಕುರಿತು ಮತ್ತೆ ಮತ್ತೆ ಯೋಚಿಸುವುದು ಅಭ್ಯಾಸ. ವೈರಾಗ್ಯ ವಿಧ್ವಂಸಕ ಕ್ರಿಯೆ. ಅಭ್ಯಾಸ ವಿಧಾಯಕ ಕ್ರಿಯೆ.

26. ವೈರಾಗ್ಯ ಮೊಳೆಯುವುದು ಹೇಗೆ? ಮಾವಿನಹಣ್ಣು ರುಚಿ ಎನ್ನುತ್ತೇವೆ. ರುಚಿಯಿರುವುದು ಕೇವಲ ಆ ಹಣ್ಣಿನಲ್ಲೇನು? ಅಲ್ಲ. ನಮ್ಮ ಆತ್ಮದಲ್ಲಿನ ರುಚಿಯನ್ನು, ಸವಿಯನ್ನು ನಾವು ಆ ವಸ್ತುವಿನಲ್ಲಿ ಬೆರೆಸುತ್ತೇವೆ. ಅನಂತರ ಆ ವಸ್ತು ಸವಿಯಾಗುತ್ತದೆ. ಆದುದರಿಂದ ಒಳಗಿನ ಸವಿಯನ್ನು ಅನುಭವಿಸಲು ಕಲಿಯಿರಿ. ಕೇವಲ ಬಾಹ್ಯ ವಸ್ತುಗಳಲ್ಲಿ ಸವಿಯಿಲ್ಲ. ಮಾಧುರ್ಯಸಾಗರವಾದ ಆ 'ರಸಾನಾಂ ರಸತಮಃ'-ಆತ್ಮ ನನ್ನ ಹತ್ತಿರ ಇರುವುದರಿಂದಲೇ ಸಿಹಿವಸ್ತುಗಳಿಗೆ ಸಿಹಿ ದೊರೆತಿದೆ. ಇಂಥ ಭಾವನೆ ಬೆಳೆದಂತೆಲ್ಲ ವೈರಾಗ್ಯ ಮೊಳೆಯುತ್ತದೆ. ಮಾರುತಿಗೆ ಸೀತಾದೇವಿ ಮುತ್ತಿನ ಹಾರ ಕೊಟ್ಟಳು. ಆತ ಮುತ್ತುಗಳನ್ನು ಕಚ್ಚಿ ನೋಡಿ ಬಿಸುಟು ಬಿಟ್ಟ. ಮುತ್ತುಗಳಲ್ಲಿ ಮಾರುತಿಗೆ ರಾಮ ಕಾಣಿಸಲಿಲ್ಲ. ರಾಮ ಅವನ ಹೃದಯದಲ್ಲಿದ್ದ. ಆ ಮುತ್ತುಗಳಿಗೆ ಮೂರ್ಖರು ಲಕ್ಷ ರೂಪಾಯಿ ಕೊಡುತ್ತಿದ್ದರು.

27. ಈ ಧ್ಯಾನಯೋಗದ ಮಾತನ್ನು ಹೇಳುವಾಗ ಭಗವಂತ ಅತ್ಯಂತ ಮಹತ್ತ್ವದ ಅಂಶವೊಂದನ್ನು ಮೊದಲಿಗೇ ಹೇಳಿದ್ದಾನೆ: "ನಾನು ನನ್ನನ್ನು ಉದ್ಧರಿಸಿಕೊಳ್ಳಬೇಕಾಗಿದೆ. ಮುಂದೆ ಹೋಗಬೇಕು. ಮೇಲಕ್ಕೆ ನೆಗೆಯಬೇಕು. ಈ ನರದೇಹದಲ್ಲಿ ಹೀಗೇ ಬಿದ್ದಿರಲಾರೆ. ಪರಮಾತ್ಮನ ಹತ್ತಿರ ಹೋಗಲು ಧೈರ್ಯದಿಂದ ಪ್ರಯತ್ನಪಡುತ್ತೇನೆ" ಎಂಬ ದೃಢಸಂಕಲ್ಪ ಬೇಕು.

ಇದನ್ನೆಲ್ಲ ಕೇಳುತ್ತಿದ್ದ ಹಾಗೆ ಅರ್ಜುನನಿಗೆ ಸಂಶಯ ಬಂತು. "ದೇವಾ ಈಗ ವಯಸ್ಸಾಗಿದೆ. ಇನ್ನೆರಡು ದಿನಕ್ಕೆ ಸತ್ತು ಹೋದೇನು. ಈ ಸಾಧನೆಯಿಂದ ಉಪಯೋಗವೇನು?" ಎಂದು ಕೇಳಿದ. ಅದಕ್ಕೆ ಭಗವಂತ 'ಮರಣ ಎಂದರೆ ಮಹಾನಿದ್ರೆ. ನಿತ್ಯವೂ ಉದ್ಯೋಗದ ಅನಂತರ ನಾವು ಏಳೆಂಟು ಗಂಟೆ ನಿದ್ದೆ ಹೋಗುತ್ತೇವೆ. ಆ ನಿದ್ರೆಯ ಬಗ್ಗೆ ಭೀತಿಯಾಗುತ್ತದೆಯೆ? ಇಲ್ಲ. ತತ್-ಪ್ರತಿಯಾಗಿ ನಿದ್ದೆಬಾರದೆ ಹೋದರೆ ಚಿಂತೆ ಉಂಟಾಗುತ್ತದೆ. ನಿದ್ರೆ ಅಗತ್ಯ. ಹಾಗೇ ಮರಣವೂ ಅಗತ್ಯ. ನಿದ್ರೆಯನ್ನು ಮುಗಿಸಿ ಎದ್ದ ಬಳಿಕ ಮತ್ತೆ ನಮ್ಮ ಕೆಲಸಕ್ಕೆ ತೊಡಗುವ ಹಾಗೆ ಸತ್ತ ಅನಂತರವೂ ಮೊದಲಿನ ಸಾಧನೆಗಳೆಲ್ಲ ನಮಗೆ ದೊರೆಯುತ್ತವೆ' ಎಂದು ಹೇಳಿದ.

28. ಜ್ಞಾನದೇವರು 'ಜ್ಞಾನೇಶ್ವರಿ'ಯಲ್ಲಿ ಈ ಪ್ರಸಂಗದ ಬಗ್ಗೆ ಬರೆದ ಮಾತು ಅವರ ಆತ್ಮಚರಿತ್ರೆಯ ಹಾಗಿದೆ.

"ಬಾಲ್ಯದಲ್ಲೆ ಬಂದಿತೆಲ್ಲ ಜ್ಞಾನ । ಶಾಸ್ತ್ರವೆಲ್ಲ ಹೊಮ್ಮಿ ಮುಖದಿ ತಾನೇ ॥"

ಇದರಲ್ಲಿ ಅದೇ ಕಾಣುತ್ತದೆ. ಪೂರ್ವಜನ್ಮದ ಅಭ್ಯಾಸ ನಿನ್ನನ್ನು ಸೆಳೆಯುತ್ತದೆ. ಕೆಲವರ ಚಿತ್ತ ವಿಷಯಗಳ ಕಡೆ ಹೊರಳುವುದೇ ಇಲ್ಲ. ಅವರಿಗೆ ಮೋಹವೆಂದರೆ ಗೊತ್ತೇ ಇಲ್ಲ. ಅವರು ಪೂರ್ವಜನ್ಮದಲ್ಲಿ ಸಾಧನೆ ಮಾಡಿದ್ದರು. ಭಗವಂತ ಆಶ್ವಾಸನೆ ಕೊಟ್ಟಿದ್ದಾನೆ.

"ನ ಹಿ ಕಲ್ಯಾಣಕೃತ್ ಕಶ್ಚಿತ್ ದುರ್ಗತಿಂ ತಾತ ಗಚ್ಛತಿ ॥"

ಕಲ್ಯಾಣ ಮಾರ್ಗದಲ್ಲಿ ನಡೆದು ಹೋಗುವವನ ಶ್ರಮ ಎಳ್ಳಷ್ಟೂ ವ್ಯರ್ಥವಾಗಲಾರದು. ಇಂಥ ಈ ಶ್ರದ್ಧೆಯನ್ನು ಕೊನೆಗೆ ಕೊಟ್ಟಿದೆ. ಅಪೂರ್ಣವೂ ಕೊನೆಗೆ ಪೂರ್ಣವಾದೀತು. ಭಗವಂತನ ಈ ಉಪದೇಶದಲ್ಲಿನ ಸಾರವನ್ನು ಸವಿದು ನಿಮ್ಮ ನಿಮ್ಮ ಬದುಕನ್ನು ಸಾರ್ಥಕಗೊಳಿಸಿಕೊಳ್ಳಿ.

## ಅಧ್ಯಾಯ 7

## ಪ್ರಪತ್ತಿ ಅಥವಾ ಈಶ್ವರ ಶರಣತೆ

### 32. ಭಕ್ತಿಯ ಭವ್ಯ ದರ್ಶನ

1. ತಮ್ಮಂದಿರೆ, ಧರ್ಮದ ಪ್ರಸಂಗ ಎದುರಿಗೆ ಬಂದಾಗ ಅರ್ಜುನನಿಗೆ ಸ್ವಕೀಯ ಪರಕೀಯ ಎಂಬ ಮೋಹ ಹುಟ್ಟಿ ಆತ ಸ್ವಧರ್ಮಾಚರಣೆಯನ್ನು ತಪ್ಪಿಸುವುದರಲ್ಲಿದ್ದ. ಈ ವೃಥಾ ಮೋಹದ ವಿಚಾರ ಮೊದಲನೆಯ ಅಧ್ಯಾಯದಲ್ಲಿ ಬಂದಿದೆ. ಈ ಮೋಹನಿವಾರಣೆಯ ಉಪಾಯಕ್ಕಾಗಿ ಎರಡನೆಯ ಅಧ್ಯಾಯ ಮೊದಲಾಗಿದೆ. ಅಮರ ಆತ್ಮ ಎಲ್ಲೆಲ್ಲೂ ಇದೆ; ಶರೀರ ನಶ್ವರ; ಸ್ವಧರ್ಮವನ್ನೆಂದೂ ತ್ಯಜಿಸಕೂಡದು-ಎಂಬ ಮೂರು ಸಿದ್ಧಾಂತ ಅಲ್ಲಿವೆ. ಆ ಸಿದ್ಧಾಂತಗಳ ಪ್ರಯೋಗವನ್ನು ಕಲಿಸುವ ಕರ್ಮ ಫಲತ್ಯಾಗದ ಉಪಾಯವನ್ನು ಹೇಳಿದೆ. ಈ ಕರ್ಮಯೋಗದ ವಿವರಣೆಯಿಂದ ಕರ್ಮ-ವಿಕರ್ಮ-ಅಕರ್ಮಗಳ ಉತ್ಪತ್ತಿಯಾಯಿತು. ಈ ಕರ್ಮ-ವಿಕರ್ಮಗಳ ಸಂಗಮದಿಂದ ಹುಟ್ಟುವ ಎರಡು ಬಗೆಯ ಅಕರ್ಮ ಐದನೆಯ ಅಧ್ಯಾಯದಲ್ಲಿದೆ. ಭಿನ್ನ ಭಿನ್ನ ವಿಕರ್ಮಗಳನ್ನು ಮುಂದೆ ತಿಳಿಸಿದ್ದಾರೆ. ಸಾಧನೆಗೆ ಬೇಕಾಗುವ ಏಕಾಗ್ರತೆಯ ವಿಚಾರ ಆರನೆಯ ಅಧ್ಯಾಯದಲ್ಲಿದೆ.

ಇದು ಏಳನೆಯ ಅಧ್ಯಾಯ. ಇಲ್ಲಿ ವಿಕರ್ಮದ ಹೊಸ ದ್ವಾರವೊಂದು ತೆರೆದಿದೆ. ಸೃಷ್ಟಿದೇವಿಯ ಮಂದಿರದಲ್ಲಿ, ವಿಶಾಲವಾದ ವನದಲ್ಲಿ, ಬಗೆ ಬಗೆಯ ಮನೋಹರ ದೃಶ್ಯ ಕಣ್ಣಿಗೆ ಬೀಳುವಂತೆಯೇ ಗೀತಾ ಗ್ರಂಥದ ವಿಚಾರ ಸಹ. ಆರನೆಯ ಅಧ್ಯಾಯದಲ್ಲಿ ಏಕಾಗ್ರತೆಯ ವಿವರಣೆಯಿತ್ತು. ಈಗ ಹೊಸ ಬಾಗಿಲಲ್ಲಿ ಅಡಿಯಿಡೋಣ.

2. ಈ ಬಾಗಿಲು ತೆರೆವ ಮೊದಲೇ ಈ ಮೋಹಕಾರಿ ಜಗದ್ರಚನೆಯ ರಹಸ್ಯ ತಿಳಿಸಿದೆ. ಒಂದೇ ಬಗೆಯ ಕಾಗದದ ಮೇಲೆ, ಒಂದೇ ಬಣ್ಣದಿಂದ, ಒಂದೇ ಕುಂಚದಿಂದ ಚಿತ್ರಕಾರ ಬಗೆಬಗೆಯ ಚಿತ್ರ ರಚಿಸುತ್ತಾನೆ. ಸಿತಾರು ನುಡಿಸುವ ವಾದ್ಯಕಾರ ಏಳು ಸ್ವರಗಳಲ್ಲಿ ಅನೇಕ ರಾಗಗಳನ್ನು ಹೊರಡಿಸುತ್ತಾನೆ. ಕೇವಲ ಐವತ್ತೆರಡು ಅಕ್ಷರಗಳಿಂದ ನಾವು ಸಾಹಿತ್ಯದಲ್ಲಿ ಬಗೆ ಬಗೆಯ ಭಾವ ವಿಚಾರಗಳನ್ನು ವ್ಯಕ್ತಗೊಳಿಸುತ್ತೇವೆ. ಈ ಸೃಷ್ಟಿಯದೂ ಹೀಗೇ. ಇಲ್ಲಿ ಅನಂತ ವಸ್ತು, ಅನಂತ ವೃತ್ತಿ. ಆದರೆ ಈ ಅಂತರ್ಬಾಹ್ಯ ಸೃಷ್ಟಿಯೆಲ್ಲ ಹುಟ್ಟಿದುದು ಒಂದೇ ಒಂದು ಅಖಂಡ ಆತ್ಮ, ಒಂದೇ ಅಷ್ಟಧಾಪ್ರಕೃತಿಯಿಂದ. ಈ ಇಬ್ಬಗೆಯ ಮಿಶ್ರಣದಿಂದ ಕೋಪಿಷ್ಠನ ಕೋಪ, ಪ್ರೇಮಿಯ ಪ್ರೀತಿ, ದುಃಖಿಯ ಅಳು, ಆನಂದಿತನ ಆನಂದ ಸೋಮಾರಿಯ ನಿದ್ರಾಮೋಹ, ಉದ್ಯೋಗಿಯ ಕರ್ಮ ಸ್ಫೂರ್ತಿ-ಎಲ್ಲವೂ ಒಂದೇ ಚೈತನ್ಯ ಶಕ್ತಿಯ ಆಟ. ಈ ಪರಸ್ಪರ ವಿರುದ್ಧ ಭಾವಗಳ ಮೂಲದಲ್ಲಿ ಒಂದೇ ಒಂದು ಚೈತನ್ಯ ತುಂಬಿದೆ. ಒಳಗಿನ ಚೈತನ್ಯ ಒಂದೇ. ಅದೇ ರೀತಿ ಹೊರಗಣ ಆಕಾರದ ಸ್ವರೂಪವೂ ಒಂದೇ. ಚೈತನ್ಯಮಯ ಆತ್ಮ, ಜಡ ಪ್ರಕೃತಿ, ಇವೆರಡರ ಬೆರಕೆಯಿಂದ ಸಮಸೃಷ್ಟಿಯ ಜನನವಾಯಿತೆಂದು ಭಗವಂತ ಪ್ರಾರಂಭದಲ್ಲೇ ಹೇಳಿದ್ದಾನೆ.

3. ಆತ್ಮ ಹಾಗೂ ದೇಹ; ಪರಾ ಹಾಗೂ ಅಪರಾ ಪ್ರಕೃತಿ ಎಲ್ಲೆಲ್ಲೂ ಒಂದೇ. ಹೀಗಿದ್ದರೂ ಈ ಮಾನವನಿಗೆ ಮೋಹವೇಕೆ? ಭೇದವೇಕೆ ಕಾಣುತ್ತದೆ? ಇಷ್ಟವಾದ ಮನುಷ್ಯನ ಮುಖ ಸವಿ. ಬೇರೆಯವರದು ಬೇಸರ. ಒಬ್ಬನನ್ನು ಕಾಣಬೇಕು. ಇನ್ನೊಬ್ಬನನ್ನು ತಪ್ಪಿಸಬೇಕು ಎನಿಸಲೇಕೆ? ಒಂದೇ ಲೇಖನಿ, ಒಂದೇ ಕಾಗದ, ಒಬ್ಬನೇ ಚಿತ್ರಕಾರ, ಆದರೆ ಬೇರೆ ಬೇರೆ ಚಿತ್ರಗಳಿಂದ ಬೇರೆ ಬೇರೆ ಭಾವ ಹುಟ್ಟುತ್ತದೆ. ಇದರಲ್ಲೇ ಚಿತ್ರಕಾರನ ಕೌಶಲ, ಚಿತ್ರಕಾರನ, ಸಿತಾರು ನುಡಿಸುವವನ ಬೆರಳುಗಳ ಕೌಶಲ ಅಂಥದು; ಅವರು ನಮ್ಮನ್ನು ಅಳಿಸಲೂ ಬಲ್ಲರು, ನಗಿಸಲೂ ಬಲ್ಲರು. ಈ ಎಲ್ಲ ಕೌಶಲದ ಗುಟ್ಟು ಇರುವುದು ಅವರ ಬೆರಳುಗಳಲ್ಲಿ.

ಈತ ಹತ್ತಿರ ಇರಬೇಕು. ಆತ ಇರಬಾರದು. ಈತ ನಮ್ಮವನು, ಆತ ಬೇರೆಯವನು-ಮೊದಲಾದ ವಿಚಾರ ಮನಸ್ಸಿನಲ್ಲಿ



47ನೇ ಪುಟಕ್ಕೆ



ಸ್ವಾಮಿ ನಿಮಿಷಾನಂದಜೀಯವರ ಲೇಖನ ಮಾಲೆ ನಮ್ಮ ದೈನಂದಿನ ಜೀವನಗಳನ್ನು, ನಮ್ಮ ಪ್ರಾಚೀನ ಶಾಸ್ತ್ರಗಳನ್ನು ಆಧರಿಸಿ, ಹೇಗೆ ಉತ್ತಮಪಡಿಸಿಕೊಳ್ಳಬಹುದು ಎಂಬುದನ್ನು ತಿಳಿಯಪಡಿಸುವಂತಹವು. ಮರೀಚಿ ಮಹರ್ಷಿಗಳ ಮಕ್ಕಳಾದ ಕಶ್ಯಪರು ಮಾನವ ಧರ್ಮದ ಮೂಲಭೂತ ರಹಸ್ಯ ತತ್ತ್ವಗಳನ್ನು ಕಶ್ಯಪ ಸೂತ್ರಗಳಲ್ಲಿ ವಿವರಿಸಿದ್ದಾರೆ.

# ಜ್ಞಾನಾಜ್ಞಾನ ದ್ವಂದ್ವಜಂ ಕೋಲಾಹಲಂ

**(ಕಳೆದ ಸಂಚಿಕೆಯಿಂದ ಮುಂದುವರಿದಿದೆ)**

ಈ ಸೂತ್ರದ ಅರ್ಥ–"ನಾವು ಜ್ಞಾನ ಅಜ್ಞಾನಗಳ ನಡುವೆ ಸಿಲುಕಿದಾಗ ಉಂಟಾದ ದ್ವಂದ್ವ ನಮ್ಮ ಮನಸ್ಸಿನಲ್ಲಿ ಕೋಲಾಹಲವನ್ನೇ ಎಬ್ಬಿಸುತ್ತದೆ" ಎಂದು. ಲೌಕಿಕ ದೃಷ್ಟಿಯಲ್ಲಿ ನೋಡುವುದಾದರೆ ನಮಗೆ ತಿಳಿದಿರುವುದನ್ನೆಲ್ಲ ನಾವು ಜ್ಞಾನವೆಂದು ಕರೆಯುತ್ತೇವೆ. ಯಾವುದು ನಮಗೆ ತಿಳಿಯದೋ ಅದನ್ನು ಅಜ್ಞಾನವೆನ್ನುತ್ತೇವೆ. ಮೊದಲ ನೋಟಕ್ಕೆ ಇದು ಬಹಳ ಸರಳ ಎನ್ನಿಸಿದರೂ ಆಳವಾಗಿ ಪರಿಶೀಲಿಸಿದಾಗ ಇದರಲ್ಲಿ ಅತಿ ಮಹತ್ತಾದ ಹಾಗೂ ಬೃಹತ್ತಾದ ತತ್ತ್ವವೇ ಅಡಗಿದೆ.

ನಮಗೆ ಜೀವನದಲ್ಲಿ ಒಂದು ಕ್ಷೇತ್ರದಲ್ಲಿ ಜ್ಞಾನವಿದ್ದರೆ ಮತ್ತೊಂದರಲ್ಲಿ ಅಜ್ಞಾನವಿರುತ್ತದೆ. ಉದಾಹರಣೆಗೆ ಒಬ್ಬ ಭೌತಶಾಸ್ತ್ರದ ಪ್ರಾಧ್ಯಾಪಕರಿಗೆ ಭೌತಶಾಸ್ತ್ರದ ಜ್ಞಾನವಿದ್ದರೂ ರಸಾಯನಶಾಸ್ತ್ರದ ಬಗ್ಗೆ ಅಜ್ಞಾನವಿರುತ್ತದೆ. ಭೌತಶಾಸ್ತ್ರದಲ್ಲೂ ಕೂಡ ತಾವು ಪರಿಣತರಾದ ಶಾಖೆಯಲ್ಲಿ ಒಳ್ಳೆಯ ಜ್ಞಾನವಿದ್ದು ಭೌತಶಾಸ್ತ್ರದ ಇತರ ಶಾಖೆಗಳಲ್ಲಿ ಅಜ್ಞಾನವಿರುತ್ತದೆ. ಮನುಷ್ಯ ಒಂದು ಕ್ಷೇತ್ರದಲ್ಲಿ ತರಬೇತಿ ಪಡೆದು ಅದರಲ್ಲೇ ಪಳಗಿ, ಮುಳುಗಿದ ಮೇಲೆ ಹೇಳುತ್ತಾನೆ. "ನಾನು ಇದಿಷ್ಟನ್ನು ಚೆನ್ನಾಗಿ ಅರ್ಥಮಾಡಿಕೊಂಡಿದ್ದೇನೆ. ನನ್ನ ಜೀವನದಲ್ಲಿ ಈ ಜ್ಞಾನವನ್ನು ಬಹಳ ಶ್ರಮಪಟ್ಟು ಗಳಿಸಿದ್ದೇನೆ. ಇದನ್ನು ಬಿಟ್ಟರೆ ಬೇರೆಯವರ ಬಗ್ಗೆ ನನಗೆ ಹೆಚ್ಚು ಜ್ಞಾನವಿಲ್ಲ." ಈ ಸ್ಥಿತಿಯನ್ನು ಮುಟ್ಟಿದ ಅನಂತರ ಕೆಲವರು ತೃಪ್ತರಾಗಿ ಅಲ್ಲಿಯೇ ನಿಲ್ಲುತ್ತಾರೆ. ಇನ್ನೂ ಕೆಲವರು ನನ್ನ ಜ್ಞಾನವನ್ನು ಹೆಚ್ಚಿಸಿಕೊಳ್ಳಬೇಕಾದ ಕ್ರಮಗಳು ಯಾವುವು ಎಂದು ವಿಚಾರ ಮಾಡಿ ಕಾತರತೆಯಿಂದ ಇದಕ್ಕಾಗಿ ವಿವಿಧ ಮಾರ್ಗಗಳನ್ನು ಹುಡುಕುತ್ತಾರೆ. ಆಗ ಅನೇಕ ಪ್ರಶ್ನೆಗಳು ಅವರ ಮನಸ್ಸಿನಲ್ಲಿ ಮೂಡುತ್ತವೆ. ಈಗ ಬಂದಿರುವ ಅವಕಾಶ ಒಳ್ಳೆಯದೋ ಅಥವಾ ಮತ್ತೊಂದು ಅವಕಾಶಕ್ಕಾಗಿ ನಾನು ಕಾಯಬೇಕೋ, ಈ ಉದ್ಯೋಗವೇ ನನಗೆ ಸೂಕ್ತವೋ ಅಥವಾ ಬೇರೊಂದು ಉದ್ಯೋಗವನ್ನು ಹುಡುಕಲೋ ಇತ್ಯಾದಿ. ಹೀಗೆ ಜ್ಞಾನ, ಅಜ್ಞಾನಗಳ ಮಧ್ಯೆ ಮನಸ್ಸು ಸಿಲುಕಿ ದ್ವಂದ್ವವನ್ನು ಎಬ್ಬಿಸುತ್ತದೆ. ನಿರ್ಧಾರ ತೆಗೆದುಕೊಳ್ಳಲು ಕಷ್ಟವಾಗುವ ಸ್ಥಿತಿಯೇ ದ್ವಂದ್ವ. ದ್ವಂದ್ವವಿದ್ದಾಗ ಶಾಂತಿ, ನೆಮ್ಮದಿ, ತೃಪ್ತಿ, ಆನಂದ ಯಾವುದಕ್ಕೂ ನಮ್ಮ ಮನಸ್ಸಿನಲ್ಲಿ ಸ್ಥಳವಿರುವುದಿಲ್ಲ. ಆಗ ಮನಸ್ಸಿನಲ್ಲಿ ಬರೀ ಕೋಲಾಹಲದ ಸ್ಪಂದನ ತುಂಬಿರುತ್ತವೆ. ನಮ್ಮ ವೃತ್ತಿಯಲ್ಲೇ ಆಗಲಿ ಸಂಸಾರ ಜೀವನದಲ್ಲೇ ಆಗಲಿ, ಸಮಾಜದಲ್ಲಿ ಇತರರೊಂದಿಗಿನ ಒಡನಾಟದಲ್ಲೇ ಆಗಲಿ, ದ್ವಂದ್ವವು ಮತ್ತೆ ಮತ್ತೆ ತಲೆ ಎತ್ತಿ ತನ್ನ ಆರ್ಭಟದಿಂದ ಕೋಲಾಹಲವನ್ನು ಎಬ್ಬಿಸುತ್ತಲೇ ಇರುತ್ತದೆ. ಹೀಗಾಗಿ ಕೋಲಾಹಲ ನಮ್ಮ ಸ್ವಾಭಾವಿಕ ಸ್ಥಿತಿಯೇ ಆಗಿ ಬಿಟ್ಟಿದೆ.

ಶ್ರೀ ಮಹಾಲಕ್ಷ್ಮೀ ಅಷ್ಟಕದಲ್ಲಿ ಕೋಲಾಹಲಕ್ಕೆ ಒಂದು ಅಸುರನ ರೂಪವೇ ಕೊಟ್ಟಿದ್ದಾರೆ. ಶ್ರೀ ಮಹಾಲಕ್ಷ್ಮಿಯನ್ನು "ಕೋಲಾಸುರ ಭಯಂಕರಿ" ಎಂದು ವರ್ಣಿಸಿದ್ದಾರೆ. ಮನಸ್ಸಿನಲ್ಲಿರುವ ಕೋಲಾಹಲವನ್ನು ನೀಗಿಸಿ, ನಿವಾರಿಸಿ ಸಂಹಾರ ಮಾಡುವ ದಿವ್ಯಶಕ್ತಿಯೇ ದೇವಿ. ಕಶ್ಯಪರು ನಮಗೆ ಇಲ್ಲಿ ಹೇಳುತ್ತಾರೆ–ಎಚ್ಚೆತ್ತುಕೊಳ್ಳದಿದ್ದರೆ, ಕೋಲಾಹಲವೆಂಬ ಅಸುರ ನಮ್ಮ ಇಡೀ ಜೀವನವನ್ನು ಆವರಿಸಿಕೊಳ್ಳುತ್ತಾನೆ ಎಂದು. ನಾವು ಮೊದಲನೆಯ ಸೂತ್ರದಲ್ಲಿ ಆಸೆಗಳಿಂದ ಕರ್ಮ ಹುಟ್ಟುತ್ತದೆ ಎಂದು ಜಿಜ್ಞಾಸೆ ಮಾಡಿದೆವು. ನಾನು ವಿಷಯದಲ್ಲಿ ಇನ್ನೂ ಹೆಚ್ಚು ತಿಳಿದುಕೊಳ್ಳಬೇಕು ಅನ್ನುವುದು ಕೂಡ ಒಂದು ಆಸೆಯೇ. ಈ ಆಸೆ ಬಂದ ಕೂಡಲೇ ನಮ್ಮ ಮನಸ್ಸಿನಲ್ಲಿ ದ್ವಂದ್ವ ಉಂಟಾಗಿ ಮನಃಶಾಂತಿ ಹೋಗುತ್ತದೆ.

ಇಂದಿನ ಶೈಕ್ಷಣಿಕ ಕ್ಷೇತ್ರದಲ್ಲಿ ಕೂಡ ನಾನಾ ರೀತಿಯ ವಿದ್ಯೆಗಳನ್ನು ಕಲಿಯಬಹುದು. ಇಷ್ಟೊಂದು ವೈವಿಧ್ಯ ಕಲಿಕೆಗಳಲ್ಲಿ ಯಾವುದನ್ನು ಆರಿಸುವುದು ಎನ್ನುವುದೇ ವಿದ್ಯಾರ್ಥಿಗಳಿಗೆ ದ್ವಂದ್ವವನ್ನು ಎಬ್ಬಿಸುವ ಕಠಿಣವಾದ ನಿರ್ಧಾರ. ನಿರ್ಧಾರ ತೆಗೆದುಕೊಳ್ಳುವುದು ಯಾವಾಗ ಕಷ್ಟವಾಗುವುದೋ ಆಗ ನಾವು ಹೆಚ್ಚು ಮಂದಿ ಏನು ಮಾಡುತ್ತಿದ್ದಾರೋ ಅದನ್ನೇ ವಿಚಾರಮಾಡದೇ ಅನುಸರಿಸುತ್ತೇವೆ. **ಇದು ಮುಂದೆ ನಮ್ಮ ಇಡೀ ಭವಿಷ್ಯವನ್ನೇ ರೂಪಿಸುತ್ತದೆ ಎಂಬ ಸಂಪೂರ್ಣ ಪರಿಜ್ಞಾನ ನಮ್ಮಲ್ಲಿ ಮೂಡಿ ಬರುವುದಿಲ್ಲ.**

ಹೀಗೆ ಮಾನವ ಪ್ರಯತ್ನದಿಂದ ನಮ್ಮ ಆಸೆಗಳಿಂದ ನಾವು ತೆಗೆದುಕೊಳ್ಳುವ ನಿರ್ಧಾರಗಳಿಂದ ನಮ್ಮ ಹಣೆಯ ಬರಹವನ್ನು ನಾವು ನಮ್ಮ ಕೈಯಿಂದಲೇ ಪ್ರತಿಕ್ಷಣವು ಬರೆಯುತ್ತಿದ್ದೇವೆ. **ನಮ್ಮ ಹಣೆಯ ಬರಹವನ್ನು ನಾವೇ ಬರೆಯುತ್ತೇವೆ ನಿಜ, ಆದರೆ ಹೀಗೆ**

**ಬರೆದದ್ದನ್ನು ಮಾನವ ಪ್ರಯತ್ನದಿಂದ ಬದಲಾಯಿಸಲಾಗುವುದಿಲ್ಲ. ನಮ್ಮ ಹಣೆಯ ಬರಹವನ್ನು ಬದಲಾಯಿಸಲು ಭಗವಂತನಿಂದ ಮಾತ್ರ ಸಾಧ್ಯ. ಇದಕ್ಕೆ ದೇವರ ಕೃಪೆ ಸದಾ ನಮಗೆ ಇರಬೇಕು,** ಎನ್ನುವುದು.

ಬಾಹ್ಯ ಪ್ರಪಂಚಕ್ಕೆ ಸಂಬಂಧಪಟ್ಟಂತೆ ಜ್ಞಾನ ಅಜ್ಞಾನಗಳನ್ನು ನೋಡಿದೆವು. ಅಧ್ಯಾತ್ಮ ದೃಷ್ಟಿಯಿಂದ ನೋಡುವುದಾದರೆ ಆತ್ಮ ಸಾಕ್ಷಾತ್ಕಾರವೇ ಜೀವನದ ಗುರಿ ಎಂದು ಅರಿಯದಿರುವುದೇ ಅಜ್ಞಾನ. ಇನ್ನೊಂದು ಹೆಜ್ಜೆ ಮುಂದೆ ಹೋದರೆ, ಆತ್ಮ ಸಾಕ್ಷಾತ್ಕಾರದ ಅನುಭವವಿಲ್ಲದಿರುವುದೇ ಅಜ್ಞಾನ ಎಂದು ನಮ್ಮ ಋಷಿಮುನಿಗಳು ಹೇಳುತ್ತಾರೆ. ಆತ್ಮ ಸಾಕ್ಷಾತ್ಕಾರವಾಗುವವರೆಗೂ ನಮ್ಮನ್ನು ನಾವು ಅರಿಯಲು ಸಾಧ್ಯವಿಲ್ಲ. ಪ್ರಕೃತಿ ಧರ್ಮದಲ್ಲೂ ಈ ನಿಯಮವನ್ನು ಕಾಣಬಹುದು. ಅರಳಿ ನಿಂತ ಪುಷ್ಪವು ತನ್ನ ಪರಿಮಳವನ್ನು ತಾನೇ ಆಘ್ರಾಣಿಸಲಾರದು. ಪಕ್ವವಾದ ಮಾವಿನಹಣ್ಣು ತನ್ನ ಸಿಹಿಯನ್ನು ತಾನೇ ಸವಿಯಲಾರದು. ಹಾಗೆಯೇ ನಾವೂ ಕೂಡ ನಮ್ಮ ಜ್ಞಾನದ ಸ್ವಾರಸ್ಯವನ್ನು ನಾವೇ ಅನುಭವಿಸಲಾಗುವುದಿಲ್ಲ. ನಮ್ಮೊಳಗೇ ಹುಟ್ಟಿದಾಗಿನಿಂದಲೂ ಇರುವಂತಹ ಆತ್ಮ ಶಕ್ತಿ, ಆತ್ಮದ ಬೆಳಕು ಹಾಗೂ ಆತ್ಮದ ಸಹಜ ಗುಣವಾದ ಪರಮಾನಂದವನ್ನು ಅನುಭವಿಸಲು ನಮ್ಮಿಂದಾಗುತ್ತಿಲ್ಲ. ಮತ್ತೊಬ್ಬರ ಹೃದಯದಲ್ಲಿರುವ ಪ್ರೇಮವನ್ನು ನಾವು ಸ್ಪರ್ಶಿಸುತ್ತೇವೆ. ಆದರೆ ನಮ್ಮಲ್ಲಿರುವ ದ್ವಂದ್ವದ ಕಾರಣ ನಮ್ಮ ಹೃದಯದಲ್ಲೇ ಅಡಗಿರುವ ದಿವ್ಯ ಪ್ರೇಮವನ್ನು ನಾವು ಇನ್ನೂ ಅರಿತಿಲ್ಲ.

ಕಶ್ಯಪರು ಹೇಳುತ್ತಿದ್ದಾರೆ–"ನಿನ್ನ ಮನಸ್ಸಿನಲ್ಲಿ ಎಷ್ಟು ಸುಲಭವಾಗಿ ದ್ವಂದ್ವ ಉದ್ಭವವಾಗುವುದೆಂದು ಗಮನಿಸು." ಉದಾಹರಣೆಗೆ ನಾವು ದೇವಸ್ಥಾನಕ್ಕೆ ಹೋಗುತ್ತೇವೆ. ಯಾವ ಕಾರಣಕ್ಕಾಗಿ ಹೋಗುತ್ತೇವೆ? ನಮ್ಮ ಕಷ್ಟಗಳ ನಿವಾರಣೆಗಾಗಿ, ಮನಸ್ಸಿನ ದ್ವಂದ್ವಗಳನ್ನು ತೆಗೆದು ಶಾಂತಿಯನ್ನು ಸ್ಥಾಪಿಸುವುದಕ್ಕಾಗಿ ಹೋಗುತ್ತೇವೆ. ಹೀಗೆ ದೇವಸ್ಥಾನಕ್ಕೆ ಹೋಗಬೇಕು ಎಂದು ನಿಶ್ಚಯಿಸುವುದರಲ್ಲೇ ದ್ವಂದ್ವವನ್ನು ಉತ್ಪತ್ತಿಮಾಡುತ್ತೇವೆ. ಹೇಗೆ? ನಾನು ರಾಹುಕಾಲದಲ್ಲಿ ಹೋಗಲೋ, ಗುಳಿಕಕಾಲದಲ್ಲಿ ಹೋಗಲೋ? ಅಥವಾ ಯಮಗಂಡ ಕಾಲದಲ್ಲಿ ಹೋಗಲೋ? ಯಾವ ಪೂಜೆಯನ್ನು ಮಾಡಿಸಲಿ? ಅರ್ಚನೆ ಮಾಡಿಸಲೋ, ಅಭಿಷೇಕ ಮಾಡಿಸಲೋ? ಎಲ್ಲ ದೇವರ ವಿಗ್ರಹಗಳನ್ನು ಒಟ್ಟುಗೂಡಿ ಒಂದೇ ನಮಸ್ಕಾರ ಮಾಡಲೋ ಅಥವಾ ಒಂದೊಂದಕ್ಕೂ ಪ್ರತ್ಯೇಕವಾಗಿ ನಮಸ್ಕರಿಸಲೋ? ಹೊರದೇಶದಲ್ಲಿದ್ದರಂತೂ ಸಮಯದ ವ್ಯತ್ಯಾಸದಿಂದ ಇನ್ನೂ ಹೆಚ್ಚು ದ್ವಂದ್ವ ಉಂಟಾಗಬಹುದು. ಭಾರತದಲ್ಲಿ ರಾಹುಕಾಲದ ಪೂಜೆ ಮಾಡುವ ಸಮಯದಲ್ಲಿ ಆ ದೇಶದಲ್ಲಿ ಮಧ್ಯ ರಾತ್ರಿಯಾಗಿರಬಹುದು. ಯಾವ ದೇಶದ ಸಮಯವನ್ನು ಪಾಲಿಸಬೇಕು? ಹೀಗೆ ನಮ್ಮ ಮನಸ್ಸು ಜ್ಞಾನ ಅಜ್ಞಾನಗಳ ನಡುವೆ ಪರದಾಡುವುದು.

ಮನಸ್ಸಿನ ಕೋಲಾಹಲಕ್ಕೆ ಅತಿ ಸಣ್ಣದಾದ ವಿಷಯ ಕಾರಣವಾಗಬಹುದು ಅಥವಾ ಅತಿ ಗಂಭೀರವಾದ ವಿಷಯವೂ ಕಾರಣವಾಗಬಹುದು. ಇಂದು ನಾನು ಯಾವ ಉಡುಪನ್ನು ಧರಿಸಲಿ? ಯಾವ ಹೋಟಲಿನಲ್ಲಿ ತಿಂಡಿ ತಿನ್ನಲಿ? ನನ್ನ ವೃತ್ತಿಯಲ್ಲಿ ಸರಿಯಾದ ರೀತಿ, ನೀತಿ, ನಿಯಮ, ನಿಷ್ಠೆಗಳು ಯಾವುವು? ಅಪಘಾತದಲ್ಲಿ ಬಹಳ ಪೆಟ್ಟಾಗಿರುವ ನನ್ನ ಆಪ್ತ ಮಿತ್ರರು ಚೇತರಿಸಿಕೊಳ್ಳುವರೇ? ನಾನು ಯಾವ ದೇವರ ರೂಪವನ್ನು ಆರಾಧಿಸಲಿ? ಯಾವ ಮಂತ್ರ ಜಪಿಸಲಿ? ಈ ಎಲ್ಲ ಪ್ರಶ್ನೆಗಳೂ ನಮ್ಮ ಮನಸ್ಸನ್ನು ದ್ವಂದ್ವಕ್ಕೆ ಎಳೆಯುತ್ತವೆ, ಎಂದು ಈ ಸೂಕ್ಷ್ಮ ವಿಷಯಕ್ಕೆ ಕಶ್ಯಪರು ನಮ್ಮ ಗಮನವನ್ನು ಸೆಳೆಯುತ್ತಾರೆ.

ಅನೇಕ ಬಾರಿ ಬಾಹ್ಯ ಜೀವನದ ಆಗುಹೋಗುಗಳಿಂದ ತಾತ್ಕಾಲಿಕ ಸುಖ ದುಃಖಗಳಿಂದ ಬೇಸತ್ತ ನಮ್ಮ ಮನಸ್ಸು ಹೀಗೆ ಕೇಳತೊಡಗುತ್ತದೆ–"ನನ್ನೊಳಗೆ ಆತ್ಮ ಅಡಗಿರುವುದು ಸತ್ಯವೇ? ನನಗೆ ನಿಜವಾಗಿಯೂ ಒಂದು ದಿನ ಶಾಶ್ವತವಾದ ಶಾಂತಿ, ನೆಮ್ಮದಿ, ತೃಪ್ತಿ ದೊರೆಯುವುದೇ? ಜೀವನದಲ್ಲಿ ನನಗೆ ಬೇಕಾದುದನ್ನೆಲ್ಲ ಸಾಧಿಸಿದ್ದಾಯಿತು, ನನಗಿನ್ನಾವ ಆಸೆಗಳೂ ಇಲ್ಲ ಎಂದು ಸಂತೃಪ್ತಿಯಿಂದ ಕುಳಿತು ಆನಂದಿಸುತ್ತೇನೆಯೇ?" ಎಂದಾದರೂ. ಇದಕ್ಕೆ ಮಹಾಮುನಿ ಕಶ್ಯಪರು ಹೇಳುತ್ತಾರೆ–"ದೇವರು ದೇವತೆಗಳೂ ಕೂಡ ಎಷ್ಟೋ ಬಾರಿ ಈ ರೀತಿ ದ್ವಂದ್ವಕ್ಕೆ ಒಳಗಾಗಿದ್ದುಂಟು. ಈ ದ್ವಂದ್ವವನ್ನು ತೆಗೆಯುವ ಮಾರ್ಗವನ್ನು ಹುಡುಕುತ್ತಾ ಅವರೂ ಸಹ ಆತ್ಮಾನಂದವನ್ನು ಅರಸಿದ್ದೂ ಉಂಟು." ಇದನ್ನು ನಿದರ್ಶಿಸಲು ಒಂದು ಸುಂದರವಾದ ಕಥೆಯೇ ಇದೆ.

ದೇವಲೋಕದಲ್ಲಿ ಇರುವ ದೇವತೆಗಳಿಗೆಲ್ಲ ಬೃಹಸ್ಪತಿಯೇ ಗುರು. ಆಗಾಗ ದೇವ ದೇವತೆಗಳೆಲ್ಲ ಗುರು ಬೃಹಸ್ಪತಿಯ ಬಳಿ ಬಂದು ಸತ್ಸಂಗದಲ್ಲಿ ಪಾಲ್ಗೊಂಡು, ಆತ್ಮಜ್ಞಾನದ ಬಗ್ಗೆ ಜಿಜ್ಞಾಸೆ ಮಾಡಿ ತಮ್ಮ ದ್ವಂದ್ವಗಳಿಗೆ ಹಾಗೂ ಸಮಸ್ಯೆಗಳಿಗೆ ಪರಿಹಾರವನ್ನು ಹುಡುಕುತ್ತಾರಂತೆ. ಒಮ್ಮೆ ದೇವೇಂದ್ರನಿಗೆ ಅನ್ನಿಸಿತಂತೆ–"ಒಂದು ಕಡೆ ನೋಡಿದರೆ ಮನುಷ್ಯರು ನಾನು ಕೊಟ್ಟಂತಹ ಇಂದ್ರಿಯ ಶಕ್ತಿಯನ್ನು ದುರುಪಯೋಗಿಸುತ್ತಿದ್ದಾರೆ. ಮತ್ತೊಂದು ಕಡೆ ನೋಡಿದರೆ ಅಸುರರು ನನ್ನನ್ನು ಅಲ್ಲಾಡಿಸಿ ಉರುಳಿಸಲು ಯತ್ನಿಸುತ್ತಿದ್ದಾರೆ. ಇವರಿಬ್ಬರ ಮಧ್ಯೆ ಸಿಲುಕಿದ ನನಗೆ ಸೂಕ್ತವಾದ ಸಲಹೆ ನೀಡುವವರು ಯಾರು?" ಹೀಗೆ ಒತ್ತಡಕ್ಕೆ ಒಳಗಾದ ದೇವೇಂದ್ರನು ತನ್ನ ಗುರುಗಳಾದ ಬೃಹಸ್ಪತಿಗಳ ಬಳಿ ಬಂದು–"ಗುರುಗಳೇ ನಾನು ಬಂದಿದ್ದೇನೆ" ಎಂದ. ಆಗ ಗುರುಗಳು ಮುಗುಳು ನಗೆ ನಗುತ್ತ –"ಬಂದೆಯಾ ಇಂದ್ರಾ? ಬಾ, ಕುಳಿತಿಕೋ." ಎಂದು ಬರಮಾಡಿಕೊಂಡರು. ಅವರು ತೋರಿಸಿದ ಆಸನದಲ್ಲಿ ಕುಳಿತ ದೇವೇಂದ್ರ ತಲೆಯನ್ನು ತಿರುಗಿಸಿ ನೋಡಿದಾಗ ಬೆಚ್ಚಿಬಿದ್ದ. ಅವನ ಗಾಬರಿಗೆ ಕಾರಣ–ತನ್ನ ಪಕ್ಕದ ಆಸನದಲ್ಲೇ ಒಬ್ಬ ಅಸುರನು ಕುಳಿತು ತನ್ನನ್ನು ನೋಡಿ ನಗುತ್ತಿದ್ದ. ಗುರು ಬೃಹಸ್ಪತಿಗಳು ಮೊದಲು ಅಸುರನ ಕಡ ತಿರುಗಿ–"ನೀನು ಇಲ್ಲಿ ಬರಲು ಕಾರಣವೇನು?" ಎಂದು ಕೇಳಿದರು. ಆಗ ಅಸುರನು–"ನಾನು ಯಾರೆಂದು ತಿಳಿದುಕೊಳ್ಳಲು ನಿಮ್ಮಲ್ಲಿಗೆ ಬಂದಿದ್ದೇನೆ" ಎಂದು ಉತ್ತರಿಸಿದ. ಇದನ್ನು ಕೇಳಿದ ದೇವೇಂದ್ರನು ಮತ್ತಷ್ಟು ಆಶ್ಚರ್ಯಗೊಂಡನು. "ಈ ಸಾಮಾನ್ಯ ಅಸುರ ಇಂತಹ ನಿಗೂಢ ಆತ್ಮದ ರಹಸ್ಯವನ್ನು ಕೇಳುತ್ತಿದ್ದಾನಲ್ಲ! ನಾನು ದೇವಲೋಕಕ್ಕೇ ಒಡೆಯನಾದ ದೇವೇಂದ್ರ. ಈಗ ನಾನು ನನ್ನ ಮನಸ್ಸಿನ ಕೋಲಾಹಲವನ್ನು ಶಮನ ಮಾಡುವ ಶಾಂತಿ ನೆಮ್ಮದಿಗಾಗಿ ಬಂದಿದ್ದೇನೆಂದರೆ ಶೋಭೆಯಲ್ಲ. ನಾನೂ ಕೂಡ ಇದನ್ನೂ ಮೀರಿಸುವಂತಹ ಒಳ್ಳೆಯ ಅಧ್ಯಾತ್ಮ ಪ್ರಶ್ನೆಯನ್ನೇ ಕೇಳಬೇಕು," ಎಂದು ಯೋಚಿಸತೊಡಗಿದ. ಗುರುಗಳು ದೇವೇಂದ್ರನ ಕಡೆ ತಿರುಗಿ ವಿಚಾರಿಸಿದರು–"ಇಂದ್ರಾ ನನ್ನಿಂದ ನಿನಗೆ ಯಾವ ನೆರವಾಗಬೇಕಾಗಿತ್ತು?" ದೇವೇಂದ್ರನು ಎಷ್ಟು ಯೋಚಿಸಿದರೂ ಅವನಿಗೆ ಬೇರಾವ ಸೂಕ್ತ ಪ್ರಶ್ನೆಯು ಹೊಳೆಯಲೇ ಇಲ್ಲ. ಆಗ ಅವನು–"ಗುರುಗಳೇ ಈ ಅಸುರನು ತಿಳಿಸಿದ ಕಾರಣಕ್ಕಾಗಿಯೇ ನಾನೂ ಬಂದಿರುವೆ," ಎಂದ.

**(ಮುಂದುವರಿಯುವುದು)**

**ಶ್ರೀ ನಿಮಿಷಾಂಬಾ ಆಶ್ರಮ, ನಂ. ೭೩, ೪ನೇ ಕ್ರಾಸ್,**
**ಕಾನ್‌ಕಾರ್ಡ್ ಗಾರ್ಡನ್ ಸಿಟಿ ಲೇಔಟ್, ಆರ್.ವಿ. ಕಾಲೇಜು**
**ಅಂಚೆ, ಬೆಂಗಳೂರು–೫೬೦ ೦೫೯.**

ಶ್ರೀಕೃಷ್ಣ ಕರ್ಣಾಮೃತ



ಭಕ್ತಕವಿ ವಿದ್ವಾನ್ ಕೆ.ವಿ. ವರದರಾಜಯ್ಯಂಗಾರ್



# ಬ್ರಹ್ಮಾಂಡನಾಯಕ ಶ್ರೀಕೃಷ್ಣ

**ಶ್ಲೋಕ–16**

ಘೋಷಪ್ರಘೋಷಶಮನಾಯ ಮಥೋಗುಣೇನ
ಮಧ್ಯೇ ಬಬಂಧ ಜನನೀ ನವನೀತಚೋರಮ್
ತದ್ಬಂಧನಂ ತ್ರಿಜಗತಾಂ ಉದರಾಶ್ರಯಾಣಾಂ
ಆಕ್ರೋಶಕಾರಣಮಹೋ ನಿತರಾಂ ಬಭೂವ
*(II–23)*

**ದೂರು ಪ್ರತಿ ದೂರುಗಳ ಪರಿಹರಿಸಲೆಂದೇ ಕಡೆಗೋಲ ದಾರದಿಂದ**
**ನಡುವಿನಲಿ ಕಟ್ಟಿದಳು ತಾಯಿ ಯಶೋದೆಯು ಬೆಣ್ಣೆ ಕದ್ದಿರುವನನ್ನು**
**ಆ ಕಟ್ಟು ಹೊಟ್ಟೆಯಲಿ ಆಶ್ರಯ ಪಡೆದಿರುವ ಮೂಲೋಕ ಜೀವರಲ್ಲಿ**
**ನೋವಿನಲಿ ಕೋಪದಲಿ ಕೂಗುಗಳಿಗೆಲ್ಲ ಅತಿ ಹೆಚ್ಚು ಕಾರಣವದಾಯ್ತು**



ಮುದ್ದುಕೃಷ್ಣನು ಬೆಳೆದಂತೆಲ್ಲ ತುಂಟ ಕೃಷ್ಣನಾಗತೊಡಗಿದ. ಅವನ ತುಂಟತನಕ್ಕೆ ಗುರಿಯಾಗದವರೇ ಇರಲಿಲ್ಲ. ತಾಯಿ ಯಶೋದೆಯಾಗಲಿ, ಗೋಪಿಯರಾಗಲಿ, ಗೋವಳ ಬಾಲಕರಾಗಲಿ, ಹಸುಕರುಗಳಾಗಲಿ ಎಲ್ಲರೂ ಕೃಷ್ಣನ ತುಂಟತನಕ್ಕೆ ಒಂದಿಲ್ಲೊಂದು ಸಾರಿ ಗುರಿಯಾದವರೇ! ಆದುದರಿಂದ ನಂದಗೋಕುಲದ ಗೋಪಿಯರೆಲ್ಲ ಕೃಷ್ಣನನ್ನು ಕಟ್ಟಿಹಾಕಿ, ಯಶೋದೆಗೆ ದೂರು ನೀಡಲು ಮನಸ್ಸು ಮಾಡಿದಂತಿತ್ತು. ಅನೇಕ ಕಾರಣಗಳಿಂದ ಎಲ್ಲರೂ ಯಶೋದೆಯ ಬಳಿ ದೂರು ದಾಖಲಿಸಲಾರಂಭಿಸಿದರು. ಮೊದಮೊದಲು ತಾಯಿ ಯಶೋದೆ ಮಗನ ಮೇಲಿನ ಪ್ರೀತಿಯಿಂದ ದೂರು ತಂದವರನ್ನೇ ದಬಾಯಿಸಿ ಕಳುಹಿಸುತ್ತಿದ್ದಳು. ಆದರೆ ದೂರುಗಳು ಹೆಚ್ಚಿದಂತೆಲ್ಲ ಇದಕ್ಕೆ ಪರಿಹಾರವನ್ನೇನಾದರೂ ಮಾಡಬೇಕೆಂದು ನಿರ್ಧರಿಸಿದಳು.

ಒಮ್ಮೆ ಯಶೋದೆ ಒಂದು ನಿರ್ಧಾರಕ್ಕೆ ಬಂದಳು. ಅಂದು ಗೋಪಿಯರಿಂದ ದೂರು ಬಂದೊಡನೆಯೇ ಕೃಷ್ಣನನ್ನು ಕರೆದಳು. ಕಡೆಗೋಲಿಗೆ ಹಾಕುವಂತಹ ಉದ್ದದ ಹಗ್ಗವನ್ನು ತಂದಳು. ಕೃಷ್ಣನ ನಡುವಿಗೆ ಅದನ್ನು ಬಿಗಿದು, ಮತ್ತೊಂದು ತುದಿಯನ್ನು ಅಡುಗೆಯ ಮನೆಯ ಕಂಬಕ್ಕೆ ಕಟ್ಟಿದಳು. ಜೊತೆಗೆ ಅವನ ಕಾವಲಿಗೆ ತಾನೇ ನಿಂತಳು. ಈಗ ದೂರುಗಳು ಏನೇ ಆದರೂ ಬರಲಾರವು ಎಂದು ಸಂತೋಷದಿಂದ ನೆಮ್ಮದಿಯ ಉಸಿರನ್ನು ಬಿಟ್ಟಳು ಯಶೋದೆ.

ಆದರೆ ಆದದ್ದೇ ಬೇರೆ. ನಂದಗೋಕುಲದಲ್ಲಿ ಕೇವಲ ನೂರಾರು ಗೋಪ–ಗೋಪಿಯರ ದೂರುಗಳನ್ನು ಪರಿಹರಿಸಲು ಯಶೋದೆ ಕೃಷ್ಣನನ್ನು ಕಟ್ಟಿಹಾಕಿದಳು. ಒಂದು ರೀತಿಯಲ್ಲಿ ಈಗ ಗೋಕುಲವಾಸಿಗಳಿಂದ ದೂರುಗಳೇ ಬಂದಂತಿಲ್ಲ ಎಂದುಕೊಂಡಳು.

ಆದರೆ ಅದಕ್ಕೆ ಬದಲಾಗಿ ಈಗ ಮೂರುಲೋಕದ ಚರಾಚರ ವಸ್ತುಗಳಿಂದಲೂ ದೂರುಗಳು ಕೇಳಿಸಲು ಮೊದಲಾಯಿತು. ಏಕೆಂದರೆ ದಾಮೋದರನಾದ ಶ್ರೀಕೃಷ್ಣನ ಹೊಟ್ಟೆಯಲ್ಲಿ ಮೂರು ಲೋಕದ ಚರಾಚರ ವಸ್ತುಗಳು ಸೇರಿಕೊಂಡಿವೆ. ಅವನು ವಿಶ್ವೋದರ. ಅವನ ಹೊಟ್ಟೆಗೆ ಯಾವಾಗ ಹಗ್ಗದಿಂದ ಕಟ್ಟುಬಿದ್ದಿತೋ, ಒಳಗಿದ್ದ ಜೀವರೆಲ್ಲ ಕಷ್ಟದಿಂದ ಹೊಟ್ಟೆಯಲ್ಲಿಯೇ ನುಲಿಯತೊಡಗಿದರು. ಯಶೋದೆಯು ಕೇವಲ ಒಬ್ಬ ಕೃಷ್ಣನ ಹೊಟ್ಟೆಗೆ ಹಗ್ಗ ಕಟ್ಟಿರಲಿಲ್ಲ. ವಿಶ್ವದ ಜೀವಿಗಳೆಲ್ಲರ ಹೊಟ್ಟೆಗೂ ಆ ಕಟ್ಟು ಬಂಧನವನ್ನುಂಟುಮಾಡಿತ್ತು. ಅದರ ನೋವಿನಿಂದಲೂ ಕೋಪದಿಂದಲೂ ಈಗ ಮೂರು ಲೋಕದವರೂ ದೂರುಗಳನ್ನು ಕೊಡಲು ಪ್ರಾರಂಭಿಸಿದರು.

ಇದು ಕವಿಯ ಒಂದು ಅತಿಸುಂದರ ಕಲ್ಪನೆಯ ಕತೆಯೇ ಅನಿಸಿದರೂ ವಾಸ್ತವವಾಗಿಯೂ ನಿಜವಾದ ಒಂದು ಸಂದರ್ಭವೇ.

ಶ್ರೀಕೃಷ್ಣ ಮಗುವಿಗೆ ಮಗು. ತಾಯಿಗೆ ಕಂದ, ಜೊತೆಯವರಿಗೆ ಸಹಚರ, ಗೋಪಿಯರಿಗೆ ಮನಮೋಹಕ, ಪಶುಪಕ್ಷಿಗಳಿಗೆ ಆನಂದದಾಯಕ; ಅಷ್ಟೇ ಅಲ್ಲದೆ ಅವನು ಮೂರು ಲೋಕಗಳಿಗೂ ಸೃಷ್ಟಿ, ಸ್ಥಿತಿ, ಲಯಕಾರ್ಯಗಳನ್ನು ಮಾಡುವ ಪರಂಬ್ರಹ್ಮ, ಪರಮಾತ್ಮನವನು. ಆದ್ದರಿಂದ ಅವನ ಹೊಟ್ಟೆಗೆ ಕಟ್ಟುಬಿದ್ದರೆ ಮೂರು ಲೋಕದ ಎಲ್ಲ ಜೀವಿಗಳನ್ನೂ ಕಟ್ಟಿ ಹಾಕಿದಂತೆಯೇ!

ಇಂತಹ ಕೃಷ್ಣನು ನಮ್ಮನ್ನು ಅನುಕ್ಷಣವೂ ಕಾಪಾಡಲಿ. ಅವನು ಹೇಗೆ ನಮ್ಮನ್ನೆಲ್ಲ ತನ್ನ ಹೊಟ್ಟೆಯಲ್ಲಿಟ್ಟಿರುವನೋ, ಅಂತೆಯೇ ಆ ಪರಮಾತ್ಮನು ನಮ್ಮೆಲ್ಲರ ಹೃದಯಗಳಲ್ಲಿ ಶಾಶ್ವತವಾಗಿ ನೆಲೆಗೊಳ್ಳಲಿ ಎಂದು ಪ್ರಾರ್ಥಿಸೋಣ.

**(ಮುಂದುವರಿಯುವುದು)**



# KALAJNANA

*(Written in 1813 A.D.)*

## Sri Yogi Nareyana Tataiah

### ಮೂಲಮು–24

ಉದಯ ಮ್ಯೆನ ಜಾಮು –
ಉರ್ವಿಪರಿಪಾಲನಂ
ಅಟು ಮೀದ ವಕ ಜಾಮು – ಆತ್ಮಪೂಜ ।
ರೇಚಕ – ಪೂರಕ – ಕುಂಭಕಮು ಒಕ ಜಾಮು ।
ಸ್ನಾನ – ಭಕ್ಷಣ – ಸಮಾಧಿ – ನಿದ್ರ ಒಕ ಜಾಮು ।
ಇನುಡಸ್ತ ಮಿಂಚಿನ – ವೀರ ಭಟನಾಯಕುಲು ದೀವಿಟಿ
ಸಲ್ಲಾಮು – ಕೊಲವು ಜಾಮು ।
ಸಕಲ ದೇಶಾದಿ ಸ – ತ್ಕವಿ ಪಾಠಕುಲ ಜಾಮು
ಮಂತ್ರಿ ವರದಿವಾರಿ – ಮನವಿ ಜಾಮು ॥
ಕುಕ್ಕುಟಮು ಜಾಮು ಸತಿ ಕೂಟ – ಸ್ಥಳಮು ಜೇರು
ಇಟ್ಟಿ ಸತ್ಯಾತ್ಮುಡಿಲ ಯೇಲು – ಇದಿ ನಿಕಂಟು ।
ಅಮರನಾರೇಯಣುನಿ ಸಖ, – ಹರ, ಮಹಾತ್ಮ ।
ಅಧಿಕ ಭವಭಂಗ, ಕೈವರಮು – ಭೀಮಲಿಂಗ ॥ 24 ॥

Udayamaina jama Urviparipalanam,
Atumeeda vakajama atma pooja |
Raechaka, pooraka, kumbhakamu vaka jama,
Snana, bhakshana, samadhi-nidra vaka jama |
Yinudastha minchina veera bhatanayakulu
Deeviti sallamu koluvu jama |
Sakala deshadi sathkavi pathkula jama,
Mantri varadi vari manavi jama ||
Kukkutamu jama sathi koota sthalamujaeru,
Itti sathyathmudila yaelu yidinikantu |
Amara Naraeyanuni Sakha, Hara, mahatma |
Adhika BhavaBhanga, Kaiwaramu Bheemalinga |24|

## Meaning:

The daily schedule of this ideal (future) monarch will be as under:

In the early hours of the morning, he will engage himself in administrative matters pertaining to his government. In the second jama (yama-period of three hours) he devotes himself to atma pooja. For pranayama sadhana which encompasses rechaka, pooraka and kumbhaka he sets apart one yama. For bathing, and samadhi-nidra he allots another yama. After sunset he allots a Yama for a meeting with the commanders of the armed forces (Veerabhatanayakulu) who with flaming torches in their hands offer obesisance to him after a gurad of honour. In the sixth yama the emperor receives poets and other literary figures of his own country and those from abroad. He listens attentively to their literary compositions and discusses the finer points of the poems with them both for his benefit and their edification. The seventh jama is reserved for receiving reports from ministers, for appeals or Petitions from his subjects etc. The eighth and the last yama (the kukkuta yama) is meant for the emperor's rest and relaxation. He retires to his bed chamber and spends his time in the company of his queen.

That such a great and noble Sathyathma will be the blessed ruler of the country in years to come is an absolute certainty.

### ಮೂಲಮು – 25

ಅತಡೆಟ್ಟಿವಾಡನ್ನ – ಅಯಿದು ಮೂರಲ ಪೊಡುವು
ಅಂಗಂಬು ಗಜನಿಮ್ಮ – ಪಂಡು ಛಾಯ ।
ಸಂಪಂಗಿ ರೇಕುವಲೆ – ಚಕ್ಕನಿ ನಾಸಿಕಮು
ನಿಡುವೈನ ಮೀಸಮುಲು – ನಿಕ್ಕು ಚೆವುಲು ।
ವಿಸ್ತಾರಮ್ಯೆ ಯುರಮು – ಹಸ್ತಾಲು ಬಹು ಪೊಡುವು
ದಿಗವಿಡುವ ಮೋಕಾಳ್ಳು – ದಿಗುವ ನಿಲುಚು ।
ವುಂಚನಿ ತಿರುಮಣಿ – ನುದುಟ ರೇಕುಲು ಮೂಡು
ಜನನ ಮ್ಯೆನ ಪ್ಪುಡೇ – ಜಾಡಲಾಯ ॥
ಪರಮ ಪುರುಷುಡು ಪರಲೋಕ (ಪರಕಾಯ) – ಪ್ರವೇಶ ವಿದ್ಯ।
ಮರ್ಮ ಮೆರಿಗಿನ ಮಹಾತ್ಮು – ಡೈನವಾಡು ।
ಅಮರನಾರೇಯಣುನಿ ಸಖ, – ಹರ, ಮಹಾತ್ಮ ।



43ನೇ ಪುಟಕ್ಕೆ



■ ಡಾ. ಎಸ್.ಆರ್. ಲೀಲಾ


# ತಂದೆಯನ್ನೇ ಉದ್ಧರಿಸಿದ ಮೇಧಾವಿ ಬಾಲಕ

ಎಂಥೆಂಥ ಆಶ್ಚರ್ಯಕರವಾದ ಮಕ್ಕಳಿಗೆ ಭಾರತ ದೇಶ ಜನ್ಮ ನೀಡಿಲ್ಲ? ಸುಮ್ಮನೆ ಹಾಗೆ ಒಂದು ವಿಹಂಗಮ ನೋಟ ಹರಿಸಿದರೂ ಸಾಕು ಜಗತ್ತನ್ನೇ ಬೆಳಗುವ ದೇದೀಪ್ಯಮಾನವಾದ ಜ್ವಾಲೆಗಳಂತಿರುವ ಎಳೆಯರು ಕಾಣಸಿಗುತ್ತಾರೆ. ಧ್ರುವ, ಪ್ರಹ್ಲಾದ, ನಚಿಕೇತ ಮುಂತಾದ ಬಾಲಕರು ಭಾರತದ ಭಾವಶಕ್ತಿಯನ್ನೇ ಉದ್ದೀಪನಗೊಳಿಸಿದ್ದಾರೆ. ಈ ಮಕ್ಕಳ ಕಥೆಗಳು ಬಹುಮಟ್ಟಿಗೆ ಎಲ್ಲರಿಗೂ ಪರಿಚಿತವಾದ್ದರಿಂದ ಸಾಮಾನ್ಯರಿಗೆ ಅಷ್ಟೊಂದು ತಿಳಿಯದ ಮಹಾಮೇಧಾವಿಯಾದ ಬಾಲಕನೋರ್ವನ ಸಾಹಸಗಾಥೆಯನ್ನು ಸಾಕ್ಷಾತ್ಕರಿಸಿಕೊಳ್ಳೋಣ.

ಕೆಲವು ದೊಡ್ಡವರು ಚೇಷ್ಟೆ ಮಾಡುವ ಎಳೆಯರನ್ನು ಗದರಿಸುವಾಗ, ಬೈಯುವಾಗ 'ಅಷ್ಟಾವಕ್ರ' ಎನ್ನುವುದುಂಟು. ಅಂದರೆ ದೇಹದ ಎಂಟು ಅಂಗಗಳಲ್ಲಿ ವಿಕಲತೆ ಅಥವಾ ವಕ್ರತೆಯಿದ್ದು ಕುರೂಪಿಯಾಗಿರುವುದು. ಬಾಲಕ ಹುಟ್ಟುವಾಗಲೆ ಅಷ್ಟವಿಧವಾದ ಅಂಗವಿಕೃತಿ ಅವನ ಪ್ರಕೃತಿಯಾಗಿತ್ತು. ಅಂಗವೈಕಲ್ಯಕ್ಕೂ ಬುದ್ಧಿವೈಭವಕ್ಕೂ ಯಾವ ಸಂಬಂಧವಿಲ್ಲ ಎಂಬುದನ್ನು ಸೂರ್ಯನಷ್ಟೆ ಸ್ಪಷ್ಟವಾಗಿ ಎತ್ತಿತೋರಿಸಿದ ವಿಶಿಷ್ಟ ಚೇತನ ಅಷ್ಟಾವಕ್ರ ಬಾಲಕನದು. ಸಾಮಾನ್ಯರನ್ನು ದಂಗು ಬಡಿಸುವ, ಅಂಗವಿಕಲರ ಆತ್ಮವಿಶ್ವಾಸವನ್ನು ಹೆಚ್ಚಿಸುವ ಅಪರೂಪದ ಬಾಲಕನ ಕಥೆ ಮಹಾಭಾರತದಲ್ಲಿ ಬರುತ್ತದೆ. ಮಹಾಭಾರತ ಗ್ರಂಥವೊಂದು ವೈವಿಧ್ಯಮಯ ಕಥೆಗಳ, ಇತಿಹಾಸಗಳ, ಪುರಾವೃತ್ತಗಳ, ಅದ್ಭುತ ಪ್ರಸಂಗ ಕಥನಗಳ ಮಹಾಭಂಡಾರ. ಮಹಾಭಾರತದ ಅನನ್ಯತೆಯನ್ನು, ಇಲ್ಲಿರುವುದೆ ಬೇರೆಡೆಯೂ ಇರುವುದು, ಇಲ್ಲಿಲ್ಲದಿರುವುದು ಮತ್ತೆಲ್ಲಿಯೂ ಇರಲಾರದು ಎಂಬ ನಾಣ್ಣುಡಿಯನ್ನು ಭಾರತ ಗ್ರಂಥವೇ ಹೇಳಿಕೊಂಡಿದೆ. ಈ ಮಾತಿಗೆ ವನಪರ್ವದ ತೀರ್ಥಯಾತ್ರಾಪರ್ವ(ಉಪಪರ್ವ)ದಲ್ಲಿನ ಅಷ್ಟಾವಕ್ರನ ಕಥೆಯು ನಿದರ್ಶನವಾಗಿದೆ. ಇದು, ದೊಡ್ಡವರು ಮಾತ್ರ ಜಾಣರಲ್ಲ, ಎಂಥವರನ್ನೂ ಬೆರಗುಗೊಳಿಸಬಲ್ಲ ಬುದ್ಧಿಬಲ, ಮನಃಸ್ಥೈರ್ಯಗಳು ಬಾಲಕರಲ್ಲೂ ಇವೆ ಎಂಬುದಕ್ಕೆ ಸಾಕ್ಷಿಯಂತಿದೆ. ಲೋಮಶ ಮಹರ್ಷಿಗಳು ಯುಧಿಷ್ಠಿರನಿಗೆ ಹೇಳಿದ ಕಥೆಯಿದು.

ಉದ್ದಾಲಕ ಋಷಿಯ ಮಗ ಶ್ವೇತಕೇತು. ಹಾಗಾಗಿ ಇವನಿಗೆ ಔದ್ದಾಲಕಿ ಎಂದೂ ಹೆಸರು. ಈತನ ಆಶ್ರಮ ಪುಣ್ಯಾಶ್ರಮ. ಸದಾ ಹಣ್ಣುಗಳಿಂದ ತುಂಬಿದ್ದ ಹಸಿರು, ತಂಪು ತಾಣ. ಇವನ ಬುದ್ಧಿಮತ್ತೆ ಅಪಾರ. ಮಂತ್ರಗಳಿಂದ ದೇವತೆಗಳನ್ನೂ ಸಾಕ್ಷಾತ್ಕರಿಸಿಕೊಳ್ಳುತ್ತಿದ್ದ. ಮಂತ್ರಸರಸ್ವತಿಯ ಉಪಾಸನೆ ಮಾಡಿ ಮಾನುಷ ದೇಹಧಾರಣಿಯಾದ ದೇವಿಯನ್ನೇ ಕಂಡವನು. ಇವನೂ ಅಷ್ಟಾವಕ್ರನೂ ಸೋದರ ಮಾವ ಸೋದರ ಅಳಿಯ ಸಂಬಂಧವುಳ್ಳವರು. ಇವರಿಬ್ಬರ ಬಾಲ್ಯದಲ್ಲಿ ನಡೆದ ಘಟನೆಯೇ ಅಷ್ಟಾವಕ್ರನ ಹಿರಿಮೆಯನ್ನು ಸಾರುವ ಅಪೂರ್ವ ಪ್ರಸಂಗ.

ಉದ್ದಾಲಕ ಮಹರ್ಷಿಯ ಗುರುಕುಲಾಶ್ರಮದಲ್ಲಿ ಕಹೋಡನೆಂಬ ಶಿಷ್ಯನಿದ್ದ. ವಿದ್ಯಾವ್ಯಸನಿಯಾಗಿದ್ದ ಈತ ಯಾವಾಗಲೂ ಅಧ್ಯಯನದಲ್ಲಿ ನಿರತನಾಗಿದ್ದು ಗುರುವಿಗೆ ಪ್ರೀತಿಯ ಶಿಷ್ಯನಾದ. ಈತನ ಶುದ್ಧ ನಡವಳಿಕೆಯನ್ನು ಗಮನಿಸಿದ ಗುರು ಉದ್ದಾಲಕನಿಗೆ ಇವನನ್ನು ತಮ್ಮ ಬಳಿಯಲ್ಲೆ ಉಳಿಸಿಕೊಳ್ಳುವ ಇಚ್ಛೆಯಾಯಿತು. ಪುತ್ರಿ ಸುಜಾತೆಯನ್ನು ಕೊಟ್ಟು ವಿವಾಹ ಮಾಡಿಸಿ, ಮನೆ ಅಳಿಯನನ್ನಾಗಿಸಿಕೊಂಡ. ಸುಜಾತೆ ಕಾಲಾನುಕ್ರಮದಲ್ಲಿ ಗರ್ಭವತಿಯಾದಳು.



ಒಮ್ಮೆ ರಾತ್ರಿ ಕಾಲದಲ್ಲೂ ಶಿಷ್ಯರನ್ನು ಸುತ್ತ ಕೂರಿಸಿಕೊಂಡು ಪಾಠಪ್ರವಚನದಲ್ಲಿ ತಲ್ಲೀನನಾಗಿದ್ದ ತಂದೆಯನ್ನು ಕುರಿತು ತಾಯಿ ಗರ್ಭದಲ್ಲಿ ಅಡಗಿದ್ದ ಪಿಂಡವು ಹೇಳಿತು, 'ಅಪ್ಪಾ, ರಾತ್ರಿಯೆಲ್ಲ ಹೀಗೆ ಓದುವುದು ಸರಿಯಲ್ಲ.' ಹೊರಜಗತ್ತಿನ ಸ್ಪರ್ಶವೇ ಇಲ್ಲದ ಮಾಂಸದ ಮುದ್ದೆ ತನಗೆ ಬುದ್ಧಿವಾದ ಹೇಳುವುದನ್ನು ಕೇಳಿ ವಿದ್ಯಾಮದದಿಂದ ಕೂಡಿದ ತಂದೆಗೆ ಸಹಿಸಲಾಗಲಿಲ್ಲ. ಕೋಪ ಉಕ್ಕೇರಿ **ಯಸ್ಮಾತ್ ಕುಕ್ಷೌ ವರ್ತಮಾನೊ ಬ್ರವೀಷಿ । ತಸ್ಮಾತ್ ವಕ್ರೊ ಭವಿಷ್ಯಸಿ ಅಷ್ಟಕೃತ್ವ** ॥ ಎಂಬ ಶಾಪದ ಮಾತು ಆತನ ಬಾಯಿಂದ ಹೊರಬಿದ್ದಿತು. ತಂದೆಯ ಶಾಪದಂತೆ ಮಗು ಅಷ್ಟಾವಕ್ರನಾಗಿಯೆ ಜನಿಸಿದ. ತಾಯಿಯ ಸಂಕಟ ಹೇಳತೀರದು. ಸುಜಾತೆ ಪತಿಯನ್ನು ಬೇಡಿದಳು.

ಇಂಥ ಮಗುವನ್ನು ಬೆಳೆಸುವುದು ಬಹುಕಷ್ಟ. ಧನವಿಲ್ಲದೆ ಸಾಧ್ಯವಿಲ್ಲ. ಧನ ಸಂಪಾದನೆ ಮಾಡಿ ಎಂದಾಗ, ಕಹೋಡ ಒಪ್ಪಿ ಮಿಥಿಲಾಧಿಪತಿ ಜನಕನ ಆಸ್ಥಾನಕ್ಕೆ ಬಂದನು. ತನ್ನ ವಿದ್ಯಾಪ್ರದರ್ಶನ ಮಾಡಿ ದ್ರವ್ಯಾರ್ಜನೆ ಮಾಡುವುದು ಅವನ ಉದ್ದೇಶವಾಗಿತ್ತು. ಆದರೆ ಜನಕರಾಜನಲ್ಲಿದ್ದ ವಂದಿಯೆಂಬ ವಿದ್ವಾಂಸನು ಇವನನ್ನು ವಾದದಲ್ಲಿ ಸೋಲಿಸಿ, ನೀರಿನಲ್ಲಿ ಮುಳುಗಿಸಿ ಬಿಟ್ಟನು. ಸುಜಾತೆ ಗಂಡನಿಗಾಗಿ ಕಾದದ್ದೆ ಬಂತು. ಸಕಾಲದಲ್ಲಿ ಮಗು ಹುಟ್ಟಿತು. ತಂದೆಯ ಶಾಪದಂತೆ ಅಷ್ಟಾವಕ್ರವಾಗಿತ್ತು ಅದು.

ಉದ್ದಾಲಕನಿಗೆ ಈ ವಿಷಯ ತಿಳಿದಾಗ ಮಗಳಿಗೆ ಹೇಳಿದ, "ನಿನ್ನ ಮಗು ಇನ್ನೂ ಚಿಕ್ಕದು. ಅವನಿಗೆ ತನ್ನ ತಂದೆ ಇಲ್ಲದಿರುವುದು ಅರಿವಿಗೆ ಬಾರದಂತೆ ನಡೆದುಕೊ" ಎಂದು. ಮಗಳು ತಂದೆಯ ಮಾತನ್ನು ಪಾಲಿಸಿದಳು. ಅಷ್ಟಾವಕ್ರ ತಾತನಾದ ಉದ್ದಾಲಕನನ್ನೇ ತಂದೆಯೆಂದು ಭಾವಿಸಿದ್ದನು. ಅಷ್ಟಾವಕ್ರನಿಗೆ ಅವನದೆ ವಯಸ್ಸಿನ ಸೋದರ ಮಾವನಿದ್ದ. ಸುಜಾತೆಯ ತಮ್ಮ ಶ್ವೇತಕೇತು. ಒಮ್ಮೆ ಅವನು ಹಾಗೂ ಶ್ವೇತಕೇತು ಇಬ್ಬರೂ ಉದ್ದಾಲಕನ ತೊಡೆಯೇರಿ ಆಡುತ್ತಿದ್ದರು. ಆಗ ಇಬ್ಬರಿಗೂ ಹನ್ನೆರಡು ವರ್ಷದ ಹುಡುಗಾಟಿಕೆಯ ವಯಸ್ಸು. ಸೋದರ ಮಾವ ಸೋದರ ಅಳಿಯನನ್ನು ಅಪ್ಪನ ತೊಡೆಯಿಂದ ತಳ್ಳಿ, "ಇದೇನು ನಿಮ್ಮಪ್ಪನ ಮಡಿಲಲ್ಲ, ಜಾಗ ಬಿಡು" ಎಂದು ಗದರಿದ. ಅಷ್ಟಾವಕ್ರನ ದೇಹ ಮಾತ್ರ ವಕ್ರವಾಗಿತ್ತಷ್ಟೇ. ಅವನ ಸ್ವಾಭಿಮಾನ, ಮೇಧಾಶಕ್ತಿ, ಸ್ಮರಣಶಕ್ತಿ, ವಿದ್ಯಾಪ್ರಾವೀಣ್ಯಕ್ಕೇನೂ ಊನವಾಗಿರಲಿಲ್ಲವಲ್ಲ. ಆದ ಅವಮಾನದಿಂದ ಕುದಿಯುತ್ತಾ ಮನೆಗೆ ಬಂದು ಅಮ್ಮನನ್ನು ಕೇಳಿದ, "ಅಪ್ಪ ಎಲ್ಲಿ?" ಅವನ ಆವೇಶವನ್ನೂ ವಿದ್ಯಾಪ್ರಭಾವವನ್ನೂ ತಿಳಿದಿದ್ದ ಸುಜಾತೆಗೆ ಗುಟ್ಟನ್ನು ಇನ್ನು ಮುಚ್ಚಿಡಲಾಗದೆ ವಿಷಯ ತಿಳಿಸಿದಳು.

ಅಷ್ಟಾವಕ್ರ ಎದೆಗುಂದಲಿಲ್ಲ. ಹಿಂತಿರುಗಿ ಬಂದು ತನ್ನನ್ನು ತಳ್ಳಿದ್ದ ಶ್ವೇತಕೇತುವಿಗೆ ಹೇಳಿದ, "ನಮ್ಮಪ್ಪನನ್ನು ಕರೆದು ತರಲು ರಾಜಾಸ್ಥಾನಕ್ಕೆ ಹೋಗೋಣ ಬಾ, ವಾದದಲ್ಲಿ ಆ ವಂದಿಯನ್ನು ಸೋಲಿಸುವ ಭರವಸೆ ನನಗಿದೆ!" ಸರಿ ಇಬ್ಬರೂ ಹೊರಟರು. ಜನಕ ಮಹಾರಾಜನು ಹನ್ನೆರಡು ವರ್ಷಗಳ ಮಹಾಸತ್ರವನ್ನು ಆಯೋಜಿಸಿದ್ದ. ಎಲ್ಲೆಲ್ಲೂ ಮಂಗಳಕರವಾದ, ಸೌಮ್ಯವೇದಘೋಷ ಕೇಳಿಸುತ್ತಿತ್ತು. ಬಾಲಕರಿಬ್ಬರೂ ಯಜ್ಞಶಾಲೆಯ ಹೊರ ಮಂಟಪದ ದ್ವಾರಕ್ಕೆ ಬಂದರು. ದ್ವಾರಪಾಲಕ ತಡೆದ. ಅಷ್ಟಾವಕ್ರ ಹೇಳಿದ, "ಅಂಧರಿಗೆ, ಕಿವುಡರಿಗೆ, ಸ್ತ್ರೀಯರಿಗೆ, ಭಾರಹೊತ್ತವರಿಗೆ, ರಾಜನಿಗೆ, ವಿದ್ಯಾಧನನಾದ ಬ್ರಾಹ್ಮಣನಿಗೆ ದಾರಿಯನ್ನು ಕೊಡಲೇಬೇಕಾದ್ದು ಧರ್ಮ." ಹುಡುಗರ ವರ್ಚಸ್ಸನ್ನು ನೋಡಿ ದ್ವಾರಪಾಲಕ ಅವಾಕ್ಕಾದ. ಒಳಗೆ ಹೋಗಲು ಅನುಮತಿಸುವ ಮೊದಲು ಹೇಳಿದ, "ನಾವು ವಂದಿ(ರಾಜಪುರೋಹಿತ)ಯ ಆಜ್ಞಾಪಾಲಕರು. ನಿಮ್ಮಂಥ ಚಿಳ್ಳೆಪಿಳ್ಳೆಗಳಿಗೆ ಇಲ್ಲಿ ಪ್ರವೇಶವಿಲ್ಲ. ಏನಿದ್ದರೂ ವಯಸ್ಕರೂ, ವಿದಗ್ಧರೂ ಆದವರಿಗೆ ಮಾತ್ರ ಅನುಮತಿ." "ಹಾಗಾದರೆ, ನಾವೂ ವೃದ್ಧರೇ, ವಿದಗ್ಧರೇ. ವಯಸ್ಸಿನ ವೃದ್ಧಾಪ್ಯವೊಂದನ್ನೆ ಗಣನೆಗೆ ತೆಗೆದುಕೊಳ್ಳಬಾರದು. ನಾವೂ ವೇದವಿದ್ಯಾ ಪರಿಣತರು, ಬುದ್ಧಿಶಾಲಿಗಳು. ಆದ್ದರಿಂದ ಜ್ಞಾನವೃದ್ಧರು ಜಾಗ ಕೊಡು." ಅಲ್ಲದೆ, "ಬೆಂಕಿಯ ಜ್ವಾಲೆ ಚಿಕ್ಕದಾದರೂ ಸುಡುವುದಿಲ್ಲವೆ?" ಎಂದರು ಬಾಲಕರು. "ಬಾಲಕರೇ, ನಾವು ವಯಸ್ಸಾದ ವೃದ್ಧರ ವಿಚಾರವನ್ನೇ ಹೇಳುತ್ತಿರುವುದು. ಅವರಿಗೆ ಮಾತ್ರ ಇಲ್ಲಿ ಪ್ರವೇಶ ನಿಮಗಲ್ಲ. ಮುದುಕರಂತೆ ಮಾತನಾಡಿದರೆ ಪ್ರಯೋಜನವಿಲ್ಲ ಹೋಗಿ." "ಕೂದಲು ಬೆಳ್ಳಗಾದರೆ ಮಾತ್ರ ವೃದ್ಧರಲ್ಲ, ಜ್ಞಾನ ಸಂಪಾದನೆ ಮಾಡಿರುವವರೆಲ್ಲ ವೃದ್ಧರೇ. ಇದೇ ಮಹರ್ಷಿಗಳು ಹೇಳಿರುವ ಧರ್ಮ. ನಮ್ಮನ್ನು ಒಳಗೆ ಬಿಟ್ಟು ನೋಡು ವಂದಿಯನ್ನು ವಾದದಲ್ಲಿ ಸೋಲಿಸಿ ತೋರಿಸುತ್ತೇನೆ" ಎಂದ ಅಷ್ಟಾವಕ್ರ. ದ್ವಾರಪಾಲನು ಇವರ ಮಾತನ್ನು ಕೇಳಿ ಚಕಿತನಾಗಿ, ಮತ್ತಷ್ಟು ಪರೀಕ್ಷಿಸಿ ರಾಜನ ಬಳಿಗೆ ಹೋಗಲು ಅನುಮತಿಸಿದ.

ಜನಕ ಮಹಾರಾಜನಾದರೋ ಈ ಮಕ್ಕಳನ್ನು ನೋಡಿ, ಅವರ ಮಾತನ್ನು ಕೇಳಿ ಆನಂದತುಂದಿಲನಾದ. ಆದರೂ ಹೇಳಿದ, "ಅಪ್ಪಾ, ಎಂಥೆಂಥ ದೊಡ್ಡ ಪಂಡಿತರೂ ವಂದಿಯ ವಾದಕ್ಕೆ ತಲೆಬಾಗಿ ಶಿಕ್ಷೆಗೊಳಗಾಗಿದ್ದಾರೆ. ನಿಮ್ಮಂಥ ಕಂದಮ್ಮ ಗಳನ್ನು ಆ ಸಿಂಹದ ಗುಹೆಗೆ ತಳ್ಳಲು ನನಗೆ ಮನಸ್ಸು ಬರುತ್ತಿಲ್ಲ. ಹಿಂತಿರುಗಿ ಹೋಗಿ" ಎಂದ. ಬಾಲಕರು, "ರಾಜನಿಗೆ ತಮ್ಮ ಸಂಕಲ್ಪದ ಬಲವನ್ನು ತಿಳಿಸಿದರು. ನೀನೇ ಬೇಕಾದರೆ ನಮ್ಮನ್ನು ಪರೀಕ್ಷಿಸು" ಎಂದರು. ರಾಜನು ಅನೇಕ ಒಗಟುಗಳಂತಿರುವ ಕಠಿಣ ಪ್ರಶ್ನೆಗಳನ್ನು ಕೇಳಿದ. ಅಷ್ಟಾವಕ್ರ ಶ್ವೇತಕೇತುಗಳು ಅವುಗಳಿಗೆ ಉತ್ತರ ಹೇಳಿದರು. ವಂದಿಯ ಬಳಿಗೆ ತೆರಳಿ ವಿದ್ವತ್‌ವಾದ ಮಾಡಲು ರಾಜನ ಒಪ್ಪಿಗೆ ದೊರೆಯಿತು.

ಅಷ್ಟಾವಕ್ರನನ್ನು ನೋಡಿದ ಬಂದಿ ಹೇಳಿದ, "ಮಲಗಿರುವ ವ್ಯಾಘ್ರನನ್ನು ಎಬ್ಬಿಸುವ ಕೆಲಸ ಮಾಡಬೇಡ, ಭುಸುಗುಡುವ ಸರ್ಪದ ಮುಂದೆ ನಿಲ್ಲಬೇಡ." "ಈ ಎಚ್ಚರಿಕೆಗಳೆಲ್ಲ ಸಾಕು. ನಿನ್ನ ಪ್ರಶ್ನೆಗಳನ್ನು ಕೇಳು, ಉತ್ತರಿಸಲು ನಾನು ಸಿದ್ಧ." ಸಂಖ್ಯೆಗಳ ಮೇಲಾಟಕ್ಕೆ ಶುರುವಿಟ್ಟುಕೊಂಡ ವಂದಿ. 1, 3, 5,...... ಇತ್ಯಾದಿ ಬೆಸಸಂಖ್ಯೆಗಳನ್ನು ಅವುಗಳ ಸಂಕೇತಗಳನ್ನು ಹೇಳಿದ. ಅಷ್ಟಾವಕ್ರ 2, 4, 6,... ಇತ್ಯಾದಿ ಸಮಸಂಖ್ಯೆಗಳ ಸ್ವಾರಸ್ಯವನ್ನು ಹೇಳುತ್ತ ಹೋದ.

**ಏಕಾದಶೋಕ್ತಾ ದಿವಿ ದೇವೇಷು ರುದ್ರಾಃ** (ಹನ್ನೊಂದು ಜನ ರುದ್ರರು) ಎಂದು ವಂದಿ ಹೇಳಿದರೆ, **ದ್ವಾದಶಾದಿತ್ಯಾನ್ ಕಥಯಂತೀಹ ಧೀರಾಃ** (ಬುದ್ಧಿವಂತರು ಆದಿತ್ಯ ದೇವತೆಗಳು ಹನ್ನೆರಡು) ಎಂದ ಅಷ್ಟಾವಕ್ರ. ಬಾಲಕನ ಜತೆ ವಾದ ಮಾಡುತ್ತ ಮಾಡುತ್ತ 13ರವರೆಗೆ ಬಂದ ವಂದಿ ಅದಕ್ಕೆ ಸಂಬಂಧಪಟ್ಟಂತೆ **ತ್ರಯೋದಶೀ ತಿಥಿರುಕ್ತಾ ಪ್ರಶಸ್ತಾ ತ್ರಯೋದಶ ದ್ವೀಪವತೀ ಮಹೀ ಚ** ಎನ್ನುತ್ತಾ ಮುಂದೆ ಹೇಳಲಾರದೆ ನಿಂತುಬಿಟ್ಟ. ಶ್ಲೋಕದ ಉತ್ತರಾರ್ಧವನ್ನು ಅಷ್ಟಾವಕ್ರ ಪೂರ್ಣ ಮಾಡುತ್ತಿದ್ದಂತೆ, ನೆರೆದಿದ್ದ ವೇದವಿದರು, ಯಾಜ್ಞಿಕರು, ವಿದ್ವಾಂಸರು ಹರ್ಷನಾದಗೈದು ಅಷ್ಟಾವಕ್ರನನ್ನು ಅಭಿನಂದಿಸಿದರು.

ಆಗ ಬಾಲಕನು ಧೈರ್ಯದಿಂದ, ಎಲ್ಲರಿಗೂ ಹೇಳಿದ, "ಸೋತವರನ್ನು ವಂದಿಯು ನೀರಿನಲ್ಲಿ ಮುಳುಗಿಸುವ ಸಂಪ್ರದಾಯ ಹಾಕಿದ್ದಾನೆ. ಈಗ ತಾನೇ ಸೋತ ಈ ವಿದ್ವಾಂಸನೂ ನೀರಿನಲ್ಲಿ ಮುಳುಗಲಿ, ಇಲ್ಲದಿದ್ದರೆ ನಾವೇ ಮುಳುಗಿಸೋಣ" ಎಂದ. ಆಗ ವಂದಿ ತನ್ನ ಗುಟ್ಟನ್ನು ಬಾಯಿಬಿಟ್ಟ. "ನಾನು ವರುಣನ ಪುತ್ರ. ನನ್ನ ತಂದೆ ಹನ್ನೆರಡು ವರ್ಷ ಸತ್ರದೀಕ್ಷೆಯಲ್ಲಿದ್ದಾನೆ. ಅಲ್ಲಿ ವೇದವಿದರಾದ ಬ್ರಾಹ್ಮಣರು ಬೇಕಾಗಿದ್ದರಿಂದ ನನ್ನಲ್ಲಿಗೆ ಬಂದ ವಿದ್ವಾಂಸರನ್ನೆಲ್ಲ ಸೋಲಿಸಿ ವರುಣನ ಬಳಿಗೆ ಕಳಿಸಿದ್ದೇನೆ. ಈಗ ಯಾಗ ಮುಗಿದಿದೆ. ಎಲ್ಲರೂ ಹಿಂತಿರುಗುತ್ತಾರೆ" ಎಂದ. ಬಳಿಕ ಸಮುದ್ರತೀರಕ್ಕೆ ಹೋಗಿ ಮುಳುಗಿಸಿದ್ದವರನ್ನೆಲ್ಲ ಮೇಲೆ ಕರೆತಂದನು. ತಂದೆ ಕಹೋಡ ಬಂದವನೇ ಅಷ್ಟಾವಕ್ರನಾದ ತನ್ನ ಪುತ್ರನನ್ನು ಗುರುತಿಸಿ ಅಪ್ಪಿ ಲಾಲಿಸಿ ಹೇಳಿದ, "ಇಂಥ ಮಗನನ್ನೇ ಪಡೆಯಲು ಎಲ್ಲ ತಾಯ್ತಂದೆಯರೂ ಹಂಬಲಿಸುವುದು. ನಾನು ಮಾಡಲಾಗದ್ದನ್ನು ನನ್ನ ಪುತ್ರ ಮಾಡಿ ತೋರಿಸಿದ." ನಮಸ್ಕರಿಸಿದ ಪುತ್ರನನ್ನು ನೋಡಿ ಹೆಮ್ಮೆಯಿಂದ ಬೀಗುತ್ತ ಕಹೋಡನು ಮಗನನ್ನು ಕರೆದು, "ಸಮಂಗಾ ನದಿಯಲ್ಲಿ ಮಿಂದರೆ ನಿನ್ನ ಅಂಗಗಳ ವಕ್ರತೆ ಸರಿಯಾಗುತ್ತದೆ. ಬಾ ಹೋಗೋಣ" ಎಂದ. ನದಿಯಲ್ಲಿ ಮಿಂದೆದ್ದ ಅಷ್ಟಾವಕ್ರನ ದೇಹ ಸಮವಾಗಿ, ಸಲ್ಲಕ್ಷಣದಿಂದ ಕೂಡಿತು.

ಅನುಗ್ರಹಶಕ್ತಿ ಇದ್ದವರು ಮಾತ್ರ ಶಾಪ ಕೊಡಬಹುದು. ಕಹೋಡನಿಗೆ ಎರಡೂ ಇದ್ದದ್ದರಿಂದ ಮಗನನ್ನೇ ಶಪಿಸಿ ಅನಂತರ ಅನುಗ್ರಹಿಸಿದ. ಸಮಂಗನಾದರೂ ಆ ಹುಡುಗನಿಗೆ ಮೊದಲಿನ ಹೆಸರೇ ಉಳಿಯಿತು. ಅಷ್ಟಾವಕ್ರ ತಪಸ್ಸು, ಅಧ್ಯಯನ ಸಾಧನೆಗಳಿಂದ ಮಹರ್ಷಿಯಾಗಿ ಪ್ರಸಿದ್ಧನಾದ. ●



**ಶ್ರೀ ಕಂಚಿ ಕಾಮಕೋಟಿ ಪೀಠದ ಪರಮಾಚಾರ್ಯ ಚಂದ್ರಶೇಖರೇಂದ್ರ ಸರಸ್ವತಿ ಸ್ವಾಮಿಗಳವರು** ಇತ್ತೀಚಿನ ವರೆಗೂ ಜೀವಿಸಿದ್ದು ಪಾದಚಾರಿಗಳಾಗಿಯೇ ದೇಶ ಸಂಚಾರ ಮಾಡುತ್ತಾ **ಕರತಲ ಭಿಕ್ಷಾ ತರುತಲ ವಾಸಃ** ಎಂಬಂತೆ ಪರಿಶುದ್ಧ ಸಂನ್ಯಾಸ ಜೀವನ ನಡೆಸಿ ಶತಾಯುಷಿಗಳಾಗಿ ಬ್ರಹ್ಮೈಕ್ಯರಾದರು. ಅವರು ಸನಾತನ ಧರ್ಮದ ಸಾರಸರ್ವಸ್ವವನ್ನೂ ಆಧುನಿಕ ಪರಿಭಾಷೆಯಲ್ಲಿ ಎಲ್ಲರಿಗೂ ಅರ್ಥವಾಗುವಂತೆ ತಿಳಿ ಭಾಷೆಯಲ್ಲಿ ವಿವರಿಸಿದ್ದಾರೆ. ಅವರ ಮುಂಬಯಿ ಭಕ್ತರು ಒಂದೂಗೂಡಿ **'ಶ್ರೀ ಕಂಚಿ ಮಹಾಸ್ವಾಮಿ ಪೀಠಾರೋಹಣ ಶತಾಬ್ದಿ ಮಹೋತ್ಸವ ಟ್ರಸ್ಟ್' (ಮುಂಬೈ–400 002)** ರಚಿಸಿಕೊಂಡು ಪರಮಾಚಾರ್ಯರ ಅತ್ಯಂತ ಅಮೂಲ್ಯವಾದ ವಿಚಾರಗಳನ್ನೆಲ್ಲ 'ದೈವವಾಣಿ' ಎಂಬ ಹೆಸರಿನಲ್ಲಿ 7 ಬೃಹತ್ ಸಂಪುಟಗಳಲ್ಲಿ ಹೊರತಂದಿದ್ದಾರೆ. ಈ ಬರಹವನ್ನು ಎರಡನೆ ಸಂಪುಟದಿಂದ ಆಯ್ಕೆ ಮಾಡಿ ಕೃತಜ್ಞತಾಪೂರ್ವಕವಾಗಿ ಪ್ರಕಟಿಸುತ್ತಿದ್ದೇವೆ.

# ಧರ್ಮದ ಹಿಂದಿನ ವೈಭವ ಮತ್ತು ಇಂದಿನ ಅವನತಿ

ನಮ್ಮ ದೇಶದಲ್ಲಿ ಬಹು ಪ್ರಾಚೀನ ಕಾಲದಿಂದ ಹಿಡಿದು ಬ್ರಿಟಿಷ್ ಆಡಳಿತದ ಪ್ರಾರಂಭದವರೆಗೂ 14 ವಿದ್ಯೆಗಳನ್ನೂ ಕಲಿಸಲಾಗುತ್ತಿತ್ತು. ಅವುಗಳ ಬಗ್ಗೆ ಒಂದು ಸ್ವಾರಸ್ಯವನ್ನು ನಿಮಗೆ ಹೇಳುತ್ತೇನೆ. ಚೈನೀ ಯಾತ್ರಿಕರಾದ ಫಾಹಿಯಾನ್ ಮತ್ತು ಹ್ಯೂಯನ್‌ತ್‌ಸಂಗನ (FAHSIEN, HSUAN TSANG) ವಿಷಯವಾಗಿ ನೀವು ಓದಿರಬಹುದು. ಮೊದಲನೆಯವನು ಭಾರತಕ್ಕೆ ಕ್ರಿ.ಶ. 5ನೇ ಶತಮಾನದ ಆದಿಭಾಗದಲ್ಲಿ ಬಂದಿದ್ದ, ಎರಡನೆಯವನು ಕ್ರಿ.ಶ. 7ನೆಯ ಶತಮಾನದಲ್ಲಿ ಬಂದಿದ್ದ. ಇಲ್ಲಿನ ಅವರ ಪ್ರವಾಸಗಳ ಅನುಭವಗಳನ್ನು ಇಬ್ಬರೂ ದಾಖಲಿಸಿದ್ದಾರೆ; ಅದರಲ್ಲಿಯೂ ನಳಂದ ಮತ್ತು ತಕ್ಷಶಿಲಾ ವಿಶ್ವವಿದ್ಯಾಲಯಗಳ ಬಗೆಗೆ ಜಾಜ್ವಲ್ಯಮಾನವಾದ ವಿವರಗಳನ್ನು ನೀಡಿದ್ದಾರೆ. ಪುರಾತತ್ತ್ವ ಪರೀಕ್ಷೆಗಳ ಮೂಲಕವೂ ನಮಗೆ ಈ ಸಂಸ್ಥೆಗಳ ಬಗೆಗೆ ತಿಳಿದು ಬಂದಿದೆ. ಭಾರತದಲ್ಲಿ ಬೌದ್ಧ ಧರ್ಮವು ಉಚ್ಛ್ರಾಯಸ್ಥಿತಿಯಲ್ಲಿದ್ದಾಗ ಅವು ಅವುಗಳ ವೈಭವದ ಶಿಖರದಲ್ಲಿದ್ದವು. ಈ ಎರಡೂ ವಿಶ್ವವಿದ್ಯಾಲಯಗಳ ಕಲಿಕೆಯ ವಿಷಯಗಳ ಪಟ್ಟಿಯಲ್ಲಿ ಚತುರ್ದಶ ವಿದ್ಯೆಗಳೂ ಸೇರಿದ್ದವು ಎಂಬುದು ಗಮನಾರ್ಹವಾದುದು. ಖಂಡಿತವಾಗಿಯೂ ಬೌದ್ಧ ಧರ್ಮದ ಧಾರ್ಮಿಕ ಗ್ರಂಥಗಳನ್ನೂ ಅಲ್ಲಿ ಕಲಿಸಲಾಗುತ್ತಿತ್ತು. ಆದರೆ ಅದು ವಿದ್ಯಾರ್ಥಿಯು ಹಿಂದೂಗಳ 14 ಶಾಸ್ತ್ರಗಳನ್ನೂ ಕಲಿತ ಅನಂತರ. ಕಾರಣವಿಷ್ಟೇ: ಯಾವುದೇ ಧಾರ್ಮಿಕ ಸಮುದಾಯಕ್ಕೂ ಜ್ಞಾನವನ್ನು ಆರ್ಜಿಸಲೂ ವ್ಯಕ್ತಿತ್ವವನ್ನು ರೂಪಿಸಿಕೊಳ್ಳಲೂ ವೈದಿಕಜ್ಞಾನದ ಪರಿಚಯವು ನೆರವಾಗುತ್ತಿತ್ತು. ಶಿಕ್ಷಣವು ಶಿಕ್ಷಣವೆನಿಸಿಕೊಳ್ಳಬೇಕಾದರೆ ಅದರಲ್ಲಿ ಹಿಂದೂ ಚತುರ್ದಶವಿದ್ಯೆಯ ಕಲಿಕೆ ಸೇರಿರಬೇಕೆಂದು ಬೌದ್ಧರು ನಂಬಿದ್ದರು.

ದಕ್ಷಿಣ ಭಾರತದಲ್ಲಿ ಕೂಡ ತಮಿಳುನಾಡಿನ ರಾಜರುಗಳು ಸ್ಥಾಪಿಸಿದ ಘಟಿಕಾಸ್ಥಾನ ಮತ್ತು ಇತರ ಸಂಸ್ಥೆಗಳಲ್ಲಿ ಈ ಶಾಸ್ತ್ರಗಳನ್ನು ಕಲಿಸಲಾಗುತ್ತಿತ್ತು. ಕ್ರಿ.ಶ. 868ರ ತಾಮ್ರಶಾಸನದಲ್ಲಿ, ಕುಡಲೂರ್ ಮತ್ತು ಪಾಂಡಿಚೆರಿಯ ಮಧ್ಯೆ ಇರುವ ಬಹುರ್‌ನ ವಿದ್ಯಾಸಂಸ್ಥೆಯೊಂದರಲ್ಲಿ 14 ವಿದ್ಯೆಗಳನ್ನು ಕಲಿಸುತ್ತಿದ್ದ ಉಲ್ಲೇಖ ಬರುತ್ತದೆ. ಹಾಗೆಯೇ ಎಣ್ಣಾಯಿರಮ್‌ನಲ್ಲಿ ಒಂದು ಶಾಲೆಯಿತ್ತು; ಆ ಊರು ವಿಳುಪುರಂ ಮತ್ತು ತಿಂಡಿವನಮ್ ಮಧ್ಯೆ ಇದೆ; ಅಲ್ಲಿನ ಕಲಿಕೆಯ ವಿಷಯಗಳಲ್ಲಿ ಪ್ರಾಚೀನ ಶಾಸ್ತ್ರಗಳೂ ಸೇರಿದ್ದವು ಎಂದು ರಾಜೇಂದ್ರ ಚೋಳನ ಒಂದು ಶಾಸನದಲ್ಲಿ (ಕ್ರಿ.ಶ. 11ನೆಯ ಶ.) ದಾಖಲಾಗಿದೆ. ಅಂಥ ಅನೇಕಾನೇಕ ನಿದರ್ಶನಗಳಿವೆ.

ಈ ದಿನಗಳಲ್ಲಿ ತಮಿಳು ಇತಿಹಾಸದ ಬಗೆಗೆ ಗಣನೀಯ ಸಂಶೋಧನೆ ನಡೆಯುತ್ತಿದೆ. ಅದು ಕಥೆಗಳಿಗೂ ಕಾದಂಬರಿಗಳಿಗೂ ಸ್ಫೂರ್ತಿ ಕೊಟ್ಟಿದೆ. ಆದಾಗ್ಯೂ, ತಮಿಳು ರಾಜರು ವೇದ ಶಾಸ್ತ್ರಗಳ ಅಧ್ಯಯನವನ್ನು ದೊಡ್ಡ ಪ್ರಮಾಣದಲ್ಲಿ ಬೆಂಬಲಿಸಿದರು ಎಂಬ ನನ್ನದೇ ಅಧ್ಯಯನದಿಂದ ಪಡೆದ ಮಾಹಿತಿಯು ಇತರ ಯಾರಿಂದಲೂ ಉಲ್ಲೇಖಗೊಂಡಿಲ್ಲವೆಂದು ಕಾಣುತ್ತದೆ. ಎಲ್ಲ ವಿಷಯಗಳಲ್ಲೂ ನಿಷ್ಪಕ್ಷಪಾತದ ಅಗತ್ಯ, ವೈಜ್ಞಾನಿಕ ದೃಷ್ಟಿಕೋನವನ್ನು ಹೊಂದುವುದರ ಪ್ರಾಮುಖ್ಯ, ಇವುಗಳ ಬಗ್ಗೆ ಬಹಳ ಮಾತನಾಡಲಾಗುತ್ತದೆ, ಆದರೆ ಅದರ ಅನುಷ್ಠಾನ ನಡೆಯುತ್ತಿರುವ ಬಗ್ಗೆ ಪುರಾವೆ ಕಾಣುತ್ತಿಲ್ಲ.

ಬೌದ್ಧರು ವೇದವಿರೋಧಿಗಳಾಗಿದ್ದರು. ಆದರೆ ಹಿಂದೂಗಳ ಹದಿನಾಲ್ಕು ಶಾಸ್ತ್ರಗಳ ಪರಿಶ್ರಮವು ಬೌದ್ಧಿಕ ಪುಷ್ಟಿಗೂ ವಿದ್ಯಾರ್ಥಿಗಳ ನೈತಿಕತೆಯನ್ನು ರೂಪಿಸಲೂ ಅಗತ್ಯವೆಂದು ಅವರು ನಂಬಿದ್ದರು. ಆದರೆ ಇಲ್ಲಿ ನಮ್ಮ ಧರ್ಮದ ಬಗ್ಗೆ ಶ್ರದ್ಧೆ ಇದೆಯೆಂದು ಹೇಳುವ ಜನ (ನಮ್ಮ ಶಾಸ್ತ್ರಗಳನ್ನು ಉತ್ತೇಜಿಸಲು

ಅವರು ಏನೂ ಮಾಡುವುದಿಲ್ಲವೆನ್ನುವುದು ಹಾಗಿರಲಿ) ಹಿಂದೆ ತಮಿಳು ರಾಜರು ವೇದಾಧ್ಯಯನಕ್ಕೆ ಪ್ರೋತ್ಸಾಹ ನೀಡಿದ ಬಗ್ಗೆ ಮೌನ ತಳೆಯುತ್ತಾರೆ.

ನಾವು ಎಂಥ ವಿಷಮ ಸ್ಥಿತಿಯನ್ನು ತಲಪಿದ್ದೇವೆಂದರೆ, ನಮ್ಮನ್ನು ನಮ್ಮ 'ವಿದ್ಯೆ'ಗಳ ಬಗೆಗೆ ಕೇಳಿದರೆ ಮೌನ ತಳೆಯುವುದು ಬಿಟ್ಟು ಮತ್ತೇನೂ ಮಾಡಲಾರದವರಾಗಿದ್ದೇವೆ. ಖಂಡಿತವಾಗಿಯೂ 'ವಿದ್ಯೆ' ಎಂದರೇನು ಎಂಬುದು ಕೂಡ ನಮಗೆ ತಿಳಿಯದು. ಅದೊಂದು ಕಣ್ಕಟ್ಟು ವಿದ್ಯೆಯೆಂದೋ ಮಾಟವಿದ್ಯೆಯೆಂದೋ ನಾವು ಯೋಚಿಸುವ ಸಂಭವವಿದೆ. ವಿದ್ಯೆ ಮತ್ತು ಕಲೆ ಎಂದರೆ ಒಂದೇ. ಕಲೆ ಎಂದರೆ ಚಂದ್ರನಂತೆ ವರ್ಧಿಸುವಂಥ ಜ್ಞಾನವಾಗಿದೆ. ಈಗ ಬಹು ಜನರು ಕಲೆ ಎಂದರೆ ನರ್ತನ ಮಾತ್ರ ಎಂದು ಯೋಚಿಸುತ್ತಾರೆ.

ಮುಂದಾದರೂ ನಾವು ನಮ್ಮ ಶಾಸ್ತ್ರಗಳ ಬಗೆಗೆ ಅಜ್ಞಾನಿಗಳಾಗಿ ಇರಬಾರದು ಅಥವಾ ಅವುಗಳ ಬಗೆಗೆ ಉಪೇಕ್ಷೆಯ ಮನೋಭಾವ ತಳೆಯಬಾರದು. ನಮ್ಮ ತನವನ್ನು ಉಳಿಸಿಕೊಳ್ಳಬೇಕು. ಆದ್ದರಿಂದಲೇ ನಾನು ಈ 14 ಅಥವಾ 18 ವಿದ್ಯಾ ಶಾಖೆಗಳ ಬಗ್ಗೆ ಸಂಕ್ಷೇಪವಾಗಿ ಹೇಳಬಯಸುತ್ತೇನೆ. ಕೊನೆಯ ಪಕ್ಷ ಅವುಗಳ ಹೆಸರನ್ನಾದರೂ ನೀವು ತಿಳಿದಿರಬೇಕು.

ಶಿಕ್ಷಾ, ವ್ಯಾಕರಣ, ಮೀಮಾಂಸಾ ಮತ್ತು ನ್ಯಾಯ ಇವು 14 ಶಾಸ್ತ್ರಗಳಲ್ಲಿ ಸೇರಿವೆ. ಈ ವಿದ್ಯೆಗಳು ಕೊಂಚ ಬೇಸರ ತರಿಸುವಂಥವು ಎಂದೂ ಆತ್ಮೋದ್ಧಾರಕ್ಕೆ ಯಾವ ರೀತಿಯೂ ನೆರವಾಗತಕ್ಕವಲ್ಲ ಎಂದೂ ನಿಮಗೆ ಅನ್ನಿಸಬಹುದು. ಆದರೆ ನಾನು ಕೇಳುತ್ತೇನೆ, ನಿಮ್ಮ ದಿನನಿತ್ಯದ ಚರ್ಯೆಗಳು ಎಂಥವು? ವರ್ತಮಾನ ಪತ್ರಿಕೆಯನ್ನೋದಲು ಅಷ್ಟು ಸಮಯ ತೆಗೆದುಕೊಳ್ಳುತ್ತೀರಿ, ಅಲ್ಲಿ ಕ್ರೀಡೆಯ ಬಗೆಗೇ ಒಂದೋ ಎರಡೋ ಪೂರ್ಣ ಪುಟಗಳಿರುತ್ತವೆ. ಅದು ನಿಮ್ಮ ದಿನನಿತ್ಯದ ಜೀವನದಲ್ಲಿ ಹೇಗೆ ಪ್ರಯೋಜನಕ್ಕೆ ಬರುತ್ತದೆ? ಅಥವಾ, ನಿಮ್ಮ ಆಂತರಿಕ ಬೆಳವಣಿಗೆಗೇ ಆಗಲಿ ಹೇಗೆ ನೆರವಾಗುತ್ತದೆ?

ಕೆಲವರ್ಷಗಳ ಹಿಂದೆ ಒಂದು ದಿನ ಒಂದು ಪಟ್ಟಣದಲ್ಲಿದ್ದೆ. ಅದು ಮಧ್ಯಾಹ್ನದ ಹೊತ್ತು, ಹೊರಗೆ ಹೋದಾಗ ನೋಡಿದೆ, ಒಂದು ಅಂಗಡಿಯ ಮುಂದೆ ದೊಡ್ಡದೊಂದು ಗುಂಪು ಸೇರಿತ್ತು. ರೇಡಿಯೋದಲ್ಲಿ ಮೊಳಗಿ ಬರುತ್ತಿದ್ದ 'ವಾರ್ತೆ' ಕೇಳಲು ಜನರು ಜಯಾಯಿಸಿದ್ದರು. ಪಕ್ಕದಲ್ಲಿದ್ದಾತನೊಬ್ಬನನ್ನು, ವಾರ್ತೆಯಲ್ಲಿ ಅಂಥ ಸಂಭ್ರಮದ್ದು ಏನಿದೆ ಎಂದು ಕೇಳಿದೆ. ಆತನಾದರೂ, 'ಸಾವಿರಾರು ಮೈಲುಗಳ ಆಚೆ ಸಮುದ್ರದಾಚೆಯ ದೂರದೇಶವೊಂದರಲ್ಲಿ ಎಲ್ಲೋ ಕ್ರಿಕೆಟ್ ಪಂದ್ಯ ನಡೆಯುತ್ತಿದೆ; ಇತ್ತೀಚಿನ ಸ್ಕೋರನ್ನು ರೇಡಿಯೋದಲ್ಲಿ ಹೇಳುತ್ತಿದ್ದಾರೆ' ಎಂದು ಹೇಳಿದ.

ವಸ್ತು ಸ್ಥಿತಿ ಏನೆಂದರೆ, ಜನರು ತಮ್ಮ ಖಯಾಲಿ ಇರುವ ವಿಷಯಗಳಿಗಾಗಿ ಸಮಯವನ್ನೂ ಹಣವನ್ನೂ ಶಕ್ತಿಯನ್ನೂ ವಿನಿಯೋಗಿಸಲು ಸಿದ್ಧರಾಗಿದ್ದಾರೆ; ಆದರೆ ಅವರಿಗೆ ಅದರಿಂದ ಕಾರ್ಯತಃ ಯಾವ ಪ್ರಯೋಜನವೂ ಇರುವುದಿಲ್ಲ.

ನಾನು ಈಗ ನಮ್ಮ ಶಾಸ್ತ್ರಗಳಲ್ಲಿ ಆಸಕ್ತಿ ತಾಳಿ ಎಂದು ಹೇಳುತ್ತಿದ್ದೇನೆ. ಖಂಡಿತವಾಗಿಯೂ ಅವು ಕ್ರಿಕೆಟ್ ಮತ್ತು ಅಂಥ ಇತರ ಸಂಗತಿಗಳಿಗಿಂತ ಹೆಚ್ಚು ಪ್ರಯೋಜಕವಾದಂಥವು. ನೇರವಾದ ಯಾವ ಆಧ್ಯಾತ್ಮಿಕ ಪ್ರಯೋಜಕವನ್ನೂ ಅವು ತಂದುಕೊಡುವಂತೆ ಕಾಣದಿರಬಹುದು. ಅವುಗಳ ಆತ್ಯಂತಿಕ ಉದ್ದೇಶವು ನಮ್ಮನ್ನು ಮುಕ್ತಿಮಾರ್ಗಕ್ಕೆ ಒಯ್ಯುವುದೇ ಆಗಿದೆ; ಆದ್ದರಿಂದ ನಮ್ಮ ಜ್ಞಾನ ಮತ್ತು ಪಕ್ವತೆಗೆ ಅವು ಅತ್ಯಗತ್ಯವಾಗಿವೆ.

ಜ್ಞಾನವು ಒಂದು ಸಂಪತ್ತು, ದೇವರ ವರ. ಒಳ್ಳೆಯ ಶಿಕ್ಷಣ ಮತ್ತು ಕುತೂಹಲದಿಂದ ಅದನ್ನು ಹರಿತಗೊಳಿಸಿಕೊಂಡರೆ ಆತ್ಯಂತಿಕ ಸತ್ಯವು ಮಿಂಚಿನಂತೆ ಗೋಚರಿಸುತ್ತದೆ. ಮಾತೆಂಬ ದೈವಾನುಗ್ರಹವನ್ನು ಪಡೆದಿರುವುದು ಮನುಷ್ಯನು ಮಾತ್ರ. ಅದನ್ನು ಜಾಣತನದಿಂದ ಬಳಸಿದ್ದಾದರೆ ಅವನಿಗೆ ಯಥೇಚ್ಛವಾದ ವಿಶ್ವಾಸ ಉಂಟಾಗುತ್ತದೆ. ಅದಕ್ಕಾಗಿಯೇ ಮಾತಿಗೆ ಸಂಬಂಧಿಸಿದಂಥ ವ್ಯಾಕರಣ, ನಿರುಕ್ತ, ಶಿಕ್ಷಾ ಎಂಬವೇ ಮೊದಲಾದ ಶಾಸ್ತ್ರಗಳನ್ನು ಬೆಳೆಸಿದ್ದಾರೆ. ಪ್ರತಿಯೊಬ್ಬರಿಗೂ ಈ ವಿದ್ಯೆಗಳ ಕನಿಷ್ಠ ತಿಳಿವಳಿಕೆಯಾದರೂ ಇರಬೇಕು.

## ಜ್ಞಾನದ ಹದಿನಾಲ್ಕು ಆವಾಸಸ್ಥಾನಗಳು

ಜ್ಞಾನದ ಹದಿನಾಲ್ಕು ಆವಾಸಸ್ಥಾನಗಳೆಂದರೆ: ನಾಲ್ಕು ವೇದಗಳು, ಆರು ಅಂಗಗಳು ಮತ್ತು ಮೀಮಾಂಸಾ, ನ್ಯಾಯ, ಪುರಾಣಗಳು ಮತ್ತು ಧರ್ಮಶಾಸ್ತ್ರ. ವೇದಗಳು ಮತ್ತು ಷಡಂಗಗಳ ಉಲ್ಲೇಖಗಳನ್ನಾದರೂ ನೋಡಿಯೇ ಇರುತ್ತೀರಿ. ತಮಿಳು ಗ್ರಂಥ 'ತೇವಾರಮ್'ನಲ್ಲಿ 'ವೇದಾಮೋದಾರಂಗಮಾಯಿನಾನೈ' ಎಂದು ಹೇಳಿದೆ. ಈ ಭಕ್ತಿಪ್ರಧಾನ ಗ್ರಂಥದಂತೆ ಈಶ್ವರನು ನಾಲ್ಕು ವೇದಗಳು ಮತ್ತು ಅದರ ಆರು ಅಂಗಗಳ ರೂಪದಲ್ಲಿದ್ದಾನೆ.

ಹದಿನಾಲ್ಕು ಧರ್ಮಪ್ರಮಾಣಗಳನ್ನು (ಧರ್ಮಕ್ಕೆ ಆಧಾರಗಳು) 'ಚತುರ್ದಶವಿದ್ಯಾ' ಎನ್ನಲಾಗಿದೆ. ಪ್ರಖ್ಯಾತ ಕಾವ್ಯವಾದ 'ನೈಷಧ'ದಲ್ಲಿ ನಳನು ಈ 14 ವಿದ್ಯೆಗಳಲ್ಲಿ ಪರಿಶ್ರಮ ಹೊಂದಿದ್ದನೆಂದು ಹೇಳಿದೆ. 'ಚತುರ್ದಶ' ಎಂಬ ಪದವನ್ನು ಕವಿ ಶ್ರೀಹರ್ಷನು ಚಮತ್ಕಾರವಾಗಿ ಬಳಸಿದ್ದಾನೆ. ಚತುರ್ದಶ ವಿದ್ಯೆಗಳಿಗೆ ನಳನು ಚತುರ್ದಶೆಯನ್ನು ದಯಪಾಲಿಸಿದ; ಎಂದರೆ ಓದುವುದು, ಓದಿದ್ದನ್ನು ಅರ್ಥಮಾಡಿಕೊಳ್ಳುವುದು, ಅರ್ಥಮಾಡಿಕೊಂಡದ್ದನ್ನು ಆಚರಣೆಗೆ ತರುವುದು, ಇತರರೂ ಹಾಗೆಯೇ ಜೀವಿಸುವಂತೆ ಪ್ರೇರೇಪಿಸುವುದು–ಈ ನಾಲ್ಕು ದೆಶೆಗಳನ್ನು ದಯಪಾಲಿಸಿದ ಎಂದು ಹೇಳಿದ್ದಾನೆ.

**ಚತುರ್ದಶತ್ವಂ ಕೃತವಾನ್ ಕುತಃ ಸ್ವಯಂ**
**ನ ವೇದ್ಮಿ ವಿದ್ಯಾಸು ಚತುರ್ದಶಸ್ವಪಿ (ನೈಷಧಮ್ 1.4)**

ಈ ಹದಿನಾಲ್ಕು ವಿದ್ಯೆಗಳು ಎಲ್ಲ ಧಾರ್ಮಿಕ ಜ್ಞಾನವನ್ನೂ ಒಳಗೊಂಡಿವೆ.

ಮತ್ತೂ ನಾಲ್ಕು ವಿದ್ಯೆಗಳಿವೆ. ಈಗಾಗಲೇ ಹೇಳಿರುವ 14 ವಿದ್ಯೆಗಳಿಗೆ ಇವನ್ನು ಸೇರಿಸಿದರೆ 18 ವಿದ್ಯೆಗಳು–ಅಂದರೆ ಅಷ್ಟಾದಶ ವಿದ್ಯೆಗಳಾಗುತ್ತವೆ. ಇವು ಎಲ್ಲವನ್ನೂ ಒಳಗೊಳ್ಳುತ್ತವೆ. ಇವುಗಳ ಪೈಕಿ ಈಗಾಗಲೇ ಹೇಳಿರುವ 14 ಧರ್ಮಕ್ಕೆ ನೇರವಾಗಿ ಸಂಬಂಧಪಟ್ಟವು. ಆಯುರ್ವೇದ, ಅರ್ಥಶಾಸ್ತ್ರ, ಧನುರ್ವೇದ ಮತ್ತು ಗಾಂಧರ್ವ ವೇದ–ಈ ನಾಲ್ಕು ಧರ್ಮದ ವಿಷಯಕ್ಕೆ ನೇರವಾಗಿ ಸಂಬಂಧಿಸಿದುವಲ್ಲ. ಅವುಗಳು ಧರ್ಮಸ್ಥಾನಗಳಲ್ಲ, ಆದರೆ ಅವಕ್ಕೆ ವಿದ್ಯಾಸ್ಥಾನಗಳು ಎನಿಸುವ ಅರ್ಹತೆ ಇದೆ. ಈಗಾಗಲೇ ಹೇಳಿರುವಂತೆ ಮೊದಲು ಹೇಳಿದ 14 ವಿದ್ಯೆಗಳು ಧರ್ಮಸ್ಥಾನಗಳೂ ಹೌದು, ವಿದ್ಯಾಸ್ಥಾನಗಳೂ ಹೌದು.

ಧರ್ಮಸ್ಥಾನಗಳು ಮತ್ತು ವಿದ್ಯಾಸ್ಥಾನಗಳನ್ನು ಒಟ್ಟಿಗೆ ಸೇರಿಸಿ 'ಶಾಸ್ತ್ರಗಳು' ಎಂದು ಸಾಧಾರಣವಾಗಿ ಹೇಳುತ್ತಾರೆ. 'ಶಾಸ್ತ್ರ' ಎಂದರೆ ಒಂದು ವಿಧಿ ಅಥವಾ ಆಜ್ಞೆ, 'ರಾಜಶಾಸನ' ಎಂದರೆ ರಾಜಾಜ್ಞೆ. ಮಹಾಭಾರತದಲ್ಲಿ ಒಂದು ಪರಿಚ್ಛೇದವಿದೆ; ಅದರಲ್ಲಿ ಭೀಷ್ಮನು ಯುಧಿಷ್ಠಿರನಿಗೆ ಧರ್ಮದ ಆದೇಶಗಳನ್ನು ತಿಳಿಯಹೇಳುತ್ತಾನೆ; ಅದಕ್ಕೆ 'ಅನುಶಾಸನಪರ್ವ' ಎಂದೇ ಹೆಸರಿದೆ. ಅಯ್ಯನಾರ್‌ಗೆ ಶಾಸ್ತಾ ಎಂದು ಕರೆಯುತ್ತಾರೆ, ಏಕೆಂದರೆ ಅವನು ಶಿವನ

ಭೂತಗಣಗಳನ್ನು ತನ್ನ ಆಜ್ಞೆಗಳ ಮೂಲಕ ನಿಯಂತ್ರಿಸುತ್ತಾನೆ. ಶಾಸ್ತ್ರಗ್ರಂಥಗಳಲ್ಲಿ ವಿಧಿಗಳನ್ನು ಅಳವಡಿಸಲಾಗಿದೆ; ಅವು ನಮ್ಮನ್ನು ಶಿಸ್ತಿನಲ್ಲಿಡುತ್ತವೆ ಮತ್ತು ಸರಿಯಾದ ದಾರಿಯಲ್ಲಿ ಹೋಗುವಂತೆ ಮಾಡುತ್ತವೆ.

ಎಲ್ಲ 14 ಶಾಸ್ತ್ರಗಳೂ ಆಧಾರ ಗ್ರಂಥಗಳು, ಅಧಿಕೃತ ಗ್ರಂಥಗಳು, ಆದರೆ ವೇದಗಳು ಅವುಗಳಿಗೆ ಕಿರೀಟವಿದ್ದ ಹಾಗೆ. ಬೌದ್ಧ ಧರ್ಮ, ಜರತುಷ್ಟ್ರಧರ್ಮ, ಕ್ರಿಶ್ಚಿಯನ್ ಧರ್ಮ, ಇಸ್ಲಾಂ ಧರ್ಮಗಳಿಗೆ ಕ್ರಮವಾಗಿ ತ್ರಿಪಿಟಕಾ, ಜೆಂಡ್-ಆವೆಸ್ತಾ, ಬೈಬಲ್ ಮತ್ತು ಕುರಾನ್ ಧರ್ಮಗ್ರಂಥಗಳಾಗಿರುವ ಹಾಗೆ ನಮಗೆ ಪ್ರಧಾನ ಧರ್ಮಗ್ರಂಥಗಳು ವೇದಗಳಾಗಿವೆ.

14 ವಿದ್ಯೆಗಳ ಪೈಕಿ ಮೊದಲ ನಾಲ್ಕು (ನಾಲ್ಕು ವೇದಗಳು) ಉಳಿದ ಹತ್ತಕ್ಕೆ ಆಧಾರವಾಗಿವೆ. ಒಟ್ಟಾಗಿ ಅವು ಸಂಪೂರ್ಣ ಶಾಸ್ತ್ರಸಂಹಿತೆಯಾಗಿವೆ; ಅವುಗಳ ಮೇಲೆ ನಮ್ಮ ಧರ್ಮವು ಸ್ಥಾಪಿತವಾಗಿದೆ.

## ಧರ್ಮ ಏಕೆ?

ನಮಗೇಕೆ ಧರ್ಮ ಬೇಕು? ನಾವೇಕೆ ಧರ್ಮಗುರುವಿನ ಮಾತು ಕೇಳುತ್ತೇವೆ? ನಮ್ಮ ಸಮಸ್ಯೆಗಳು ಪರಿಹಾರವಾಗುತ್ತವೆ ಮತ್ತು ನಮ್ಮ ತಪ್ಪುಗಳನ್ನು ತಿದ್ದಿಕೊಳ್ಳಬಹುದು ಎಂಬ ಭರವಸೆಯಿಂದ ಹಾಗೆ ಮಾಡುತ್ತೇವೆ. ನಮಗೆ ತೊಂದರೆ ಇಲ್ಲದಾಗ ಅಥವಾ ನಮಗೆ ಯಾವುದಾದರೂ ಕೊರತೆ ಇದೆ ಎನ್ನಿಸದಾಗ ನಾವು ಯಾವ ಉಪದೇಶಕನ ಬಳಿಗೂ ಹೋಗುವುದಿಲ್ಲ. ನಮಗೆ ಸಮಸ್ಯೆಗಳು ಆವರಿಸಿಕೊಂಡಷ್ಟೂ ನಾವು ದೇವಸ್ಥಾನಗಳಿಗೆ ಹೋಗಿ ಪೂಜೆ ಸಲ್ಲಿಸುವುದೂ ಮಹಾತ್ಮರ ದರ್ಶನ ಮಾಡಿ ಅವರ ಉಪದೇಶ ಪಡೆಯುವುದೂ ಹೆಚ್ಚಾಗುತ್ತದೆ.

ದೊಡ್ಡವರನ್ನೂ ಸಂತರನ್ನೂ ನಮ್ಮ ದುಃಖ ಪರಿಹಾರವಾಗುವುದು ಮತ್ತು ಅನುಮಾನಗಳು ನಿವಾರಣೆಗೊಳ್ಳುವುದು ಎಂಬ ಭರವಸೆ ಇಟ್ಟುಕೊಂಡು ಹೋಗಿ ಕಾಣುತ್ತೇವೆ. ತೊಂದರೆಗಳಿಂದ ಪೀಡಿತರಾದಾಗ ನಾವು ಪುಸ್ತಕಗಳಲ್ಲೋ, ಜ್ಞಾನಿಗಳೂ ಶ್ರೇಷ್ಠರೂ ಆದವರ ಬುದ್ಧಿವಾದ ಕೇಳುವುದರಲ್ಲೋ ಸಾಂತ್ವನ ಹೊಂದಲು ಪ್ರಯತ್ನಿಸುತ್ತೇವೆ. ಅಥವಾ ತೀರ್ಥಯಾತ್ರೆಗೆ ಹೋಗಿ ಪವಿತ್ರ ತೀರ್ಥಗಳಲ್ಲೋ ನದಿಗಳಲ್ಲೋ ಮಿಂದು ಬರುತ್ತೇವೆ. ಹೀಗೆ ಆಗಾಗ ಮನಶ್ಶಾಂತಿ ಹೊಂದಬಯಸುತ್ತೇವೆ. ಪರಮ ಶಾಂತಿಯನ್ನರಿತವರು ಆನಂದದಿಂದಿರುತ್ತಾರೆ. ತಮ್ಮನ್ನು ಇರಿಯುತ್ತಿದ್ದಾರೋ, ಗಾಯಗೊಳಿಸುತ್ತಿದ್ದಾರೋ, ಸಮ್ಮಾನಿಸುತ್ತಿದ್ದಾರೋ, ದೂಷಿಸುತ್ತಿದ್ದಾರೋ ಎಂಬ ಹೊಲಬೇ ಅವರಿಗಿರುವುದಿಲ್ಲ.

ಆಂತರಿಕ ಶಾಂತಿಯನ್ನು ಅನುಭವಕ್ಕೆ ತಂದುಕೊಂಡಿರುವ ಮಹಾತ್ಮರು ಎಲ್ಲ ಜಾತಿಗಳಲ್ಲೂ ಹುಟ್ಟುತ್ತಾರೆ. ಧರ್ಮವೆಂದರೆ ಏನು? ಶಾಂತಿ ಪಡೆಯಲು ದಾರಿ ತೋರಿಸುವುದೇ ಧರ್ಮ; ರಿಲಿಜನ್ ಎಂಬುದನ್ನು 'ಮತ' ಅಥವಾ 'ಧರ್ಮ' ಎಂದು ಕರೆಯುತ್ತಾರೆ. ಆತ್ಯಂತಿಕವಾದ ಒಳಿತನ್ನು ಅಂದರೆ ಮೋಕ್ಷವನ್ನು ಹೊಂದುವ ಮಾಧ್ಯಮವೇ ಧರ್ಮ; ಅದೇ 'ಮತ'.

ಪ್ರಥಮತಃ ಈ ಜಗತ್ತಿನಲ್ಲಿ ಸಂತೋಷವಾಗಿ ಮತ್ತು ಚೆನ್ನಾಗಿ ಇರುವುದಕ್ಕಾಗಿಯೇ ಧರ್ಮವನ್ನವಲಂಬಿಸುವುದು. ಐಹಿಕ ಸುಖೋದ್ದೇಶವನ್ನಿಟ್ಟುಕೊಳ್ಳದೆ ಧರ್ಮದ ಆಚರಣೆ ಮಾಡಿದಾಗ ಅದು ಮುಕ್ತಿಗೆ ಒಯ್ಯುತ್ತದೆ. ಹೌದು, ಇದೇ ಧರ್ಮ, ಇದೇ ಮತ.

ರಿಲಿಜನ್ ಎಂಬುದನ್ನೇ ಶಾಸ್ತ್ರಗಳು 'ಧರ್ಮ' ಎಂದಿವೆ. ಜೀವನದ ಪರಿಪೂರ್ಣತೆಯನ್ನು ಹೊಂದಲು ಬೇಕಾದ ನೀತಿ ಮತ್ತು ಧಾರ್ಮಿಕ ತತ್ತ್ವಗಳನ್ನೇ 'ಧರ್ಮ' ಎಂಬ ಪದವು ಸೂಚಿಸುತ್ತದೆ. ಈ ಧರ್ಮವನ್ನು ಬೋಧಿಸುವ ಹಲವು ಗ್ರಂಥಗಳಿವೆ. ಆದರೆ ನಾವು ಅದನ್ನು ತಿಳಿಯದೆ ಹೋಗಿದ್ದೇವೆ. ಧರ್ಮದ ಮೂಲಾಧಾರವಾದ ವಿಷಯಗಳ ಬಗ್ಗೆ ಅವು ತಿಳಿಸುವುದರಿಂದ ಅವನ್ನು 'ಧರ್ಮ ಪ್ರಮಾಣಗಳು' ಎನ್ನುತ್ತೇವೆ. ಯಾವುದು ಸತ್ಯವನ್ನು ಅಥವಾ ವಸ್ತು (ಅಥವಾ ನಂಬಿಕೆಯ) ಯುಕ್ತತೆಯನ್ನು ಪ್ರತಿಷ್ಠಾಪಿಸುತ್ತದೋ ಅದು ಪ್ರಮಾಣ. ಧರ್ಮಕ್ಕೆ ಸಂಬಂಧಿಸಿದ 14 ಆಧಾರಶಾಸ್ತ್ರಗಳು ನಮ್ಮಲ್ಲಿವೆ. ಅವು 'ಹಿಂದೂ ಧರ್ಮ' ಎಂದು ಈಗ ಪ್ರಚಲಿತವಾಗಿರುವುದರ ಬಗೆಗಿನ ಅಧಿಕೃತ ಗ್ರಂಥಗಳಾಗಿವೆ. ಅಪೌರುಷೇಯವಾದ ವೇದಗಳ ಕಾಲದಿಂದಲೂ ಅವು ನಮಗೆ ಪರಂಪರೆಯಾಗಿ ಬಂದಿವೆ. ಈ ಪ್ರಕರಣ ಗ್ರಂಥಗಳು ನಮಗೆ ಧರ್ಮದ ತತ್ತ್ವಗಳು ಮತ್ತು ಅನುಷ್ಠಾನಗಳನ್ನು ಕುರಿತು ಹೇಳುತ್ತವೆ.

**ಅಂಗಾನಿ ವೇದಾಶ್ಚತ್ವಾರೋ ಮೀಮಾಂಸಾ ನ್ಯಾಯವಿಸ್ತರಃ**
**ಪುರಾಣಂ ಧರ್ಮಶಾಸ್ತ್ರಂ ಚ ವಿದ್ಯಾಹ್ಯೇತಾಶ್ಚತುರ್ದಶ**
**(ಮನುಸ್ಮೃತಿ)**

**ಪುರಾಣನ್ಯಾಯಮೀಮಾಂಸಾಧರ್ಮಶಾಸ್ತ್ರಾಂಗಮಿಶ್ರಿತಾ**
**ವೇದಾಃ ಸ್ಥಾನಾನಿ ವಿದ್ಯಾನಾಂ ಧರ್ಮಸ್ಯ ಚ ಚತುರ್ದಶ**
**(ಯಾಜ್ಞವಲ್ಕ್ಯ ಸ್ಮೃತಿ)**

ಎರಡು ಸ್ಮೃತಿಗಳಲ್ಲೂ 'ಚತುರ್ದಶ' ಎಂಬ ಮಾತು ಬರುತ್ತದೆ. ಅಂದರೆ ಹದಿನಾಲ್ಕು. ಈ ಎರಡು ಶ್ಲೋಕಗಳಿಂದ, ನಮ್ಮ ಧರ್ಮದ ಎಲ್ಲ ಅಂಶಗಳನ್ನೂ ತಿಳಿಸುವ ಅಧಿಕೃತವಾದ 14 ಧರ್ಮಗ್ರಂಥಗಳಿವೆ ಎಂದು ತಿಳಿದು ಬರುತ್ತದೆ.

'ವಿದ್' ಎಂದರೆ 'ತಿಳಿಯುವುದು' ಅದರಿಂದಲೇ 'ವಿದ್ಯಾ' ಎಂಬ ಶಬ್ದವು ವ್ಯುತ್ಪನ್ನವಾಗಿದೆ. ಅದರ ಅರ್ಥ, ಜ್ಞಾನವನ್ನು ತಿಳಿಸುವ ಕೆಲಸ ಎಂದು. ಅದು ಧರ್ಮದ ಸತ್ಯಗಳ ಮೇಲೆ ಬೆಳಕು ಚೆಲ್ಲುತ್ತದೆ.

**ವಿದ್ಯಾ ಹ್ಯೇತಾಃ ಚತುರ್ದಶ ಮತ್ತು**
**ವಿದ್ಯಾನಾಂ ಧರ್ಮಸ್ಯ ಚ ಚತುರ್ದಶ**

ಎಂಬ ಎರಡು ಶ್ಲೋಕಗಳಿಂದ ವಿದ್ಯೆಯನ್ನು ಕುರಿತ 14 ಪ್ರಕರಣ ಗ್ರಂಥಗಳಿರುವುದು ತಿಳಿಯುತ್ತದೆ. ಈ 14ರಲ್ಲಿ ಜ್ಞಾನವನ್ನು ಹಂಚುವ ಶಾಸ್ತ್ರಗಳು ಮಾತ್ರವಲ್ಲ ಸಾಮಾನ್ಯ ತತ್ತ್ವಗಳನ್ನು ಕುರಿತ ಪ್ರಕರಣ ಗ್ರಂಥಗಳೂ ಸೇರಿವೆ; ಆದ್ದರಿಂದಲೇ ಅವನ್ನು 'ವಿದ್ಯಾಸ್ಥಾನಗಳು' ಮತ್ತು 'ಧರ್ಮಸ್ಥಾನಗಳು' ಎಂದು ಕರೆದಿದ್ದಾರೆ. ***ಸ್ಥಾನಾನಿ ವಿದ್ಯಾನಾಮ್ ಧರ್ಮಸ್ಯ ಚ ಚತುರ್ದಶ*** ಎಂಬುದಾಗಿ. 'ವಿದ್' ಎಂದರೆ 'ತಿಳಿಯುವುದು' ಎಂದಿದ್ದರೂ ಆ ಪದವು ಎಲ್ಲ ವಿಧದ ಜ್ಞಾನವನ್ನೂ ಸೂಚಿಸುವುದಿಲ್ಲ. 'ವಿದ್ಯಾ'ದಲ್ಲಿರುವ 'ವಿದ್'ಗೆ ಸತ್ಯದ ಬಗೆಗಿನ ಜ್ಞಾನ ಎಂದು ಅರ್ಥ. ಇಂಗ್ಲಿಷ್ ಪದಗಳಾದ Wit ಮತ್ತು Wisdom ಈ ಧಾತುವಿನಿಂದ ವ್ಯುತ್ಪನ್ನವಾಗಿವೆ. ಈ ಧಾತುವಿನಿಂದಲೇ 'ವೇದ' ಎಂಬ ಶಬ್ದವೂ ಬಂದಿದೆ; ಅದಕ್ಕೆ ಅಕ್ಷರಶಃ 'ಜ್ಞಾನದ ಗ್ರಂಥ' ಎಂದು ಅರ್ಥ. ಜ್ಞಾನದ ಆಕರಗಳಾದುದರಿಂದ ಈ 14 ಶಾಸ್ತ್ರಗಳನ್ನು 'ವಿದ್ಯಾಸ್ಥಾನಗಳು' ಎನ್ನುತ್ತಾರೆ. ಅಂದರೆ, ಅವು ಜ್ಞಾನ ಅಥವಾ ಕಲಿಕೆಯ ನೆಲೆಗಳು ಎಂದರ್ಥ. 'ಧರ್ಮಸ್ಥಾನಗಳು' ಕೂಡ ವಿದ್ಯೆಯ ನೆಲೆಗಳೇ ಆಗಿವೆ. ●

27ನೇ ಪುಟದಿಂದ

ಮರುದಿನ ಯವನ ರಾಜನಿಗೆ ರಾಮಾನುಜರು ಈ ಸಮಾಚಾರ ತಿಳಿಸಿ ಮೂರ್ತಿ ರಾಜಕುಮಾರಿಯ ಬಳಿ ಇದೆ ಎಂದರು. ಆದರೆ ರಾಮಾನುಜರಿಗಾಗಲೀ ಯವನ ರಾಜನಿಗಾಗಲೀ ನಾಚ್ಚಿಯಾರ್ ರಾಮಪ್ರಿಯ ಮೂರ್ತಿಯೊಂದಿಗೆ ಪ್ರೇಮಪಾಶದಲ್ಲಿ ಬಂಧಿತಳಾಗಿದ್ದಳೆಂಬ ಅರಿವಿರಲಲ್ಲ.

ಸ್ವತಃ ರಾಜನೇ ರಾಮಾನುಜರನ್ನು ತನ್ನ ಮಗಳ ಅಂತಃಪುರಕ್ಕೆ ಕರೆದೊಯ್ದು. ಅಲ್ಲಿ ಅವರಿಬ್ಬರಿಗೂ ಅಚ್ಚರಿಯ ದೃಶ್ಯ ಕಾಣಿಸಿತು. ನಾಚ್ಚಿಯಾರ್ ತನ್ನ ಹಂಸತೂಲಿಕಾ ತಲ್ಪದ ಮೇಲೆ ರಾಮಪ್ರಿಯನನ್ನು ಮಲಗಿಸಿ ಪ್ರೀತಿಯಿಂದ ಆಟವಾಡುವುದರಲ್ಲಿ ಮುಳುಗಿಹೋಗಿದ್ದಳು.

ತನ್ನ ತಂದೆಯನ್ನು, ಅವರ ಜೊತೆಗೆ ತೇಜಃಪುಂಜನಾದ ಒಬ್ಬ ಸಂನ್ಯಾಸಿಯನ್ನು ನೋಡಿ ತಡಬಡಿಸುತ್ತಾ ಎದ್ದು ಕುಳಿತು ತನ್ನ ಬೊಂಬೆಯನ್ನು ತೊಡೆಯ ಮೇಲಿರಿಸಿಕೊಂಡಳು.

ರಾಜನು ತನ್ನ ಮಗಳಿಗೆ ಆ ಮೂರ್ತಿಯನ್ನು ಕೊಂಡೊಯ್ಯಲು ಆ ಸಂನ್ಯಾಸಿ ಬಂದಿರುವುದಾಗಿಯೂ ಅದನ್ನು ಅವರಿಗೆ ಒಪ್ಪಿಸಿ ಬಿಡು ಎಂದು ಹೇಳಲು ಅವಳು ಒಮ್ಮೆಲೆ ಆ ಮೂರ್ತಿಯನ್ನು ತನ್ನ ಎದೆಗೆ ಬಿಗಿದಪ್ಪಿಕೊಂಡು 'ನಾನು ನನ್ನ ಈ ಬೊಂಬೆಯನ್ನು ಯಾರಿಗೂ ಕೊಡುವುದಿಲ್ಲ' ಎಂದು ಹಠ ಹಿಡಿದಳು. ತಂದೆಯ ಯಾವ ಮನ ಓಲೈಕೆಗೂ ಬಗ್ಗದ ನಾಚ್ಚಿಯಾರ್ ಪ್ರಾಣಹೋದರೂ ಅದನ್ನು ಬಿಡುವುದಿಲ್ಲ ಎಂದು ಮೊಂಡು ಹಿಡಿದಳು. ಯಾರು ಯಾರು ಎಷ್ಟು ಪರಿಯಿಂದ ಹೇಳಿದರೂ ಫಲಿಸಲಿಲ್ಲ. ರಾಮಾನುಜರ ಬೇಡಿಕೆಯನ್ನೂ ತಳ್ಳಿಹಾಕಿದರು. ಅಲೌಕಿಕ ಪ್ರೇಮಬಂಧನ ಅಷ್ಟು ಬಲವಾಗಿತ್ತು!

ರಾಮಾನುಜರ ಭಕ್ತಿ ಮತ್ತು ನಾಚ್ಚಿಯಾರ್‌ಳ ಪ್ರೇಮಗಳ ನಡುವೆ ಜಗ್ಗಾಟ ನಡೆದು ಹೋಯಿತಾದರೂ ರಾಮಪ್ರಿಯನು ನಾಚ್ಚಿಯಾರ್‌ಳ ಮಡಿಲಿನಿಂದ ರಾಮಾನುಜರ ತೋಳ ತೆಕ್ಕೆ ಸೇರುವ ಯಾವ ಸಾಧ್ಯತೆಯೂ ಕಂಡುಬರಲಿಲ್ಲ.

ಕೊನೆಗೆ ಬೇರೆ ಯಾವ ದಾರಿಯೂ ಕಾಣದೆ ರಾಜನು "ನೀವು ಮೂರ್ತಿಯನ್ನು ಕೊಂಡೊಯ್ಯಲು ನನ್ನದಂತೂ ಯಾವ ಅಭ್ಯಂತರವೂ ಇಲ್ಲ. ಹೇಗೆ ಕೊಂಡೊಯ್ಯುವಿರೋ ಕೊಂಡೊಯ್ಯಿರಿ..." ಎಂದು ಹೇಳಿಬಿಟ್ಟ. ಇಷ್ಟೆಲ್ಲ ಆದ ಮೇಲೆ ಶತಾಯಗತಾಯ ರಾಮಪ್ರಿಯನನ್ನು ಪಡೆದುಕೊಂಡೇ ಹೋಗುವೆ ಎಂಬ ದೃಢ ನಿರ್ಧಾರದೊಂದಿಗೆ ರಾಮಾನುಜರು ರಾಮಪ್ರಿಯನನ್ನು ತಮ್ಮ ಜೊತೆ ಬರುವಂತೆ ಪ್ರಾರ್ಥಿಸಿಕೊಂಡರು. 'ನನ್ನ ಶೆಲ್ಪ ಪಿಳ್ಳಿಯೇ ಸಂಪತ್ಕುಮಾರನೇ ಬಾಪ್ಪಾ ಬಾ' ಎಂದು ಕರೆದರು.

ತಮ್ಮ ದೃಷ್ಟಿಯನ್ನು ನಾಚ್ಚಿಯಾರ್‌ಳ ದೃಷ್ಟಿಯೊಂದಿಗೆ ಬೆರೆಸಿ ತಮ್ಮ ತಪಶ್ಶಕ್ತಿಯಿಂದ ಸಮ್ಮೋಹನಾಸ್ತ್ರ ಬೀರಿದರು. ಆ ನೋಟಕ್ಕೆ ಶರಣಾಗತಳಾದ ನಾಚ್ಚಿಯಾರ್ ತಾನಿದ್ದಲ್ಲಿಂದ ಎದ್ದು ನಿಂತು ಮೂರ್ತಿಯನ್ನು ಎತ್ತಿಕೊಂಡಳು.

'ಶೆಲ್ವ ಪಿಳ್ಳೆ, ಸಂಪತ್ಕುಮಾರ, ರಾಮಪ್ರಿಯ ಬಾಪ್ಪಾ ಬಾ....' ಎಂದು ಮತ್ತೆ ಮತ್ತೆ ಅವರು ಕರೆಯುತ್ತಿದ್ದಂತೆ ನಿಧಾನವಾಗಿ ಆದರೆ ಯಾಂತ್ರಿಕವಾಗಿ ಹೆಜ್ಜೆ ಇರಿಸುತ್ತಾ ನಾಚ್ಚಿಯಾರ್ ನಡೆಯಲಾರಂಭಿಸಿದಳು.

ಮೂರ್ತಿಯ ಕಾಲಿಗೆ ಕಟ್ಟಿದ್ದ ಗೆಜ್ಜೆಗಳು ಅವಳು ಹೆಜ್ಜೆ ಇರಿಸುತ್ತಿದ್ದಂತೆ ಘಲ್ ಘಲ್ ಶಬ್ದ ಮಾಡಿದವು. ತನಗೆ ಅರಿವಿಲ್ಲದಂತೆಯೇ ರಾಮಾನುಜರನ್ನು ಸಮೀಪಿಸಿದ ರಾಜಕುಮಾರಿ ನಾಚ್ಚಿಯಾರ್ ಕೈಚಾಚಿ ನಿಂತಿದ್ದ ರಾಮಾನುಜರ ಕೈಗಳಲ್ಲಿ ಮೂರ್ತಿಯನ್ನು ಇರಿಸಿ ಅವರ ಕಾಲಿಗೆ ಬಿದ್ದು ನಮಿಸಿ ಅಲ್ಲಿಂದ ಯಾಂತ್ರಿಕವಾಗಿ ತನ್ನ ಸ್ಥಳಕ್ಕೆ ಹಿಂದಿರುಗಿ ಹೋಗಿ ಕುಳಿತುಬಿಟ್ಟಳು.

ರಾಮಾನುಜರ ರಾಮಪ್ರಿಯ ಅವರ ತೋಳು ಸೇರಿದ್ದ. ರಾಮಾನುಜರು ನಿಜವಾದ ದಿಗ್ವಿಜಯ ಸಾಧಿಸಿದ್ದರು. ಮೊದಲನೆಯದಾಗಿ ಪಾಷಾಣ ಹೃದಯದ ಯವನ ರಾಜನನ್ನು ತಮ್ಮ ಕಡೆಗೆ ತಿರುಗಿಸಿಕೊಂಡಿದ್ದು. ಎರಡನೆಯದು ನಾಚ್ಚಿಯಾರ್‌ಳ ಬಿಗಿಯಾದ ಪ್ರೇಮಪಾಶದಲ್ಲಿ ಸಿಲುಕಿದ್ದ ರಾಮಪ್ರಿಯನನ್ನು ಬಿಡಿಸಿಕೊಂಡು ವಶಕ್ಕೆ ಪಡೆದುಕೊಂಡಿದ್ದು.

ರಾಮಾನುಜರು ಅಲ್ಲಿ ಹೆಚ್ಚು ಕಾಲ ಕಳೆಯುವಂತಿಲ್ಲವೆಂದೂ ಶೀಘ್ರವೇ ಮೇಲುಕೋಟೆ ತಲಪಬೇಕೆಂದೂ ಅವರೊಂದಿಗೆ ಬಂದಿದ್ದ ಸೈನಿಕರ ನಾಯಕನೂ ರಾಮಾನುಜರ ಶಿಷ್ಯರೂ ಅವಸರ ಪಡಿಸಿದರು. ಏಕೆಂದರೆ ಸಮ್ಮೋಹನಾವಸ್ಥೆಯಲ್ಲಿದ್ದ ರಾಜಕುಮಾರಿ ನಾಚ್ಚಿಯಾರ್ ಸಹಜ ಪ್ರಜ್ಞೆಗೆ ಮರಳಿದಾಗ ಅವಳು ಮತ್ತೆ ರಾಮಪ್ರಿಯ ಬೇಕೆಂದು ಹೋರಾಡುವ ಎಲ್ಲ ಸಾಧ್ಯತೆಗಳೂ ಇದ್ದವು.

ಹೀಗಾಗಿ ರಾಮಾನುಜರ ತಂಡ ಯವನ ರಾಜನಿಗೆ ಕೃತಜ್ಞತೆ ಸಲ್ಲಿಸಿ ಅಲ್ಲಿಂದ ತುರ್ತಾಗಿ ಅವಸರವಸರವಾಗಿ ನಿರ್ಗಮಿಸಿದರು.

**(ಮುಂದುವರಿಯುವುದು)**

37ನೇ ಪುಟದಿಂದ

**ಅಧಿಕ ಭವಭಂಗ, ಕೈವರಮು –ಭೀಮಲಿಂಗ ॥25॥**

Athadettavadanna ayidu moorala poduvu,
Angambu gajanimma pandu chchaya |
Sampangi raekuvale chakkani nasikamu,
Niduvaina meesamulu, nikku chevulu |
Vistharamai yuramu, hasthalu bahu poduvu,
Diga Viduva mokallu, diguva niluchu |
Vunchani thirumani nudutha raekulu moodu,
Jananamai nappudae jadalaya ||
Parama pursushudu paraloka (parakaya) pravaesh Vidya |
Marma merigina mahathmudainavadu |
Amara Naraeyanuni Sakha, Hara, mahatma |
Adhika BhavaBhanga, Kaiwaramu Bheemalinga
| 25 |

## Meaning:

The (previously mentioned) enlightened, noble-hearted and ideal emperor (of the future) will be five cubits in height. His complexion and (body) colour will be extremely pleasing and quite attractive. His well-shaped nose will resemble the fine petal of the champaka blossom. His moustache will be long, his ears fine and erect This broad-shouldered, and broad-chested person will have long arms; so long, indeed, that when he lets them fall full length they will reach up to his knees. Three prominent, parallel and Perpendicular lines on his clean forehead give the impression that they had been etched there even at birth (by God Himself); These bright lines naturally enhance both his dignity and appearance. This Parama Purusha would be entitled to the lofty appellation of Mahatma owing to his knowledge of paraloka (parakaya) Pravaesha. This is a clear indication that he will be a yoga siddha, one who knew the great marma.

**(To be continued...)**




ತೆಲುಗು ಮೂಲ:
■ ಪಿ.ವಿ.ಆರ್.ಕೆ. ಪ್ರಸಾದ್
(ನಿವೃತ್ತ ಐ.ಎ.ಎಸ್. ಅಧಿಕಾರಿ)

■ ಕನ್ನಡಕ್ಕೆ: ಸೂರ್ಯವಂಶಿ

# ವಿಜಯನಗರದ ಪತನ.. ತಿರುಮಲೆಗೆ ಗ್ರಹಣ



ರಾಜ ಸದಾಶಿವರಾಯ ಹೆಸರಿಗೆ ಮಾತ್ರ ರಾಜನಾಗಿದ್ದ. ಅಧಿಕಾರವೆಲ್ಲ ಅವನ ಭಾವಮೈದುನನಾದ ಅಳಿಯ ರಾಮರಾಜನದೇ ಆಗಿತ್ತು. ಆತ ಪ್ರಧಾನಮಂತ್ರಿಯಾಗಿ, ಚಾಕಚಕ್ಯದಿಂದ ಮಂಡಲಾಧಿಕಾರಿಗಳನ್ನೆಲ್ಲ ತನ್ನ ಅಧೀನದಲ್ಲಿರಿಸಿಕೊಂಡು, ವಿಜಯನಗರ ಸಾಮ್ರಾಜ್ಯದ ರಕ್ಷಣೆಯನ್ನು ಬಿಗಿಗೊಳಿಸಿದ. ಆ ಕಾಲದಲ್ಲಿ ಬಹಮನಿ ಸಾಮ್ರಾಜ್ಯವನ್ನು ಐದು ಭಾಗಗಳನ್ನಾಗಿ ವಿಭಜಿಸಿ, ಒಬ್ಬರೊಂದಿಗೆ ಒಬ್ಬರು ಹೊಡೆದಾಡುವಂತಹ ಪರಿಸ್ಥಿತಿ ಉಂಟಾಗಿತ್ತು. ವಿಜಯನಗರ ಸಾಮ್ರಾಜ್ಯ ಬಲಿಷ್ಠವಾಗಿದ್ದುದು, ಒಳ್ಳೆಯ ಸೈನ್ಯವನ್ನು ಹೊಂದಿರುವುದರಿಂದ, ಆಗಾಗ ಸುಲ್ತಾನರು ಇವರ ಸಹಾಯವನ್ನು ಬಯಸಿದ್ದು, ಇವರು ಸಹಾಯ ಮಾಡುವುದೂ ನಡೆಯುತ್ತಿತ್ತು.

ಆದರೆ ರಾಮರಾಜ ಅವರನ್ನು, ಅವರ ದೂತರನ್ನು ಸ್ವಲ್ಪ ನಿರ್ಲಕ್ಷ್ಯದಿಂದ ನೋಡಿದ್ದೇ ಅಲ್ಲದೇ, ಅವರು ಕಟ್ಟಿಸಿದ ಕೆಲವು ಮಸೀದಿಗಳನ್ನು ಕೆಡವಿಹಾಕಿಸಿದ. ಆ ರೀತಿ ಅವರಿಗೆ ರಾಮರಾಜನ ಮೇಲೆ ಕೋಪವುಂಟಾಗಿತ್ತು. ಅವರು ಅವನನ್ನು ಸೋಲಿಸುವುದಕ್ಕೆ ಸಮಯ ಕಾಯುತ್ತಿದ್ದು, ನಾಲ್ವರು ಸುಲ್ತಾನರು ಸೇರಿ ಈ ಹಿಂದೂ ಸಾಮ್ರಾಜ್ಯವನ್ನು ನಾಶಪಡಿಸುವುದಕ್ಕೆ ಒಮ್ಮೆಲೇ ದಂಡೆತ್ತಿ ಬಂದರು. ಎಲ್ಲರೂ ತಮ್ಮ ತಮ್ಮ ಸೈನ್ಯಗಳನ್ನು ಬಿಜಾಪುರದಲ್ಲಿ ತಂಗುವಂತೆ ಮಾಡಿ, ತಾಳೀಕೋಟೆಯತ್ತ ಯುದ್ಧಕ್ಕೆ ಹೊರಟರು.

ಕೃಷ್ಣಾನದಿಯನ್ನು ದಾಟುತ್ತಿರುವ ಮುಸಲ್ಮಾನರ ಸೈನ್ಯವನ್ನು ತಡೆಯುವುದಕ್ಕೆ ತನ್ನ ತಮ್ಮನನ್ನು ಸ್ವಲ್ಪ ಸೈನ್ಯದೊಂದಿಗೆ ಕಳಿಸಿ, ಉಳಿದ ಸೈನ್ಯವನ್ನೆಲ್ಲ ತೆಗೆದುಕೊಂಡು ರಾಮರಾಜನು ಇನ್ನೊಂದೆಡೆಗೆ ಹೊರಟ. ವಿಜಯನಗರದ ರಾಜಧಾನಿಯಲ್ಲಿ ಸ್ವಲ್ಪ ಸೈನ್ಯವೂ ಇರಲಿಲ್ಲ. ಆಗಲೇ ರಾಮರಾಜನಿಗೆ 96 ವರ್ಷಗಳಾಗಿತ್ತು. ಆದರೂ ಯುದ್ಧಕ್ಕೆ ಹೊರಟು, ಸೇವಕರು ತನ್ನ ಸಿಂಹಾಸನವನ್ನು ಹೊರುತ್ತಿದ್ದಾಗ, ಸುತ್ತಲೂ ಬಂಗಾರದ ನಾಣ್ಯಗಳು, ಆಭರಣಗಳನ್ನು ತನ್ನ ಬಳಿ ಇರಿಸಿಕೊಂಡು, ಚೆನ್ನಾಗಿ ಯುದ್ಧಮಾಡಿದ ತನ್ನ ಸೈನಿಕರಿಗೆ, ಪ್ರೋತ್ಸಾಹಕದಂತೆ ಬಹುಮಾನಗಳನ್ನು ನೀಡುವುದಕ್ಕೆ ಸಿದ್ಧನಾಗಿದ್ದ. ಗೆದ್ದೇ ಗೆಲ್ಲುತ್ತೇನೆಂಬ ಅತೀ ನಂಬಿಕೆ ಹೆಚ್ಚಾಗಿತ್ತು. ಆದರೆ ನೋಡು ನೋಡುತ್ತಲೇ 5000 ಹಿಂದೂ ಸೈನಿಕರು ಮರಣವನ್ನಪ್ಪಿದರು. ಮಹಮ್ಮದೀಯರ ಅಶ್ವದಳ ಇವರ ಮೇಲೆ ದಾಳಿ ಮಾಡಿತು.

ಸಿಂಹಾಸನದಿಂದ ಇಳಿದು ಪಲ್ಲಕ್ಕಿಯಲ್ಲಿ ಹತ್ತುವ ಸಮಯದಲ್ಲಿ ಹೆದರಿದ ಒಂದು ಆನೆಯನ್ನು ನೋಡಿ ಪಲ್ಲಕ್ಕಿಯನ್ನು ಅಲ್ಲೇ ಬಿಟ್ಟು ಸೇವಕರೆಲ್ಲ ಓಡಿಹೋದರು. ಅಷ್ಟರಲ್ಲೇ ಮುಸಲ್ಮಾನ ಸಿಪಾಯಿಗಳು ಮೇಲೆರಗಿ ಅವನ ತಲೆಯನ್ನು ಕತ್ತರಿಸಿ ಹಾಕಿದರು. ಅಷ್ಟೇ ಹಿಂದೂ ಸೈನ್ಯ ಛಿದ್ರಛಿದ್ರವಾಯಿತು.

ತಿರುಮಲರಾಯ ಸ್ವಲ್ಪ ಸೈನ್ಯದೊಂದಿಗೆ ರಾಜಧಾನಿ ವಿಜಯನಗರಕ್ಕೆ ಓಡಿಹೋಗಿ, ಅಲ್ಲಿದ್ದ ಖಜಾನೆಯನ್ನು ಮೂಟೆ ಕಟ್ಟಿಕೊಂಡು ಪೆನುಗೊಂಡಕ್ಕೆ ಓಡಿಹೋದ. ತಿರುಮಲರಾಯನು ಕೊಂಡೊಯ್ದ ನಿಧಿಯನ್ನು 550 ಆನೆಗಳು ಹೊತ್ತುಕೊಂಡು ಹೋದುವೆಂದು ಚರಿತ್ರಕಾರರು ಹೇಳುತ್ತಾರೆ. ಅವರೊಂದಿಗೆ ರಾಜನಾದ ಸದಾಶಿವರಾಯನನ್ನೂ, ರಾಜ್ಯ ಸಿಂಹಾಸನವನ್ನೂ, ಆಭರಣಗಳನ್ನು, ರತ್ನಗಳು, ವಜ್ರಗಳನ್ನೂ ತೆಗೆದುಕೊಂಡು ಹೋಗಿರುವಂತೆ ಹೇಳುತ್ತಾರೆ.

ಆ ರೀತಿ ಕ್ರಿ.ಶ. 1565 ಜನವರಿ 23ರಂದು ಹಿಂದೂ ಸಾಮ್ರಾಜ್ಯದ ವಿಜಯನಗರವನ್ನು ಸುಲ್ತಾನರು ಎರಡು ದಿನಗಳಲ್ಲೇ ಒಟ್ಟಿಗೆ ಸೇರಿ ಸರ್ವನಾಶ ಮಾಡಿದರು. ಸಾವಿರಾರು ಜನ ಸಾಮಾನ್ಯ ಪ್ರಜೆಗಳನ್ನು ಕೊಂದುಹಾಕಿದರು. ಅಂತಹ ಲೂಟಿ ಚರಿತ್ರೆಯಲ್ಲೇ ನಡೆದಿಲ್ಲವಂತೆ! ಸುಲ್ತಾನನ ಕಡೆಯ

ಪ್ರತಿಯೊಬ್ಬ ಸೈನಿಕನೂ ಧನವಂತನಾದನಂತೆ. ಆ ಲೂಟಿ ನಡೆಯುವಾಗಲೇ ಆದಿಲ್‌ಷಾನಿಗೆ ಕೋಳಿಮೊಟ್ಟೆಯ ಗಾತ್ರದ ವಜ್ರ ದೊರೆಯಿತಂತೆ.

ಈ ವಿಧ್ವಂಸಕ ಕೃತ್ಯ ಐದು ತಿಂಗಳುಗಳ ಕಾಲ ನಡೆಯಿತಂತೆ. ಆ ರೀತಿ ಪ್ರಾರಂಭವಾದ ಆಕ್ರಮಣದಿಂದಾಗಿ ಗೋಲ್ಕೊಂಡ, ಬಿಜಾಪುರ ಸುಲ್ತಾನರ ವಶಕ್ಕೆ ಬಂದುವು. ಕ್ರಿ.ಶ. 1566ರ ವೇಳೆಗೆ ಗೋಲ್ಕೊಂಡ ಸೈನ್ಯಗಳು ರಾಜಮಂಡ್ರಿಯವರೆಗೂ ಸೇರಿ, ಕ್ರಿ.ಶ. 1567 ಹೊತ್ತಿಗೆ ಆ ಪ್ರದೇಶವನ್ನು ಆಕ್ರಮಿಸಿದುವು.

ಬಿಜಾಪುರದ ಸೈನ್ಯಗಳು ಆದಿಲ್‌ಷಾನ ನೇತೃತ್ವದಲ್ಲಿ ಧೀರ್ವಾರ್, ಬಂಕಾಪುರಗಳನ್ನು ಆಕ್ರಮಿಸಿ ಕೊಂಕಣದ ಪ್ರಾಂತ್ಯವನ್ನೆಲ್ಲ ತಮ್ಮ ವಶಕ್ಕೆ ತೆಗೆದುಕೊಂಡುವು.

ಅನಂತರ 'ಬೆಲ್ಲಂಕೊಂಡ'ವನ್ನು ಆಕ್ರಮಿಸಿ, ಪೆನುಗೊಂಡದ ಮೇಲೂ ದೃಷ್ಟಿ ಸಾರಿದರು. ರಾಜನು ಪೆನುಗೊಂಡವನ್ನು ಬಿಟ್ಟು ಚಂದ್ರಗಿರಿಗೆ ಓಡಿಹೋದ. ಕ್ರಿ.ಶ. 1578ರ ವೇಳೆಗೆ ಪೆನುಗೊಂಡ ಗೋಲ್ಕೊಂಡ ಸುಲ್ತಾನರ ವಶಕ್ಕೆ ಬಂತು. ಅನಂತರ ಮುಸಲ್ಮಾನರ ಸೈನ್ಯ ಅಹೋಬಿಲದವರೆಗೂ ಆಕ್ರಮಿಸಿತು. ದುರದೃಷ್ಟವಶಾತ್ ಅಹೋಬಿಲವನ್ನು ಪಾಲಿಸುತ್ತಿದ್ದ ಮಟ್ಟನಾಯಕನು ಮುಸ್ಲಿಂರೊಂದಿಗೆ ಸೇರಿ ತನ್ನ ಅಧೀನದಲ್ಲಿದ್ದ ಖಮ್ಮಂ, ವಿನುಕೊಂಡ, ಕೊಂಡವೀಡು, ಕುಚ್ಚರ್ಲಕೋಟೆಯ ದುರ್ಗಗಳನ್ನು ಅವರಿಗೆ ಒಪ್ಪಿಸಿದ.

ಕ್ರಿ.ಶ. 1589ರ ವೇಳೆಗೆ ಗೋಲ್ಕೊಂಡ ಮಹ್ಮಮದ್‌ಕುಲೀ ಕರ್ನೂಲು, ಕಡಪಗಳನ್ನು ಆಕ್ರಮಿಸಿದ. ಕ್ರಿ.ಶ. 1593ರ ಹೊತ್ತಿಗೆ ಬಿಜಾಪುರ್ ಸುಲ್ತಾನ, ಮೈಸೂರು ತಂಜಾವೂರು, ಮಧುರೈನಲ್ಲಿ ಅಲ್ಲಿನ ನಾಯಕ ಸಾಮಂತರಾಜರು ತಮ್ಮ ಸ್ವಾತಂತ್ರ್ಯವನ್ನು ಸಾರಿದರು.

ಈ ಮಧ್ಯಕಾಲದಲ್ಲಿ ಸದಾಶಿವರಾಯನ ಮರಣ, ತಿರುಮಲರಾಯನು ಪೆನುಗೊಂಡದ ರಾಜನಾಗಿದ್ದು, ಆತನ ಅನಂತರ ಅವನ ಎರಡನೆಯ ಮಗ ಎರಡನೆಯ ಶ್ರೀರಂಗರಾಯನು ರಾಜ್ಯಕ್ಕೆ ಬಂದು, ಕ್ರಿ.ಶ. 1578ರ ವೇಳೆಗೆ ರಾಜಧಾನಿಯನ್ನು ಚಂದ್ರಗಿರಿಗೆ ಬದಲಿಸಿದ. ಅವನ ಅನಂತರ ಅವನ ತಮ್ಮ ವೆಂಕಟರಾಯನು ರಾಜ್ಯಕ್ಕೆ ರಾಜನಾಗಿ ಕ್ರಿ.ಶ. 1614ರಲ್ಲಿ ತೀರಿಕೊಂಡ. ಅವನಿಗೆ ಸಂತಾನವಿಲ್ಲದ್ದರಿಂದ ರಾಜ್ಯದಲ್ಲಿ ಅರಾಜಕತೆ ಆರಂಭವಾಯಿತು. ಕೆಲವು ಕಾಲ ರಾಮರಾಯ, ಅನಂತರ ವೆಂಕಟರಾಯ, ರಾಮರಾಯ, ಮಾಧುವರಾಯ, ರಂಗರಾಯ...ಆ ರೀತಿ ದಕ್ಷಿಣ ಭಾರತದಲ್ಲೆಲ್ಲ ಪಾಲಿಸಿದ ವಿಜಯನಗರದ ರಾಜರ ಪ್ರಭಾವ ಕೊನೆಗೆ ಚಿತ್ತೂರು, ವೆಲ್ಲೂರು, ಚೆಂಗಲ್ಪಟ್ಟು, ದಕ್ಷಿಣ ಆರ್ಕಾಟ್‌ನಲ್ಲಿ ಕೆಲವು ಭಾಗಕ್ಕೆ ಸೀಮಿತಗೊಂಡು, ಯಾವಾಗಲೂ ಗೋಲ್ಕೊಂಡ, ಬಿಜಾಪುರ, ಸುಲ್ತಾನರೊಂದಿಗೆ ಯುದ್ಧ ಮಾಡುತ್ತಾ, ಸಾಮಂತರುಗಳೂ ಮಾತನ್ನು ಕೇಳದೆ, ಕೊನೆಗೆ ದೆಹಲಿಯ ಸುಲ್ತಾನನಾದ ಷಹಜಹಾನ್‌ನನ್ನು ಅವನ ಮಗನಾದ 'ಡೆಕ್ಕನ್ ವೈಸ್ರಾಯ್' ಔರಂಗಜೇಬುವನ್ನು ಬೇಡುವಂತಹ ಹೀನಾಯ ಸ್ಥಿತಿಗೆ ತಲಪಿತು.

ತಿರುಮಲರಾಯರ ಕಾಲದಲ್ಲೇ ಸಂಪಂಗಿ ಪ್ರಾಕಾರದಲ್ಲಿನ ತಿರುಮಲರಾಯ ಮಂಟಪದ ನಿರ್ಮಾಣ ನಡೆಯಿತು. ಇದನ್ನೇ ಊಂಜಲ್ ಮಂಟಪವೆನ್ನುತ್ತಾರೆ. ಆ ಮಂಟಪ ಒಳ್ಳೆಯ ಶಿಲ್ಪಕಲಾ ನೈಪುಣ್ಯದಿಂದ ದೊಡ್ಡ ದೊಡ್ಡ ಸ್ತಂಭಗಳಿಂದ ಆನೆಯ ತಲೆಯ ಮೇಲೆ ಕುದುರೆ, ಆ ಕುದುರೆಯ ಮೇಲೆ ಸವಾರಿ ಮಾಡುತ್ತಿರುವ ಯೋಧನ ವಿಗ್ರಹಗಳಿಂದ ಬಹಳ ಚಾಕಚಕ್ಯದಿಂದ ಕೆತ್ತಿರುವ ಶಿಲ್ಪಗಳು ಇಂದಿಗೂ ಚೆಕ್ಕುಚೆದರದಂತಿದೆ. ಈ ಬಾರಿ ತಿರುಮಲೆಯ ಆಲಯಕ್ಕೆ ಹೋದಾಗ ಇದನ್ನು ನೋಡಬಹುದು. ಬ್ರಹ್ಮೋತ್ಸವಗಳಲ್ಲಿ ದೇವರ ಉತ್ಸವ ಮೂರ್ತಿಗಳ ದರ್ಬಾರು ಈ ತಿರುಮಲರಾಯನ ಮಂಟಪದಲ್ಲೇ ವೈಭವದಿಂದ ನಡೆಯುತ್ತದೆ. ಅನಂತರ ಒಂದು ಶತಮಾನದ ಕಾಲ ಆಳಿದ ವಿಜಯನಗರ ರಾಜ್ಯ ಸುಲ್ತಾನರ ದಾಳಿಯಿಂದಾಗಿ ಛಿದ್ರಛಿದ್ರವಾಗಿ ಕೊನೆಗೆ ಸುಲ್ತಾನರ ಪಾಲಾಗಿ, ಚಂದ್ರಗಿರಿ ಮಾತ್ರ ಉಳಿದು–ಅದೂ ಕೊನೆಗೆ ಆರ್ಕಾಟು ನವಾಬನ ಸ್ವಾಧೀನವಾಯಿತು.

ಆ ರೀತಿ ಆ ರಾಜಕೀಯ ಅನಿಶ್ಚಿತ ಪರಿಸ್ಥಿತಿಗಳ ಪ್ರಭಾವ ತಿರುಮಲೆಯ ಆಲಯದ ಮೇಲೂ ಬಿತ್ತು. ಸದಾಶಿವರಾಯ, ರಾಮರಾಜ, ತಿರುಮಲರಾಯನಂತಹವರು ನೀಡಿದ ದೇವಾದಾಯಗಳು, ಶಿಲಾಶಾಸನಗಳು, ಅವರು ರಾಜರಾಗುವುದಕ್ಕೂ ಮೊದಲು, ಸಾಮಂತರು ಅಥವಾ ಪ್ರಾಂತ್ಯದ ಅಧಿಕಾರಿಗಳಾಗಿದ್ದಾಗ ಮಾಡಿದ ದೇವಾದಾಯಗಳೇ! ತಾಳಿಕೋಟೆಯ ಯುದ್ಧದ ಅನಂತರ ಶತಮಾನದವರೆಗೂ ದೇವಾಲಯದಲ್ಲಿ ಕೆತ್ತಲ್ಪಟ್ಟ ಶಾಸನಗಳು ಬಹಳ ಕಡಮೆ ಎಂದೇ ಹೇಳಬೇಕು. ಒಂದು ವೇಳೆ ಇದ್ದರೂ ಅವು ಜೀಯ್ಯಂಗಾರರು, ಇತರ ಅಧಿಕಾರಿಗಳು ಮಾಡಿದ ಶಾಸನಗಳೇ! ಅವುಗಳಲ್ಲಿ ರಾಜರುಗಳ ಹೆಸರಾಗಲೀ, ಅವರುಗಳ ಪ್ರಭಾವದ ವರ್ಣನೆಗಳೇನೂ ಇಲ್ಲ. ಏಕೆಂದರೆ ದೇಶಕ್ಕೆ ರಾಜ ಯಾರೆಂದು



**ತಿರುಮಲೆಯ ಚರಿತಾಮೃತ ಗ್ರಂಥ ಬರೆದಿರುವ ಶ್ರೀ ಪಿ.ವಿ.ಆರ್.ಕೆ. ಪ್ರಸಾದ್‌ರವರು ತಿರುಮಲೆಯ ಶ್ರೀನಿವಾಸ ದೇವರ ಮಹಾಭಕ್ತರು. ಉತ್ತಮ ಐಎಎಸ್ ಅಧಿಕಾರಿ ಎಂದು ಕೀರ್ತಿ ಗಳಿಸಿರುವವರು. ಅನೇಕ ಹುದ್ದೆಗಳನ್ನು ಸಮರ್ಥವಾಗಿ ನಿರ್ವಹಿಸಿದ ಶ್ರೀಯುತರು ಪ್ರಧಾನಮಂತ್ರಿ ದಿವಂಗತ ಪಿ.ವಿ. ನರಸಿಂಹರಾಯರ ಪತ್ರಿಕಾ ಕಾರ್ಯದರ್ಶಿಗಳಾಗಿದ್ದವರು. ಅಂತೆಯೇ ತಿರುಮಲೆ ತಿರುಪತಿ ದೇವಸ್ಥಾನದ ನಿರ್ವಹಣಾ ಅಧಿಕಾರಿಗಳಾಗಿ ಅಪೂರ್ವ ಸೇವೆ ಸಲ್ಲಿಸಿರುವ ಶ್ರೀಯುತರು ತಮ್ಮನ್ನು 'ಶ್ರೀನಿವಾಸದಾಸ' ಎಂದು ಕರೆದುಕೊಳ್ಳುವಲ್ಲಿ ಹೆಮ್ಮೆ ಪಡುವ ಭಾಗವತರು. 'ತಿರುಮಲೆಯ ಚರಿತಾಮೃತ'ವನ್ನು ಕನ್ನಡಕ್ಕೆ ತಂದಿರುವ**



**ಶ್ರೀಮತಿ ಸೂರ್ಯವಂಶಿ ಉತ್ತಮ ಅನುವಾದಕಿ. ತೆಲುಗಿನಿಂದ ಹಲವಾರು ಕಾದಂಬರಿಗಳನ್ನು ಕನ್ನಡಕ್ಕೆ ತಂದಿರುವವರು. ಟಿಟಿಡಿ ನಿರ್ವಹಣಾಧಿಕಾರಿಗಳಾಗಿದ್ದ ಶ್ರೀ ಪಿ.ವಿ.ಆರ್.ಕೆ. ಪ್ರಸಾದ್‌ರವರು ತಿರುಮಲೆ ಪತ್ರಾಗಾರದಲ್ಲಿ ದೊರೆತ ಅನೇಕ ದಸ್ತಾವೇಜುಗಳನ್ನು, ಪ್ರಾಚೀನ ದಾಖಲೆಗಳನ್ನು, ಹಳೆಯ ರೆಕಾರ್ಡ್‌ಗಳನ್ನು, ಶಿಲಾಶಾಸನಗಳನ್ನು ಅಧ್ಯಯನ ಮಾಡಿ ರಚಿಸಿರುವ 'ತಿರುಮಲೆಯ ಚರಿತಾಮೃತ' ಒಂದು ಅಧಿಕೃತ ಗ್ರಂಥ. ಈ ಇಬ್ಬರು ದೈವಭಕ್ತರಿಗೆ ಹಾರ್ದಿಕ ಕೃತಜ್ಞತೆಗಳನ್ನು ಅರ್ಪಿಸುತ್ತಾ 'ತಿರುಮಲೆಯ ಚರಿತಾಮೃತ'ವನ್ನು ಓದುಗರಿಗೆ ನೀಡುತ್ತಿದ್ದೇವೆ**

**–ಸಂ.**

ನಿರ್ಧರಿಸುವ ಪರಿಸ್ಥಿತಿ ಆಗಿರಲಿಲ್ಲ. ದೇವಸ್ಥಾನದಲ್ಲಿನ ಆಚಾರ್ಯಪುರುಷರು, ಜೀಯ್ಯಂಗಾರರು ಅಥವಾ ಶ್ರೀಮಂತ ಭಕ್ತರು ಮಾಡಿದ ದೇವಾದಾಯಗಳೇ ಇದ್ದುವು. ಅವೆಲ್ಲವೂ ತೆಲುಗಿನಲ್ಲಿ ಕೆತ್ತಲ್ಪಟ್ಟಿವೆ.

ಬೆಟ್ಟದ ಮೇಲಿನ ದೇವಸ್ಥಾನದಲ್ಲೇ ಅಲ್ಲದೇ, ಅನೇಕ ಶಾಸನಗಳು, ತಿರುಪತಿಯ ಗೋವಿಂದರಾಜರ ದೇವಸ್ಥಾನದಲ್ಲಿ ಕೆತ್ತಲ್ಪಟ್ಟಿವೆ...ರಾಜಕೀಯ ಅನಿಶ್ಚಿತತೆಯ ಪರಿಸ್ಥಿತಿಗಳ ಪ್ರಭಾವದಿಂದ ಇವರ ದೃಷ್ಟಿ ತಿರುಮಲೆಯಿಂದ ತಿರುಪತಿಗೆ ಮರಳಿರಬಹುದು. ಆದರೆ ಈ ರಾಜರು ದೇವರ ಭಕ್ತರಲ್ಲವೆನ್ನುವಂತಿಲ್ಲ. ವೆಂಕಟಪತಿರಾಯರು, ತಿರುಮಲೆಯ ಬೆಟ್ಟದ ಮೇಲೆ ತನ್ನ ಪಟ್ಟಾಭಿಷೇಕವನ್ನು ನೆರವೇರಿಸಿಕೊಂಡ. ಚಂದ್ರಗಿರಿಯನ್ನು ರಾಜಧಾನಿಯನ್ನಾಗಿ ಮಾಡಿಕೊಂಡು, ಆಗಾಗ ಸ್ವಾಮಿಯ ದರ್ಶನಕ್ಕೆ ಬರುತ್ತಿದ್ದ. ಆ ದಿನಗಳಲ್ಲಿ "ಶ್ರೀ ವೇಂಕಟೇಶ್ವರಾಯ ನಮಃ" ಎಂದು ಬಂಗಾರದ ನಾಣ್ಯಗಳನ್ನು ಮುದ್ರಿಸಿ ತನಗೆ ಶ್ರೀನಿವಾಸನ ಮೇಲಿರುವ ಭಕ್ತಿಯನ್ನು ಸಾರಿದ.

ಈತ ತಿರುಮಲೆಯ ಆಲಯದ ಪ್ರಾಕಾರದಲ್ಲಿ ತನ್ನ ತಂದೆ ತಿರುಮಲರಾಯ ಹಾಗೂ ತಾಯಿ ವೆಂಗಳಾಂಬರ ವಿಗ್ರಹಗಳನ್ನು ಕೆತ್ತಿಸಿ ಇರಿಸಿದ್ದಾನೆ.

ರಾಜರು ಯುದ್ಧದಲ್ಲಿ ಹೊಡೆದಾಡುತ್ತಿರುವಾಗ, ಗ್ರಾಮಗಳಲ್ಲೂ ಪರಿಸ್ಥಿತಿ ಚೆನ್ನಾಗಿರಲಿಲ್ಲ. ಅಭಿವೃದ್ಧಿಯ ಮೇಲೆ ದೃಷ್ಟಿ ಇಲ್ಲದೇ ಇದ್ದುದರಿಂದ, ನೀರಿನ ಸೌಕರ್ಯಗಳ ಪರವಾಗಿಯೂ ಶ್ರದ್ಧೆ ತೋರದೇ ಇದ್ದುದರಿಂದ, ಬೆಳೆಗಳು ನಾಶವಾಗಿದ್ದು, ಇದರಿಂದ ತಿರುಮಲೆಯ ಆಲಯಕ್ಕೆ ಆದಾಯ ಕಡಮೆಯಾಗಿದ್ದು, ಬೆಟ್ಟದ ಮೇಲೆ ನೈವೇದ್ಯಗಳು ಕಡಮೆಯಾಗಿ, ಯಾತ್ರಿಕರಿಗೆ, ಊಟ ವಸತಿಗಳಿಗೆ, ಇತರ ಸೌಕರ್ಯಗಳಿಗೆ ಕಷ್ಟವಾಗುತ್ತಿತ್ತು. ಕ್ರಿ.ಶ. 1616ರ ಹೊತ್ತಿಗೆ ಪರಿಸ್ಥಿತಿಗಳು ಸಂಪೂರ್ಣವಾಗಿ ಕೈತಪ್ಪಿ ಹೋಗ್ತಿದೆ ಎಂದಾಗ, ರಾಮರಾಜಯ್ಯ ಸಂಧಿ ನೈವೇದ್ಯಕ್ಕಾಗಿ 200 ಗಂಗಾಳಗಳ ಪ್ರಸಾದವನ್ನು ನೈವೇದ್ಯಕ್ಕಾಗಿ ಏರ್ಪಡಿಸಿದ. ಸ್ಥಾನತ್ತಾರರ ಪಾಲಿನಿಂದಲೂ ರಾಮಾನುಜ ಕೂಟಕ್ಕೆ ನೈವೇದ್ಯ ಕಳಿಸುವುದಕ್ಕೆ ಆರಂಭವಾಯ್ತು.

ಆಗ ಒಂದು ಅರ್ಧ ಶತಮಾನದಿಂದ ತಿರುಪತಿಯಲ್ಲಿನ ರಾಮಾನುಜ ಕೂಟವು-ಬೆಟ್ಟಕ್ಕೆ ಹೋಗುವ ಭಕ್ತರಿಗೆ ಪ್ರತೀ ನಿತ್ಯವೂ ಎರಡು ಸಾವಿರ ಜನರಿಗೆ ಉಚಿತವಾಗಿ ಭೋಜನವನ್ನು ನೀಡುವ ಸ್ಥಾಯಿಯಿಂದ ಕ್ರಿ.ಶ. 1616ರ ಅನಂತರ ಅನ್ನದಾನ ನಡೆಯುತ್ತಿತ್ತೋ ಇಲ್ಲವೋ ಎನ್ನುವ ಪರಿಸ್ಥಿತಿಗೆ ತಲಪಿತು. ಅನಂತರದ ಕಾಲದಲ್ಲಿ ದೇವಾದಾಯ, ದಾನಗಳು ತಿರುಪತಿಯಲ್ಲಿ ನಡೆಯುತ್ತಿತ್ತಾಗಲೀ ಬೆಟ್ಟದ ಮೇಲೆ ನಡೆಯಲಿಲ್ಲ. ತಿರುಪತಿಯ ಸ್ಥಾನಿಕ ಪ್ರಜೆಗಳಿಗೆ ಸ್ವಲ್ಪ ಒಳ್ಳೆಯ ಪರಿಸ್ಥಿತಿ ಏರ್ಪಟ್ಟಿತ್ತಾಗಲೀ, ಬೆಟ್ಟಕ್ಕೆ ಹೋಗುವ ಯಾತ್ರಿಕರಿಗೆ ಯಾವುದೇ ರೀತಿಯ ಅನುಕೂಲವಾಗಲಿಲ್ಲವೆನಿಸುತ್ತದೆ.

ಕ್ರಿ.ಶ. 1606–1607ರ ಹೊತ್ತಿಗೆ, ಪೂರ್ತಿಯಾಗಿ ಗ್ರಾಮಗಳನ್ನು ದೇವಾದಾಯವಾಗಿ ನೀಡುವ ಸಂಪ್ರದಾಯ ನಿಂತುಹೋಯಿತು. ಆ ಪ್ರಾಂತ್ಯದಲ್ಲಿ ನಡೆದ ದೇವಾದಾಯಗಳು– ನೀರಿನ ಸಾಗುವಳಿಯ ಅಭಿವೃದ್ಧಿಗಾಗಿ ಮಾಡಿದ್ದಾಗಿತ್ತು. ದೇವಸ್ಥಾನದ ಧರ್ಮಾಧಿಕಾರಿಗಳು, ದಾನಿಗಳನ್ನು ಈ ಅಭಿವೃದ್ಧಿಯ ಕೆಲಸ ಮಾಡಿಸಬೇಕೆಂದು ಕೇಳಿರಬಹುದು. ಅದಕ್ಕೂ ಮೊದಲು ವಿಜಯನಗರ ಸಾಮ್ರಾಜ್ಯದಲ್ಲಿ ಅನೇಕ ಕಡೆಗಳಲ್ಲಿ ತಿರುಪತಿಗೆ ದೂರದಲ್ಲೂ ಅನೇಕ ಗ್ರಾಮಗಳು ದೇವಸ್ಥಾನದ ದೇವಾದಾಯಗಳಾಗಿದ್ದುವು. ಬರಬರುತ್ತಾ ದೂರ ಪ್ರಾಂತ್ಯದಲ್ಲಿರುವ ಆ ಗ್ರಾಮಗಳಿಂದ, ರಾಜಕೀಯ ಪರಿಸ್ಥಿತಿಗಳಿಂದ, ದೇವಾಲಯಕ್ಕೆ ಆದಾಯ ಬರುತ್ತಿರಲಿಲ್ಲ. ಸ್ಥಾನವತ್ತಾರರೂ ತಿರುಪತಿ, ಚಂದ್ರಗಿರಿಯಂತಹ ಹತ್ತಿರದ ಪ್ರದೇಶಗಳ ಮೇಲೆ ಮಾತ್ರ ಶ್ರದ್ಧೆ ತೋರುತ್ತಿದ್ದರು. ಇರುವ 200 ಗ್ರಾಮಗಳಲ್ಲಿ ಆ ರೀತಿ ಅನೇಕ ಗ್ರಾಮಗಳ ಆದಾಯ ನಿಂತುಹೋಗಿತ್ತು. ಹತ್ತಿರದಲ್ಲಿರುವ ಗ್ರಾಮಗಳೂ ಸಹ, ಯಾವಾಗಲೂ ನಡೆಯುತ್ತಿರುವ ಯುದ್ಧಗಳಿಂದಾಗಿ, ಗಲಾಟೆಗಳಿಂದಾಗಿ ಮತ್ತು ಇತರ ಖರ್ಚುಗಳು ಹೆಚ್ಚಾದ್ದರಿಂದ, ವ್ಯವಸಾಯದ ಮೇಲೆ ಹಣಹೂಡಿಕೆ, ಕಡಮೆಯಾಗಿ ನೀರಿನ ಸಾಗುವಳಿಯಿಲ್ಲದೆ ಬೆಳೆಗಳು ನಾಶವಾಗಿ, ಬೆಳೆಗಳು ಬೆಳೆಯುತ್ತಿರಲಿಲ್ಲ. ಬೆಳೆ ಕೈಗೆ ಬಂದರೂ ಪರಿಪಾಲನೆಯ ಲೋಪದಿಂದಾಗಿ, ನಿಧಿಗಳು ಸರಿಯಾಗಿ ದೇವಸ್ಥಾನಕ್ಕೆ ಸೇರುತ್ತಿರಲಿಲ್ಲ. ಈ ಶತಮಾನವೆಲ್ಲ ಇಂಥದ್ದೇ ಪರಿಸ್ಥಿತಿ ಮುಂದುವರಿದಿತ್ತು.

ಕ್ರಿ.ಶ. 1665ರಲ್ಲಿ ಆ ಸ್ವಲ್ಪ ಉಳಿದಿದ್ದ ವಿಜಯನಗರ ಸಾಮ್ರಾಜ್ಯವೂ ಕಷ್ಟದಲ್ಲಿ ಸಿಲುಕಿತು. ಅದು ಶ್ರೀರಂಗರಾಯರು ಪಾಲಿಸುತ್ತಿದ್ದ ಕಾಲ. ರಾಜ್ಯದಲ್ಲಿ ಅನೇಕ ಭಾಗಗಳು ಗೋಲ್ಕೊಂಡ ಸುಲ್ತಾನರಿಗೆ, ಬಿಜಾಪುರದ ಸುಲ್ತಾನರಿಗೆ ವಶವಾಗಿತ್ತು. ಈತನು ಪಾಲಿಸುತ್ತಿರುವ ರಾಜ್ಯಭಾಗವೂ ಕ್ರಿ.ಶ. 1656ರಲ್ಲಿ ಷಾಜಾನನು ಗೋಲ್ಕೊಂಡ ಸೈನ್ಯಾಧಿಕಾರಿಯಾಗಿದ್ದ ಮೀರುಜುಮ್ಲಾನ ಅಧೀನಕ್ಕೆ ಒಳಪಟ್ಟಿತು. ಅನಂತರ ಶ್ರೀರಂಗರಾಯನು ಮೇಲುಗೈ ಸಾಧಿಸಿದರೂ ಮೀರುಜುಮ್ಲಾನಿಂದ ನೆಕ್ಕಮ್‌ಖಾನನಿಗೆ ಅಧಿಕಾರ ದೊರೆಯಿತು. ಆತನು ನವಾಬನಾದಾಗ, ಆತ 40,000 ಸೈನಿಕರೊಂದಿಗೆ ದಕ್ಷಿಣಕ್ಕೆ ದಂಡೆಯಾತ್ರೆಗೆ ಬಂದ. ಅವರವರ ಸೈನ್ಯಗಳಿರುವ ಇಂಗ್ಲಿಷರು, ಡಚ್ಚರೂ ಸಹ ಆ ನೆಕ್ನಾಮ್‌ಖಾನನಿಗೆ ಕಾಣಿಕೆಗಳನ್ನು ಸಲ್ಲಿಸಬೇಕಾಗಿ ಬಂತು.

ನೆಕ್ನಾಮ್‌ಖಾನನು ಏಜೆಂಟನಂತೆ ಚಿನ್ನಂಪಲ್ಲಿ ಮೀಲ್ವಾ ಕ್ರಿ.ಶ. 1668ರಲ್ಲಿ ತಿರುಪತಿಯಲ್ಲಿ ಮೊಕ್ಕಾಂ ಹೂಡಿದ. ಅಷ್ಟರಲ್ಲಿ ಶ್ರೀರಂಗರಾಯರು ಕ್ರಿ.ಶ. 1664–65ರಲ್ಲಿ ತಿರುಮಲೆಗೆ ಬಂದು, ತನ್ನನ್ನು, ತನ್ನ ರಾಜ್ಯವನ್ನು ಕಾಪಾಡಬೇಕೆಂದು ಶ್ರೀನಿವಾಸನನ್ನು ಬೇಡಿಕೊಂಡನಂತೆ. ಆತ ಮಾಡಿದ ಕ್ರಿ.ಶ. 1665ರ ಶಿಲಾಶಾಸನವೇ ವಿಜಯನಗರದ ರಾಜರಿಗೂ ತಿರುಮಲೆಯ ಆಲಯಕ್ಕೂ ದೊರೆತ ಕೊನೆಯ ಕೊಂಡಿ.

ಈ ರೀತಿ 300 ವರ್ಷಗಳ ಸುವರ್ಣ ಅಧ್ಯಾಯ ಚಿಂತಾಜನಕವಾಗಿ ಕೊನೆಯಾಯಿತು.

ಬಿಜಾಪುರ, ಗೋಲ್ಕೊಂಡ ಷಿಯಾ ಮುಸ್ಲಿಂರ ಪ್ರಭಾವ ಈ ಪ್ರಾಂತ್ಯದ ಮೇಲೆ ಎಷ್ಟೋ ಕಾಲ ನಿಲ್ಲಲಿಲ್ಲ. ಔರಂಗಜೇಬನು ಚಕ್ರವರ್ತಿಯಾದ ಅನಂತರ ದಕ್ಷಿಣ ಭಾರತವನ್ನೆಲ್ಲ ತನ್ನ ಪೂರ್ತಿ ಅಧೀನಕ್ಕೆ ತಂದುಕೊಳ್ಳುವ ಪ್ರಯತ್ನ ಮಾಡಿದ. ಆತ ಕರ್ನಾಟಕವನ್ನು ಜಯಿಸಿದರೂ ಅದನ್ನು ಮುಂದುವರಿಸದಾದ. ಒಂದೆಡೆ ಮರಾಠರು ಷಾಜಿಯ ನೇತೃತ್ವದಲ್ಲಿ ಬಿಜಾಪುರದ ನವಾಬನಿಗೆ ಸಹಾಯ ಮಾಡಿದರೆ, ಮರಾಠರು ಒಮ್ಮೆಲೇ ತಂಜಾವೂರಿನಲ್ಲಿ ತಮ್ಮ ರಾಜ್ಯವನ್ನೇ ಸ್ಥಾಪಿಸಿದರು. ಅನಂತರ ಷಾಜಿಯ ಮಗ ಶಿವಾಜಿ ಪೂರ್ತಿ ಕರ್ನಾಟಕವನ್ನು ತನ್ನ ವಶಕ್ಕೆ ತಂದುಕೊಳ್ಳುವ ಪ್ರಯತ್ನ ಮುಂದುವರಿಸಿ, ಔರಂಗಜೇಬನ ಆಸೆಗೆ ತಣ್ಣೀರೆರಚಿದ.

ಈ ರೀತಿ ಮುಸ್ಲಿಮರು, ಮರಾಠರು ಒಬ್ಬರನ್ನೊಬ್ಬರು ಹೊಡೆದುರುಳಿಸುತ್ತಿರುವ ಸಮಯದಲ್ಲಿ, ನಿಧಾನವಾಗಿ ಆಂಗ್ಲರು ಅವರ ಆಧಿಪತ್ಯವನ್ನು ವಿಸ್ತರಿಸಿಕೊಂಡು ಬಂದರು.

ಈ ರೀತಿ ಈ ಪರಿಣಾಮಗಳೆಲ್ಲವೂ ತಿರುಮಲೆಯ ಆಲಯದ ಮೇಲೆ ಪ್ರಭಾವವನ್ನು ತೋರಿದುವು.

**ಮುಂದುವರಿಯುವುದು**

▶▶ 33ನೇ ಪುಟದಿಂದ

ಬರುವುದಕ್ಕೂ, ಅದರಿಂದ ಮನುಷ್ಯ ತನ್ನ ಕರ್ತವ್ಯವನ್ನು ತ್ಯಜಿಸಲು ಸಿದ್ಧನಾಗುವುದಕ್ಕೂ ಕಾರಣ ಮೋಹ. ಈ ಮೋಹದಿಂದ ಪಾರಾಗಬೇಕಿದ್ದರೆ ಸೃಷ್ಟಿಕರ್ತನ ಕರಾಂಗುಳಿಯ ಕೌಶಲವನ್ನು ಅರಿಯಬೇಕು. ಬೃಹದಾರಣ್ಯಕ ಉಪನಿಷತ್ತಿನಲ್ಲಿ ನಗಾರಿಯ ದೃಷ್ಟಾಂತ ಕೊಟ್ಟಿದ್ದಾರೆ. ನಗಾರಿ ಒಂದೇ; ಅದರಿಂದ ಹೊರಡುವ ನಾದ ನೂರಾರು. ಕೆಲವು ನಮ್ಮನ್ನು ಹೆದರಿಸುತ್ತವೆ. ಕೆಲವು ಕುಣಿಸುತ್ತವೆ. ಈ ಎಲ್ಲ ಭಾವವನ್ನೂ ಗೆದ್ದುಕೊಳ್ಳಬೇಕಿದ್ದರೆ ನಗಾರಿ ಬಾರಿಸುವವರನ್ನು ವಶಪಡಿಸಿಕೊಂಡರೆ ಸರಿ. ಅವನನ್ನು ಹಿಡಿದರೆ ಆಯಿತು–ಎಲ್ಲ ನಾದವನ್ನೂ ಹಿಡಿದಂತೆಯೇ. ಅದಕ್ಕೆ ಭಗವಂತ ಒಂದೇ ವಾಕ್ಯದಲ್ಲಿ ಹೇಳಿರುವುದು: "ಮಾಯೆಯನ್ನು ದಾಟಲಿಚ್ಛಿಸುವವರು ನನಗೆ ಶರಣಾಗಬೇಕು."

**ಬಂದೆಯೋ ನನಗೆ ಶರಣ । ಲೀಲೆಯಿಂದಿಲ್ಲಿ ತರಣ ।**
**ಇತ್ತಾಣ ದಡಕೆ ದಿಟವು । ಬತ್ತೀತು ಮಾಯಾ ಜಲವು ॥**

ಈ ಮಾಯೆ ಎಂದರೇನು? ಪರಮಾತ್ಮನ ಶಕ್ತಿ; ಅವನ ಕಲೆ, ಅವನ ಕೌಶಲವೇ ಮಾಯೆ. ಪ್ರಕೃತಿ–ಆತ್ಮ, ಇಲ್ಲವೆ ಜೈನ ಪರಿಭಾಷೆಯಲ್ಲಿ ಹೇಳುವ ಹಾಗೆ ಜೀವ–ಅಜೀವಗಳ ಮಿಶ್ರಣದಿಂದ ಈ ಅನಂತ ವರ್ಣಗಳ ಸೃಷ್ಟಿಯನ್ನು ರಚಿಸಿದಾತನ ಆ ಶಕ್ತಿಯೇ, ಆ ಕಲೆಯೇ ಮಾಯೆ. ಸೆರೆಮನೆಯಲ್ಲಿ ದೊರೆಯುವ ರೊಟ್ಟಿ, ಸರ್ವರಸದ ತೊವ್ವೆ, ಎಲ್ಲ ಒಂದೇ ಬಗೆಯದು. ಹಾಗೇ ಒಂದೇ ಅಖಂಡ ಆತ್ಮ, ಒಂದೇ ಅಷ್ಟಧಾ ಶರೀರ. ಇವುಗಳಿಂದ ಪರಮಾತ್ಮ ಅನೇಕ ವಸ್ತುಗಳನ್ನು ರಚಿಸಿದ್ದಾನೆ. ಅವನ್ನು ಕಂಡು ಬಗೆಬಗೆಯ ಪರಸ್ಪರ ವಿರೋಧವಾದ ಒಳಿತು ಕೆಟ್ಟ ಭಾವನೆಗಳೆಷ್ಟೋ ನಮಗೆ ಉಂಟಾಗುತ್ತವೆ. ಅವುಗಳಾಚೆ ನೆಗೆದು ನೈಜಶಾಂತಿಯನ್ನು ಅನುಭವಿಸಬೇಕಿದ್ದರೆ ಆ ವಸ್ತುಗಳನ್ನು ನಿರ್ಮಿಸುವವನನ್ನು ಹಿಡಿದುಕೊಳ್ಳಬೇಕು. ಅವನ ಗುರುತು ಮಾಡಿಕೊಳ್ಳಬೇಕು. ಆ ಗುರುತು ಆದರೆ ಈ ಭೇದಜನಕ, ಆಸಕ್ತಿಜನಕ ಮೋಹವನ್ನು ತೊಡೆದುಹಾಕಲು ಸಾಧ್ಯವಾದೀತು.

4. ಆ ಪರಮಾತ್ಮನನ್ನು ಅರಿತುಕೊಳ್ಳುವ ಮಹಾಸಾಧನೆಯೊಂದನ್ನು, ಮಹಾ ವಿಕರ್ಮವೊಂದನ್ನು ವಿವರಿಸುವುದಕ್ಕಾಗಿ ಈ ಅಧ್ಯಾಯದಲ್ಲಿ ಭಕ್ತಿಯ ಭವ್ಯವಾದ ಬಾಗಿಲನ್ನು ತೆರೆದಿದೆ. ಚಿತ್ತಶುದ್ಧಿಗಾಗಿ ಯಜ್ಞ–ದಾನ, ಜಪ–ತಪ, ಧ್ಯಾನ–ಧಾರಣೆ ಮುಂತಾದ ವಿಕರ್ಮಗಳನ್ನು ಸೂಚಿಸಲಾಗಿದೆ. ಈ ಸಾಧನೆಗಳೆಂದರೆ ಸೋಡ, ಸವುಳು, ಸಾಬೂನು ಶುಚಿ ಮಾಡುತ್ತದೆ; ನಿಜ. ಆದರೆ ನೀರೇ ಇಲ್ಲದಿದ್ದರೆ ಅವುಗಳ ಆಟ ಏನು ನಡೆದೀತು? ಸೋಡ, ಸವುಳು ಸಾಬೂನು ಇಲ್ಲದಿದ್ದರೂ ಬರೀ ನೀರು ಸ್ವಚ್ಛತೆ ಕೊಡಬಲ್ಲದು. ನೀರಿನ ಜೊತೆಗೆ ಅವು ಬೆರೆತಲ್ಲಿ "ಅಧಿಕಸ್ಯ ಅಧಿಕಂ ಫಲಂ" ಆದೀತು. ಹಾಲಿಗೆ ಸಕ್ಕರೆ ಸೇರಿದ ಹಾಗೆ. ಯಜ್ಞ, ಯಾಗ, ಧ್ಯಾನ, ತಪಸ್ಸುಗಳಲ್ಲಿ ಹಾರ್ದಿಕತೆ ಇಲ್ಲವಾದರೆ ಚಿತ್ತಶುದ್ಧಿಯಾಗುವ ಬಗೆ ಹೇಗೆ? ಹಾರ್ದಿಕತೆಯೆಂದರೇನೆ ಭಕ್ತಿ.

ಎಲ್ಲ ಉಪಾಯಗಳಿಗೂ ಅಗತ್ಯವಾದುದು ಭಕ್ತಿ. ಅದು ಸಾರ್ವಭೌಮ ಉಪಾಯ. ಸೇವಾಶಾಸ್ತ್ರ ಕಲಿತವನು, ಉಪಚಾರದ ತಿಳಿವಳಿಕೆಯುಳ್ಳವನು ರೋಗಿಯ ಶುಶ್ರೂಷೆಗೆ ಹೋಗಬೇಕು. ಆದರೆ ಆತನ ಮನಸ್ಸಿನಲ್ಲಿ ಕಳಕಳಿ ಇಲ್ಲದಿದ್ದರೆ ನಿಜವಾದ ಸೇವೆ ಆದೀತೆ? ಎತ್ತೇನೊ ಗಟ್ಟಿಮುಟ್ಟು. ಆದರೆ ಅದಕ್ಕೆ ಬಂಡಿಎಳೆವ ಮನಸ್ಸೇ ಇಲ್ಲದೆ ಹೋದರೆ ನೆಲ ಹಿಡಿದು ಕೂತೀತು; ಬಂಡಿಯನ್ನು ತಗ್ಗಿನಲ್ಲಿ ನೂಕುಬಿಟ್ಟೀತು. ಮನಸ್ಸಿಲ್ಲದೆ ಮಾಡುವ ಕರ್ಮದಿಂದ ತುಷ್ಟಿ–ಪುಷ್ಟಿ ಯಾವುದೂ ಇಲ್ಲ.

(ಮುಂದುವರಿಯುವುದು)



ವ್ಯಕ್ತಿತ್ವ ವಿಕಸನ ಅಧ್ಯಾತ್ಮ ಮಾಸಪತ್ರಿಕೆ

# ಮಲ್ಲಾರ

## ಚಂದಾ ಪತ್ರಕ

**ನೀವು ಚಂದಾದಾರರಾಗಿ !**
**ನಿಮ್ಮ ಬಂಧು ಮಿತ್ರರನ್ನು ಚಂದಾದಾರರನ್ನಾಗಿ ಮಾಡಿ !**

**ಕೈವಾರ ಶ್ರೀ ಯೋಗಿ ನಾರೇಯಣರ** ವಿಚಾರಗಳಿಂದ ಪ್ರೇರಣೆ ಪಡೆದು, ಭಾರತೀಯ ಸನಾತನ ಧರ್ಮ, ಸಂಸ್ಕೃತಿ, ಪರಂಪರೆಗಳನ್ನು ಕುರಿತು ಅಪೂರ್ವ ಮಾಹಿತಿಯನ್ನು ನೀಡುತ್ತಿರುವ ಜನಪ್ರಿಯ ಮಾಸಪತ್ರಿಕೆ **ಮಲ್ಲಾರ**. ಸುಲಭ ಬೆಲೆಯ ಸಮೃದ್ಧ ಸಾಹಿತ್ಯದ ರೂವಾರಿ **ಮಲ್ಲಾರ**.

ಮಲ್ಲಾರ ಚಂದಾದಾರರಾಗಲು ಕೆಳಗಿನ ಪತ್ರಕವನ್ನು ತುಂಬಿ 'Sri Yogi Nareyana Study Centre' ಹೆಸರಿನಲ್ಲಿ ಡಿಡಿ ಅಥವಾ ಚೆಕ್ ಮೂಲಕ ಕೆಳಗಿನ ವಿಳಾಸಕ್ಕೆ ಕಳುಹಿಸಿ ಚಂದಾದಾರರಾಗಿ

For Subscription - Bank Transfer/ RTGS:
Sri Yogi Nareyana Study Centre
SB A/c No. 141201011016824,
IFSC Code: VIJB0001412.
After Transfer Please Contact No. 94480 85975

**ಮಲ್ಲಾರ ಕಳುಹಿಸಬೇಕಾದ ನನ್ನ ವಿಳಾಸ**

ಹೆಸರು:.................................................................
ವಿಳಾಸ:.................................................................
.........................................................................
.........................................................................
ಪಿನ್ ಕೋಡ್ ಸಂಖ್ಯೆ: ..................................................
ಮೊಬೈಲ್ /ಫೋನ್:..........................................................

☐ **ಆಜೀವ ಚಂದಾ ರೂ.** 1500/-
☐ **5 ವರ್ಷಗಳ ಚಂದಾ ರೂ.** 500/-
☐ **ವಾರ್ಷಿಕ ಚಂದಾ ರೂ.** 140/-

ನಾನು ಡಿಡಿ /ಚೆಕ್ /ಮನಿಯಾರ್ಡರ್ ಮೂಲಕ
(ಚೆಕ್ /ಡಿಡಿ ಸಂ..........................................................
ಬ್ಯಾಂಕ್...........................................................)
ಚಂದಾ ಹಣವನ್ನು ಕಳುಹಿಸಿದ್ದೇನೆ.

**ಸಹಿ** /-

**ನಿರ್ವಾಹಕ ಸಂಪಾದಕರು**
ಮಲ್ಲಾರ ಮಾಸಪತ್ರಿಕೆ, ಎಂ.ಎಸ್.ರಾಮಯ್ಯ ಅನ್ವಯಿಕ ವಿಜ್ಞಾನಗಳ ವಿಶ್ವವಿದ್ಯಾಲಯ ಸಂಕೀರ್ಣ, ಎಂ.ಎಸ್.ಆರ್.ಐ.ಟಿ. ಪೋಸ್ಟ್, ನ್ಯೂ ಬಿಇಎಲ್ ರಸ್ತೆ, ಬೆಂಗಳೂರು–560 054.

**ಜಾಹೀರಾತು ನೀಡಲು ಮತ್ತು ಚಂದಾದಾರರಾಗಲು ಸಂಪರ್ಕಿಸಿ**
**ಮೊ: 9916854885**

**ಯೋಗ ಪುರುಷರಾದ ಕೈವಾರ ಶ್ರೀ ನಾರೇಯಣರ ಪದ್ಯಗಳಲ್ಲಿ ಕಂಡುಬರುವ ಭಗವದ್ಗೀತೆಯನ್ನು ಕುರಿತು ತಿಳಿಸಿಕೊಟ್ಟಿದ್ದಾರೆ**
**ಶ್ರೀ 'ತಾತಯ್ಯ'ನವರ ಪಾದಪದ್ಮಗಳ ದಾಸಾನುಭಕ್ತ ಹಾಗೂ ಕೀರ್ತನಾ ಭಕ್ತ ಶ್ರೀ. ಜಿ.ಸಿ.ಎಸ್.**

# ಕೈವಾರ ತಾತಯ್ಯನವರ ತತ್ತ್ವಗಳಲ್ಲಿ ಭಗವದ್ಗೀತೆ

ನಮ್ಮ ಸನಾತನ ಧರ್ಮದ ಶ್ರೇಷ್ಠ ಹಾಗೂ ಪವಿತ್ರ ಗ್ರಂಥ ಶ್ರೀಮದ್ಭಗವದ್ಗೀತೆ. ಸಾಕ್ಷಾತ್ ಪರಮಾತ್ಮನೇ ಆದ ಶ್ರೀಕೃಷ್ಣನು ಅರ್ಜುನನನ್ನು ನಿಮಿತ್ತನನ್ನಾಗಿಮಾಡಿಕೊಂಡು ಸಕಲ ಜೀವಿಗಳಿಗೆ ಮುಕ್ತಿಪ್ರದಾಯಕವಾದ ಬೋಧೆಯನ್ನು ಮಾಡಿದ್ದಾರೆ.

ಗೀತೆಯು ಎಲ್ಲ ಮಾನವರಿಗೂ ಕರ್ಮಬಂಧನದಿಂದ ಮೋಕ್ಷಮಾರ್ಗಕ್ಕೆ ದಾರಿ ತೋರಿಸುವ ಮಾರ್ಗದರ್ಶಿ. ಅಜ್ಞಾನದಿಂದ ಜ್ಞಾನದ ಕಡೆಗೆ ದಾರಿ ತೋರಿಸುವ ಜ್ಞಾನ ದೀಪ.

ಜಗದ್ಗುರು ಶ್ರೀ ಶಂಕರಾಚಾರ್ಯರು ಗೀತಾಭಾಷ್ಯವನ್ನು ಬರೆಯುವಾಗ ಭಗವದ್ಗೀತೆ ಕುರಿತು ಹೀಗೆಂದಿದ್ದಾರೆ:



ಯೋಗ ದೃಷ್ಟಿಯಿಂದ ಸಕಲ ದೇವತೆಗಳನ್ನು ಕಂಡಿರುವ ನಾರೇಯಣರು

**ಸಮಸ್ತ ವೇದಾರ್ಥಸಾರ ಸಂಗ್ರಹಭೂತಮ್,**
**ತದರ್ಥವಿಜ್ಞಾನೇ ಸಮಸ್ತ ಪುರುಷಾರ್ಥಸಿದ್ಧಿಃ**

ಸಮಸ್ತ ವೇದೋಪನಿಷತ್ತುಗಳ ಸಾರ ಸಂಗ್ರಹ ಹಾಗೂ ಪುರುಷಾರ್ಥ ಸಿದ್ಧಿಗಾಗಿ ಹೇಳಲಾಗಿರುವ ಸಮಸ್ತ ತಿಳಿವಳಿಕೆ ಹಾಗೂ ಅನುಭವಗಳು ಗೀತೆಯಲ್ಲಿ ಒಳಗೊಂಡಿದೆ.

ಶ್ರೀ ಕೈವಾರ ತಾತಯ್ಯನವರ ತತ್ತ್ವಗಳನ್ನು ಓದಿ ಅರ್ಥೈಸಿಕೊಂಡಂತಹ ಓದುಗರಿಗೆ ಅನಿಸುತ್ತದೆ:

"ಸಮಸ್ತ ವೇದೋಪನಿಷತ್ತುಗಳು, ಪತಂಜಲಿ ಯೋಗ ಹಾಗೂ ಭಗವದ್ಗೀತೆಯ ಸಾರ ಸಂಗ್ರಹ ಶ್ರೀ ನಾರೇಯಣರ ಪದ್ಯಗಳಲ್ಲಿ ಅಂತರ್ಗತಗೊಂಡಿವೆ" ಎಂದು.

ಮಹರ್ಷಿಗಳು, ತ್ರಿಕಾಲಜ್ಞಾನಿಗಳು, ಮಹಾನ್ ಯೋಗಿಗಳು, ಸಂತರು, ಭಕ್ತರು, ವರಕವಿಗಳು, ಸಮಾಜ ಸುಧಾರಕರು ಆಗಿರುವ ಕೈವಾರ ತಾತಯ್ಯನವರು ಸಾಮಾನ್ಯರಂತೆ ಗೃಹಸ್ಥ ಜೀವನವನ್ನು ನಡೆಸಿ, ತದನಂತರ ವೈರಾಗ್ಯವನ್ನು ತಾಳಿ ಘೋರ ಅರಣ್ಯದಲ್ಲಿ ಸತತ ಹನ್ನೆರಡು ವರ್ಷಗಳ ಕಾಲ ತಪಸ್ಸನ್ನಾಚರಿಸಿ ಯೋಗ ಸಾಧನೆಯಿಂದ ಜೀವಾತ್ಮನನ್ನು ಪರಮಾತ್ಮನಲ್ಲಿ ಸೇರಿಸಿದಂತಹವರು. ಯೋಗ ಸಿದ್ಧಿಯನ್ನು ಪಡೆದುಕೊಂಡು ಸಾಕ್ಷಾತ್ ಪರಮಾತ್ಮ ಸ್ವರೂಪಿಗಳಾದ ಶ್ರೀ ತಾತಯ್ಯರು ನುಡಿದ ಪ್ರತಿಯೊಂದು ಅಕ್ಷರವೂ ವೇದಾಕ್ಷರವೇ.

ಶ್ರೀ ತಾತಯ್ಯನವರು ರಚಿಸಿರುವ ಅಗ್ರಗಣ್ಯ ಗ್ರಂಥ "ನಾದಬ್ರಹ್ಮಾನಂದ ನಾರೇಯಣ ಕವಿ ಶತಕ"ದಲ್ಲಿನ ಪದ್ಯಗಳೊಡನೆ ಮೊದಲ್ಗೊಂಡು "ಶ್ರೀಕೃಷ್ಣ ಚರಿತ ತತ್ತ್ವಾಮೃತ ಯೋಗಸಾರಮು" ವರೆಗಿನ ಪದ್ಯಗಳಲ್ಲಿ ಗೀತೆಯ ಸ್ವಾರಸ್ಯವನ್ನು ನೋಡಬಹುದು.

ಒಂದೇ ಲೇಖನದಲ್ಲಿ ಶ್ರೀ ತಾತಯ್ಯನವರ ತತ್ತ್ವಗಳಲ್ಲಿ ಗೀತೆಯ ಅಂತರಾರ್ಥವನ್ನು ಪೂರ್ಣಗೊಳಿಸಲು ಸಾಧ್ಯವಿಲ್ಲ, ಹಾಗಾಗೀ ಕೆಲವೊಂದು ಪದ್ಯಗಳ ಉದಾಹರಣೆಯೊಂದಿಗೆ ನೋಡೋಣ:

**ಮುಕ್ತಯೋಗಿ**
**ತನ್ನು ತಾ ತೆಲಿಸಿನ – ತನಕು ದೇಹಮು ಲೇದು।**
**ಜೀವುಡು ವಿರಾಟ್ಟುನು – ಚೇರಿಯುಂಡು ।**
**ಲಕ್ಷ ಯುಗಮುಲೈನ – ವಚ್ಚೇದಿ ಲೇದುರಾ ।**
**ನಾದ ಬ್ರಹ್ಮಾನಂದ–ನಾರೇಯಣ ಕವಿ ॥21॥**

ತನ್ನನ್ನು ತಾನು ಅರಿತುಕೊಂಡ ಜ್ಞಾನಿಯು ದೇಹದ ಮೇಲೆ ಪ್ರೀತಿಯನ್ನು ಕಳೆದುಕೊಂಡು ಪರಮಾತ್ಮನ ಕಡೆಗೆ ತನ್ನ ದೃಷ್ಟಿಯನ್ನಿಟ್ಟಿರುವುದರಿಂದ ಆತನಿಗೆ ದೇಹದ ಮೇಲೆ ವ್ಯಾಮೋಹವಿರುವುದಿಲ್ಲ. ಅಂತಹ ಯೋಗಿಯ ಜೀವಾತ್ಮನು ಅಂತ್ಯದಲ್ಲಿ ವಿರಾಟ್ ಎಂದರೆ ಪರಮಾತ್ಮನ ತತ್ತ್ವದಲ್ಲಿ ತದಾಕಾರವಾಗಿ ಸೇರಿ ಮೋಕ್ಷವನ್ನು ಗಳಿಸಿರುತ್ತಾನೆ. ಅಂತಹ ಜೀವಾತ್ಮನು ಲಕ್ಷ ಯುಗಗಳು ಕಳೆದರೂ ಪುನರ್ಜನ್ಮಕ್ಕೆ ಬರುವುದಿಲ್ಲ.

**ಜನ್ಮ ಕರ್ಮ ಚ ಮೇ ದಿವ್ಯಂ**
**ಏವಂ ಯೋ ವೇತ್ತಿ ತತ್ತ್ವತಃ ।**
**ತ್ಯಕ್ತ್ವಾ ದೇಹಂ ಪುನರ್ಜನ್ಮ**
**ನೈತಿ ಮಾಮೇತಿ ಸೋಽರ್ಜುನ ॥**

**(ಜ್ಞಾನಯೋಗಃ ಪದ್ಯ 9)**

ಅರ್ಜುನಾ! ದಿವ್ಯವಾದ ನನ್ನ ಜನ್ಮ ಕರ್ಮಗಳನ್ನು ವಾಸ್ತವವಾಗಿ ತಿಳಿದ ಜ್ಞಾನಿಗಳು ಈ ದೇಹವನ್ನು ಬಿಟ್ಟನಂತರ ಪುನಃ ಜನಿಸುವುದಿಲ್ಲ. ಅವನು ನನ್ನನ್ನೇ ಸೇರುತ್ತಾನೆ.

ಇಲ್ಲಿ ಜನ್ಮ ಕರ್ಮಗಳನ್ನು ವಾಸ್ತವವಾಗಿ ತಿಳಿದವರೆಂದರೆ ಜ್ಞಾನಿಗಳೆಂದರ್ಥ. ಜ್ಞಾನಮಾರ್ಗ,ಕರ್ಮಮಾರ್ಗ,ಯೋಗಸಾಧನೆ, ಭಕ್ತಿಮಾರ್ಗ...ಹೀಗೆ ಅನೇಕ ತರದಿಂದ ಭಗವಂತನನ್ನು ಸೇವಿಸಿದ ಯೋಗಿ ಪುರುಷರಿಗೆ ಪುನರ್ಜನ್ಮವಿಲ್ಲ.

**ಮನಸ್ಸೆಂಬ ಖಡ್ಗದಿಂದ ಮಾಯೆಯನ್ನು ಖಂಡಿಸು**
**ಮನಸನೇ ಕತ್ತಿತೋ – ಮಾಯನು ತೆಗನರಿಕಿ ।**
**ಧೀರುಡೈ ವುಂಡವಲೆ – ದಿಗುಲು ಲೇಕ ।**
**ಅಪ್ಪುಡು ಗುರುಡು ಮೆಚ್ಚಿ – ಅಭಯಮ್ಮು ಯಿಚ್ಚುರಾ ।**
**ನಾದ ಬ್ರಹ್ಮಾನಂದ–ನಾರೇಯಣ ಕವಿ ॥60॥**

ಮನಸ್ಸಿನ ಮೇಲೆ ಆಕ್ರಮಣ ಮಾಡಿರುವ ಮಾಯೆ ಎಂಬ ಲೌಕಿಕ ವಿಷಯಾಸಕ್ತಿಗಳಾದ ಕಾಮಕ್ರೋಧಗಳನ್ನು ಗೆಲ್ಲಲು ಮನಸ್ಸಿಗೆ ಬುದ್ಧಿ ಎಂಬ ಆಯುಧವನ್ನು ನೀಡಿ ಅದರಿಂದ ಮಾಯೆಯನ್ನು ತುಂಡರಿಸಿಹಾಕಬೇಕು; ಹಾಗೂ ಭಯಪಡದೆ ಧೀರನಾಗಿರಬೇಕು. ಆಗ ಮಾತ್ರವೇ ಪರಮಾತ್ಮ ರೂಪವಾದ ಗುರು ಅವನಿಗೆ ಒಲಿದು ಅಭಯವನ್ನು ಕೊಡುತ್ತಾನೆ.

**ಸಂಕಲ್ಪಪ್ರಭವಾನ್ಕಾಮಾನ್**
**ತ್ಯಕ್ತ್ವಾ ಸರ್ವಾನಶೇಷತಃ ।**
**ಮನಸೈವೇಂದ್ರಿಯಗ್ರಾಮಂ**
**ವಿನಿಯಮ್ಯ ಸಮಂತತಃ ॥**

**ಶನೈಃ ಶನೈರುಪರಮೇತ್**
**ಬುದ್ಧ್ಯಾ ಧೃತಿಗೃಹೀತಯಾ ।**
**ಆತ್ಮಸಂಸ್ಥಂ ಮನಃ ಕೃತ್ವಾ**
**ನ ಕಿಂಚಿದಪಿ ಚಿಂತಯೇತ್ ॥**

**(ಆತ್ಮ ಸಂಯಮಯೋಗಃ ಪದ್ಯ 24, 25)**

ಸಂಕಲ್ಪದಿಂದ ಹುಟ್ಟಿದ ಕೋರಿಕೆಗಳನ್ನು ಪೂರ್ಣ ತ್ಯಜಿಸಿ, ಮನಸ್ಸಿನಿಂದ ಇಂದ್ರಿಯ ಸಮುದಾಯವನ್ನು ನಿಗ್ರಹಿಸಿ, ಧೈರ್ಯದಿಂದ ಕೂಡಿದ ಬುದ್ಧಿಯಿಂದ ವಿಷಯಗಳನ್ನು ಮೆಲ್ಲಮೆಲ್ಲಗೆ ತಡೆದು, ಮನಸ್ಸನ್ನು ಆತ್ಮನಲ್ಲಿ ನಿಲ್ಲಿಸಿ, ಯೋಗಿಯು ನಿಶ್ಚಿಂತನಾಗಿರಬೇಕು.

**ಮುದಿತನದಲ್ಲಿ ಕಹಿ**
**ಏ ಜಾತಿ ಫಲಮ್ಮೈನ – ಮುದಿರಿನಪ್ಪುಡು ತೀಪು ।**
**ಕಾಯಲಪ್ಪುಡು ವಗರು – ಚೇದು ಪುಲುಸು ।**
**ಮಾನವುಡು ಮುದಿರಿತೇ – ಮರಿ ಮಂಕು ಚೇದಯಾ ।**
**ನಾದ ಬ್ರಹ್ಮಾನಂದ–ನಾರೇಯಣ ಕವಿ ॥47॥**

ಮರವು ಯಾವ ಜಾತಿಯದೇ ಆಗಿದ್ದರೂ ಅದರಲ್ಲಿನ ಫಲಗಳು ಆರಂಭದ ಸ್ಥಿತಿಯಲ್ಲಿ ಕಾಯಿಗಳಾಗಿರುತ್ತವೆ. ರುಚಿಯಲ್ಲಿ ಒಗರಾಗಿರುತ್ತದೆ, ಅನಂತರ ಕಹಿಯಾಗಿರುತ್ತದೆ, ಬಳಿಕ ಹುಳಿಯಾಗಿರುತ್ತದೆ. ಹೀಗೆ ರಸ ಪರಿವರ್ತನೆಯಾಗಿ ಮಾಗಿದಾಗ ಪೂರ್ಣವಾಗಿ ಹಣ್ಣಾಗಿ ರುಚಿಯಲ್ಲಿ ಸಿಹಿಯಾಗಿರುತ್ತದೆ. ಆದರೆ ಮಾನವರು ಮುದುಡಿದಾಗ ಮಂಕುತನವೆಂಬ ಬಲವಾದ ಕಹಿಯೇ ವ್ಯಾಪಿಸಿರುತ್ತದೆ.

**ವಿಷಯೇಂದ್ರಿಯಸಂಯೋಗಾತ್**
**ಯತ್ತದಗ್ರೇಮೃತೋಪಮಮ್ ।**
**ಪರಿಣಾಮೇ ವಿಷಮಿವ**
**ತತ್ಸುಖಂ ರಾಜಸಂ ಸ್ಮೃತಮ್**

**(ಮೋಕ್ಷ ಸಂನ್ಯಾಸಯೋಗಃ ಪದ್ಯ 28)**

ಇಂದ್ರಿಯಗಳು ವಿಷಯಗಳಲ್ಲಿ ಸೇರಿದಾಗ ಆರಂಭದಲ್ಲಿ ಅಮೃತದಂತೆ ಇದ್ದೂ, ಪರಿಣಾಮದಲ್ಲಿ ವಿಷವಾದ ಸುಖವು ರಾಜಸ ಸುಖವೆನಿಸುತ್ತದೆ.

ಕೈವಾರ ತಾತಯ್ಯನವರು ಮರದ ಉದಾಹರಣೆಯೊಂದಿಗೆ ಮನುಷ್ಯನ ಸ್ವಭಾವವನ್ನು ಕುರಿತು ಹೇಳಿದ್ದರೆ, ಶ್ರೀಕೃಷ್ಣನು ಮನುಷ್ಯನನ್ನು ಸಾತ್ತ್ವಿಕ ಗುಣ, ರಾಜಸ ಗುಣ, ತಾಮಸ ಗುಣಗಳ ಸ್ವಭಾವವನ್ನು ತಿಳಿಸಿದ್ದಾರೆ.

ರಾಜಸ ಸುಖಿಯೇ ಯೌವನದಲ್ಲಿ ಭೋಗಲಂಪಟನಾಗಿ, ಮುದಿತನದಲ್ಲಿ ಕಹಿಯೆಂಬ ದುಃಖದ ಫಲವನ್ನು ಉಣ್ಣುತ್ತಾನೆ.

**ವೈಶ್ಯ–ಕೋಮಟಿ**
**ಪಟ್ಟಿ ಚೆಪ್ಪೇನಂಟೆ–ಗುಟ್ಟು ಬಟ್ಟ ಬಯಲು ।**
**ಚೆಪ್ಪನೇಲ ಸಿಗ್ಗು – ಚೆರಚ ನೇಲ ।**
**ಕುಲಮು ಕೋಮಟಿವಾರು – ವೈಶ್ಯುಲು ಕಾರಯಾ ।**
**ನಾದ ಬ್ರಹ್ಮಾನಂದ–ನಾರೇಯಣ ಕವಿ ॥5॥**

ಬಿಡಿಸಿ ಹೇಳಿಬಿಟ್ಟೆನಾದರೆ ಗುಟ್ಟು ಬಟ್ಟಬಯಲಾಗುತ್ತದೆ. ರಟ್ಟು ಮಾಡಿ ಹೇಳುವುದೇಕೆ; ಹೇಳಿ ಮರ್ಯಾದೆ ಕೆಡಿಸುವುದೇಕೆ? ಕುಲದ ಹಿನ್ನೆಲೆಯಲ್ಲಿ ಕೋಮಟಿಗಳೇ ಆದರೆ ಹೊರತು, ವರ್ಣಧರ್ಮದ ಅನುಷ್ಠಾನದ ಹಿನ್ನೆಲೆಯಲ್ಲಿ ಅವರು ವೈಶ್ಯರಾಗುವುದಿಲ್ಲ.

**ಕೃಷಿಗೌರಕ್ಷ್ಯವಾಣಿಜ್ಯಂ**
**ವೈಶ್ಯಕರ್ಮ ಸ್ವಭಾವಜಮ್ ।**
**ಪರಿಚರ್ಯಾತ್ಮಕಂ ಕರ್ಮ**
**ಶೂದ್ರಸ್ಯಾಪಿ ಸ್ವಭಾವಜಮ್ ॥**

**(ಮೋಕ್ಷ ಸಂನ್ಯಾಸಯೋಗಃ ಪದ್ಯ 44)**

ವ್ಯವಸಾಯ ಪಶುಸಂರಕ್ಷಣೆ, ವ್ಯಾಪಾರ, ಇವು ವೈಶ್ಯರಿಗೆ ಸ್ವಭಾವ ಕರ್ಮಗಳು. ಸೇವೆಯನ್ನು ಮಾಡುವುದು, ಶೂದ್ರರಿಗೆ ಸ್ವಭಾವ ಕರ್ಮವಾಗಿದೆ.

ಶ್ರೀಕೃಷ್ಣನು ವರ್ಣಧರ್ಮದಲ್ಲಿ ಹೇಳಿರುವುದನ್ನು ತ್ರಿಕಾಲಜ್ಞಾನಿಗಳಾದ ಶ್ರೀ ತಾತಯ್ಯನವರು ಇಂದಿನ ಕಾಲವನ್ನು ಅಂದೇ ಅರಿತು ನುಡಿದಂತಹವರು. ಇಂದು ಕೋಮಟಿ ವೃತ್ತಿ ಮಾತ್ರವೇ ಉಳಿದುಕೊಂಡಿದ್ದು. ವೈಶ್ಯ ವೃತ್ತಿಯೇ ಮಾಯವಾಗಿದೆ.

**ಮನಸ್ಸಿನ ನಾಯಿಯನ್ನು ಕೊಂದುಬಿಡು**
**ಕುಕ್ಕವಂಟಿ ಮನಸು – ಕೂರ್ಚುಂಡನೀಯ ।**
**ತಿಕ್ಕಬಟ್ಟಿನಟ್ಲು – ತಿರುಗು ಚುಂಡು ।**
**ಕುಕ್ಕನು ಚಂಪಿತೇ – ಚಕ್ಕನಿ ಮನಸುರಾ ।**
**ನಾದ ಬ್ರಹ್ಮಾನಂದ – ನಾರೇಯಣ ಕವಿ ॥ 219 ॥**

ನಾಯಿಯಂತಹ ಮನಸ್ಸು ಒಂದೆಡೆ ನಿಲ್ಲದೆ ಹುಚ್ಚು ಹಿಡಿದಂತೆ ಅಲೆಯುತ್ತಿರುತ್ತದೆ. ಆದುದರಿಂದಲೇ ಮನುಷ್ಯನನ್ನು ಒಂದೆಡೆ ಸ್ಥಿರವಾಗಿ ಕುಳ್ಳಿರಗೊಡಿಸುವುದಿಲ್ಲ. ಈ

ನಾಯಿಯನ್ನು ಕೊಂದು ಬಿಟ್ಟರೆ ಅದೇ ಮನಸ್ಸು ಒಳ್ಳೆಯತ ನವುಳ್ಳದ್ದಾಗುತ್ತದೆ.

**ಇಂದ್ರಿಯಾಣಾಂ ಹಿ ಚರತಾಂ**
**ಯನ್ಮನೋನು ವಿಧೀಯತೇ ।**
**ತದಸ್ಯ ಹರತಿ ಪ್ರಜ್ಞಾಂ**
**ವಾಯುರ್ನಾವಮಿವಾಂಭಸಿ ॥**

**(ಸಾಂಖ್ಯಯೋಗಃ ಪದ್ಯ 67)**

ಇಂದ್ರಿಯಗಳಿಗೆ ವಶವಾದ ಮನಸ್ಸು, ನೀರಿನಲ್ಲಿ ನಾವೆಯನ್ನು ಸುಳಿಗಾಳಿಯು ಎಳೆದೊಯ್ಯುವಂತೆ, ಪುರುಷನ ಬುದ್ಧಿಯನ್ನು ಎಳೆದೊಯ್ಯುತ್ತದೆ.

ಶ್ರೀ ತಾತಯ್ಯನವರು ಇಂದ್ರಿಯಗಳ ನಿಯಂತ್ರಣಕ್ಕೆ ಒಳಪಟ್ಟಿರುವ ಮನಸ್ಸನ್ನು ಹುಚ್ಚು ನಾಯಿಗೆ ಹೋಲಿಸಿದರೆ, ಶ್ರೀಕೃಷ್ಣನು ಸುಳಿಗಾಳಿಗೆ ಸಿಕ್ಕ ನಾವೆಗೆ ಹೋಲಿಸಿದ್ದಾನೆ. ಇಂದ್ರಿಯ ನಿಗ್ರಹ ಪಡೆಯಬೇಕಾದರೆ ಮನುಷ್ಯನಿಗೆ ಏಕಾಗ್ರತೆಯು ಬಹಳ ಮುಖ್ಯ. ಈ ಏಕಾಗ್ರತೆ ಅಷ್ಟು ಸುಲಭವಾಗಿ ಬರುವುದಿಲ್ಲ. ಸತತ ಅಭ್ಯಾಸವನ್ನು ಮಾಡಬೇಕು. ಅಭ್ಯಾಸವನ್ನು ಮಾಡುತ್ತಾ, ಲೌಕಿಕ ವಿಷಯಗಳ ಮೇಲೆ ಆಸಕ್ತಿಯನ್ನು ಸ್ವಲ್ಪ ಸ್ವಲ್ಪವೇ ಕಳೆದುಕೊಳ್ಳುತ್ತಾ ಪರಮಾತ್ಮನ ಕಡೆ ದೃಷ್ಟಿಯನ್ನು ನೆಡುತ್ತೇವೆ. ಪರಮಾತ್ಮನ ಕಡೆ ದೃಷ್ಟಿಯನ್ನಿಟ್ಟಾಗ ಮನಸ್ಸು ಒಂದು ಕಡೆ ಸ್ಥಿರವಾಗಿ ನಿಲ್ಲುತ್ತದೆ. ಇದನ್ನೇ ತಾತಯ್ಯನವರು 'ಹುಚ್ಚು ನಾಯಿಯನ್ನು ಕೊಂದುಬಿಡು' ಎಂದಿರುವುದು.


ಧ್ಯಾನದಲ್ಲಿ ಶ್ರೀಕೃಷ್ಣ

**ದೇಹದಲ್ಲಿ ಏಳು ಅಂಕಣಗಳ ತೇರನ್ನೇರು**
**ಏಡಂಕಣಂಬುಲ – ತೇರು ಮೀದಿಕಿ ಯೆಕ್ಕಿ ।**
**ಸೂರ್ಯಚಂದ್ರುಲು ಲೇನಿ – ವೆಲುಗು ಜೂಚಿ ।**
**ಮೆಲ್ಲನೆ ದಿಗಿವಚ್ಚಿ – ಮೇಲು ಕೋವಲೆನುರಾ ।**
**ನಾದ ಬ್ರಹ್ಮಾನಂದ–ನಾರೇಯಣ ಕವಿ ॥76॥**

ಸಾಧಕನೇ, ಅಂತರ್ಮುಖಿಯಾಗಿ ಏಳು ಅಂತಸ್ತುಗಳುಳ್ಳ ರಥದ ಮೇಲಕ್ಕೆ ಆರೋಹಣ ಕ್ರಮದಲ್ಲಿ ಏರುತ್ತ ತಲಪಬೇಕು. ಅಲ್ಲಿ ಸೂರ್ಯ–ಚಂದ್ರರಿಲ್ಲದೆಯೇ ವ್ಯಾಪಿಸಿರುವ ಪರಂಜ್ಯೋತಿಯ ಪ್ರಕಾಶವನ್ನು ನೋಡಬೇಕು. ದರ್ಶನದ ಅನಂತರ ನಿಧಾನದ ಅವರೋಹಣ ಕ್ರಮದಲ್ಲಿ ಇಳಿದು ಬರಬೇಕು. ಅನಂತರ ಸಮಾಧಿ ನಿದ್ರೆಯಿಂದ ಎಚ್ಚೆತ್ತುಕೊಳ್ಳಬೇಕು.

**ಸ್ಪರ್ಶಾನ್ ಕೃತ್ವಾಬಹಿರ್ಬಾಹ್ಯಾನ್**
**ಚಕ್ಷುಶ್ಚೈವಾಂತರೇ ಭ್ರುವೋಃ ।**
**ಪ್ರಾಣಾಪಾನೌ ಸಮೌ ಕೃತ್ವಾ**
**ನಾಸಾಭ್ಯಂತರಚಾರಿಣೌ ॥**
**ಯತೇಂದ್ರಿಯಮನೋಬುದ್ಧಿಃ**
**ಮುನಿರ್ಮೋಕ್ಷಪರಾಯಣಃ**
**ವಿಗತೇಚ್ಛಾಭಯಕ್ರೋಧೋ**
**ಯಃ ಸದಾ ಮುಕ್ತ ಏವ ಸಃ ॥**

**(ಕರ್ಮಸಂನ್ಯಾಸಯೋಗಃ ಪದ್ಯ 27–28)**

ಬಾಹ್ಯ ವಿಷಯ ಚಿಂತನೆಯನ್ನು ತ್ಯಜಿಸಿ, ಭ್ರೂಮಧ್ಯದಲ್ಲಿ ದೃಷ್ಟಿಯನ್ನು ನಿಲ್ಲಿಸಿ ನಾಸಾಪುಟಗಳಲ್ಲಿ ವರ್ತಿಸುವ ಪ್ರಾಣಾಪಾನ ವಾಯುಗಳನ್ನು ಸಮವಾಗಿ ಮಾಡಿ ಇಂದ್ರಿಯ ಮನೋಬುದ್ಧಿಗಳನ್ನು ನಿಗ್ರಹಿಸಿ, ಇಚ್ಛಾ, ಭಯ, ಕ್ರೋಧಗಳನ್ನು ದೂರಮಾಡಿ ಮೋಕ್ಷದೀಕ್ಷೆಯುಳ್ಳ ಮುನಿಪುಂಗವರಿಗೆ ಮುಕ್ತಿಯು ನಿತ್ಯ ಸಿದ್ಧವಾಗಿರುತ್ತದೆ.

ಸಮಾಧಿಯೋಗ ವಿಧಾನದಲ್ಲಿ ಅಂತರ್ಮುಖಿಯಾಗಿ ಷಟ್ಚಕ್ರಗಳನ್ನು ಮೂಲಾಧಾರ, ಸ್ವಾಧಿಷ್ಠಾನ, ಮಣಿಪೂರಕ, ಅನಾಹತ, ವಿಶುದ್ಧ, ಆಜ್ಞಾ ಚಕ್ರಗಳನ್ನು ದಾಟಿ, ಏಳನೆಯ ಸಹಸ್ರಾರ ಚಕ್ರದಲ್ಲಿ ಪ್ರಕಾಶರೂಪದ ತತ್ತ್ವಸಾಕ್ಷಾತ್ಕಾರವನ್ನು ಪಡೆಯುವ ಮೂಲಕ ನಮ್ಮ ಬಂಧವಿಮುಕ್ತರಾಗಬೇಕೆಂದು ಶ್ರೀ ನಾರೇಯಣರು ಹೇಳಿದ್ದಾರೆ. ಹೀಗೆ ಬಂಧವಿಮುಕ್ತರಾದಂತಹವರನ್ನೇ ಮುನಿಪುಂಗವರೆಂದು ಶ್ರೀಕೃಷ್ಣನು ತಿಳಿಸಿರುವುದು.

**ಮದ್ಯ ಮಾಂಸಗಳಿಂದ ಮನೋವಿಕಾರ**
**ಸಾರಾಯಿ ಭಂಗಿ ಮಾಂಸಮು**
**ಸಾಧಿಂಚಿನ ನಿಲುವದು ವಗಚೋಟ ಮನಸು**
**ನಿಮಿಷಂಬೈನನ್ ।**
**ಸಾಧಿಂಚಿನವಾಡುಚಪಲುಡು**
**ನಾದ ಬ್ರಹ್ಮಾನಂದ–ನಾರೇಯಣ ಕವಿ ॥110॥**

ಸಾರಾಯಿ, ಭಂಗಿಯಂತಹ ಮಾದಕಗಳನ್ನು ಸೇವಿಸುವ ಮತ್ತು ಮಾಂಸಾಹಾರವನ್ನು ಸೇವಿಸುವವನ ಮನಸ್ಸು ನಿಮಿಷ ಕಾಲದಷ್ಟಾದರೂ ಒಂದೆಡೆ ನಿಲ್ಲುವುದಿಲ್ಲ. ಅಂತಹವನು ಚಪಲನೇ ಆಗುತ್ತಾನೆ. ಇಂತಹ ಚಪಲನೇ ರಾಜಸ ಗುಣವುಳ್ಳವನು. ಇಂತಹವರು ಮೋಕ್ಷಕ್ಕೆ ಅರ್ಹರಲ್ಲ. ಪುನಃ ಪುನಃ ಜನ್ಮಗಳೆನ್ನೆತ್ತಿ ಬರುವಂತಹ ಕರ್ಮಜೀವಿಗಳು.

**ಕಟ್ವಾಮ್ಲಲವಣಾತ್ಯುಷ್ಣ**
**ತೀಕ್ಷ್ಣ ರೂಕ್ಷವಿದಾಹಿನಃ ।**
**ಆಹಾರಾ ರಾಜಸಸ್ಯೇಷ್ಟಾಃ**
**ದುಃಖಶೋಕಾಮಯಪ್ರದಾಃ ॥9॥**

**(ಶ್ರದ್ಧಾತ್ರಯ ವಿಭಾಗಯೋಗಃ ಪದ್ಯ 9)**

ಬಹಳ ಖಾರ, ಹುಳಿ, ಉಪ್ಪು, ಬಿಸಿ, ತೀಕ್ಷ್ಣ, ಒಣಗಿರುವಿಕೆ, ಸೀದುವುಗಳನ್ನು ಅಥವಾ ಹುರಿದವುಗಳು, ಒಡನೆ ಆಗುವ ಪೀಡೆಯನ್ನೂ, ಆಮೇಲೆ ಆಗುವ ದುಃಖವನ್ನೂ, ರೋಗವನ್ನೂ, ಉಂಟುಮಾಡುತಕ್ಕಂಥ ಆಹಾರಗಳು, ಇವು ರಾಜಸರಿಗೆ ಬೇಕೆನಿಸುತ್ತವೆ.

ಶ್ರೀ ತಾತಯ್ಯನವರು ಹಾಗೂ ಶ್ರೀಕೃಷ್ಣನು ನೀಡಿದಂತಹ ಈ ಮೇಲಿನ ಉದಾಹರಣೆಯ ಪದಾರ್ಥಗಳು ಬೇರೆ ಬೇರೆಯಾಗಿದ್ದರೂ ಅವುಗಳ ಗುಣ, ಸ್ವಭಾವದಿಂದ ಮನಸ್ಸಿನ ಮೇಲೆ ಆಗುವಂತಹ ಪರಿಣಾಮ ಒಂದೇ ಆಗಿರುತ್ತದೆ.


ಹೀಗೆ ಶ್ರೀ 'ನಾರೇಯಣ'ರ ತತ್ತ್ವಗಳಲ್ಲಿ ಭಗವದ್ಗೀತೆಯನ್ನು ನೋಡಿದಂತೆಲ್ಲ ಹೆಚ್ಚು ಹೆಚ್ಚಾಗಿ ಹೋಲಿಕೆಗಳು ಸಿಗುತ್ತವೆ. ಈ ಲೇಖನದಲ್ಲಿ ಕೆಲವೊಂದನ್ನು ತಿಳಿಸಿ, ಸಮಾಪ್ತಿಗೊಳಿಸಿದ್ದೇನೆ. ●

# ಶ್ರೀ ಯೋಗಿ ನಾರೇಯಣ ಮಠ, ಶ್ರೀಕ್ಷೇತ್ರ ಕೈವಾರ




**ದೂರವಾಣಿ: 08154-239525 / ಮೊಬೈಲ್ : 9945337398**

klnarayankaiwara53@gmail.com

**ಜನವರಿ 2020ನೇ ಮಾಹೆಯ ಸಾಪ್ತಾಹಿಕ ಸೇವೆಗಳ ವಿವರ**

## ನಾದಸುಧಾರಸ

ವಿನೂತನ ಯೋಜನೆಯಲ್ಲಿ ಅಮೋಘ ಸಂಕೀರ್ತನ ಸಂಗೀತ ಕಚೇರಿಗಳು

| ದಿನಾಂಕ | ಸಮಯ | ವಿದ್ವಾಂಸರ ಹೆಸರುಗಳು | ಕಾರ್ಯಕ್ರಮ |
|---|---|---|---|
| 04.01.2020 ಶನಿವಾರ | ಸಂಜೆ 5.00 ಗಂಟೆಗೆ | ಸುಶೀಲಾ ಭಾಗವತಾರಿಣಿ, ಥನಕಲ್, ಆಂಧ್ರಪ್ರದೇಶ<br>ಶ್ರೀ ಆದಿನಾರಾಯಣ, ಥನಕಲ್ – ಹಾರ್ಮೋನಿಯಂ<br>ಶ್ರೀ ರವಿ – ತಬಲ | ಹರಿಕಥೆ |
| 10.01.2020 ಶುಕ್ರವಾರ | ಬೆಳಗ್ಗೆ 11.00 ರಿಂದ 12.00 ಗಂಟೆವರೆಗೆ | ಶ್ರೀ ವಾನರಾಶಿ ಬಾಲಕೃಷ್ಣ ಭಾಗವತ ಅವರಿಂದ<br>ಪೋತನ ಭಾಗವತ ಪ್ರವಚನ | ಹುಣ್ಣಿಮೆ |
| | ಸಂಜೆ 4.00 ಗಂಟೆಗೆ | ವಿಶೇಷ ಪೂಜೆ ಮತ್ತು ಆಲಂಬಗಿರಿಯಲ್ಲಿ ಗಿರಿ ಪ್ರದಕ್ಷಿಣೋತ್ಸವ<br>ಡಾ. ಎಂ.ಆರ್. ಜಯರಾಮ್ ಅವರ ನೇತೃತ್ವ | |
| 11.01.2020 ಶನಿವಾರ | ಸಂಜೆ 5.00 ಗಂಟೆಗೆ | ನಾದಸುಧಾರಸ ತಂಡದವರಿಂದ | ಗಾಯನ |
| 18.01.2020 ಶನಿವಾರ | ಸಂಜೆ 5.00 ಗಂಟೆಗೆ | ಸಂಸ್ಕೃತಿ ಸೆಂಟರ್ ಫಾರ್ ಫರ್‌ಫಾರ್ಮಿಂಗ್ ಆರ್ಟ್ಸ್, ಜಯನಗರ, ಬೆಂಗಳೂರು<br>ಶ್ರೀಮತಿ ಸುಚಿತ್ರಾ ಅಲಕಾನಂದ ನೇತೃತ್ವದಲ್ಲಿ | ಭರತನಾಟ್ಯ |
| 25.01.2020 ಶನಿವಾರ | ಸಂಜೆ 5.00 ಗಂಟೆಗೆ | ಶ್ರೀ ಭೈರಾರೆಡ್ಡಿ, ಪಾಳ್ಯ<br>ಶ್ರೀ ನರಸಿಂಹಪ್ಪ, ತುಮನಪಲ್ಲಿ – ಹಾರ್ಮೋನಿಯಂ<br>ಶ್ರೀ ವೆಂಕಟರಮಣಪ್ಪ, ತಂತಾರ್ಲಪಲ್ಲಿ – ತಬಲ | ಹರಿಕಥೆ |

**ಬಾಲಕೃಷ್ಣ ಭಾಗವತರ್**
ಸಂಯೋಜಕರು:
ಶ್ರೀ ಯೋಗಿನಾರೇಯಣ ಸಂಕೀರ್ತನಾ ಯೋಜನೆ




**ಡಾ|| ಎಂ.ಆರ್. ಜಯರಾಮ್**
ಧರ್ಮಾಧಿಕಾರಿಗಳು

## ಮಲ್ಲಾರ ಚಂದಾದಾರರಲ್ಲಿ ವಿನಂತಿ

ಮಲ್ಲಾರ ಕಛೇರಿಯಲ್ಲಿ ಹಂಚಿಕೆಯ ವಿಭಾಗದಿಂದ ಚಂದಾದಾರ/ಓದುಗರಿಗೆ 3ನೇ ದಿನಾಂಕದೊಳಗಾಗಿ ತಲುಪುವಂತೆ ಪತ್ರಿಕೆ ಕಳುಹಿಸಲಾಗುತ್ತಿದೆ. ಯಾವುದೇ ಕಾರಣದಿಂದ 1೦ನೇ ದಿನಾಂಕದೊಳಗಾಗಿ ತಲುಪದಿದ್ದರೆ ಸ್ಥಳೀಯ ಅಂಚೆ ಕಚೇರಿಯಲ್ಲಿ ವಿಚಾರಿಸಿ ಖಚಿತಪಡಿಸಿಕೊಳ್ಳಬೇಕು. ತಲುಪದ ಬಗ್ಗೆ ನಮ್ಮ ಕಛೇರಿಯ ಹಂಚಿಕೆ ವಿಭಾಗಕ್ಕೆ ಪೋಸ್ಟ್ ಕಾರ್ಡ್ ಮೂಲಕ 2೦ನೇ ದಿನಾಂಕದೊಳಗಾಗಿ ಲಿಖಿತವಾಗಿ ದೂರು ಸಲ್ಲಿಸಬೇಕು. ಪೋಸ್ಟ್ ಕಾರ್ಡ್‌ನಲ್ಲಿ ನಿಮ್ಮ ಗ್ರಾಹಕ ಸಂಖ್ಯೆ, ಸದಸ್ಯತ್ವ (ವಾರ್ಷಿಕ, ಪೋಷಕ ಇತ್ಯಾದಿ) ವಿಳಾಸವನ್ನು ಸ್ಪಷ್ಟವಾಗಿ ಬರೆದಿರಬೇಕು. ದೂರು ಬಂದ ನಂತರ ಆ ತಿಂಗಳ ಸಂಚಿಕೆಯನ್ನು ಮಾತ್ರ ನಂತರದ ತಿಂಗಳಿನ ಸಂಚಿಕೆಯೊಂದಿಗೆ ಪ್ರತ್ಯೇಕವಾಗಿ ಕಳುಹಿಸುವ ವ್ಯವಸ್ಥೆ ಮಾಡಲಾಗುತ್ತದೆ. ಇತರ ಹಳೆಯ ಸಂಚಿಕೆಗಳು ಲಭ್ಯವಿಲ್ಲ. ಅಂಚೆ ಅಧಿಕಾರಿಗಳನ್ನು ಸಂಪರ್ಕಿಸಲು ಅನುಕೂಲ ವಾಗುವಂತೆ ದೂರನ್ನು ಲಿಖಿತವಾಗಿ ಮಾತ್ರ ನೀಡಬೇಕಾಗಿ ವಿನಂತಿ: ಫೋನ್ ಕರೆ ಸಾಕಾಗುವುದಿಲ್ಲ. ಡಿ.ಡಿ./ಚೆಕ್‌ಗಳು 'Sri Yogi Nareyana Study Centre' ಹೆಸರಿನಲ್ಲಿ ಮಾತ್ರ ಕಳಿಸಬೇಕು; ಅಲ್ಲಿ ಬೇರೇನೂ ಇರಬಾರದು; ಕಾರ್ಯಾಲಯ ವಿಳಾಸಕ್ಕೆ ಕಳಿಸಬೇಕು.

ಸಂಪಾದಕರು.

ನಿವೃತ್ತ ಹಿರಿಯ ಬ್ಯಾಂಕ್ ಅಧಿಕಾರಿಗಳಾದ ಶ್ರೀ ಹೆಚ್.ವಿ. ಶ್ರೀನಿವಾಸ ಅವರ ಕಾವ್ಯನಾಮವೇ ಸಾಯಿಬಿಂದು. ಪ್ರಗತಿಪರ ಅಧ್ಯಾತ್ಮ ಚಿಂತಕರೂ ಉಪನ್ಯಾಸಕರೂ ಆಡಳಿತ, ತತ್ತ್ವಜ್ಞಾನ, ಧ್ಯಾನ, ವ್ಯಕ್ತಿತ್ವ ವಿಕಸನ, ಬ್ಯಾಂಕಿಂಗ್ ಮುಂತಾದ ಗಂಭೀರ ವಿಷಯಗಳನ್ನು ಕುರಿತು ಪುಸ್ತಕಗಳನ್ನು ರಚಿಸಿದ್ದಾರೆ. ಸಾಯಿ ಎಂದರೆ ಸಾಗರ. ಬಿಂದು ಎಂದರೆ ಹನಿ. ಸಾಯಿ ಎಂಬ ಸಾಗರದಲ್ಲಿ ತಾನು ಒಂದು ಹನಿ ಎಂದು ತಮ್ಮ ಕಾವ್ಯನಾಮದ ಬಗ್ಗೆ ವಿವರಣೆ ನೀಡುತ್ತಾರೆ. 'ವ್ಯಕ್ತಿತ್ವ ವಿಕಸನ ಲೇಖನ ಮಾಲೆ'ಯಲ್ಲಿ ಅವರ ಚಿಂತನೆಗಳನ್ನು ಕಾಣುವಿರಿ.



# ಆತ್ಮ ಶಕ್ತಿ ಬೆಳೆಸಿರಿ

ಪ್ರಾಪಂಚಿಕ ಮತ್ತು ವೃತ್ತಿಪರ ಜೀವನದಲ್ಲಿ ಕೆಲವೊಮ್ಮೆ ವಿನಾಕಾರಣ ಕಹಿ ಪ್ರಸಂಗಗಳು ಎದುರಾಗಬಹುದು. ಒಮ್ಮೆ ಸಂಭವಿಸಿದ ಒಂದು ಅನಿರೀಕ್ಷಿತ ಕರ್ಣಕಠೋರ ಘಟನೆಯ ನೆನಪು ಇದು. ಮೋಹ, ಅಜ್ಞಾನ, ಅಹಂಕಾರಗಳಿಂದ ಆವೃತರಾದ ಅವರಿಂದ ನನಗೆ, ಆಘಾತವಾಗುವಂತಹ ಸಿಡಿಲು–ಮಿಂಚಿನಂತಹ, ಹೃದಯವನ್ನೇ ಇರಿದು ರಕ್ತವನ್ನು ಸ್ರವಿಸುವಂತಹ ಕಹಿಮಾತುಗಳ ಸುರಿಮಳೆಯಾಯಿತು. ಆ ಕ್ಷಣ ನನಗೆ ಸ್ವಲ್ಪ ಬಾಧೆಯಾದರೂ ಅನಂತರ ಚೇತರಿಸಿಕೊಂಡೆ. ಅದಕ್ಕೆ ಪ್ರತಿಕ್ರಿಯೆಯಾಗಿ ತಿರುಗುಬಾಣಗಳನ್ನು ಬಿಡಲು ನನಗೆ ಸಾಮರ್ಥ್ಯವಿತ್ತು. ಆದರೆ ಅದು ಯೋಗ್ಯವೆನಿಸಲಿಲ್ಲ. ಅಧ್ಯಾತ್ಮ ಮತ್ತು ಧ್ಯಾನಗಳ ತೀವ್ರತೆಯನ್ನು ಹಂಬಲಿಸಿ, ಅವುಗಳಿಗಾಗಿ ಪ್ರಯತ್ನಿಸುತ್ತಿದ್ದ ನನ್ನ ಆತ್ಮಕ್ಕೆ ಯಾವ ಆಘಾತವೂ ಆಗಲಿಲ್ಲ. ಅದೊಂದು ದೈವಕೃಪೆ. ಅದೊಂದು ದೈವಪರೀಕ್ಷೆ. ದೇಹ–ಧರ್ಮದಲ್ಲಿ ಎಲ್ಲ ಅಶಾಂತಿಗಳೂ ಸಂಭವಿಸಬಹುದು. ಆದರೆ, ಆತ್ಮಧರ್ಮದಲ್ಲಿ ಯಾವ ಬಾಧೆ–ತಗಾದೆಗಳು ಇಲ್ಲ.

ಹತ್ತು ಮುಖಗಳ, ಹುಚ್ಚು ಪ್ರವಾಹದ ಚೂಪು ಮಾತುಗಳು ಹೊರಬಂದವು. ಅದಕ್ಕೆ ಪ್ರತಿಯಾಗಿ, ಒಂದೇ ವಿವೇಕದ ಮಾತನ್ನು ಆಡಿದರೂ ಸಹ, ಹತ್ತು ಕುತರ್ಕದ ಮಾತುಗಳು ಎದುರಾಗುವುದು ಸಂಭವವಿತ್ತು. ದಡ್ಡರಿಗೆ ತಿಳಿ ಹೇಳಬಹುದು. ಅವರನ್ನು ತಿದ್ದಲೂಬಹುದು. ಮೂರ್ಖರನ್ನು ತಿದ್ದುವ ಪ್ರಯತ್ನವು ಮೂರ್ಖತನವೇ ಆಗಿರುತ್ತದೆ. ಆ ಪ್ರಕೃತಿಯೇ ಅಂತಹವರನ್ನು ಕಾಲಾಂತರದಲ್ಲಿ ಸರಿಪಡಿಸಬೇಕು. ಮೌನವೇ ಸರಿ ಎಂಬುದು ವಿವೇಕದ ಮಾತೇನೋ ಸರಿ. ಆದರೆ, ವಾಸ್ತವಿಕದಲ್ಲಿ ಮೌನವು ಅನಿವಾರ್ಯವೇ ಆಗಿಬಿಡುತ್ತದೆ. ಮೌನವನ್ನೇ ಸಹಿಸದ ಜೀವಗಳಿಗೆ ಹಿಂಸೆಯೇ ಪರಮಪ್ರಿಯ. ಅವರಿಗೆ ಸ್ವರ್ಗವನ್ನೇ ಕೊಟ್ಟರೂ, ಅಂತಹವರು ಅರೆಕ್ಷಣದಲ್ಲಿ ಅದನ್ನು ನರಕವನ್ನಾಗಿ ಪರಿವರ್ತಿಸುವರು. ಕುಂಬಾರನಿಗೆ ಒಂದು ವರುಷ. ದೊಣ್ಣೆಗೆ ಒಂದೇ ನಿಮಿಷ.

ನನ್ನ ಒಳಮನವು ಸಾಂತ್ವನ ಹೇಳಿತು. ಅದು ದೈವವಾಣಿಯಂತೆ ಪರಿಶುದ್ಧವಾಗಿತ್ತು. "ಧ್ಯಾನ ಮಾಡುವವರು ಶಿವನ ಪುತ್ರರು. ಶಿವನು ಬಯಲ ಸ್ವರೂಪ, ಶೂನ್ಯ ಸ್ವರೂಪ, ಶಾಂತಸ್ವರೂಪ. ಹಾಗಾಗಿ ನಾನೂ ಸಹ ಶಿವನ ಪುತ್ರನೇ ಸರಿ. ಆದರೆ ನಾನಿನ್ನೂ ಆ ಶಿವನಂತೆ ಆಗಿಲ್ಲ. ಶಿವನಾಗುವಂತಹ ಬಯಕೆ, ತೀವ್ರತೆ ಇದೆ. ಪ್ರಯತ್ನವೇನೋ ಸಾಗಿದೆ. ಆದರೆ, ಪೂರ್ಣದರ್ಶನವು ಇನ್ನೂ ಆದಂತಿಲ್ಲ. ಜಗತ್ತು ಹೊರಹಾಕಿದ ಅಪಾರ ವಿಷವನ್ನು ಶಿವನು ಸೇವಿಸಿ, ತನ್ನ ಸಿರಿಕಂಠದಲ್ಲಿ ಇರಿಸಿಕೊಂಡ. ಆ ಕ್ಷಣದಲ್ಲಿ ಆ ಶಿವನಿಗೂ ಸಹ ಸಂಕಟವಾಗಿರಬಹುದು. ಅವನೇನಾದರೂ ಸ್ವೀಕರಿಸದೇ, ಹೊರಬಿಟ್ಟಿದ್ದಲ್ಲಿ; ಅದಕ್ಕೆ ಕಾರಣರಾದವರು ಪೂರ್ಣಧ್ವಂಸವೇ ಆಗಿಬಿಡಬಹುದಿತ್ತು. ಅವನು ಹಾಗೆ ಮಾಡಲಿಲ್ಲ. ಅವನು ಅದನ್ನು, ತನ್ನ ಉದರಕ್ಕೂ ಇಳಿಸಲಿಲ್ಲ. ಜಗನ್ನಾಥೆಯಾದ, ಸಂಕಟ ವಿಮೋಚನಿಯಾದ, ವಿಷ್ಣು ಸಹೋದರಿಯಾದ, ಆ ಪಾರ್ವತಿ ದೇವಿಯೇ, ಆ ಪರಮ ಕರುಣಾಮೂರ್ತಿ ಪರಮ ಶಿವನಿಗೆ ಅಮೃತ ಕವಚದಂತಾದಳು.

ಹಾಗೆಯೇ, ಅಂದು ನನಗೆ ಘಟಿಸಿದ ಒಂದು ಸಂಗತಿ. ನಾನು ಅದನ್ನು ತಾಳ್ಮೆಯಿಂದ, ಸಹಾನುಭೂತಿಯಿಂದ ಸ್ವೀಕರಿಸಿದೆ. ಅದನ್ನು ನಾನೇನಾದರೂ ಹಿಂತಿರುಗಿಸಿದ್ದರೆ, ಇತರರಿಗೆಲ್ಲ ಬಾಧೆ, ಸಂಕಟ, ಅಪಾಯ ಒದಗುವ ಸಂಭವವಿತ್ತು. ನಾನು ಅದನ್ನು ಹೊರಗೂ ಬಿಡಲಿಲ್ಲ; ನನ್ನ ಹೊಟ್ಟೆಯ ಒಳಗೆ ನುಸುಳಲೂ ಬಿಡಲಿಲ್ಲ. ಅದನ್ನು ನನ್ನ ಕಂಠದಲ್ಲೇ ಇರಿಸಿ, ನುಂಗಲು ಆಗದೆ, ಉಗುಳಲೂ ಆಗದೆ, ಬಿಸಿತುಪ್ಪವಾಗಿ ಪರಿಣಮಿಸಿತು. ಆ ದಗ್ಧಕಂಠ ಶಂಕರನು ದಯಾಮಯ. ಅದನ್ನು ನನ್ನ ಕಂಠದಲ್ಲೇ ಇರಿಸಲಿಲ್ಲ. ಅದನ್ನು ತನ್ನ ಸಿರಿಕಂಠದೊಳಗೇ ಹೀರಿಕೊಂಡುಬಿಟ್ಟ. ಆಗ ನಾನು ಖಾಲಿಯಾದೆ, ಶಾಂತನಾದೆ, ಮುಕ್ತನಾದೆ. ಕಿರಿಯ ಬಯಲು ಮಹಾಬಯಲಲ್ಲೇ ಸಮರಸವಾಯಿತು.

ಯಾರಾದರೂ ಅನಗತ್ಯವಾಗಿ, ಅಸತ್ಯಪೂರಿತವಾದ ಅವಾಚ್ಯ ಶಬ್ದಗಳನ್ನು ನುಡಿದರೆ, ಬುದ್ಧನು ಅವನ್ನು ತನ್ನ ಚೀಲಕ್ಕೆ ಸೇರಿಸುತ್ತಿರಲಿಲ್ಲ. ಅವನು ಸದಾ ಖಾಲಿ, ಶಾಂತ, ನಿಶ್ಚಿಂತ. ಶಿವನ ಕರುಣೆಯಿಂದ, ಬುದ್ಧನ ಕರುಣೆಯಿಂದ, ನಾವೂ ಸಹ ಸದಾ ಖಾಲಿ ಇರಲು ಪ್ರಯತ್ನಿಸಬೇಕು; ನಿಶ್ಚಿಂತರಾಗಿರಬೇಕು. (ವ್ಯವಹಾರ ಧರ್ಮದಲ್ಲಿ ಕಾರ್ಯ ಪ್ರವೃತ್ತರಾದವರಿಗೆ ಯುಕ್ತಾಯುಕ್ತ ಪಾತ್ರಾಭಿನಯಗಳು ಇರುತ್ತವೆ. ಆದರೆ ಅಂತರಂಗದಲ್ಲಿ ಖಾಲಿಯಾಗಿರಬೇಕು ಎಂಬುದೇ ಇಂಗಿತ)

ಜಗತ್ತಿನ ಯಾವ ವ್ಯಕ್ತಿ, ವಸ್ತು, ವಿಶೇಷಗಳಾಗಲಿ, ಅದಕ್ಕೂ ನಮಗೂ ಯಾವ ನಿಜ ಸಂಬಂಧವೂ ಇರುವುದಿಲ್ಲ. ಎಲ್ಲವೂ ಚಲಿಸುವ ಮೋಡಗಳು. ಆಕಾಶವು ಎಂದೆಂದಿಗೂ ಖಾಲಿ ಮತ್ತು ಸಾಕ್ಷಿ. ಜನ್ಮ–ಮರಣಗಳಿಗೆ, ಸುಖ–ಸಂಕಟಗಳಿಗೆ ತುತ್ತಾಗುವ, ದೇಹ–ಮನ ಬುದ್ಧಿಗಳು ಸತ್ಯವೂ ಅಲ್ಲ, ಶಾಶ್ವತವೂ ಅಲ್ಲ. ನಾನು ನಿಜಕ್ಕೂ ಆತ್ಮ–ಶಿವ. ಇದು ಸಹಜ ಸಿದ್ಧವಾಗಬೇಕಾದರೆ, ಬಹುಶಃ ಅದು, ಧ್ಯಾನವೊಂದರಿಂದಲೇ ಸಾಧ್ಯ.

ಧ್ಯಾನದಲ್ಲಿ ನಾನು ನಾನೇ. ನನ್ನನ್ನು ಹೊರತುಪಡಿಸಿ, ಬೇರೆ ಯಾರೂ ಇಲ್ಲ; ಏನೂ ಇಲ್ಲ. ತೋರಿಕೆಯಲ್ಲಿ ಮಾತ್ರ ಎಲ್ಲ ಸಂಬಂಧಗಳು. ಇರುವಿಕೆಯಲ್ಲಿ ಅಸ್ತಿತ್ವವು ಒಂದೇ. ವಿಭಾಗಿಸಿ ನೋಡಿದಾಗ, ನಾನು ಬೇರೆ, ಪ್ರತ್ಯೇಕ. ಸಮಗ್ರದಲ್ಲಿ ನಾನು ಒಂದೇ. ಆ ಅಸ್ತಿತ್ವವೇ ನಾನು.

"ನಾನು" ಎಂದು ಹೇಳುವುದೂ ತಿಳಿಯುವುದೂ ಕಷ್ಟಸಾಧ್ಯವೇ. ಆದರೆ, "ಭಗವಂತ" ಎಂದಾದರೂ ಹೇಳಬಹುದು. ಭಗವಂತನೊಬ್ಬನೇ ಇರುವುದು. ಆತನ ಲೀಲೆಯಲ್ಲಿ, ಮಾಯೆಯಲ್ಲಿ, ಸೂತ್ರದಲ್ಲಿ ಎಲ್ಲವೂ ಬೇರೆ ಬೇರೆಯಂತೆಯೇ ಮೆರೆಯಬಹುದು. ತೋರುವುದೆಲ್ಲವೂ ಕಾಲಾಂತರದಲ್ಲಿ ಅಡಗುವುದು. ತೋರುವುದನ್ನೇ ಸತ್ಯವೆಂದು ನಂಬಿ ನಡೆಯುವ ಜನರು, ಮೋಹ ಪ್ರಪಂಚಕ್ಕೆ ಅಂಟಿಕೊಂಡವರು ಮತ್ತು ಕರ್ಮಲೇಪನಗಳನ್ನು ಹಚ್ಚಿಕೊಂಡು ನಲುಗುವರು. ಅಂತಿಮ ಘಟ್ಟದ ಸಾಧನೆಯಲ್ಲಿ ತನ್ನನ್ನು ತಾನು, ಭಗವಂತನಲ್ಲೇ ಲೀನವಾಗಿರಿಸಿಕೊಂಡು, ಅವನಲ್ಲೇ

ಸಮರಸಗೊಂಡಾಗ, ಇರುವುದೆಲ್ಲವೂ ಒಂದೇ ಅಸ್ತಿತ್ವ, ಒಂದೇ ಭಗವಂತ ಎಂಬ ಅನುಭೂತಿಯಾಗಬಹುದು. ಅದೇ ಜಾಗೃತ ಪ್ರಜ್ಞೆ, ಅಖಂಡ ಪ್ರಜ್ಞೆ, ನಿರಂತರ ಪ್ರಜ್ಞೆ.

ಶಿವನು, ಬೇಡಿದ ವರಗಳನ್ನೆಲ್ಲ ಕೊಡುವವನು ಎಂಬುದು ಪುರಾಣ ಕಥೆಗಳ ಇಂಗಿತ. ಅದಕ್ಕೆ ಬೇಡುವ ಜನರು ಎಷ್ಟಿನ ಮಟ್ಟಿನವರು? ಕಳಪೆ ಬುದ್ಧಿಗಳಲ್ಲಿ, ಬೇಡಬಾರದುದನ್ನೆಲ್ಲ ಬೇಡುವರು. ಅವು ಹರಿಕೆ–ಕುರಿಕೆಗಳೇ ಆಗಿರಬಹುದು. ಅವು ತಮಗೆ, ತಮ್ಮ ಯಾವುದೊ ಮರೆತಿರುವ ಕ್ಷಣದಲ್ಲಿ ದಕ್ಕಿದಾಗ, ಅವರು ಹಿರಿಹಿರಿ ಹಿಗ್ಗಿ ಮೆರೆಯುವರು. ತಾವೇ ಧಾರ್ಮಿಕ ಮಹಾಜನ ಎಂಬುದಾಗಿ ಬೀಗುವರು. ತಮ್ಮಲ್ಲಿರುವ ವಿಷವನ್ನು, ಇತರರ ಮೇಲೆ ಕಾರುವರು. ಆ ಇತರರೂ ಸಹ, ತಮ್ಮ ವಿಷವನ್ನು ಇವರುಗಳ ಮೇಲೆ ಪ್ರತಿಯಾಗಿ ಕಾರುವರು. ಎಲ್ಲವೂ ಪರಸ್ಪರ ಕಾಲೆಳೆಯುವುದು. ಎಲ್ಲವೂ ಪೈಪೋಟಿ (ಖಿಖಖಿ ಈಂಡಿ ಖಿಂಖಿ). ಒಟ್ಟಿನಲ್ಲಿ ಆ ಕಲ್ಮಷಗಳು, ಅವರವರ ಹೊಟ್ಟೆಗಳಿಗೆ ಸೇರಿಕೊಂಡು, ಅವರವರೇ ಉದರಬೇನೆಯನ್ನು ಅನುಭವಿಸುವರು. ಹಿಂಸೆಗೆ ಪ್ರತಿಹಿಂಸೆ. ಇದೊಂದು ಮೋಜು. ಇದೊಂದು ವಿಪರ್ಯಾಸ.

ಪೆಟ್ಟುಗಳಿಂದಲೂ ಪಾಠ ಕಲಿಯದ ಈ ಮೂರ್ಖರು ಮತ್ತೆ ಮತ್ತೆ ಬೇಡುವರು, ಕಾಡುವರು. ಹಾಗೆ ಒದಗಿದ ತಾತ್ಕಾಲಿಕ ಶೀಘ್ರ ಫಲಗಳಿಂದ, ಸುಖವೆಂಬ ಭ್ರಮೆಯಲ್ಲಿ ಬಿದ್ದು ಮೈ ಮರೆಯುವರು. ಅಂತಹವರಿಗೆ ಧ್ಯಾನ ಮಾಡುವವರನ್ನು ಕಂಡರೂ ಸಹ, ಅದೇನೋ ಕೀಳರಿಮೆ, ಅಸೂಯೆ, ಅಸಮಾಧಾನ, ಹೊಟ್ಟೆಯ ಉರಿ. ಅಂತಹವರ ಮೇಲೆ ಇಲ್ಲದ ಸಲ್ಲದ ಆರೋಪಗಳು. ಆದರೆ ಧ್ಯಾನಿಗೆ ಅವು ಅನಿವಾರ್ಯ. ಅಂತಹ ಪರೀಕ್ಷೆಗಳನ್ನು ದಾಟಿದಾಗ ಮಾತ್ರ, ಶಿವನ ಸಾಮೀಪ್ಯ, ಸಾಯುಜ್ಯ. ಹಾಗೆ ಒದಗಿದ ಸಂಕಟಗಳೂ ಸುಕೃತ ಜೀವಿಗಳಿಗೆ, ಸಂತ–ಸಜ್ಜನರಿಗೆ, ಶಾಪವಾಗಿರದೆ, ಅವು ದಿವ್ಯವರಗಳೇ ಆಗಿರಬಹುದು.

ಸತ್ಯಕ್ಕೆ ಬೆಲೆಯನ್ನು ತೆರಲೇಬೇಕು. ಅದು ಬೇಡವೆಂದರೆ, ಅಸತ್ಯದಲ್ಲೇ ವಿರಮಿಸುತ್ತಾ, ದೂರುತ್ತಾ, ದೂಷಿಸುತ್ತಾ, ಹೆಣಗುತ್ತಾ, ಹಿಂಸಿಸುತ್ತಾ, ಕೊರಗುತ್ತಾ, ದ್ವೇಷ ಮಸೆಯುತ್ತಾ, ಜನ್ಮ–ಜನ್ಮಾಂತರಗಳ, ಹುಟ್ಟು–ಸಾವುಗಳ ಚಕ್ರದಲ್ಲೇ ಬಿದ್ದು ಹೊರಳಾಡುತ್ತಾ ಇರಬೇಕು.

ಸತ್ಯಹರಿಶ್ಚಂದ್ರನ ಉದಾಹರಣೆಯು ಅಪ್ರತಿಮ. ಲೋಕವಂದಿತರಾದ, ಪರಮಶ್ರೇಷ್ಠ ವಿಶ್ವಾಮಿತ್ರ ಮಹಾಮುನಿವರ್ಯರಿಂದಲೇ ಹರಿಶ್ಚಂದ್ರನಿಗೆ ಸಹಿಸಲಾರದಂತಹ ಕಾಟಗಳು. ಮಗನನ್ನೂ ಹೆಂಡತಿಯನ್ನೂ ಸತ್ಯಕ್ಕಾಗಿ ಬಲಿ ಕೊಡಲೇಬೇಕಾಯಿತು. ಕಳೆದುಕೊಂಡ ಸಮಸ್ತವನ್ನೂ ಮತ್ತೆ ಪಡೆದುಕೊಳ್ಳುವುದೇ ಅಲ್ಲದೆ, ಅವನು ಶಿವನ ಮಹಾಕೃಪೆಗೆ ಒಳಗಾದನೆಂಬುದು ಪುರಾಣ ಕಥೆ.

"ಧರ್ಮ ಸಂಸ್ಥಾಪನಾರ್ಥಾಯ ಸಂಭವಾಮಿ ಯುಗೇ ಯುಗೇ" ಎಂದು ಅರುಹಿದ, ಜಗದ್ಗುರು ಶ್ರೀಕೃಷ್ಣ. ಸಮಾಜವು ಉಳಿಯಬೇಕಾದರೆ ಸರ್ವರೂ ಅನುಸರಿಸಬೇಕಾದ ಧರ್ಮವು ಬೇಕು. ಅದೊಂದು ಸಾಮಾನ್ಯ ಧರ್ಮ. ಅಂತಹ ಧರ್ಮದ ಚೌಕಟ್ಟು ಇದ್ದರೂ ಸಹ, ಜೊತೆ ಜೊತೆಗೇ, ಅಧರ್ಮಿಗಳು ಸಹ ಇದ್ದೇ ಇರುತ್ತಾರೆ. ಸಮಾಜದಲ್ಲಿ ಏರುಪೇರುಗಳಾದರೂ ಸಹ, ಸಮಾಜವನ್ನು ಸರಿತೂಗಿಸುವ, ಅಭೂತ ಸಮತೋಲನಶಕ್ತಿಯೂ ಇರುತ್ತದೆ. ದೈವವು ತನ್ನ ಪಾಕಶಾಲೆ ಮತ್ತು ಪ್ರಯೋಗಶಾಲೆಗಳಲ್ಲಿ ಎಲ್ಲ ತರಹೆಯ ಸಾಮಗ್ರಿಗಳನ್ನೂ ಇಟ್ಟಿರುತ್ತದೆ. ಮೆಣಸಿನಕಾಯಿ ಬಹು ಖಾರವೆಂದು ದೂರುವುದು ಮೂರ್ಖತನ. ಬೆಲ್ಲದ ಸಿಹಿಯೂ ಸಹ ಇರುತ್ತದೆ. ಸಂದರ್ಭಗಳಿಗೆ ತಕ್ಕಂತೆ, ಆ ಸಾಮಗ್ರಿಗಳ ಉಪಯೋಗ. ರಾವಣನಿಲ್ಲದಿದ್ದರೆ, ರಾಮನಿಗೆ ಯಾವ ಬೆಲೆ ಬಂದೀತು?

ಸಾಮಾನ್ಯ ಧರ್ಮವನ್ನೇ ಸರ್ವಧರ್ಮವೆಂದು ಬೀಗುವವರು ಅತಿ ಸಾಮಾನ್ಯರೇ ಸರಿ. ಧರ್ಮದ ಹೆಸರಿನಲ್ಲಿ ಕಂದಾಚಾರಗಳಲ್ಲಿ ಮುಳುಗಿ, ಹಿಂಸಾಚಾರಗಳಲ್ಲಿ ತೊಡಗಿ, ಪರಮ ವೈರಾಗ್ಯಶಾಲಿಗಳೆಂದು ತೋರುತ್ತಾ, ಮಾಡಬಾರದ್ದನ್ನೇ ಮಾಡುವವರು ವಿರಳವೇನಲ್ಲ. ಆದರೆ, ಒಂದು ಮಾತ್ರ ಸತ್ಯ. ಆತ್ಮಸಾಕ್ಷಾತ್ಕಾರವಾಗಬೇಕಾದರೆ, ದೈವ ಕೃಪೆ ಉಂಟಾಗಬೇಕಾದರೆ, ವಿಶೇಷ ಧರ್ಮವೇ ಬೇಕು.

ಬಹುಶಃ ವಿಶೇಷ ಧರ್ಮದ ಅನಿವಾರ್ಯಕ್ಕಾಗಿಯೇ ಶ್ರೀಕೃಷ್ಣನು ವಿಭಿನ್ನವಾದ ಮತ್ತೊಂದು ಸಂದೇಶವನ್ನು ಕೊಟ್ಟ. ಅದೇ "ಸರ್ವ ಧರ್ಮಾನ್ ಪರಿತ್ಯಜ್ಯ, ಮಾಮೇಕಂ ಶರಣಂ ವ್ರಜ" ಎಂಬುದು.

"ಪತ್ರಂ ಪುಷ್ಪಂ ಫಲಂ ತೋಯಂ" ಎಂಬುದಾಗಿ ತಿಳಿಸಿ, ಭಕ್ತಿಯ ಪರಾಕಾಷ್ಠತೆಯ ಅಂತಿಮ ರಹಸ್ಯವನ್ನೂ ತಿಳಿಸಿದ.

ಶರಣಾಗತಿಯ ಮುಂದೆ, ಇತರೆ ಯಾವ ಧರ್ಮವೇ ಆಗಲಿ, ಕಟ್ಟಳೆಗಳಾಗಲಿ, ಪದ್ಧತಿಗಳಾಗಲಿ ಬೇಕಾಗಿರುವುದಿಲ್ಲ. ಅವು ಪ್ರಾಥಮಿಕ ಮೆಟ್ಟಿಲುಗಳು. ಶರಣಾಗತಿ ಮಾರ್ಗವನ್ನು ಹಿಡಿದವರು ಸಂತ ಮಹಾಜನ. "ಬಂದದ್ದೆಲ್ಲ ಬರಲಿ–ಗೋವಿಂದನ ದಯೆ ಇರಲಿ." "ಹಾಲಲ್ಲಾದರೂ ಮುಳುಗಿಸು, ನೀರಲ್ಲಾದರೂ ಮುಳುಗಿಸು, ನಿನ್ನ ಕಾಲಿಗೆ ಬಿದ್ದೆನೋ ಪರಮ ದಯಾಳೋ." "ನಂಬಿ ಕೆಟ್ಟವರಿಲ್ಲವೊ ರಂಗಯ್ಯನಾ; ನಂಬದೇ ಕೆಟ್ಟರೆ ಕೆಡಲಿ", "ಎಲ್ಲವೂ ನಿನ್ನ ಇಚ್ಛೆ". ಹೀಗೆ ಇವು ದಾಸರ ಪದಗಳು.

ಬಾಹ್ಯಾಚರಣೆಗಳಿಗಿಂತಲೂ ಹಬ್ಬ ಹುಣ್ಣಿಮೆಗಳಿಗಿಂತಲೂ ಮಿಗಿಲಾದ ನಿತ್ಯಸಂಭ್ರಮವು ನಿತ್ಯ ಮಾನಸಪೂಜೆಯಾದ "ಶರಣಾಗತಿ ಧರ್ಮವೇ". ಅದೇ ಶ್ರೇಷ್ಠ ಸಾಧನೆ. ಅದೇ ವಿಶೇಷ ಧರ್ಮ. ಅದು ವಿಶೇಷರಿಗೆ ಮಾತ್ರ. ಅದು ಹೇಡಿಗಳಿಗೆ, ಪುಕ್ಕಲರಿಗೆ, ಪೈಶಾಚಿಕ ಬುದ್ಧಿಯುಳ್ಳವರಿಗೆ, ಸ್ವಾರ್ಥಿಗಳಿಗೆ ಕನಸಿನ ಮಾತೇ ಸರಿ. ಅಂತಹವರಿಗೆ, ಯಾವುದೋ ಸಾಮಾನ್ಯ ಪದ್ಧತಿ, ಆಚರಣೆ, ನಂಬಿಕೆ ಇದ್ದರೆ ಸಾಕು. ಅಂತಹವರು ಜನ್ಮ–ಮರಣ ಚಕ್ರದ ಸುಳಿಯಲ್ಲೇ ತಿರುಗುತ್ತಾ, ನಲುಗುತ್ತಾರೆ. ಶರಣಾಗತಿ ಧರ್ಮವು ಧೀರರಿಗೆ ಮಾತ್ರ ಸಾಧ್ಯ. ಎಲ್ಲವೂ ಅವರವರ ಮನೋಸ್ಥಿತಿ, ಕಾಲಚಕ್ರ; ವಿಧಿನಿಯಮ.

ನಮ್ಮ ಸುತ್ತಲೂ ಅನೇಕ ರೋಗಾಣುಗಳು (ಗಿಡಿಞ) ಸುತ್ತುತ್ತಿರುತ್ತವೆ. ನಾವು ಬಲಿಷ್ಠರಾಗಿದ್ದರೆ, ಅವುಗಳ ಪ್ರವೇಶ, ಆಕ್ರಮಣ, ಪರಿಣಾಮ ಇರುವುದಿಲ್ಲ. ನಾವೇನಾದರೂ ದುರ್ಬಲರಾದರೆ, ಅವುಗಳಿಗೆ ಹಬ್ಬ. ಆದರೆ ಒಮ್ಮೊಮ್ಮೆ ಬಲಿಷ್ಠರಾದರೂ ಸಹ ಯಾವುದೋ ಅನಿರೀಕ್ಷಿತ ಗಳಿಗೆಯಲ್ಲಿ, ಅಂತಹ ರೋಗಾಣುಗಳಿಗೆ ತುತ್ತಾಗಬಹುದು. ಕಾರಣ, ನಮ್ಮ ದೇಹದ ಒಳಗೇ ಕೆಲವೊಂದು ರೋಗಾಣುಗಳು ಹುದುಗಿ ನಿದ್ರಿಸುತ್ತಿರುತ್ತವೆ. ಯಾವುದೋ ಅವಕಾಶವು ಒದಗಿದಾಗ, ಅವು ಎಚ್ಚರಗೊಂಡು ತಮ್ಮ ಕಾರ್ಯಗಳನ್ನು ಸಾಧಿಸಿಕೊಳ್ಳುತ್ತವೆ.

ಏನೇ ಆಗಲಿ, ಅವು ಯಾವುದೂ ನಮ್ಮನ್ನು ಬಾಧಿಸಬಾರದು. ನಾವು ದೇಹದಿಂದ ಬಲಿಷ್ಠರಾಗಲು ಸಾಧ್ಯವಾಗದಿದ್ದರೂ ನಮ್ಮ ಆತ್ಮಶಕ್ತಿಯನ್ನು ಬಲಗೊಳಿಸಬೇಕು. ಆತ್ಮನಿಷ್ಠರಾಗಬೇಕು. ಆಗ, ಯಾವುದೇ ಹೊರಗಿನ ಆಗುಹೋಗುಗಳೂ ನಮ್ಮನ್ನು ಅಧೀರರನ್ನಾಗಿ ಮಾಡುವುದಿಲ್ಲ.

ಅಧ್ಯಾತ್ಮ ವಿದ್ಯೆ ಇರುವುದು ಧೀರರಿಗೆ ಮಾತ್ರ; ಜಾಗೃತರಾಗಿರುವವರಿಗೆ ಮಾತ್ರ. ಅದಕ್ಕೆ ಸಂಜೀವಿನಿ ಎಂದರೆ ಧ್ಯಾನ. ಧ್ಯಾನಾಮೃತಪಾನ ಮಾಡಿದವರಿಗೆ ಎಲ್ಲವೂ ಸೋಪಾನ, ಆಪ್ಯಾಯಮಾನ. ತಸ್ಮಾತ್ ಜಾಗೃತ, ಜಾಗೃತ.

**ಮುಂದುವರಿಯುವುದು)**

---

**'ಮೈತ್ರೇಯಿ' ೧೮೯೮ಲ, ೭ನೇ ಮುಖ್ಯರಸ್ತೆ, 'ಇ' ವಿಭಾಗ, ೨ನೇ ಹಂತ, ರಾಜಾಜಿನಗರ (ಸುಬ್ರಮಣ್ಯನಗರ) ಬೆಂಗಳೂರು–೫೬೦ ೦೧೦.**

# ಮಾಯೆಯ ಆಕ್ರಮಣ ನಿಂತಾಗ ನಿಶ್ಚಲತತ್ತ್ವ



ಕಾರ್ಯಕ್ರಮ ಉದ್ಘಾಟನೆ

ಕೈವಾರ ಕ್ಷೇತ್ರದ ಧರ್ಮಾಧಿಕಾರಿ ಡಾ. ಎಂ.ಆರ್. ಜಯರಾಮ್‌ರವರ ಅಭಿಪ್ರಾಯ

ಕೈವಾರದ ಶ್ರೀಯೋಗಿನಾರೇಯಣ ಮಠದ ವತಿಯಿಂದ ಬೆಂಗಳೂರು ಯಲಹಂಕದ ಶೇಷಾದ್ರಿಪುರಂ ಪದವಿ ಕಾಲೇಜಿನ ಸಭಾಂಗಣದಲ್ಲಿ ಹಮ್ಮಿಕೊಳ್ಳಲಾಗಿದ್ದ ಧರ್ಮ ಚಿಂತನೆ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಧರ್ಮಾಧಿಕಾರಿಗಳು, “ಮಾನವನ ಸಾಧಕ ಬಾಧಕಗಳಿಗೆ ಕಾರಣ ಮನಸ್ಸು. ಈ ಮನಸ್ಸಿನ ಮೇಲೆ ನಡೆಯುವ ಮಾಯೆಯ ಆಕ್ರಮಣವು ನಿಂತಾಗ ಮಾತ್ರ ನಿಶ್ಚಲವಾದ ತತ್ತ್ವ ಗೋಚರವಾಗುತ್ತದೆ. ಮನಸ್ಸಿನ ಅಜ್ಞಾನವನ್ನು ಹೋಗಲಾಡಿಸಲು ಇರುವ ಮಾರ್ಗವೆಂದರೆ ಗುರುವಿನ ಉಪದೇಶ. ಗುರುವಿನ ಉಪದೇಶ ಅಂತರಂಗದ ಉಪದೇಶ. ಇದು ಸಾಮಾನ್ಯವಾದುದಲ್ಲ. ಈ ಉಪದೇಶ ಅನುಭವದ ಸಾಧನೆಯಿಂದ ಬಂದಿರುವ ಉಪದೇಶ. ಈ ಉಪದೇಶವನ್ನು ಎಲ್ಲರೂ ಮಾಡಲು ಸಾಧ್ಯವಾಗುವುದಿಲ್ಲ. ಎಲ್ಲ ಅವಿದ್ಯೆಗಳು ಹಾಗೂ ಕರ್ಮಗಳು ನಾಶವಾದನಂತರ ಏಕಾಗ್ರತೆಯಿಂದ ನಿಶ್ಚಲವಾದ ಮನಸ್ಸಿನಿಂದ ಪರಮಾತ್ಮನನ್ನು ಧ್ಯಾನಿಸಿದಾಗ ಮಾತ್ರ ಆತ್ಮಬೋಧೆಯ ಉಪದೇಶಗಳನ್ನು ನೀಡಲು ಸಾಧ್ಯವಿದೆ. ಸ್ಥೂಲ ಮತ್ತು ಸೂಕ್ಷ್ಮವಾದ ಶರೀರದ ಬಗ್ಗೆ ಅರಿವನ್ನು ಹೊಂದಬೇಕು. ಸ್ಥೂಲ ಶರೀರ ನಾಶವಾಗುತ್ತದೆ. ಸೂಕ್ಷ್ಮ ಶರೀರ ಕರ್ಮಗಳನ್ನು ಅನುಭವಿಸುತ್ತದೆ. ನಾವು ಸ್ಥೂಲ ಶರೀರದಲ್ಲಿ ಆಸಕ್ತಿಯನ್ನು ಹೊಂದಿದ್ದೇವೆ ಆದರೆ ಸೂಕ್ಷ್ಮ ಶರೀರವನ್ನು ಚಿಂತಿಸಬೇಕು ಅರ್ಥವನ್ನು ಮಾಡಿಕೊಳ್ಳಬೇಕು. ಈ ಅಂತರಂಗದ ವಿಚಾರಗಳನ್ನು ತಾತಯ್ಯನವರು ಆತ್ಮಬೋಧಾಮೃತದಲ್ಲಿ ಉಪದೇಶಿಸಿದ್ದಾರೆ. ಅಂತರಿಂದ್ರಿಯ ಹಾಗೂ ಬಹಿರಿಂದ್ರಿಯಗಳನ್ನು ನಿಗ್ರಹಿಸದ ಹೊರತು ಮಾಯೆಯ ಆಕ್ರಮಣವನ್ನು ಹೊಡೆದೊಡಿಸಲು ಸಾಧ್ಯವಿಲ್ಲ. ಕಣ್ಣಿಗೆ ಕಾಣುವ ಬಹಿರಂಗದ ಮಾಯಾ ಜಗತ್ತನ್ನು ನಂಬಿ ಮೋಸಹೋಗಬಾರದು. ಪ್ರಾಪಂಚಿಕ ವಿಷಯಗಳಲ್ಲಿ ಆಸಕ್ತನಾಗಿ ಜೀವನಪೂರ್ತಿ ಸವೆಸಿ ದೇಹಾಂತ್ಯವಾಗುವ ಸಮಯದಲ್ಲಿ ಸಂಪಾದಿಸಿದ ನಿಧಿ, ಆಸ್ತಿ ಯಾವುದೇ ಹಿಂದೆ ಬರುವುದಿಲ್ಲ. ಈ ಸತ್ಯವನ್ನು ಅರಿತು ಆತ್ಮೋದ್ಧಾರಕ್ಕಾಗಿ ಹಾಗೂ ಸಮಾಜದ ಒಳಿತಿಗಾಗಿ ನಿಷ್ಕಾಮ ಕರ್ಮಿಯಾಗಿ ಕೆಲಸ ಮಾಡಬೇಕು” ಎಂದರು.

“ಭಕ್ತಿಯ ಬಾಹ್ಯಾಡಂಬರದಿಂದ ಮುಕ್ತಿ ಸಿಗುವುದಿಲ್ಲ. ಯಾರಾದರೆ ಸಂಸಾರ ಸಾಗರದಲ್ಲಿ ಮುಳುಗಿದ್ದಾರೋ, ಆಸೆಪಾಸೆಗಳಲ್ಲಿ ಸಿಲುಕಿದ್ದಾರೋ, ಸದಾ ದುಃಖದಲ್ಲಿದ್ದಾರೋ ಅವರು ಅಜ್ಞಾನಿಗಳು. ಅಂತರಂಗದ ಸಾಧನೆ ಶ್ರೇಷ್ಠವಾದುದು. ಅಂತರಂಗದ ಚಂಚಲತೆಯನ್ನು ಹತೋಟಿಗೆ ತಂದುಕೊಳ್ಳಬೇಕು. ಅಂತರಂಗದಲ್ಲಿ ದ್ವೇಷ, ಅಸೂಯೆ, ಸ್ವಾರ್ಥ ಮುಂತಾದ ಕಲ್ಮಷವನ್ನು ತೆಗೆದು, ಅಲ್ಲಿ ಭವ್ಯವಾದ ಮಂದಿರವನ್ನು ನಿರ್ಮಿಸಿ, ಮಾನಸಪೂಜೆಯನ್ನು ನಿರಂತರವಾಗಿ ಮಾಡಬೇಕು. ಗುರುವಿನ ಮಾರ್ಗದರ್ಶನವಿಲ್ಲದೆ ಅಂತರಂಗದ ಸಾಧನೆ ಸಾಧ್ಯವಿಲ್ಲ. ಮಾನವಜನ್ಮದಲ್ಲಿ ಪ್ರತಿಯೊಬ್ಬರೂ ಗುರುಭಕ್ತಿಯಲ್ಲಿ ತೊಡಗಬೇಕು. ಗುರುಭಕ್ತಿಯಿಂದ ಆತ್ಮಚಿಂತನೆ ಪ್ರಾರಂಭವಾಗುತ್ತದೆ. ಆತ್ಮಚಿಂತನೆಯಿಂದ ಆತ್ಮಜ್ಞಾನವು ಸಿಗುತ್ತದೆ. ಹಲವಾರು ಶಾಸ್ತ್ರಗಳ ಓದಿಗಿಂತಲೂ ಆತ್ಮಜ್ಞಾನ ಪವಿತ್ರವಾದುದು ಹಾಗೂ ಶ್ರೇಷ್ಠವಾದುದು. ಗುರುವಿನ ಮೂಲಕ ಆತ್ಮವನ್ನು ಅಂತರಂಗಕ್ಕೆ ಕರೆದುಕೊಂಡು ಹೋಗಿ ಶುದ್ಧಿಯನ್ನು ಮಾಡುವುದೇ ಆತ್ಮಬೋಧನೆ. ಧರ್ಮದ ಜಾಗೃತಿಯನ್ನು ಮೂಡಿಸುತ್ತಾ, ಸತ್ಯವಾದ ಧರ್ಮವನ್ನು ಅನುಷ್ಠಾನಗೊಳಿಸುವುದೇ ಧರ್ಮ ಚಿಂತನೆ ಕಾರ್ಯಕ್ರಮದ ಉದ್ದೇಶ” ಎಂದರು.

**ಅಂತರಂಗದ ಅನ್ವೇಷಣೆ:** ಅಂತರಂಗದ ಶೋಧನೆ ಬಹಳ ಮುಖ್ಯವಾದುದು ಎಂಬುದಕ್ಕೆ ಧರ್ಮಾಧಿಕಾರಿಗಳು ಹೇಳಿದ ಒಂದು ಕಥೆ ಹೀಗಿದೆ, “ತಮಿಳುನಾಡಿನ ರಾಜ್ಯದಲ್ಲಿ ಪಲ್ಲವರಾಜನೊಬ್ಬನಿದ್ದ.

ರಾಜ ಈಶ್ವರನ ಪರಮ ಭಕ್ತ. ನನ್ನ ಮನೆದೇವರಾದ ಈಶ್ವರನಿಗೆ ಒಂದು ದೊಡ್ಡ ದೇವಸ್ಥಾನವನ್ನು ಕಟ್ಟಬೇಕು. ರಾಜ್ಯದಲ್ಲಿ ಇದಕ್ಕಿಂತಲೂ ದೊಡ್ಡ ದೇವಸ್ಥಾನ ಯಾವುದೂ ಇರಬಾರದು ಎಂದು ನಿಶ್ಚಯಿಸಿದನು. ರಾಜನು ರಾಜಗುರುಗಳ ಅಪ್ಪಣೆಯನ್ನು ಪಡೆದು ದೊಡ್ಡ ದೇವಾಲಯದ ನಿರ್ಮಾಣ ಕಾರ್ಯದಲ್ಲಿ ಮಗ್ನನಾಗುತ್ತಾನೆ. ಉತ್ತಮ ಶಿಲ್ಪಿಗಳನ್ನು ಕರೆಸಿ ವಿನೂತನವಾದ ದೇವಾಲಯವನ್ನು ನಿರ್ಮಿಸಲಾಗುತ್ತದೆ. ಇನ್ನೂ ಈಶ್ವರ ಲಿಂಗದ ಪ್ರತಿಷ್ಠಾಪನಾ ಕಾರ್ಯ ನಡೆಯಬೇಕು. ಪ್ರತಿಷ್ಠಾಪನೆಯ ದಿನಾಂಕ, ಸಮಯವನ್ನು ನಿಗದಿಮಾಡಿಕೊಂಡು ಮತ್ತೆ ಗುರುಗಳ ಬಳಿ ಬಂದು ಈಶ್ವರ ಲಿಂಗವನ್ನು ಪ್ರತಿಷ್ಠಾಪನೆ ಮಾಡಲು ಅಪ್ಪಣೆಯನ್ನು ಕೇಳುತ್ತಾನೆ. ಆಗ ರಾಜಗುರುಗಳು, 'ರಾಜ ಇಂದು ರಾತ್ರಿ ಈ ವಿಚಾರವನ್ನೇ ಚಿಂತಿಸುತ್ತಾ ಮಲಗು, ಬೆಳಗ್ಗೆ ಎದ್ದ ಅನಂತರ ಯಾವ ಆಲೋಚನೆ ಬರುತ್ತದೋ ಆ ರೀತಿಯಂತೆ ನಡೆದುಕೋ' ಎನ್ನುತ್ತಾರೆ. ರಾಜ ಅರಮನೆಗೆ ಬಂದು ರಾತ್ರಿ ಇದೇ ವಿಷಯವನ್ನು ಆಲೋಚಿಸುತ್ತಾ ಮಲಗುತ್ತಾನೆ. ರಾತ್ರಿ ಕನಸಿನಲ್ಲಿ ಪರಮಾತ್ಮನಾದ ಈಶ್ವರನು ಬಂದು, 'ರಾಜ ನೀನು ಕಟ್ಟಿರುವ ದೇವಾಲಯದ ಪ್ರತಿಷ್ಠಾಪನೆಗೆ ನಾನು ಬರಲು ಸಾಧ್ಯವಿಲ್ಲ, ಕಾರಣವೆಂದರೆ ನಿನ್ನ ರಾಜ್ಯದಲ್ಲಿ ಮತ್ತೊಬ್ಬ ಭಕ್ತ ನೀನು ಕಟ್ಟಿರುವ ದೇವಾಲಯಕ್ಕಿಂತಲೂ ಮೂರು ಪಟ್ಟು ದೊಡ್ಡ ದೇವಾಲಯವನ್ನು ನಿರ್ಮಿಸಿದ್ದಾನೆ, ನಾನು ಅದೇ ಸಮಯದಲ್ಲಿ ಅಲ್ಲಿಗೆ ಹೋಗಬೇಕಾಗಿದೆ. ಈ ಕಾರಣದಿಂದ ನಾನು ನೀನು ಕಟ್ಟಿರುವ ದೇವಾಲಯದ ಪ್ರತಿಷ್ಠಾಪನೆಗೆ ಬರಲು ಸಾಧ್ಯವಿಲ್ಲ' ಎಂದು ಕನಸಿನಲ್ಲಿ ಪರಮಾತ್ಮ ಈಶ್ವರ ರಾಜನಿಗೆ ತಿಳಿಸುತ್ತಾನೆ. ಬೆಳಗ್ಗೆ ರಾಜ ಎದ್ದೊಡನೆ ರಾತ್ರಿ ಈಶ್ವರ ಕನಸಿನಲ್ಲಿ ಬಂದು ಹೇಳಿದ ಮಾತುಗಳು ಮರುಕಳಿಸುತ್ತಿದೆ. ನಾನು ಇಷ್ಟು ಕಷ್ಟಪಟ್ಟು ಈ ದೇವಾಲಯವನ್ನು ಕಟ್ಟಿರುವಾಗ, ಇನ್ನೊಬ್ಬ ಭಕ್ತ ದೊಡ್ಡ ಶಿವಾಲಯ ಕಟ್ಟಿರಲು ಸಾಧ್ಯವೇ? ಅದು ಹೇಗಿರಬಹುದು ಎಂಬ ಕುತೂಹಲ ಮೂಡಿತು. ಹಾಗಾದರೇ ಆ ದೇವಾಲಯ ಯಾವುದು ನೋಡಿಯೇ ಬಿಡಬೇಕು ಎಂದು

ಸೈನ್ಯವನ್ನು ಕರೆದುಕೊಂಡು ಹುಡುಕಾಡಲು ಆರಂಭಿಸಿದ. ದಿನವೆಲ್ಲ ಹುಡುಕಾಡಿದರೂ ಆ ದೊಡ್ಡ ದೇವಾಲಯ ಸಿಗಲಿಲ್ಲ. ಎಲ್ಲರನ್ನೂ ಕೇಳುತ್ತಾನೆ, ಯಾರಿಗೂ ಗೊತ್ತಿಲ್ಲ. ರಾಜ ಕೊನೆಗೊಮ್ಮೆ ಸುಸ್ತಾಗಿ ಒಂದು ಅರಳೀಮರದ ಬಳಿ ಬರುತ್ತಾನೆ. ಅಲ್ಲಿ ಒಬ್ಬ ಕುಳಿತು ಜಪ ಮಾಡುವುದನ್ನು ಕಾಣುತ್ತಾನೆ. ಅವನು ಬಡವನಾಗಿದ್ದಾನೆ. ಮುಖದಲ್ಲಿ ಒಳ್ಳೆಯ ತೇಜಸ್ಸಿದೆ. ಮೈಮೇಲಿನ ಬಟ್ಟೆ ಹರಕಲಾಗಿದೆ. ಎಲ್ಲಿ ದೇವಸ್ಥಾನವನ್ನು ಕಟ್ಟಿದ್ದಾನೆ ಎಂಬುದನ್ನು ಇವನನ್ನು ಕೇಳಿ ತಿಳಿದುಕೊಳ್ಳಬೇಕು ಎಂದು, ಆ ವ್ಯಕ್ತಿಯ ಬಳಿ ಬಂದು ರಾಜ ನಮಸ್ಕರಿಸಿ ಕೇಳುತ್ತಾನೆ, 'ಇಲ್ಲಿ ದೊಡ್ಡದಾದ ಶಿವನ ದೇವಾಲಯ ಕಟ್ಟಿದ್ದಾರಂತಲ್ಲ. ಅದು ಎಲ್ಲಿದೆ?' ಎಂದು ರಾಜ ಆ ಜಪ ಮಾಡುವ ವ್ಯಕ್ತಿಗೆ ಪ್ರಶ್ನಿಸುತ್ತಾನೆ. ಆಗ ಆ ಬಡವ್ಯಕ್ತಿಯು ಹೇಳುತ್ತಾನೆ, 'ರಾಜ, ನಾನೇ ಆ ದೊಡ್ಡ ದೇವಾಲಯವನ್ನು ಕಟ್ಟಿರುವ ವ್ಯಕ್ತಿ. ನೀನು ಯಾವತ್ತು ಆ ನಿನ್ನ ದೇವಾಲಯವನ್ನು ಕಟ್ಟಲು ಪ್ರಾರಂಭಿಸಿದೆಯೋ ಅಂದೇ ನಾನೂ ಕೂಡ ನನ್ನ ಅಂತರಂಗದಲ್ಲಿ ದೇವಾಲಯವನ್ನು ಕಟ್ಟಲು ಪ್ರಾರಂಭಿಸಿದೆ. ನನ್ನ ಅಂತರಂಗದಲ್ಲಿರುವ ಕರ್ಮ, ಅಕರ್ಮಗಳನ್ನು ತೆಗೆದುಹಾಕಿ ಪಾಯ ಹಾಕಿದೆ. ಮನಸ್ಸಿನಲ್ಲಿರುವ ಅವಿದ್ಯೆಗಳನ್ನು ತೆಗೆದುಹಾಕಿ


ಧರ್ಮಾಧಿಕಾರಿಗಳಿಂದ ಧರ್ಮ ಬೋಧನೆ

ದೊಡ್ಡದಾಗ ಭವನವನ್ನು ಅಂತರಂಗದಲ್ಲಿ ನಿರ್ಮಿಸಿದ್ದೇನೆ. ಎಲ್ಲವೂ ಪೂರ್ಣವಾಗಿದೆ. ಇನ್ನೇನು ಪರಮಾತ್ಮನ ಹತ್ತಿರ ಸೇರುವ ಕಾಲ ಸನ್ನಿಹಿತವಾಗಿದೆ. ಪರಮಾತ್ಮನಿಗಾಗಿ ಕಾಯುತ್ತಿದ್ದೇನೆ' ಎನ್ನುತ್ತಾನೆ. ಈ ಮಾತುಗಳನ್ನು ಕೇಳಿದ ರಾಜನಿಗೆ ಆಶ್ಚರ್ಯವಾಗುತ್ತದೆ. ಮನಸ್ಸಿನಲ್ಲಿ ಅನ್ನಿಸುತ್ತದೆ. ನಾನು ಸಾಕಷ್ಟು ಧನವನ್ನು ಉಪಯೋಗಿಸಿ ಕಟ್ಟಿದ ದೇವಾಲಯ ಈ ಅಂತರಂಗ ಭಕ್ತನ ಭವನದ ಮುಂದೆ ನಿಷ್ಪ್ರಯೋಜನವಾಯಿತಲ್ಲ ಎಂದುಕೊಳ್ಳುತ್ತಾನೆ. ಇದರಿಂದ ನಮಗೆ ತಿಳಿಯುವ ಬೋಧನೆ ಎಂದರೆ, ಅಂತರಂಗದಲ್ಲಿ ಮನಸ್ಸನ್ನು ಸ್ವಚ್ಛ ಮಾಡಿಕೊಂಡು ಏಕಾಗ್ರತೆಯಿಂದ ನಿಶ್ಚಲವಾದ ಭಕ್ತಿಯೊಂದಿಗೆ ಪರಮಾತ್ಮನನ್ನು ಧ್ಯಾನಿಸುವವನೇ ಮಹಾಭಕ್ತ. ಇಂತಹ ಭಕ್ತನ ಮುಂದೆ ಎಷ್ಟೆಲ್ಲ ಸಂಪತ್ತಿನಿಂದ ಕಟ್ಟಿದ ದೇವಾಲಯ ವ್ಯರ್ಥ. ಕರ್ಮ ಮತ್ತು ಅವಿದ್ಯೆಗಳನ್ನು ತೆಗೆದುಹಾಕದ ಹೊರತು ಹುಟ್ಟು-ಸಾವುಗಳ ಚಕ್ರವನ್ನು ತಪ್ಪಿಸಿಕೊಳ್ಳಲು ಸಾಧ್ಯವಿಲ್ಲ. ನಾವು ಅಂತರಂಗದ ಅನ್ವೇಷಣೆ, ಶೋಧನೆಯನ್ನು ಮಾಡದೆ ಕೇವಲ ಬಾಹ್ಯದಲ್ಲಿ ಶಾಸ್ತ್ರ, ಆಚಾರ ಮಾಡಿದರೆ ಏನೂ ಪ್ರಯೋಜನವಿಲ್ಲ ಎಂಬುದು ಈ ಕಥೆಯಿಂದ ತಿಳಿಯುತ್ತದೆ" ಎಂದರು.

**ಗುರುವಿನಿಂದ ಅರ್ಜುನ ಪರಿಪೂರ್ಣನಾದ:** "ಮಹಾಭಾರತದ ಪ್ರಸಂಗದಲ್ಲಿ ಒಂದು ಅಮಾವಾಸ್ಯೆಯ ದಿನ ಬಾಲಕನಾದ ಅರ್ಜುನ ಅರಮನೆಯಿಂದ ಹೊರಗೆ ಬಂದಿದ್ದಾನೆ. ಕತ್ತಲಿನಲ್ಲಿ ಗುರಿಮುಟ್ಟುವ ವಿದ್ಯೆಯನ್ನು ಕಲಿಯಬೇಕೆಂಬ ಹಂಬಲದಿಂದ ಬಾಣಗಳನ್ನು ಬಿಡುತ್ತಿದ್ದಾನೆ. ಆ ಸಮಯದಲ್ಲಿ ಗುರುಗಳಾದ ದ್ರೋಣಾಚಾರ್ಯರು ಅಲ್ಲಿಗೆ ಬಂದು ಕೇಳುತ್ತಾರೆ, 'ಏನು, ಅರ್ಜುನ ನೀನೇನು ಮಾಡುತ್ತಿರುವೆ' ಎನ್ನುತ್ತಾರೆ. ಆಗ ಅರ್ಜುನ, 'ನಾನು ಕತ್ತಲಿನಲ್ಲಿ ಹೇಗೆ ಬಾಣಪ್ರಯೋಗ ಮಾಡಬೇಕು ಎಂದು ತಿಳಿಯಲು ಯತ್ನಿಸುತ್ತಿದ್ದೇನೆ' ಎನ್ನುತ್ತಾನೆ. ಆಗ ದ್ರೋಣಾಚಾರ್ಯರು ಅರ್ಜುನನಿಗೆ ಆ ವಿದ್ಯೆಯನ್ನು ಸಂಪೂರ್ಣವಾಗಿ ಹೇಳಿಕೊಡುತಾರೆ. ಗುರುಗಳಾದ ದ್ರೋಣಾಚಾರ್ಯರಿಂದ ಅರ್ಜುನ ಪರಿಪೂರ್ಣನಾದ. ಆದರೆ ದ್ರೋಣಾಚಾರ್ಯರ ಮಗನಾದ ಅಶ್ವತ್ಥಾಮ ಪರಿಪೂರ್ಣನಾಗಲಿಲ್ಲ. ಬ್ರಹ್ಮಾಸ್ತ್ರವನ್ನು ಪ್ರಯೋಗಿಸುವುದನ್ನು ಅಶ್ವತ್ಥಾಮ ಕಲಿತನೇ ಹೊರತು ಅದನ್ನು ಹಿಂತಿರುಗಿ ಪಡೆಯುವ ವಿದ್ಯೆ ಕಲಿಯಲಿಲ್ಲ. ಅರ್ಜುನನಿಗೆ ಬ್ರಹ್ಮಾಸ್ತ್ರವನ್ನು ಪ್ರಯೋಗಿಸುವ ಹಾಗೂ ಹಿಂಪಡೆಯುವ ವಿದ್ಯೆಯನ್ನು ಕರತಲಮಲಕ ಮಾಡಿಕೊಂಡಿದ್ದ. ಇದನ್ನು ನಾವು ಮಹಾಭಾರತದಲ್ಲಿ ಕಾಣಬಹುದು" ಎಂದರು.

**ಮಾನಸಿಕವಾದ ಭಜನೆ ಶ್ರೇಷ್ಠವಾದುದು:** “ನಾವು ಪ್ರತಿನಿತ್ಯ ಪ್ರಾಪಂಚಿಕವಾದ ವ್ಯವಹಾರಗಳನ್ನು ಮಾಡುತ್ತಾ ಕಾಲ ಕಳೆಯುತ್ತೇವೆ. ದಿನದ 24 ಗಂಟೆಗಳಲ್ಲಿ ಸ್ವಲ್ಪ ಸಮಯವಾದರೂ ಅಂತರಂಗದ ಮಾನಸಪೂಜೆಗೆ, ಭಜನೆಗೆ ಮೀಸಲಿಡಬೇಕು. ಅಂತರಂಗದ ಪೂಜೆ ಬಹಳ ಶ್ರೇಷ್ಠವಾದುದು. ಅಂತರಂಗವನ್ನು ಬಿಟ್ಟು ಕೇವಲ ಬಾಹ್ಯದಲ್ಲಿ ಆಚಾರ ಮಾಡಿದರೆ ಪ್ರಯೋಜನವಿಲ್ಲ. ಅಂತರಂಗದ ಕೊಳೆಯನ್ನು ತೆಗೆದುಹಾಕಿದರೆ ಮಾತ್ರ ಸಾಧಕನಾಗುತ್ತಾನೆ” ಎಂದರು. ಅಂತರಂಗದ ಪೂಜೆಗೆ ಸಂಬಂಧಿಸಿದಂತೆ ಧರ್ಮಾಧಿಕಾರಿಗಳು ಹೇಳಿದ ಕಥೆ.

‘ಒಂದೇ ದಿನದಲ್ಲಿ ಒಬ್ಬ ಸ್ವಾಮಿ, ರಾಜ, ಮತ್ತು ಬಡ ರೈತ ಸಾವನ್ನಪ್ಪುತ್ತಾರೆ. ಸತ್ತ ಅನಂತರ 11 ದಿನಗಳ ಕಾಲ ಅವರ ಸೂಕ್ಷ್ಮ ಶರೀರ ಪ್ರಯಣ ಮಾಡಿ ಯಮಧರ್ಮರಾಜನ ಆಸ್ಥಾನಕ್ಕೆ ಹೋಗುತ್ತದೆ. ಅಲ್ಲಿ ವಿಚಾರಣೆ ನಡೆಯಬೇಕು. ಚಿತ್ರಗುಪ್ತ ಇವರ ವಿವರಗಳನ್ನು ಯಮಧರ್ಮರಾಜನಿಗೆ ನೀಡಿದ. ಆಗ ಸ್ವಾಮಿ ಮನಸ್ಸಿನಲ್ಲಿ ಲೆಕ್ಕಾಚಾರ ಹಾಕಿಕೊಳ್ಳುತ್ತಾನೆ, ‘ನನ್ನಂಥ ಧರ್ಮನಿಷ್ಠ ಮತ್ತೊಬ್ಬನಿಲ್ಲ. ನಾನು ಪ್ರತಿನಿತ್ಯ ಪರಮಾತ್ಮನ ಪೂಜೆಯನ್ನು ಮಾಡಿದ್ದೇನೆ. ನನ್ನ ಅಗಾಧವಾದ ಪಾಂಡಿತ್ಯದಿಂದ ವಿದ್ವತ್ ಸಭೆಗಳಲ್ಲಿ ಮಾತನಾಡಿದ್ದೇನೆ. ನನ್ನ ಭಾಷಣಗಳಿಂದ ಭಕ್ತರು ಪ್ರೇರೇಪಿತರಾಗಿದ್ದಾರೆ. ನಾನು ಸ್ವರ್ಗಕ್ಕೆ ಹೋಗಲು ಅರ್ಹವ್ಯಕ್ತಿ ಎಂದುಕೊಳ್ಳುತ್ತಾನೆ.’ ಆಗ ಧರ್ಮರಾಜನು ಅಯ್ಯಾ, ‘ನೀನು ಅಂತರಂಗದಲ್ಲಿ ಎಷ್ಟು ಬಾರಿ ಪರಮಾತ್ಮನನ್ನು ಸ್ಮರಿಸಿದ್ದೀಯಾ’ ಎಂದು ಕೇಳುತ್ತಾನೆ. ಸ್ವಾಮಿ ತಡಬಡಾಯಿಸುತ್ತಾನೆ. ಆಗ ಯಮಭಟರು ಬಂದು ಸ್ವಾಮಿಯನ್ನು ನರಕಕ್ಕೆ ಕರೆದುಕೊಂಡು ಹೋಗುತ್ತಾರೆ. ಇದೆಲ್ಲವನ್ನು ರಾಜ ಮತ್ತು ಬಡರೈತ ನೋಡುತ್ತಿರುತ್ತಾರೆ. ಅನಂತರ ರಾಜನ ವಿಚಾರಣೆ. ರಾಜನೂ ಕೂಡ ಈ ಪರೀಕ್ಷೆಯಲ್ಲಿ ಅನುತ್ತೀರ್ಣನಾಗಿ ಯಮಭಟರು ಕರೆದುಕೊಂಡು ಹೋಗುತ್ತಾರೆ. ಕೊನೆಗೆ

ಬಡರೈತನಿದ್ದಾನೆ. ರೈತ ಹತ್ತಿರ ಹೋಗಿ ಹೇಳುತ್ತಾನೆ, ‘ಸ್ವಾಮಿ ನನ್ನನ್ನು ಬಿಟ್ಟುಬಿಡಿ, ನಾನು ಕೂಡ ಅವರು ಹೋದ ದಾರಿಯಲ್ಲೇ ಹೊರಟುಹೋಗುತ್ತೇನೆ, ಅವರೇ ಅಲ್ಲಿಗೆ ಹೋದಮೇಲೆ ನನ್ನದೇನಿದೆ’ ಎನ್ನುತ್ತಾನೆ. ಆಗ ಯಮಧರ್ಮರಾಜ ‘ಹಾಗೆಲ್ಲ ಆಗುವುದಿಲ್ಲ, ವಿಚಾರಣೆಯನ್ನು ಮುಗಿಸಿಯೇ ಹೋಗಬೇಕು’ ಎನ್ನುತ್ತಾನೆ. ‘ನೀನು ಅಂತರಂಗದಲ್ಲಿ ಪರಮಾತ್ಮನನ್ನು ಭಜಿಸಿದ್ದೀಯೋ?’ ಪ್ರಶ್ನೆಯನ್ನು ಕೇಳಿದ ಯಮ. ಆಗ ಬಡರೈತ, ‘ಸ್ವಾಮಿ ನನಗೆ ಇವೆಲ್ಲವೂ ಗೊತ್ತಿಲ್ಲ. ನಾನು ಬೆಳಗ್ಗೆ ಕೈ,ಕಾಲು ತೊಳೆದು ದೇವರಿಗೆ ಭಕ್ತಿಯಿಂದ ನಮಸ್ಕರಿಸಿ, ದುಡಿಯಲು ಹೊಲಕ್ಕೆ ಹೋಗುತ್ತಿದ್ದೆ. ಅಲ್ಲಿಗೆ ನನ್ನ ಹೆಂಡತಿ ತಿಂಡಿ, ಊಟ ತರುತ್ತಿದ್ದಳು. ಸಂಜೆ ಮನೆಗೆ ಬಂದು ನಾನು ಮತ್ತು ನನ್ನ ಹೆಂಡತಿ ಸೇರಿಕೊಂಡು ಮೈಮರೆತು ಪರಮಾತ್ಮನ ಭಜನೆಯನ್ನು ಮಾಡುತ್ತಿದ್ದೆವು. ಅನಂತರ ಪ್ರಸಾದವನ್ನು ಸ್ವೀಕರಿಸುತ್ತಿದ್ದೆ. ಇಷ್ಟೇ ನಾನು ಮಾಡುತ್ತಿದ್ದದ್ದು” ಎನ್ನುತ್ತಾನೆ. ಇದನ್ನು ಕೇಳಿದ ಯಮ, ‘ಅಯ್ಯಾ, ನೀನು ಅಂತರಂಗದಲ್ಲಿ ಪುಣ್ಯವನ್ನು ಗಳಿಸಿದ್ದೀಯ. ನಿನ್ನನ್ನು ಸ್ವರ್ಗಕ್ಕೆ ಕಳಿಸಲಾಗುತ್ತದೆ’ ಎಂದನು. ಇದನ್ನೇ ತಾತಯ್ಯನವರು ಹೇಳಿರುವುದು,

**ಅಂತರಂಗಮು ಕಮಲಮಂದನು – ಅಮರಿ ಗೊಡುಗಲ ನೀಡನೂ ।**

**ವುಂದುವಂದುರು ಬುಧಲು ನಿನ್ನು ವುಂದುವೌ ನಾರೇಯಣಾ**
**ಚೂಡಚೂಡಗ ವೆನ್ನೆಲಾಯನು – ಚೂಪು ನಿನ್ನೇ ಚೂಸೆನೂ।**
**ಚೂಡಚೂಡಗ ವೇಡುಕಾಯನು – ಚೂಪುಲೋ ನಾರೇಯಣ**

ನಿರಂತರವಾಗಿ ಭಜನೆಯನ್ನು ಮಾಡುತ್ತಿರುತ್ತಾರೋ ಅವರಿಗೆ ಗುರು ತಾನೇ ತಾನಾಗಿ ಬಂದು ಮುಕ್ತಿಯೆಡೆಗೆ ದಾರಿಯನ್ನು ತೋರುತ್ತಾ ಮಾನವನ ಜೀವನವನ್ನು ಸಾರ್ಥಕ ಮಾಡುತ್ತಾರೆ. ಮನಸ್ಸು ಸ್ಥಿರವಾದಾಗ ಮಾತ್ರ ಗುರುಗಳ ಮಾನಸಿಕ ಪೂಜೆಯನ್ನು ಮಾಡುವ ಭಾವನೆ ನಮ್ಮಲ್ಲಿ ಬರುತ್ತದೆ. ಮಾನಸಿಕ ಪೂಜೆ ಶ್ರೇಷ್ಠವಾದುದು. ಶರೀರದಲ್ಲಿ ಶಕ್ತಿ ಇದ್ದಾಗ ಗುರುಗಳನ್ನು ಸ್ಮರಿಸಬೇಕು. ವಯಸ್ಸಾದ ಮೇಲೆ ದೇಹದ ಬಾಧೆಗಳು ನಮ್ಮನ್ನು ಆವರಿಸುತ್ತದೆ. ಆಗ ಸಮಯ ವ್ಯರ್ಥಮಾಡಿಕೊಂಡೆನಲ್ಲ ಎಂದುಕೊಂಡರೆ ಪ್ರಯೋಜನವಿಲ್ಲ. ಶರೀರದಲ್ಲಿ ಶಕ್ತಿ ಇರುವಾಗ ಗುರುವನ್ನು ಸ್ಮರಿಸಿ ಮುಕ್ತನಾಗು. ನಿಶ್ಚಲವಾದ ಮನಸ್ಸಿನಿಂದ ಗುರುಗಳ ಪಾದದಲ್ಲಿ ಶರಣಾಗತಿಯಾದರೆ ಆಗ ಗುರುಗಳು ಖಂಡಿತವಾಗಿ ಗೋಚರವಾಗುತ್ತಾರೆ. ಲೌಕಿಕವಾದ ಗುರುಗಳಿಂದ ಪ್ರಯೋಜನವಿಲ್ಲ, ಯಾರಾದರೇ ಅಂತರಂಗದ ಸಾಧನೆ ಮಾಡಿರುತ್ತಾರೋ ಅವರ ಬಳಿ ಹೋಗಿ ಶರಣಾಗಿ ಎಂದು ಹೇಳುತ್ತಾ ಸಭೆಗೆ ತಾತಯ್ಯನವರು ರಚಿಸಿರುವ ಆತ್ಮಪೂಜೆಯನ್ನು ವಿವರಿಸಿ ತಮ್ಮ ಗುರುಸಂದೇಶದ ಮಾತುಗಳನ್ನು ಮುಗಿಸಿದರು.”



ಕಲಾವಿದರಿಂದ ಭರತನಾಟ್ಯ



# ಸೂಕ್ಷ್ಮ ಸಂವೇದನೆಗಳಿಗೆ ಅಧ್ಯಾತ್ಮದ ಲೇಪ ನೀಡಿದ ಸಂತ ಕೈವಾರದ ತಾತಯ್ಯ

ಹಿರಿಯ ಅಧ್ಯಾತ್ಮ ಚಿಂತಕ ಮಲ್ಲಾರ ಪತ್ರಿಕೆಯ ನಿರ್ವಾಹಕ ಸಂಪಾದಕರಾದ ಡಾ. ಬಾಬುಕೃಷ್ಣಮೂರ್ತಿರವರು ಮಾತನಾಡಿ, "ಕೈವಾರದ ತಾತಯ್ಯನವರು ಬಳೆಗಾರನಾಗಿ ಊರೂರು ಸುತ್ತಿ ಸಾಮಾನ್ಯ ಜನರ ಜೀವನದ ಸೂಕ್ಷ್ಮ ಸಂವೇದನೆಗಳಿಗೆ ಮಾನವೀಯತೆಯ ನೆಲೆಗಟ್ಟಿನಲ್ಲಿ ಅಧ್ಯಾತ್ಮದ ಲೇಪನವನ್ನು ನೀಡಿ ಕೀರ್ತನೆಗಳಾಗಿಸಿದ್ದಾರೆ. ಸರಳವಾದ ಭಾಷೆಯಲ್ಲಿ ಪರತತ್ತ್ವದ ಚಿಂತನೆಗಳನ್ನು ಒರೆಗೆ ಹಚ್ಚಿದ್ದಾರೆ. ಮನಸ್ಸುಗಳಲ್ಲಿರುವ ದುಃಖ, ದುಮ್ಮಾನಗಳಿಗೆ ಸಾಂತ್ವನದ ನುಡಿಗಳನ್ನು ನುಡಿದಿದ್ದಾರೆ. ಆತ್ಮಶಕ್ತಿಯ ಮಹತ್ತ್ವವನ್ನು ಜಗತ್ತಿಗೆ ಸಾರಿದ್ದಾರೆ. ತಾತಯ್ಯನವರು ಕಾಲಜ್ಞಾನದ ಭವಿಷ್ಯವಾಣಿಯಿಂದ ಮಾನವಕುಲವನ್ನು ಎಚ್ಚರಿಸಿದ್ದಾರೆ" ಎಂದರು.

"ಮಾನವನಿಗೆ ಒಳ್ಳೆಯ ಆಲೋಚನೆಗಳು, ಚಿಂತನೆಗಳು ಬಹಳ ಮುಖ್ಯ. ತಾತಯ್ಯನವರು ಪರಮಾತ್ಮನಿರುವ ಸಹಸ್ರಾರದ ಚಕ್ರವಿರುವ ತಲೆಯನ್ನು 'ತಲಕಾಯಕೊಂಡ' ಎಂದಿದ್ದಾರೆ. ಈ ತಲಕಾಯಕೊಂಡದಲ್ಲಿ ಉತ್ತಮ ಚಿಂತನೆಯಿದ್ದರೆ ಜೀವನ ಸುಸೂತ್ರವಾಗಿ ನಡೆಯುತ್ತದೆ. ಇಲ್ಲಿ ಆಲೋಚನೆಗಳು ಕೆಟ್ಟರೆ ಜೀವನ ಅಧಃಪತನದೆಡೆಗೆ ಹೋಗುತ್ತದೆ. ಅಲೌಕಿಕವಾದ ಚಿಂತನೆಗಳು ನಮ್ಮನ್ನು ಉದ್ಧಾರ ಮಾಡುತ್ತದೆ. ಕೈವಾರದ ತಾತಯ್ಯನವರು ಬೋಧಿಸಿರುವ ಎಲ್ಲ ತತ್ತ್ವ ಚಿಂತನೆಗಳು ಮಾನವಕುಲದ ಉದ್ಧಾರಕ್ಕಾಗಿಯೇ. ಈ ನಿಟ್ಟಿನಲ್ಲಿ ಎಲ್ಲ ಜನರು ಧರ್ಮದ ಸೂಕ್ಷ್ಮತೆಗಳನ್ನು ಅರಿಯಲಿ ಎಂಬುದು ಧರ್ಮಾಧಿಕಾರಿ ಡಾ. ಎಂ.ಆರ್. ಜಯರಾಮ್‌ರವರ ಆಶಯ. ಈ ಕಾರಣದಿಂದಲೇ ಧರ್ಮಚಿಂತನೆ ಕಾರ್ಯಕ್ರಮವನ್ನು ನಿರಂತರವಾಗಿ ಶ್ರೀಮಠದ ವತಿಯಿಂದ ಆಯೋಜಿಸಿಕೊಂಡು ಬರಲಾಗುತ್ತಿದೆ" ಎಂದರು.

"ವಿಶ್ವಕ್ಕೆ ಭಾರತದ ದೇಶದ ಅತ್ಯಂತ ದೊಡ್ಡ ಕೊಡುಗೆಯೆಂದರೆ ಅಧ್ಯಾತ್ಮ. ಪಾಶ್ಚಾತ್ಯ ದೇಶಗಳು ಕೇವಲ ವಿಜ್ಞಾನದಲ್ಲಿ ಮುಳುಗಿದವು. ಈ ಕಾರಣದಿಂದ ಅವು ಭೋಗಭೂಮಿಗಳಾದವು. ಆದರೆ ಭಾರತೀಯರು ಅಧ್ಯಾತ್ಮದ ಚಿಂತನೆಗಳನ್ನು ರೂಢಿಸಿಕೊಂಡು ಭಕ್ತಿ, ಜ್ಞಾನ, ವೈರಾಗ್ಯಗಳನ್ನು ಬೆಳೆಸಿಕೊಂಡರು. ಭಾರತದ ಸನಾತನ ಪರಂಪರೆ ಹಲವಾರು ಸಾಧು,

ಸಂತರು, ಮಹಾತ್ಮರನ್ನು ಕೊಟ್ಟಿದೆ. ವೇದಗಳು ಅಪೌರುಷೇಯ. ವೇದಗಳನ್ನು ರಚಿಸುವ ಜ್ಞಾನವನ್ನು ಸಾಕ್ಷಾತ್ ಪರಮಾತ್ಮನೇ ಋಷಿಮುನಿಗಳಿಗೆ ಕೊಟ್ಟಿದ್ದಾರೆ. ಭಾರತದ ಭೂಮಿ ಧರ್ಮಭೂಮಿ, ಕರ್ಮಭೂಮಿ, ಮೋಕ್ಷಭೂಮಿ. ಮೋಕ್ಷ ದೊರೆಯುವುದು ಕೇವಲ ಧರ್ಮಭೂಮಿಯಲ್ಲಿ ಮಾತ್ರ. ಧರ್ಮ ಭಾರತ ದೇಶದ ಜನರ ಕಣಕಣದಲ್ಲಿಯೂ ಮಿಳಿತವಾಗಿದೆ. ಸಹಸ್ರಾರು ಜನ್ಮಗಳ ಪುಣ್ಯದ ಫಲದಿಂದ ಭಾರತ ದೇಶದಲ್ಲಿ ಮಾನವ ಜನ್ಮ ದೊರೆಯುತ್ತದೆ. ಈ ಮಾನವ ಜನ್ಮವನ್ನು ಸಾರ್ಥಕಪಡಿಸಿಕೊಳ್ಳಬೇಕಾಗಿದೆ" ಎಂದರು.

"ಕೈವಾರದ ತಾತಯ್ಯನವರು ರಚಿಸಿರುವ ಆತ್ಮಾಬೋಧಾಮೃತ ಹಾಗೂ ಶ್ರೀ ಶಂಕರಾಚಾರ್ಯರು ರಚಿಸಿರುವ ಆತ್ಮಬೋಧೆ ಇವೆರಡೂ ಒಂದೇ ರೀತಿಯಲ್ಲಿವೆ ಹಾಗೂ ವಿಶೇಷತೆಯಿಂದ ಕೂಡಿವೆ. ಆ ವಿಶೇಷತೆಯೆಂದರೆ ಸಾಮಾನ್ಯ ಜನರಿಗೆ ಧರ್ಮದ ಅರಿವಾಗಬೇಕು ಎಂಬುದೇ ಆಗಿದೆ. ಶಂಕರಾಚಾರ್ಯರು ಮುಮುಕ್ಷುಗಳು ಎಂದರೆ, ತಾತಯ್ಯನವರು ಜೀವರಾಶಿಗಳು ಎಂದಿದ್ದಾರೆ. ಶಂಕರಾಚಾರ್ಯರು ವಿವೇಕ ಚೂಡಾಮಣಿ ಹಾಗೂ ಮೋಹಮುದ್ಗರಂ ಶ್ಲೋಕಗಳಲ್ಲಿಯೂ ಮಾನವ ಜನ್ಮದ ಶ್ರೇಷ್ಠತೆಯನ್ನು ಸಾರಿದ್ದಾರೆ. 'ಮಾನವ ಜನ್ಮ ದೊಡ್ಡದು ಇದನ್ನು ಹಾಳುಮಾಡಿಕೊಳ್ಳಬಾರದು' ಎಂದು ದಾಸಶ್ರೇಷ್ಠರೆಲ್ಲರೂ ಬೋಧಿಸಿದ್ದಾರೆ. 'ಮರಣ ಕಾಲ ಸನ್ನಿಹಿತವಾದಾಗ ಯಾವುದೇ ಶಾಸ್ತ್ರ, ಆಚರಣೆಗಳು ನಿನಗೆ ಸಹಾಯಕ್ಕೆ ಬರುವುದಿಲ್ಲ, ಕೇವಲ ಗೋವಿಂದನ ನಾಮಸ್ಮರಣೆಯೊಂದೇ ನಿನ್ನನ್ನು ದಡ ಸೇರಿಸುತ್ತದೆ' ಎನ್ನುತ್ತಾರೆ ಶಂಕರಾಚಾರ್ಯರು. ತಾತಯ್ಯನವರೂ ಕೂಡ ಮೋಕ್ಷಾಕಾಂಕ್ಷಿಗಳಿಗೆ, ಶಾಸ್ತ್ರದ ಅಗತ್ಯತೆ ಇಲ್ಲ ಎಂದಿದ್ದಾರೆ. ಮೋಕ್ಷವನ್ನು ಗಳಿಸಲು ಮಾನವ ಜನ್ಮದಿಂದ ಮಾತ್ರ ಸಾಧ್ಯ. ಈ ಸಮಯವನ್ನು ವ್ಯರ್ಥಮಾಡದೆ ಸಾಧನೆಯಲ್ಲಿ ತೊಡಗಿ ಬದುಕನ್ನು ಹಸನು ಮಾಡಿಕೊಳ್ಳಬೇಕು" ಎಂದರು.

**ಧರ್ಮ ಚಿಂತನೆಗೆ ಸಾಂಸ್ಕೃತಿಕ ಮೆರಗು:** ಯಲಹಂಕದ ಹಲವಾರು ಕಲಾವಿದರಿಂದ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿತ್ತು. ರಾಧಮಂದ ರವರಿಂದ ಗಾಯನ, ಶಿವಾಂಜಲಿ ತಂಡದವರಿಂದ ಭರತನಾಟ್ಯ, ಶಿವ ಅಕಾಡೆಮಿ ರವರಿಂದ ನೃತ್ಯ, ಗ್ರೀಷ್ಮಾ ಚೌಧರಿ ರವರಿಂದ ಶಿವಶಕ್ತಿ ನೃತ್ಯ, ಐಶ್ವರ್ಯ ಮಂದರವರಿಂದ ಕಥಕ್ ನೃತ್ಯ, ಕಾವ್ಯಾಂಜಲಿ ತಂಡದವರಿಂದ ಮೋಹಿನಿ ಅಟ್ಟಂ ನೃತ್ಯ, ಶ್ರೀ ಬಾಲಕೃಷ್ಣ ಭಾಗವತರ್ ಗಾಯನ ಕಾರ್ಯಕ್ರಮಗಳು ಧರ್ಮ ಚಿಂತನೆ ಕಾರ್ಯಕ್ರಮಕ್ಕೆ ಸಾಂಸ್ಕೃತಿಕ ಮೆರುಗನ್ನು ನೀಡಿತು.

ಕಾರ್ಯಕ್ರಮಕ್ಕೂ ಮೊದಲು ಯಲಹಂಕದಲ್ಲಿರುವ ಶ್ರೀನಿವಾಸ ದೇವಸ್ಥಾನದಲ್ಲಿ ವಿಶೇಷ ಪೂಜೆಗಳನ್ನು ಹಮ್ಮಿಕೊಳ್ಳಲಾಗಿತ್ತು. ದೇವಾಲಯದಿಂದ ಕಾರ್ಯಕ್ರಮ ನಡೆಯುವ ಸ್ಥಳದವರೆಗೂ ಶೋಭಾಯಾತ್ರೆಯಲ್ಲಿ ಬರಲಾಯಿತು. ಮಹಿಳೆಯರು ಕಲಶಗಳನ್ನು ಹೊತ್ತು ಮೆರವಣಿಗೆಯಲ್ಲಿ ಸಾಗಿದರು. ಶ್ರೀ ಯೋಗಿನಾರೇಯಣ ಸಂಕೀರ್ತನಾ ಯೋಜನೆ ಸಂಚಾಲಕರಾದ ವಾನರಾಶಿ ಬಾಲಕೃಷ್ಣ ಭಾಗವತರ್‌ರವರು ಪ್ರಾರ್ಥಿಸಿದರು. ನೂರಾರು ಸಂಖ್ಯೆಯಲ್ಲಿ ಉಪಸ್ಥಿತರಿದ್ದರು.



# ಆಲಂಬಗಿರಿಯಲ್ಲಿ ಲಕ್ಷದೀಪೋತ್ಸವ ಸಂಭ್ರಮ

ಶ್ರೀ ಆಲಂಬಗಿರಿ ಲಕ್ಷ್ಮೀವೆಂಕಟರಮಣಸ್ವಾಮಿ ದೇವಾಲಯದಲ್ಲಿ ಮಾರ್ಗಶಿರಮಾಸದ ಹುಣ್ಣಿಮೆಯಂದು ರಾತ್ರಿ ವಿಷ್ಣು ದೀಪೋತ್ಸವವನ್ನು ಶಾಸ್ತ್ರೋಕ್ತವಾಗಿ ವಿಜೃಂಭಣೆಯಿಂದ ಆಚರಿಸಲಾಯಿತು.

ದೀಪೋತ್ಸವದಲ್ಲಿ ಭಕ್ತರು ವಿಶೇಷ ಪೂಜೆಗಳಲ್ಲಿ ಪಾಲ್ಗೊಂಡಿದ್ದರು. ದೇವಾಲಯದ ಆವರಣದಲ್ಲಿ ಮಣ್ಣಿನ ಹಣತೆಗಳನ್ನು ಹಚ್ಚಲಾಯಿತು. ದೇವಾಲಯವನ್ನು ದೀಪಗಳಿಂದ ಆಲಂಕರಿಸಲಾಗಿತ್ತು. ದೇವಾಲಯದ ರಾಜಗೋಪುರದ ಮುಂದೆ ಇರುವ ಮೂರು ದೀಪಸ್ತಂಭಗಳಿಗೂ ದೊಡ್ಡ ದೀಪಗಳನ್ನು ಹಚ್ಚಿ ಇಡಲಾಯಿತು. ಎತ್ತರದ ದೀಪಸ್ತಂಭಗಳನ್ನು ಹತ್ತಲು ಅಟ್ಟಣಿಗೆ ಹಾಕಲಾಗಿತ್ತು. ಕೈವಾರ ಕ್ಷೇತ್ರದ ಧರ್ಮಾಧಿಕಾರಿ ದಂಪತಿ ದೀಪೋತ್ಸವದಲ್ಲಿ ಭಾಗವಹಿಸಿದ್ದರು.

ಗರ್ಭಗುಡಿಯಲ್ಲಿರುವ ಶ್ರೀ ಲಕ್ಷ್ಮೀವೆಂಕಟರಮಣ ಸ್ವಾಮಿಗೆ ಹಾಗೂ ಲಕ್ಷ್ಮೀ ಅಮ್ಮನವರಿಗೆ ದೇವಾಲಯದಲ್ಲಿ ವಿವಿಧ ಬಗೆಯ ಹೂಗಳಿಂದ ಅಲಂಕರಿಸಲಾಗಿತ್ತು. ಅಷ್ಟವಧಾನ ಸೇವೆಯನ್ನು ಸಲ್ಲಿಸಿ ಮಹಾಮಂಗಳಾರತಿಯನ್ನು ಬೆಳಗಲಾಯಿತು. ನಾದಸ್ವರದ ಮಂಗಳ ವಾದ್ಯದೊಂದಿಗೆ ಬೆಳಗಿನ ಪೂಜೆಗಳು ಆರಂಭವಾಯಿತು. ದೂರದ ಊರುಗಳಿಂದ ಆಗಮಿಸಿ ಪೂಜೆಯಲ್ಲಿ ಭಾಗವಹಿಸಿ ಹಣ್ಣುಕಾಯಿ ಮಾಡಿಸುವ ದೃಶ್ಯ ಸಾಮಾನ್ಯವಾಗಿತ್ತು. ಅಭಿಷೇಕದ ಅನಂತರ ಸ್ವಾಮಿಯವರಿಗೆ ಹೂಗಳಿಂದ ಮಾಡಿದ ಅಲಂಕಾರ ಭಕ್ತರ ಮನತಣಿಸಿತು. ದೇವಾಲಯವನ್ನು ವಿಶೇಷ ಹೂಗಳಿಂದ ಅಲಂಕರಿಸಲಾಗಿತ್ತು. ಬೆಂಗಳೂರಿನಿಂದ ಬಂದಿದ್ದ ಮಹಿಳಾ ಭಕ್ತರು ಸಾಮೂಹಿಕವಾಗಿ ಭಜನೆಯನ್ನು ನಡೆಸಿಕೊಟ್ಟರು.

**ಲಕ್ಷ ದೀಪೋತ್ಸವ ಮೆರವಣಿಗೆಯಲ್ಲಿ ಪಾಲ್ಗೊಂಡಿರುವ ಧರ್ಮಾಧಿಕಾರಿ**



# ಆಲಂಬಗಿರಿಯಲ್ಲಿ ಹನುಮ ಜಯಂತಿ

ಹನುಮ ಜಯಂತಿ ಪ್ರಯುಕ್ತ ಆಲಂಬಗಿರಿ ಶ್ರೀ ಆಂಜನೇಯಸ್ವಾಮಿ ದೇವಾಲಯದಲ್ಲಿ ಹನುಮ ಜಯಂತಿಯನ್ನು ವಿಜೃಂಭಣೆಯಿಂದ ಆಚರಿಸಲಾಯಿತು. ಗರ್ಭಗುಡಿಯಲ್ಲಿರುವ ಆಂಜನೇಯಸ್ವಾಮಿಗೆ ವಿಶೇಷವಾಗಿ ವಿವಿಧ ಬಗೆಯ ಹಣ್ಣುಗಳಿಂದ ಅಲಂಕಾರವನ್ನು ಮಾಡಲಾಗಿತ್ತು. ಪ್ರತಿ ವರ್ಷವೂ ಒಂದಿಲ್ಲೊಂದು ವಿಶೇಷ ಅಲಂಕಾರವನ್ನು ಮಾಡಿಕೊಂಡು ಬರುವುದು ರೂಢಿಯಲ್ಲಿದೆ. ಹನುಮ ಜಯಂತಿಯ ಅಂಗವಾಗಿ ವಿಶೇಷ ಪೂಜೆಯನ್ನು ಸಲ್ಲಿಸಲಾಯಿತು. ಅಷ್ಟೋತ್ತರ ಸಹಿತ ಅಷ್ಟಾವಧಾನಸೇವೆಯನ್ನು ಸಲ್ಲಿಸಿ ಮಹಾಮಂಗಳಾರತಿಯನ್ನು ಬೆಳಗಲಾಯಿತು. ದರ್ಶನಕ್ಕೆ ಬಂದ ಭಕ್ತರಿಗೆ ಶ್ರೀ ಯೋಗಿನಾರೇಯಣ ಮಠದ ವತಿಯಿಂದ ಪ್ರಸಾದ ವಿನಿಯೋಗದ ವ್ಯವಸ್ಥೆಯನ್ನು ಮಾಡಲಾಗಿತ್ತು. ಗ್ರಾಮಸ್ಥರಿಂದ ಸಂಕೀರ್ತನೆಯನ್ನು ಏರ್ಪಡಿಸಲಾಗಿತ್ತು.

# ಆಲಂಬಗಿರಿಯಲ್ಲಿ ಜನವರಿ 6 ಮತ್ತು 7ರಂದು ವೈಕುಂಠ ಏಕಾದಶಿ - ಮುಕ್ಕೋಟಿ ದ್ವಾದಶಿ



"ಶ್ರೀ ಕ್ಷೇತ್ರ ಆಲಂಬಗಿರಿಯಲ್ಲಿ ಉದ್ಭವ ಮೂರ್ತಿಯಾಗಿ ನೆಲೆಸಿರುವ ಶ್ರೀ ಕಲ್ಕಿ ಲಕ್ಷ್ಮೀವೆಂಕಟರಮಣಸ್ವಾಮಿ ದೇವಾಲಯದಲ್ಲಿ ಜನವರಿ 6 ಮತ್ತು 7ರಂದು ವೈಕುಂಠ ಏಕಾದಶಿ ಮತ್ತು ಮುಕ್ಕೋಟಿ ದ್ವಾದಶಿ ಪೂಜೆಗಳನ್ನು ಶ್ರದ್ಧಾಭಕ್ತಿಗಳಿಂದ ಆಚರಿಸಲಾಗುವುದು" ಎಂದು ಧರ್ಮಾಧಿಕಾರಿ ಡಾ. ಎಂ.ಆರ್. ಜಯರಾಮ್‌ರವರು ತಿಳಿಸಿದ್ದಾರೆ.

ವೈಕುಂಠ ಏಕಾದಶಿ ಜನವರಿ 6 ಸೋಮವಾರ ಬೆಳಗ್ಗೆ 4 ಗಂಟೆಗೆ ಘಂಟಾನಾದ, ಸುಪ್ರಭಾತ, ಗೋಪೂಜೆ, ವೈಕುಂಠದ್ವಾರ ಪ್ರವೇಶ, ವಿಶ್ವರೂಪ ದರ್ಶನವಿರುತ್ತದೆ. 6 ಗಂಟೆಗೆ ಮೂಲಸ್ವಾಮಿಗೆ ವಿಶೇಷ ಅಭಿಷೇಕ ಮಹಾ ಮಂಗಳಾರತಿ, ತೀರ್ಥಪ್ರಸಾದ ವಿನಿಯೋಗವಿರುತ್ತದೆ. ರಾತ್ರಿ 8 ಗಂಟೆಗೆ ಆಲಂಬಗಿರಿ ಗ್ರಾಮಸ್ಥರಿಂದ ಪಂಡರಿ ಭಜನೆ ಇರುತ್ತದೆ.

ಮುಕ್ಕೋಟಿ ದ್ವಾದಶಿ ಜನವರಿ 7 ರಂದು ಮಂಗಳವಾರ ಬೆಳಗ್ಗೆ 5.30 ಗಂಟೆಗೆ ಸುಪ್ರಭಾತ, ಗೋಪೂಜೆಯೊಂದಿಗೆ ಪೂಜೆಗಳು ಆರಂಭವಾಗುತ್ತದೆ. 6 ಗಂಟೆಗೆ ಗರುಡೋತ್ಸವವನ್ನು ಹಮ್ಮಿಕೊಳ್ಳಲಾಗಿದೆ. ಬೆಳಗ್ಗೆ 9 ಗಂಟೆಗೆ ಮಹಾಮಂಗಳಾರತಿ, ತೀರ್ಥಪ್ರಸಾದ ವಿನಿಯೋಗವಿರುತ್ತದೆ. ಭಕ್ತರು ಅಧಿಕ ಸಂಖ್ಯೆಯಲ್ಲಿ ಭಾಗವಹಿಸಿ ಸ್ವಾಮಿಯ ಕೃಪೆಗೆ ಪಾತ್ರರಾಗಬೇಕಾಗಿ ಕೋರಿದೆ.

● ವರದಿ: ಟಿ.ಎಲ್. ಆನಂದ್, ತಳಗವಾರ



ಹನುಮಂತನಿಗೆ ವಿಶೇಷ ಅಲಂಕಾರ

ಶ್ರೀಯೋಗಿನಾರೇಯಣ ಮಠ, ಶ್ರೀಕ್ಷೇತ್ರ ಕೈವಾರ

## ಈ ತಿಂಗಳ ಧರ್ಮ ಚಿಂತನೆ ಕಾರ್ಯಕ್ರಮ

## ದೊಡ್ಡಬಳ್ಳಾಪುರ ನಗರದಲ್ಲಿ

ದಿನಾಂಕ 11 ಜನವರಿ 2020
ಶನಿವಾರ ಸಂಜೆ 5.30 ಗಂಟೆಗೆ

ಸರ್ವರಿಗೂ ಆದರದ ಸುಸ್ವಾಗತ

# ಯೇಗ್ದಾಗೆಲ್ಲ ಐತೆ




**ಬೋ**ಳನಹಳ್ಳಿಯಲ್ಲಿ ಬಸವ ಜಯಂತಿ ಉತ್ಸವ. ಕನ್ನಡ ಸಾಹಿತ್ಯ ಪರಿಷತ್ತಿನ ಅಂದಿನ ಅಧ್ಯಕ್ಷರಾದ ಶ್ರೀ ಎಂ.ಆರ್. ಶ್ರೀನಿವಾಸಮೂರ್ತಿಯವರು ಮುಖ್ಯ ಭಾಷಣಕಾರರು. ಶ್ರೀ ಮುಕುಂದೂರು ಸ್ವಾಮಿಗಳು ಅಧ್ಯಕ್ಷರು. ಎಂ.ಆರ್. ಶ್ರೀ. ಅವರನ್ನು ಸ್ವಾಗತಿಸಲು ಎಲ್ಲರೂ ದೇವನೂರಿನ ರೈಲ್ವೇ ನಿಲ್ದಾಣಕ್ಕೆ ಹೋದೆವು. ಸುಮಾರು ಎರಡು ಗಂಟೆಯ ಬೆಂಗಳೂರು–ಪೂನಾ ರೈಲಿನಲ್ಲಿ ಎಂ.ಆರ್. ಶ್ರೀ. ಬಂದರು. ಶ್ರೀ ರಾಘವ ಅಯ್ಯಂಗಾರ್ಯರು ಹಾರಹಾಕಿ ಕೈಮುಗಿದರು. ಪಟೇಲ್ ಪಯಾತ್ ಸಾಹೇಬರು ಸೊಂಟ ಬಗ್ಗಿಸಿ ರಾಜಮರ್ಯಾದೆಯಂತೆ ವಂದಿಸಿದರು. ನೆರೆದಿದ್ದ 30–40 ಮಂದಿ ಯುವಕರನ್ನೆಲ್ಲ ಎಂ.ಆರ್. ಶ್ರೀ. ಹರ್ಷಚಿತ್ತರಾಗಿ ಕೈಕುಲುಕಿದರು. ಹರ್ಷೋದ್ಗಾರಗಳೊಂದಿಗೆ ಹೊರ ನಡೆದೆವು. ಕಡು ಬೇಸಿಗೆಯ ದಿನ. ಮಧ್ಯಾಹ್ನ ಹೆಜ್ಜೆ ಇಟ್ಟರೆ ಧೂಳೇಳುವ ಮಣ್ಣಿನ ಹಾದಿ. ಎಲ್ಲರೂ ಬೆವರಿಟ್ಟು ಬಸವಳಿದೆವು. ಅಂದು ಬಸವ ಜಯಂತಿ. ಅಂದರೆ ಆ ಸುತ್ತಮುತ್ತಲೂ ಎತ್ತುಗಳನ್ನು ಅಲಂಕರಿಸಿ ಪೂಜಿಸುವ ಹಬ್ಬ. ಆ ಕಾರಣದಿಂದ ಯಾರೂ ಎತ್ತುಗಳನ್ನು ಯಾವ ಕೆಲಸಕ್ಕೂ ಬಳಸುವ ಪದ್ಧತಿ ಇಲ್ಲ. ಹೀಗಾಗಿ ರೈಲ್ವೇ ಸ್ಟೇಷನ್ನಿನಿಂದ ಬೋಳನಹಳ್ಳಿಯವರೆಗಿನ ಸುಮಾರು ಎರಡು ಮೈಲಿ ಉದ್ದದ ಹಾದಿಯನ್ನು ನಡೆಯಲೇ ಬೇಕಾಗಿತ್ತು. ಅಷ್ಟರಲ್ಲಿ ಯಾರೋ ಒಬ್ಬರು ಎಂ.ಆರ್. ಶ್ರೀಯವರಿಗೆ ಛತ್ರಿ ಹಿಡಿದರು. ಎಂ.ಆರ್.ಶ್ರೀ. ಎತ್ತರವಾದ ಆಳು. ಕೊಡೆ ಹಿಡಿದವರು ಕುಳ್ಳ. ತಮ್ಮ ಮಾಮೂಲಿ ತಮಾಷೆಯ ದಾಟಿಯಲ್ಲಿ ಎಂ.ಆರ್. ಶ್ರೀ. "ನೀವೆಷ್ಟೇ ಕೈ ಎತ್ತಿದರೂ ನಿಮ್ಮ ಛತ್ರಿ ನನ್ನ ಪೇಟದೊಂದಿಗೆ ಕುಸ್ತಿ ಮಾಡುತ್ತದೆ" ಎಂದಾಗ ಎಲ್ಲರೂ ನಕ್ಕೆವು. ಇದನ್ನು ಕೇಳಿದ ಸ್ವಾಮಿಗಳು ಆ ಛತ್ರಿಯನ್ನು ತಾವೇ ತೆಗೆದುಕೊಂಡು ಎಂ.ಆರ್. ಶ್ರೀ. ಅವರಿಗೆ ನೆರಳು ಮಾಡಿದರು.

"ನನಗಿಂತಲೂ ನೀವು ಎತ್ತರ. ಎಲ್ಲ ರೀತಿಯಲ್ಲೂ ಎತ್ತರ. ಇಷ್ಟೊಂದು ಎತ್ತರದವರು ಕೊಡೆ ಹಿಡಿದರೆ ನನಗೆ ಧಗೆಯೇ ಹೆಚ್ಚಾಗುತ್ತದೆ. ದಯವಿಟ್ಟು ಇಲ್ಲಿ ಕೊಡಿ" ಎಂದು ಅವರ ಕೈಯಿಂದ ತಾವೇ ಛತ್ರಿ ತೆಗೆದುಕೊಂಡು ನಡೆದುಬಂದರು.

ಬೋಳನಹಳ್ಳಿಯಲ್ಲಿ ಎಳನೀರು ಕುಡಿದು ಅರ್ಧಗಂಟೆ ವಿಶ್ರಾಂತಿ ಪಡೆದ ಮೇಲೆ ಊಟ. ಅನಂತರ ಶ್ರೀ ರಾಘವ ಅಯ್ಯಂಗಾರರೊಂದಿಗೆ ಸಂಭಾಷಣೆಯಲ್ಲಿ ತೊಡಗಿದರು. ಸಂಜೆಯ ವೇಳೆಗೆ ದೇವನೂರು ಹಾಗೂ ಸುತ್ತಮುತ್ತಿನ ಹತ್ತಾರು ಗ್ರಾಮಗಳಿಂದ ಜನರು ತಂಡ ತಂಡವಾಗಿ ಬೋಳನಹಳ್ಳಿಗೆ ಬಂದರು. ಆಂಜನೇಯನ ಗುಡಿಯ ಮುಂದೆ ಎತ್ತರವಾಗಿ ನಿರ್ಮಿಸಿದ್ದ ವೇದಿಕೆಯ ಮೇಲೆ ಎಂ.ಆರ್.ಶ್ರೀ. ಮತ್ತು ಸ್ವಾಮಿಗಳು ಆಸೀನರಾಗಿದ್ದರು. ಎಂ.ಆರ್.ಶ್ರೀ. ತಮ್ಮ ಭಾಷಣವನ್ನು ಹೀಗೆ ಪ್ರಾರಂಭಿಸಿದರು.

"ನೋಡಿ ಇವರ ಹಣೆಯ ಮೇಲೆ ಎದ್ದು ಕಾಣುವ ನಾಮಗಳಿಂದ (ರಾಘವ ಅಯ್ಯಂಗಾರ್) ಇವರೊಬ್ಬ ಶ್ರೀವೈಷ್ಣವರೆಂದು ಸ್ಪಷ್ಟವಾಗುತ್ತದೆ. ಇತ್ತ ಕಡೆ ಕುಳಿತಿರುವ (ಹಯಾತ್ ಸಾಬ್) ಇವರ ಗಡ್ಡ, ಪೇಟ, ಷೇರ್‌ವಾನಿಗಳಿಂದ ಇವರೊಬ್ಬ ಮಹಮ್ಮದೀಯರೆಂಬುದರಲ್ಲಿ ಅನುಮಾನವಿಲ್ಲ. ಹಾಗೆಯೇ ಪಕ್ಕದಲ್ಲಿ ಕುಳಿತಿರುವ ಹೆಣ್ಣುಮಕ್ಕಳ ಉಡುಪನ್ನು ನೋಡಿದರೆ ಅವರು ಲಂಬಾಣಿಗರೆಂಬುದು ಖಚಿತ. ಹೀಗೆಯೇ ಈ ಸಭೆಯಲ್ಲಿ ಬೇರೆ ಬೇರೆ ಜಾತಿ ಪದ್ಧತಿಗಳಿಗೆ ಸೇರಿದ ವಿದ್ಯಾವಂತರು, ಅವಿದ್ಯಾವಂತರು, ಅಧಿಕಾರಿಗಳು, ವ್ಯವಸಾಯಗಾರರು, ಇತ್ಯಾದಿ ಬೇರೆಬೇರೆ ಜಾತಿ ಕಸುಬಿನವರು ಇದ್ದಾರೆ. ಬಸವಣ್ಣನವರ ಅನುಭವ ಮಂಟಪ ಎಂದರೆ ಹೀಗೆಯೇ ಇತ್ತು. ಆದ್ದರಿಂದ ಇಲ್ಲಿ ಸೇರಿರುವ ಈ ಸಭೆ ಬಸವ ಜಯಂತಿಯನ್ನು ಆಚರಿಸಲು ಅತ್ಯಂತ ಸೂಕ್ತವಾದ ಸಭೆಯಾಗಿದೆ" ಎಂದಾಗ ಸಭಿಕರು ಸಂತೋಷದಿಂದ ಚಪ್ಪಾಳೆ ತಟ್ಟಿದರು. ಬಸವಣ್ಣನವರ ಜೀವನ, ಸಾಮಾಜಿಕ ದೃಷ್ಟಿ, ಸಮಾಜ ಪರಿವರ್ತನೆಯ

**ದಿ. ಬೆಳಗೆರೆ ಕೃಷ್ಣಶಾಸ್ತ್ರಿಗಳು ನಮ್ಮ ನಡುವೆ ಇದ್ದ ಒಂದು ಧೀಮಂತ ಚೇತನ. ಅನೇಕರು ಅವರನ್ನು ಅವಧೂತರೆಂದೇ ನಂಬಿದ್ದರು.**




**ಅವರು ಸನಿಹದಿಂದ ಕಂಡ ಒಬ್ಬ ಅನುಭಾವಿ, ಯೋಗಿ ಮುಕುಂದೂರು ಸ್ವಾಮಿಗಳನ್ನು ಕುರಿತ 'ಯೇಗ್ದಾಗೆಲ್ಲಾ ಐತೆ' ಜನಪ್ರಿಯವೂ ಹೌದು. ಅದನ್ನು ಬೆಂಗಳೂರಿನ ಪ್ರಸಿದ್ಧ ಪ್ರಕಾಶನ ಸಂಸ್ಥೆ 'ಅಭಿನವ' ಪ್ರಕಟಿಸಿದೆ ('ಅಭಿನವ' 4148/ಎ, 3ನೇ ಮುಖ್ಯರಸ್ತೆ, 'ಬಿ' ಬ್ಲಾಕ್, ರಾಜಾಜಿನಗರ 2ನೇ ಸ್ಟೇಜ್, ಬೆಂಗಳೂರು–560 021.) ನಮ್ಮ ಓದುಗರಿಗಾಗಿ ಅವರ ಪುಸ್ತಕದಿಂದ ಒಂದು ಕುತೂಹಲಕಾರಿ ಘಟನೆಯನ್ನು ಆಯ್ದು, ಅಭಿನವ ಪ್ರಕಾಶನಕ್ಕೆ ಕೃತಜ್ಞತೆಯನ್ನು ತಿಳಿಸುತ್ತಾ ಪ್ರಕಟಿಸುತ್ತಿದ್ದೇವೆ.**

ವಿಧಾನ, ಸಮತಾಭಾವ, ಮಾನವತಾ ವಿಚಾರ, ಸಾಂಸ್ಕೃತಿಕ ಸಾಧನೆ ಮುಂತಾದ ಉನ್ನತ ವಿಚಾರಗಳನ್ನು ವಚನಗಳ ಮೂಲಕ ಆಬಾಲವೃದ್ಧರಿಗೂ ತಿಳಿಯುವಂತೆ ಒಂದು ತಾಸಿನವರೆಗೆ ಹಿಂಜಿ, ಹೆಕ್ಕಿ ಮಾತನಾಡಿದರು.

ಅನಂತರ ಸ್ವಾಮಿಗಳು ಮಾತನಾಡಿ, “ಇವರು (ಎಂ.ಆರ್.ಶ್ರೀ.) ಬಸವಣ್ಣನ ಮಾತುಗಳನ್ನು ಅದೆಷ್ಟು ಚೆನ್ನಾಗಿ ಹೇಳಿದರಪ್ಪ. ಹಲಸಿನ ಹಣ್ಣು ಬಿಚ್ಚಿ ಆದರಾಗಳ ಕಸುರು, ಕೊಳಕು, ಸ್ಯಾಲೇ ಎಲ್ಲ ತೆಗೆದು ಒಳ್ಳೆ ಸುದ್ಧವಾಗಿ ತೊಳೆ ತೊಳೇನೇ ಇಂಗಡಿಸಿ ತೆಗೆದು ಕೊಟ್ಟಂಗಾತು. ಕೂಡಲಸಂಗಮದೇವ ಅಂತ ಪದೇ ಪದೇ ಹೇಳಿದರು. ಅದೇನ್ ಅಂಗಂದ್ರೆ? ಅವನು ಸಂಗಮದೇವ. ಅಲ್ಲಿ ಎರಡು ನದಿ ಕೂಡ್ತಾವೆ. ಅದನ್ನೇ ಕೂಡ್ಲಿ ಕೂಡ್ಲಿ, ಅನ್ನೋದು. ಅಂಗೇ ಕೂಡಿದ್ರೇನೆ ಸಂಗಮ ಅನ್ನೋದು. ಜೀವ, ದೇವ, ಒಂದು ಲಿಂಗ, ಒಂದು ಜಂಗಮ. ಒಂದು ಒಳಗೆ, ಒಂದು ಹೊರಗೆ. ಅವು ಒಂದಕ್ಕೊಂದು ಬೆಸಕೊಂಡ್ರೆ ಅದೇ ಸಂಗಮ. ದೊಡ್ಡದು, ಸಣ್ಣದು, ಹೆಣ್ಣು, ಗಂಡು, ಹೊರಗೆ, ಒಳಗೆ, ಅವ್ನು, ಇವ್ನು, ಹಿಂಗೆ ಏನೇನೋ ಕಾಣ್ತಾ ಐತೆ. ಆದರೆ ಇದನ್ನೆಲ್ಲ ತುಂಬಿಕೊಂಡು, ಹಿಡಕೊಂಡು ಬಂದಿರೋದು ಒಂದು ಐತೆ. ಅದೊಂದು ಕರೆಂಟು–ಅಂಟು. ಒಂದಕ್ಕೊಂದು ಅಂಟು–ಅದೇ ನಂಟು ಗಂಟು. ಈ ಹೂವಿನ ಸರ ಐತೆ (ಮೇಜಿನ ಮೇಲಿನ ಹಾರವನ್ನು ಎತ್ತಿ ಹಿಡಿದು ತೋರಿಸಿ) ಏನು ನಮು ನಮೂನೆ ಬಣ್ಣ ಬಣ್ಣ! ಸಣ್ಣ–ದಪ್ಪ ನಡನಡುವೆ ಎಂತೆಂತದೋ ಪತ್ರೆ ಎಲ್ಲ ಸೇರ್ಸಿದಾನೆ. ಅದರಾಗೆ ತರತರಾವರಿ, ಮಿರಮಿರ–ಮಿಣಿಮಿಣಿ ಐತೆ. ಇದೆಲ್ಲ ಸರ ಎಂಗಾಯ್ತು! ಅಂದ್ರೆ ಇದ್ರೊಳಗೊಂದು ದಾರ ಐತೆ. ಅದೇ ಈ ಸರಕ್ಕೆ ಆಧಾರ. ಅದೇ ಅಂಟು. ಅದು ಎಲ್ಲನೂ ಕೂಡಿ ಹಿಡಿದೈತೆ. ಅದೇ ಕೂಡಲಸಂಗಮದೇವ. ಅದನ್ನೇ ಚೆನ್ನಾಗಿ ತಿಳೀಬೇಕು. ಅಂದ್ರೆ ಸಣ್ಣದು, ದೊಡ್ಡದು. ಆ ಜಾತಿ, ಈ ಜಾತಿ ಎಲ್ಲ ಬಿಟ್ಟು ಅಣ್ಣ, ಅಪ್ಪ, ಅವ್ವ ಅಂತ ಒಬ್ಬರಿಗೊಬ್ಬರು ಕೂಡಿ ಬಾಳಿದ್ರೆ ಇಲ್ಲೇ ಐತೆ ಸಂಗಮ. ಎಷ್ಟು ಮಟ್ಟಿಗೆ ಇದನ್ನೆಲ್ಲ ಬಿಚ್ಚಿ ಬಿಚ್ಚಿ ಹೇಳಿದ್ರಪಾ ಈ ಮಾರಾಯ್ರು. ಇಂಥವರಿಗೆ ದಿನಾ ಬೆಳಗ್ಗೆ ಎದ್ದದ್ದು ಕಾಲಿಗೆ ಬೀಳಬೇಕು. ಹೇಳಿದ್ದನ್ನು ಕೇಳಿ ಚಪ್ಪಾಳೆ ತಟ್ಟಿ ಎದ್ದೋಗೋದಲ್ಲ. ನಡೀಬೇಕು, ನಡೀಬೇಕು, ನಡೀಬೇಕು” ಎಂದ ಅವರ ಮಾತು ಸಭೆಯಲ್ಲಿ ಸ್ಫೂರ್ತಿಯ ಸಂಚಾರ ಆಗಿತ್ತು. ನೆರೆದಿದ್ದ ಸಾವಿರಾರು ಮಂದಿಗೆ ಆ ದೇವಾಲಯದ ಮುಂದಿನ ಬಯಲಿನಲ್ಲಿ ಸಮಾನೆಯ ಸಂಕೇತವಾಗಿ ಊಟದ ಏರ್ಪಾಡು ಆಗಿತ್ತು. ಎಂ.ಆರ್.ಶ್ರೀ., ಸ್ವಾಮಿಗಳು, ಮತ್ತಿತರು ಎಲ್ಲರೊಂದಿಗೆ ಕುಳಿತು ಊಟ ಮಾಡಿದ್ದು ಸರ್ವರ ಸಂತೋಷಕ್ಕೆ ಕಾರಣವಾಯಿತು. ●

**ಶ್ರೀ ಸಿದ್ಧೇಶ್ವರಸ್ವಾಮಿಗಳ ಪ್ರವಚನಗಳಿಂದ** **ಆಯ್ದ ಕಥೆಗಳು**





# ಹೃದಯದ ಕಹಿ

ಎರಡು ಇರುವೆಗಳು ಪರಸ್ಪರ ಭೇಟಿಯಾದವು. ಒಂದರ ವಾಸ ಬೇವಿನ ಮರದಲ್ಲಿ. ಇನ್ನೊಂದರ ವಾಸ ಸಕ್ಕರೆಯ ಬೆಟ್ಟದಲ್ಲಿ. ಬೇವಿನ ಮರದ ಇರುವೆ ಸೊರಗಿ ಸಣ್ಣಾಗಿತ್ತು. ಸಕ್ಕರೆಯ ಬೆಟ್ಟದ ಇರುವೆ ದಪ್ಪ–ಪುಷ್ಟವಾಗಿತ್ತು. ಅದು ಬೇವಿನಮರದ ಇರುವೆಗೆ ಕೇಳಿತು, “ಮಿತ್ರಾ, ನೀನು ಅದೇಕೆ ಇಷ್ಟೊಂದು ಸೊರಗಿರುವಿ? ನಿನಗೆ ಹೊಟ್ಟೆಗೆ ಸರಿಯಾಗಿ ಆಹಾರ ದೊರೆಯುತ್ತದೆಯೋ ಇಲ್ಲವೋ?” “ಎಲ್ಲಿ ದೊರೆಯಬೇಕು ಮಿತ್ರಾ, ನಾನಿರುವುದೇ ಬೇವಿನ ಮರದಲ್ಲಿ” ಎಂದಿತು ಆ ಇರುವೆ. “ಹಾಗಾದರೆ ನನ್ನೊಡನೆ ಬೆಟ್ಟಕ್ಕೆ ನಡೆ ಅಲ್ಲಿ ನಿನಗೆ ಸಿಹಿ–ಸಕ್ಕರೆ ದೊರೆಯುತ್ತದೆ!” “ಆಗಲಿ ಮಿತ್ರಾ ಬರುತ್ತೇನೆ; ನನ್ನ ಮಡದಿ ಮಕ್ಕಳಿಗೆ ತಿಳಿಸಿ ಬರುತ್ತೇನೆ” ಎಂದು ಅದು ಬೇವಿನ ಮರಕ್ಕೆ ಓಡಿತು. ಈ ಸಿಹಿ ಸುದ್ದಿಯನ್ನು ತನ್ನ ಕುಟುಂಬದವರಿಗೆ ಹೇಳಿ, “ನೀವೂ ಬರುವಿರಾ?” ಎಂದು ಕೇಳಿತು. “ಇಲ್ಲ ಮೊದಲು ನೀವು ಹೋಗಿ ಬನ್ನಿ ನೋಡೋಣ” ಎಂದವು ಅವೆಲ್ಲ. ದಾರಿ ಬುತ್ತಿ ಇರಲಿ ಎಂದು ಸತಿ ಇರುವೆಯು ಪತಿ ಇರುವೆಗೆ ಒಂದಿಷ್ಟು ಬೇವಿನ ರಸದ ಉಂಡೆಯನ್ನು ಕೊಟ್ಟಿತು. ಅದನ್ನು ತೆಗೆದುಕೊಂಡು ಇರುವೆಯು ಸಕ್ಕರೆ ಬೆಟ್ಟಕ್ಕೆ ಬಂದಿತು. ಅಲ್ಲಿ ಅದು ಏನೇ ತಿಂದರೂ ಎಲ್ಲವೂ ಕಹಿ ಕಹಿಯಾಗಿದೆ. ಆಶ್ಚರ್ಯದಿಂದ ಅದು ಕೇಳಿತು, “ಗೆಳೆಯಾ ಇಲ್ಲಿ ಎಲ್ಲವೂ ಕಹಿಯಾಗಿದೆ. ಸಿಹಿ ಎಲ್ಲಿದೆ? ಅದು ಹೇಳಿತು, “ಇಲ್ಲಿರುವುದೆಲ್ಲವೂ ಸಿಹಿಯೇ. ಅದು ನಿನಗೆ ಹೇಗೆ ಕಹಿಯಾಯಿತು? ನಿನ್ನ ಬಾಯಿಯಲ್ಲಿ ಬೇರೆ ಏನಾದರೂ ಹಿಡಿದಿರುವೆಯಾ?” ಅದು ಹೇಳಿತು, “ಹೌದು ಗೆಳೆಯಾ ದಾರಿ ಬುತ್ತಿ ಇರಲೆಂದು ನನ್ನ ಮಡದಿಯು ಬೇವಿನ ರಸದ ಉಂಡೆಯನ್ನು ಕೊಟ್ಟಳು. ಅದನ್ನೇ ಬಾಯಿಯಲ್ಲಿ ಹಿಡಿದಿರುವೆನಷ್ಟೇ!” “ಹೀಗೋ, ಹಾಗಾದರೆ ಮೊದಲು ಅದನ್ನು ಹೊರಗೆ ಚೆಲ್ಲು ಬಳಿಕ ನೋಡು” ಎಂದಿತು ಸಕ್ಕರೆ ಬೆಟ್ಟದ ಇರುವೆ. ತತ್‌ಕ್ಷಣ ಅದು ಬೇವಿನ ರಸದ ಉಂಡೆಯನ್ನು ಚೆಲ್ಲಿತು. ಅನಂತರ ಸಕ್ಕರೆಯನ್ನು ತಿಂದು ಹೇಳಿತು, “ಗೆಳೆಯನೇ ಇದು ನಿಜವಾಗಿಯೂ ಸಿಹಿ–ಸಕ್ಕರೆಯ ಬೆಟ್ಟ!”

ಜಗವಿದೆಲ್ಲವೂ ದೇವ–ನಿರ್ಮಿತ ಸಕ್ಕರೆಯ ಸವಿ ಬೆಟ್ಟ. ಅದು ಸತ್ಯಂ ಶಿವಂ ಸುಂದರಂ. ಆದರೆ ನಮ್ಮ ಹೃದಯದಲ್ಲಿಯೇ ಕಹಿ ಇರುವುದರಿಂದ ಅದೆಲ್ಲವೂ ಕಹಿಯಾಗಿದೆ. ಕುರೂಪವಾಗಿದೆ.

ಸಂಗ್ರಹ: ಡಾ॥ ಶ್ರದ್ಧಾನಂದಸ್ವಾಮಿ



ವಾರಣಾವತದಲ್ಲಿ ಏನಾಗಿರಬಹುದು?
ಪುರೋಚನನ ಗತಿ ಏನಾಯಿತೋ ತಿಳಿಯಲಿಲ್ಲ.
2010 © MALAY FEATURES PB 608, KOTTAYAM -1
ಪುರೋಚನ ಇನ್ನೂ ಸಾಯದಿದ್ದರೆ ನಮ್ಮನ್ನು ಕಷ್ಟ ಬೆನ್ನಟ್ಟಿ ಬರುತ್ತದೆ.
ಅವನ ವಿಷಯವನ್ನೂ ಹೇಗೆ ತಿಳಿಯುವುದು.
ನಾವು ಬಹಳ ಬಳಲಿದ್ದೇವೆ. ಒಂದು ಹೆಜ್ಜೆ ಮುಂದಿಡುವುದೂ ಕಷ್ಟಕರವಾಗಿದೆ.
ನಾವು ಎಷ್ಟು ಬಳಲಿದ್ದೇವೆಂದರೆ ಒಂದು ಹೆಜ್ಜೆಯನ್ನು ಇಡಲಾಗುತ್ತಿಲ್ಲ...



ಭೀಮ! ನೀನು ಅಪಾರ ಶಕ್ತಿಶಾಲಿ. ಬಳಲಿಕೆ ಎಂಬುದೇ ನಿನ್ನ ಬಳಿಗೆ ಬರಲಾದರು. ಆದ್ದರಿಂದ ನೀನು ನಮ್ಮನ್ನು ನಿನ್ನ ಭುಜಗಳ ಮೇಲೆ ಕುಳ್ಳಿರಿಸಿಕೊಂಡು ಇಲ್ಲಿಂದ ಅತಿ ವೇಗದಿಂದ ಕರೆದುಕೊಂಡು ಹೋಗು.
2010 © MALAY FEATURES PB 608, KOTTAYAM -1
ಭೀಮನು ಅವರನ್ನು ಭುಜಗಳ ಮೇಲೆ ಹೊತ್ತುಕೊಂಡ.
ಭೀಮನು ವೇಗವಾಗಿ ಅವರನ್ನು ಹೊತ್ತು ಧಾವಿಸಿದ.

(ಮುಂದುವರಿಯುವುದು)

# ಮಹಾಭಾರತ–6

ಕಥೆ: ಕುಮಾರ ಮೋಹನ್ ಚಲಮ್
ಕಲೆ: ಅಜಯನ್ ಸಂತೂ



Licensed to post without prepayment-WPP-102 **MALLARA** Monthly, JANUARY-2020,
**64** pages and cost Rs. **12/-** RNI. No. KARBIL/2009/30225 Reg. KA/BGW-492/2018-2020
Published and Posted at Bengaluru PSO, Bengaluru-560026 on 30th of every month.

